
ಬಸವಕಲ್ಯಾಣದ ಕಲೆ ಸಂಸ್ಕೃತಿ

ಡಾ. ಆರ್.ಎಂ. ಷಡಕ್ಷರಯ್ಯ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಬಸವ ಕಲ್ಯಾಣದ ಕಲೆ-ಸಂಸ್ಕೃತಿ

ಡಾ. ಆರ್. ಎಂ. ಷಡಕ್ಷರಯ್ಯ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

BVP-1211-27/2/17
1226-(5)

BASAVA KALYANADA KALE-SAMSKRUTI
by : **Dr. R.M. Shadaksharaiah**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 146 Price : Rs. 45=00 **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತೈದು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗೀಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚೆಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಲೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಅ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ಬಸವಕಲ್ಯಾಣದ ಕಲೆ-ಸಂಸ್ಕೃತಿ ಕುರಿತ ಪ್ರಸ್ತುತ ಕೃತಿಯ ಸಿದ್ಧತೆಗೆ ಮೊದಲು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ ನಂತರ ಕನ್ನಡ ಸಂಶೋಧನ ಸಂಸ್ಥೆಗಳು ಕಾರಣವಾಗಿವೆ. ಈಗ ಕೃತಿ ರೂಪದಲ್ಲಿ ಹೊರಗಡೆ ತರಲು ಪರವಾನಿಗೆ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ.ಖಾಜಾಫೀರ್ ಮತ್ತು ಕುಲಸಚಿವರಾದ ಶ್ರೀ ಅಶೋಕ್‌ಕುಮಾರ್ ಸಿಂಗ್ ಅವರಿಗೆ ನಾನು ಚಿರಋಣಿಯಾಗಿದ್ದೇನೆ. ಬೀದರ ಜಿಲ್ಲೆಯಲ್ಲಿ ಹಳ್ಳಿ ಹಳ್ಳಿಗಳ ಪುರಾತತ್ವ ಸಂಶೋಧನೆಗೆ ನನ್ನನ್ನು ತೊಡಗಿಸಲು ಕಾರಣರಾದ ನನ್ನ ಪೂಜ್ಯ ಗುರುವೃಂದ ಡಾ.ಶ್ರೀನಿವಾಸ ರಿತ್ತಿ ಮತ್ತು ಡಾ. ಅ.ಸುಂದರ ಅವರಿಗೂ, ಉಪಯುಕ್ತ ಸಲಹೆಗಳನ್ನಿತ್ತ ಮಿತ್ರರಾದ ಡಾ.ಶ್ರೀನಿವಾಸ ಪಾಡಿಗಾರ, ಡಾ.ಬಿ.ಆರ್.ಹಿರೇಮಠ, ಎಸ್.ಬಿ. ಹಿರೇಮಠ ಅವರಿಗೂ ಈ ಕೃತಿಯ ಬೆಳವಣಿಗೆಗೆ ತಾಳ್ಮೆಯಿಂದ ಸಹಕರಿಸಿದ ನನ್ನ ಧರ್ಮಪತ್ನಿ ಡಾ. ಸೌಭಾಗ್ಯ ಇವರಿಗೂ ನನ್ನ ಕೃತಜ್ಞತೆಗಳು.

ಬಸವಕಲ್ಯಾಣದ ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಅನೇಕ ಸ್ಥಳಿಕ ಸ್ನೇಹಿತರು ನನಗೆ ವಿವಿಧ ರೀತಿಯಲ್ಲಿ ನೆರವಾಗಿದ್ದಾರೆ. ಅವರಲ್ಲಿ ಶ್ರೀ ಗುರುನಾಥ ಗಡ್ಡೆ ಮತ್ತು ಶ್ರೀ ಧನರಾಜ ಫುಲಾರೆ ಮುಖ್ಯರೆನಿಸಿದ್ದಾರೆ. ಅವರಿಗೂ, ಕಲ್ಯಾಣದ ವಸ್ತುಸಂಗ್ರಹಾಲಯದ ಪ್ರಾಚ್ಯಾವಶೇಷಗಳನ್ನು ಅಧ್ಯಯನ ಮಾಡಲು ಪರವಾನಿಗೆ ನೀಡಿದ್ದ ಕರ್ನಾಟಕ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಮಾಜಿ ನಿರ್ದೇಶಕ ಡಾ.ಎಂ.ಎಸ್.ನಾಗರಾಜರಾವ್ ಅವರಿಗೂ ನನ್ನ ಧನ್ಯವಾದಗಳು. ಈ ಕೃತಿಯ ಡಿ.ಟಿ.ಪಿ ಹಸ್ತಪ್ರತಿಯನ್ನು ಸಾದ್ಯಂತವಾಗಿ ಪರಿಶೀಲಿಸಿ, ಉಪಯುಕ್ತ ಮಾಹಿತಿಗಳನ್ನು ನೀಡಿ, ಇದರ ಐತಿಹಾಸಿಕ ಮಹತ್ವವನ್ನು ಎತ್ತಿ ಹಿಡಿದು ಪ್ರಕಟಣೆಗೆ ಪ್ರೋತ್ಸಾಹ ನೀಡಿದ ನನ್ನ ಹಿರಿಯ ಹಿತೈಷಿಗಳೂ, ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಮಾಜಿ ನಿರ್ದೇಶಕರೂ, ಕನ್ನಡ ಸಂಶೋಧನ ಸಂಸ್ಥೆಯ ಹಿಂದಿನ ಪ್ರಭಾರೀ ನಿರ್ದೇಶಕರಾಗಿದ್ದ ಡಾ.ಎಸ್.ಎಂ.ವೃಷಭೇಂದ್ರ ಸ್ವಾಮಿಯವರಿಗೆ ನನ್ನ ಅನಂತ ಕೃತಜ್ಞತೆಗಳು.

ಬಹು ವರ್ಷಗಳ ಹಿಂದೆಯೇ ಈ ಕೃತಿಯನ್ನು ಪ್ರಕಟಿಸುವ ಬಯಕೆ ನನಗಿತ್ತು. ಅದನ್ನು ಮನಗಂಡ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ ಅವರು ಈ ಕೃತಿಯನ್ನು ಬರೆದುಕೊಡಲು ನನಗೆ ಆಹ್ವಾನ ನೀಡಿದರು. ಅವರ ವಿನಂತಿಯ

ಮೇರೆಗೆ ಈ ಕೃತಿಯನ್ನು ಅತಿ ಸಂತೋಷದಿಂದ ಬರೆದು ಕೊಟ್ಟಿರುವೆನು. ಸಧ್ಯದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಣೆಗೊಂಡು ಬೀದರನಲ್ಲಿ ನಡೆಯಲಿರುವ ೭೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆಗೊಳ್ಳುತ್ತಿದೆ. ಈ ಸದವಕಾಶವನ್ನು ಕಲ್ಪಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸನ್ಮಾನ್ಯ ಪ್ರೊ. ಚಂದ್ರಶೇಖರ ಪಾಟೀಲ ಅವರಿಗೆ ಅನಂತ ಕೃತಜ್ಞತೆಗಳು. ಈ ಕೃತಿಯ ಕರಡನ್ನು ನಕಲು ಮಾಡಲು ಸಹಕರಿಸಿದ ವಿದ್ಯಾರ್ಥಿಗಳಾದ ಶ್ರೀ ಉಮೇಶ ಕುರಿ, ಕು. ಜಯಮ್ಮ, ಕು. ವನಜಾ ಭರಮಗೌಡರ ಇವರಿಗೆ ಹಾಗೂ ಅಲ್ಪ ವೇಳೆಯಲ್ಲಿ ಈ ಕೃತಿಯನ್ನು ಡಿ.ಟಿ.ಪಿ ಮಾಡಿ ಮುಗಿಸಲು ನೆರವಾದ ನನ್ನ ಆತ್ಮೀಯ ವಿದ್ಯಾರ್ಥಿ ಶ್ರೀ ವಿನಯ ಮತ್ತು ನಾಗರಾಜ ನಾಯ್ಕ ಇವರಿಗೆ ಅನಂತ ಧನ್ಯವಾದಗಳು.

ಈ ಅಧ್ಯಯನದಲ್ಲಿ ಯಾವುದೇ ರೀತಿಯ ನ್ಯೂನತೆಗಳಿದ್ದರೆ, ಅದನ್ನು ಸಹೃದಯ-ಓದುಗರು ಲೇಖಕರ ಗಮನಕ್ಕೆ ತಂದರೆ ಇದರ ಪುನರ್ ಮುದ್ರಣದ ಸಂದರ್ಭದಲ್ಲಿ ಸರಿಪಡಿಸಿಕೊಳ್ಳಲಾಗುವುದು.

ಡಾ. ರು. ಮ. ಷಡಕ್ಷರಯ್ಯ

ಪರಿವಿಡಿ

೧. ಪೀಠಿಕೆ

ಜಗತ್ತಿನ ಇತಿಹಾಸದಲ್ಲಿ ಸುಪ್ರಸಿದ್ಧ ರಾಜಧಾನಿ ನಗರಗಳಾದ ಅಥೆನ್ಸ್, ರೋಮ್, ಕಾನ್‌ಸ್ಟಾಂಟಿನೋಪಲ್, ಬಾಗ್ದಾದ್, ಲಂಡನ್, ಟೋಕಿಯೋ, ಲೆಲಿನ್‌ಗ್ರಾಡ್, ಆಯೋಧ್ಯೆ, ಧಾರಾನಗರ, ಉಜ್ಜಯಿನಿ ಮುಂತಾದವುಗಳಷ್ಟೇ ಚಾರಿತ್ರಿಕ-ಸಾಂಸ್ಕೃತಿಕ ಪ್ರಸಿದ್ಧ ನಗರ ಬಸವಕಲ್ಯಾಣ.

ಇತಿಹಾಸದಲ್ಲಿ ರಾಜಧಾನಿ ಪಟ್ಟಣವನ್ನು ಸ್ಥಾಪಿಸಲಿಕ್ಕೆ ಅದರ ಭೌಗೋಳಿಕ ಪರಿಸರ ಅವಲಂಬನೆ ಆಗಿರುತ್ತದೆ. ಆಯ್ಕೆ ಮಾಡಿದ ಸ್ಥಳವು ವಿಶಾಲ ಪ್ರದೇಶವಾಗಿರಬೇಕು. ಅಲ್ಲಿ ಸದಾ ಹರಿಯುವ ನೀರಿನ ಹಳ್ಳ-ನದಿಗಳಿರಬೇಕು ಹಾಗೂ ಗುಡ್ಡ, ತಗ್ಗು ದಿನ್ನೆಗಳಿರಬೇಕು. ಹೀಗೆ ವೈರಿಗಳಿಂದ ರಕ್ಷಿಸಿಕೊಳ್ಳಲು ಅದೊಂದು ಸುರಕ್ಷಿತ ಸ್ಥಳವಾಗಿರಬೇಕಾಗುತ್ತದೆ. ಆ ಸ್ಥಳದಲ್ಲಿ ಅತ್ಯವಶ್ಯವಾಗಿ ಬೇಕಾಗುವ ಸೌಲಭ್ಯಗಳೆಂದರೆ ಕಟ್ಟಡಗಳು. ಅರಸರು ವಾಸಿಸುವ ಸ್ಥಳವು ಸಾಮಾನ್ಯವಾಗಿ ಕೋಟೆ-ಕೊತ್ತಳಗಳಿಂದ ಆವೃತಗೊಂಡಿರಬೇಕು. ಕೋಟೆಯ ಸುತ್ತಲೂ ಆಳವಾದ ಕಂದಕವಿರಬೇಕು. ಒಳಗೆ ಅರಸರ ನಿವಾಸದ ಅರಮನೆ/ ಅಂತಃಪುರ, ಆಸ್ಥಾನ, ಪ್ರಾಣಿ-ಪಕ್ಷಿ ಧಾಮಗಳು, ಜಲಕ್ರೀಡೆ ತಾಣಗಳು, ಪೂಜಾ ಮಂದಿರಗಳು, ಉನ್ನತ ಪುರೋಹಿತ-ಅಧಿಕಾರಿಗಳ ತಾಣಗಳು, ಯುದ್ಧೋಪಕರಣಗಳ ತಾಣಗಳು, ನಾಣ್ಯ-ದವಸ ಧಾನ್ಯ-ಔಷಧ ಇತ್ಯಾದಿ ವಸ್ತುಗಳನ್ನು ಸಂಗ್ರಹಿಸುವ ಉಗ್ರಾಣಗಳು, ನೃತ್ಯ, ಸಂಗೀತಗಾರರ ರಂಗಮಂದಿರಗಳು ಒಂದೆಡೆ ಇದ್ದರೆ, ಇತರ ಶ್ರೀಸಾಮಾನ್ಯ ಜನವರ್ಗಗಳಿಗಾಗಿ ಪ್ರತ್ಯೇಕ ಓಣಿಗಳು/ಕೇರಿಗಳಿರುತ್ತವೆ; ಅಂಗಡಿ, ಪೇಟೆ, ದೇವಾಲಯ, ಬಸದಿ, ಚೈತ್ಯಾಲಯ, ಮಠ ಮುಂತಾದ ಸಾರ್ವಜನಿಕ ಕಟ್ಟಡಗಳಿರುತ್ತವೆ. ಹಾಗೆಯೇ ವಿಭಿನ್ನ ಅಧಿಕಾರಿಗಳು, ವರ್ತಕರು, ರಾಯಭಾರಿಗಳು ಮುಂತಾದವರ ಮನೆಗಳಿರುತ್ತವೆ.

ರಾಜಧಾನಿ ಪಟ್ಟಣ/ನಗರಗಳು ಮಹತ್ವದ ಸಾಂಸ್ಕೃತಿಕ ಕೇಂದ್ರಗಳಾಗಿ, ಸದಾ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ತುಂಬಿರುತ್ತವೆ. ಚಾಲುಕ್ಯ ಮುಮ್ಮಡಿ ಸೋಮೇಶ್ವರನ ಕೃತಿ ಮಾನಸೋಲ್ಲಾಸ ರಾಜಧಾನಿ ಪಟ್ಟಣ-ಕೋಟೆ- ಕೊತ್ತಲಗಳ ಸ್ವರೂಪ ಕುರಿತಂತೆ ವಿವರಗಳನ್ನು ನೀಡುತ್ತದೆ.

ಬಸವಕಲ್ಯಾಣ ಬೆಂಗಳೂರಿನಿಂದ ಉತ್ತರಕ್ಕೆ ೭೧೦ ಕಿ.ಮೀ. ಮತ್ತು ಬೀದರನಿಂದ ದಕ್ಷಿಣಕ್ಕೆ ೬೦ ಕಿ.ಮೀ. ದೂರದಲ್ಲಿದೆ. ಈ ಭಾಗವು ಒಂದು ಪ್ರಸ್ಥಭೂಮಿಯಾಗಿದ್ದು, ಅದು ಸಮುದ್ರ ಮಟ್ಟಕ್ಕೆ ಸುಮಾರು ೭೧೦ ಮೀ. ಎತ್ತರದಲ್ಲಿದೆ. ಅಲ್ಲಿ ಕೆಂಪು ಬಣ್ಣದ

ಲ್ಯಾಟರೈಟ್ ಶಿಲೆ ಆವರಿಸಿದೆ. ಅಲ್ಲಿಯ ಸರಾಸರಿ ಉಷ್ಣಾಂಶ ಗರಿಷ್ಠ ೩೯° ಮತ್ತು ಕನಿಷ್ಠ ೨೧° ಸೆಂ.ಗ್ರೇ. ಬಸವಕಲ್ಯಾಣ ಭಾಗದ ಉತ್ತರ ಅಕ್ಷಾಂಶ ೧೭°-೧೮" ಮತ್ತು ಪೂರ್ವರೇಖಾಂಶ ೭೬°.೭೭". ಕಲ್ಯಾಣ, ಕಲ್ಯಾಣಿ, ಕಲ್ಯಾಣಪುರ ಮತ್ತು ಕಸಬಕಲ್ಯಾಣ (ಬಾದ್) ಎಂದು ಕರೆಯಿಸಿಕೊಂಡ ಈ ಪಟ್ಟಣ೧೨ನೇ ಶತಮಾನದಲ್ಲಿ ಬಸವಣ್ಣನವರು ಆಗುಮಾಡಿದ ಸಮಾಜೋಧಾರ್ಮಿಕ ಕ್ರಾಂತಿಗೆ ಇದು ಕೇಂದ್ರಸ್ಥಾನವಾಗಿ 'ಬಸವಕಲ್ಯಾಣ'ವೆಂಬ ಅಭಿಧಾನ ಪಡೆದು ಪ್ರಸಿದ್ಧವಾಗಿದೆ. ಈ ನಗರಕ್ಕೆ ಬಸವಕಲ್ಯಾಣ ಎಂದು ನಾಮಕರಣ ಮಾಡಲು ಮುಂಚೂಣಿಯಲ್ಲಿ ನಿಂತು ಹೋರಾಡಿದವರು ಸೊಲ್ಲಾಪುರದ ಬಾಬಾಸಾಹೇಬ ವಾರದ ಅವರು.

ಇತಿಹಾಸ : ಬಸವಕಲ್ಯಾಣ ಪರಿಸರದಲ್ಲಿ ಜನವಸತಿ ಆರಂಭವಾದದ್ದು ಸುಮಾರು ಕ್ರಿ.ಶ. ೨ನೇ ಶತಮಾನದಿಂದ ಎಂದು ತಿಳಿದುಬಂದಿದೆ. ಈ ಕಾಲದ ಒಂದು ಹಾಳಾದ ಜನವಸತಿ ನಿವೇಶನ ಇಂದಿನ ಜೈಶಂಕರ ಕಾಲೋನಿಯಲ್ಲಿದೆ. ಅಲ್ಲಿ ಈ ಕಾಲಾವಧಿಯ ಗಡಿಗೆ-ಮಡಿಕೆಗಳು ಸಿಕ್ಕಿವೆ. ಆದರೆ ಈ ಪ್ರದೇಶದಲ್ಲಿ ಜನವಸತಿ ಪುರಾವೆಗಳು ಮಧ್ಯಹಳೆ ಶಿಲಾಯುಗದಿಂದ ದೊರೆತಿವೆ. ಇತಿಹಾಸ ಕಾಲದಲ್ಲಿ ಅಂದರೆ ಬಾದಾಮಿ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಬೀದರ ಜಿಲ್ಲೆಯಲ್ಲಿ ಮೊದಲು ಕಾಣಿಸುವ ಊರುಗಳು ಭಲ್ಲುಂಕಿ ದೇಶ ಮತ್ತು ಮೊರಖಂಡಿ. ಸು. ಕ್ರಿ.ಶ. ೧೦ನೇ ಶತಮಾನದ ತರುವಾಯ ಕಲ್ಯಾಣವು ಪ್ರಮುಖ ಪಟ್ಟಣಗಳ ಸಾಲಿನಲ್ಲಿ ಪರಿಗಣಿತವಾಗಿದೆ. ರಾಷ್ಟ್ರಕೂಟರನ್ನು ಸೋಲಿಸಿ ಇಮ್ಮಡಿ ತೈಲ ಪುನಃ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆತನ ಆಳ್ವಿಕೆಯ ಕಾಲದಲ್ಲಿ ಕಲ್ಯಾಣ ಅಸ್ತಿತ್ವದಲ್ಲಿತ್ತು. ಇದಕ್ಕೆ ಪುರಾವೆಯಾಗಿ ಅಲ್ಲಿ ಚಂದ್ರಪ್ರಭ ಬಸದಿಯಿದೆ. ಅದನ್ನು ಅತ್ತಿಮಬ್ಬೆ ಜೀರ್ಣೋದ್ಧಾರಗೊಳಿಸಿದಳೆಂಬ ವಿಷಯ ಶಾಸನವೊಂದರಲ್ಲಿದೆ. ಮುಂದೆ ಈ ಮನೆತನದ ಇಮ್ಮಡಿ ಜಯಸಿಂಹನ ಆಳ್ವಿಕೆಯ ಕಾಲದಲ್ಲಿ ಕಲ್ಯಾಣ ಕೇವಲ ಒಂದು ನೆಲವೀಡಾಗಿದ್ದಿತು. ಸು. ಕ್ರಿ.ಶ. ೧೦೪೮ರಿಂದ ೧೧೬೨ರವರೆಗೆ ಹಾಗೂ ೧೧೮೩ರಲ್ಲಿ ಚಾಲುಕ್ಯರಿಗೆ ಅದು ರಾಜಧಾನಿಯಾಗಿದ್ದಿತು. ಹಾಗೆಯೇ ಕಳಚೂರಿಯರಿಗೂ ಕ್ರಿ.ಶ. ೧೧೬೨ರಿಂದ ೧೧೮೩ರವರೆಗೆ ರಾಜಧಾನಿ ಪಟ್ಟಣವಾಗಿದ್ದಿತು. ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಚಾಲುಕ್ಯರು ಕಲ್ಯಾಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಸು. ೧೦೭೬ರವರೆಗೆ ವೈರಿಗಳಾದ ಚೋಳರಿಂದ ಉಪಟಳವನ್ನು ಅನುಭವಿಸಿದರೂ, ತದನಂತರ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಈ ನಗರ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ವೈಭವದಿಂದ ಮೆರೆಯಿತು. ಕಳಚೂರಿಯರ ಅಲ್ಪಾವಧಿಯ ಆಳ್ವಿಕೆಯಲ್ಲಿ ಮಂತ್ರಿಯಾಗಿದ್ದ

ಬಸವಣ್ಣನವರು ಸಮಾಜೋಧಾರ್ಮಿಕ ಚಳುವಳಿಯನ್ನು ಆರಂಭಿಸಿ, ತಮ್ಮ ಅನುಯಾಯಿಗಳೊಂದಿಗೆ 'ಅನುಭವ ಮಂಟಪ'ವನ್ನು ಅಲ್ಲಿ ಸ್ಥಾಪಿಸಿದರು. ಜನಸಾಮಾನ್ಯರಿಗೆ ಸುಲಭವಾಗಿ ಓದಿ ತಿಳಿದುಕೊಳ್ಳಲು ಆಡುಭಾಷೆ ಕನ್ನಡದಲ್ಲಿ ವಚನಗಳನ್ನು ರಚಿಸಿದರು. ಅವು ಮಾನವ ಕುಲಕೋಟಿಯ ಉದ್ಧಾರಕ್ಕೆ ತುಂಬಾ ಉಪಯುಕ್ತವೆನಿಸಿವೆ. ಅವರಿಂದ ನಡೆದ ಸಾಮಾಜಿಕ-ಧಾರ್ಮಿಕ ಕ್ರಾಂತಿ ಕಾರಣವಾಗಿ ಕಳಚುರಿಯರ ಅರಸೊತ್ತಿಗೆಯು ಅವನತಿ ಹೊಂದಬೇಕಾಯಿತು ! ಜೊತೆಗೆ ಅವರ ದುರ್ಬಲ ಆಡಳಿತವೂ ಅವನತಿಗೆ ಕಾರಣವಾಯಿತು. ಕಳಚೂರಿಯರನ್ನು ಸೇವುಣರು ಸೋಲಿಸಿ ಕಲ್ಯಾಣವನ್ನು ತಮ್ಮ ಕೈವಶ ಮಾಡಿಕೊಂಡರು. ತದನಂತರ ಅದು ಮುಸ್ಲಿಂರ ಅಧೀನಕ್ಕೆ ಸೇರಿ ಕಸಬಾ ಕಲ್ಯಾಣ/ಕಸಬಾ ಕಲ್ಯಾಣ ಬಾದ್ ಎಂದು ಕರೆಸಿಕೊಂಡಿತು.

ದಂತ ಕಥೆಗಳು : ಮಹಾಭಾರತದಲ್ಲಿ ಕಾಣಸಿಗುವ ನಳ-ದಮಯಂತಿ ಚರಿತ್ರೆ, ರಾಮಾಯಣದಲ್ಲಿ ಬರುವ ರಾಮ-ಸೀತೆಯನ್ನು ಹುಡುಕುವ ಸನ್ನಿವೇಶ ಮುಂತಾದ ದಂತಕಥೆಗಳು ಈ ನಾಡಿನ ಹಲವು ಹಳ್ಳಿಗಳಿಲ್ಲಿ ಪ್ರಚಲಿತದಲ್ಲಿವೆ. ಇದಲ್ಲದೆ ಶಿವಶರಣರ ಹೆಸರಿನ ಐತಿಹ್ಯವುಳ್ಳ ಹಲವಾರು ಸ್ಥಳಗಳೂ ಖ್ಯಾತಿಯನ್ನು ಗಳಿಸಿವೆ.

ಕಲ್ಯಾಣಪುರದ ವರ್ಣನೆ : ಕೆಲ ಸಾಹಿತ್ಯ ಕೃತಿಗಳಲ್ಲಿ ರಾಜಧಾನಿ ಕಲ್ಯಾಣಪುರದ ವರ್ಣನೆಯಿದೆ. ಚಾಲುಕ್ಯ ಆಸ್ಥಾನ ಪಂಡಿತ ವಿಜ್ಞಾನೇಶ್ವರ ಕಲ್ಯಾಣಪುರದ ವೈಭವವನ್ನು ವರ್ಣಿಸಿ ಹೀಗೆ ಹರಸಿದ್ದಾನೆ.

''ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣಕಲ್ಪಂ ಪುರಂ ತತ್''

ನೋದ್ರಷ್ಟ : ಶ್ರುತಏವ ಪಾಕ್ಷಿತಿಪತಿ : ಶ್ರೀ ವಿಕ್ರಮಾನ್ಕೋಪಮ :

ಭೂಮಿಯ ಮೇಲೆ ಕಲ್ಯಾಣದಂಥ ಮತ್ತೊಂದು ನಗರ ಹಿಂದೆ ಇರಲಿಲ್ಲ..ಇಂದೂ ಇಲ್ಲ, ಮುಂದೆಯೂ ಆಗುವುದಿಲ್ಲ; ವಿಕ್ರಮಾದಿತ್ಯನಂಥ ಅರಸು ಹಿಂದೆ ಇರಲಿಲ್ಲ, ಇಂದೂ ಇಲ್ಲ ಮುಂದೆಯೂ ಆಗುವುದಿಲ್ಲ ಎಂದು ಉದ್ಗರಿಸಿದ್ದಾನೆ. ಬಿಲ್ಹಣ ಕವಿಯು ಕಲ್ಯಾಣಪುರದ ಕೋಟೆಯನ್ನು ಪ್ರತಿಯೊಂದು ಗಳಿಗೆಯಲ್ಲೂ ಎಚ್ಚರದಿಂದ ಕಾಯಲಾಗುತ್ತಿತ್ತು ಎಂದಿದ್ದಾನೆ. ಕೋಟೆಗಳಲ್ಲಿ ವಿವಿಧ ಭಾಗಗಳು ಇರುತ್ತಿದ್ದವೆಂದು 'ಮಾನಸೋಲ್ಲಾಸ'ದಲ್ಲೂ ಹೇಳಲಾಗಿದೆ.

ಬಿಲ್ಹಣನು ತನ್ನ ಕಾವ್ಯದ ಎರಡನೇ ಸರ್ಗದಲ್ಲಿ ಕಲ್ಯಾಣ ಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ ಅಹವಮಲ್ಲನು ತನ್ನ ಉತ್ತರಾಪಥದ ದಿಗ್ವಿಜಯದ ನಂತರ ಅದನ್ನು ಕಟ್ಟಿದನೆಂದಿದೆ. ಅದರ ಕೋಟೆಯು ಶತ್ರುಗಳಿಂದ ಭೇದಿಸಲು ಅಸಾಧ್ಯವಾಗಿತ್ತೆಂದು ವರ್ಣಿಸಿರುವನು.

2

ಕಾಶ್ಮೀರದ ಬಿಲ್ಹಣ ಕಲ್ಯಾಣದಲ್ಲಿ : ಚಾಲುಕ್ಯ ಆರನೇ ವಿಕ್ರಮಾದಿತ್ಯನ ಜೀವನ ಚರಿತ್ರೆಯ ಬಗ್ಗೆ ''ವಿಕ್ರಮಾಂಕ ದೇವ ಚರಿತಂ'' ಎಂಬ ೧೮ ಸರ್ಗಗಳ ವಿಸ್ತಾರದ ಮಹಾ ಕಾವ್ಯವನ್ನು ಸಂಸ್ಕೃತ ಭಾಷೆಯಲ್ಲಿ ಬರೆದನು. ಈತನು ಕಾಶ್ಮೀರದ ಬ್ರಾಹ್ಮಣ ಪಂಡಿತ ಬಿಲ್ಹಣ. ಸು. ಕ್ರಿ.ಶ. ೧೦೬೯ರಲ್ಲಿ ತನ್ನ ಹುಟ್ಟೂರಾದ ಕಾಶ್ಮೀರವನ್ನು ಬಿಟ್ಟು ಬಂದು ಚಾಲುಕ್ಯ ಚಕ್ರವರ್ತಿಯ ಸಂಪರ್ಕ ಪಡೆದು ಈ ಕಾವ್ಯ ರಚಿಸಿದ್ದಾನೆ.

ಕಲ್ಯಾಣಕ್ಕೆ ಬರುವ ಪೂರ್ವದಲ್ಲಿ ಬಿಲ್ಹಣ ಕೆಲವು ಕಾಲ ಮಥುರಪುರ, ಕನ್ಯಕುಬ್ಜ, ಪ್ರಯಾಗ, ವಾರಣಾಸಿ ಮತ್ತು ದಾಹಲಗಳಲ್ಲಿ ಕಾಲಕಳೆದನು. ದಾಹಲದ ಕರ್ಣನ ಆಸ್ಥಾನದಲ್ಲಿ ನಡೆದ ಸಾಹಿತ್ಯ ವಿಚಾರ ಸ್ಪರ್ಧೆಯಲ್ಲಿ ಕವಿ ಗಂಗಾಧರನನ್ನು ಸೋಲಿಸಿ ತನ್ನ ಪಾಂಡಿತ್ಯವನ್ನು ಹೆಚ್ಚಿಸಿಕೊಂಡನು. ಭೋಜನು ಮರಣಹೊಂದಿ ಬಹುಕಾಲಗತಿಸಿದ ಬಳಿಕ ಆತನ ರಾಜಧಾನಿ ದಾಹಲ ಬಿಟ್ಟು ಬಿಲ್ಹಣನು ಧಾರ ನಗರಕ್ಕೆ ಬಂದನು. ಅಲ್ಲಿಯೂ ತೃಪ್ತಿಸಿಗದೆ ಆತ ಗುಜರಾತಿಗೆ ಬಂದನು. ಗುಜರಾತನಲ್ಲೂ ಸರಿಯಾದ ಪ್ರೋತ್ಸಾಹ ದೊರೆಯಲಿಲ್ಲ. ಅಲ್ಲಿಯ ಸೋಮನಾಥದ ಜ್ಯೋತಿರ್ಲಿಂಗವನ್ನು ಪೂಜೆಮಾಡಿ ಜೀವನ ನಡೆಸುವ ಪರಿಸ್ಥಿತಿ ಒದಗಿಬಂತು. ಅಲ್ಲಿಯೂ ಬೇಸತ್ತು ಅಲ್ಲಿಂದ ಮಲಯಾಳ ದೇಶ (ಕೇರಳ)ದ ಮುಖಾಂತರ ರಾಮೇಶ್ವರಕ್ಕೆ ಹೋದನು. ಆ ಪವಿತ್ರ ಸ್ಥಳದಿಂದ ಕಲ್ಯಾಣಕ್ಕೆ ಬಂದು ಅಲ್ಲಿ ಚಾಲುಕ್ಯ ದೊರೆಯಾದ ವಿಕ್ರಮಾದಿತ್ಯನನ್ನು ಬೆಟ್ಟಿಯಾಗಿ ಆತನ ಆಸ್ಥಾನ ಪಂಡಿತನಾದನು. ಈತನು ಬರೆದ ವಿಕ್ರಮಾಂಕದೇವ ಚರಿತೆಯಲ್ಲಿ ವಿಕ್ರಮಾದಿತ್ಯನ ವ್ಯಕ್ತಿತ್ವ ನಿರೂಪಣೆ ಸರಿಯಾಗಿ ಬಂದಿಲ್ಲವೆಂದು ವಿಕ್ರಮಾದಿತ್ಯನ ಮಗ ಮುಮ್ಮಡಿ ಸೋಮೇಶ್ವರ ವಿಕ್ರಮಾಂಕಾಭ್ಯುದಯಂ ಎಂಬ ಕಾವ್ಯವನ್ನು ಬರೆದನು.

ಕಲ್ಯಾಣಪುರದ ವೈಭವ : ಚನ್ನಬಸವಣ್ಣನ ವಚನವೊಂದು ಕಲ್ಯಾಣಪುರ ವೈಭವದ ವರ್ಣನೆಯನ್ನು ವಿವರವಾಗಿ ನೀಡುತ್ತದೆ. ಆ ವಿವರ ಈ ರೀತಿಯಿದೆ :

''ಶ್ರೀಮತ್ ಕಲ್ಯಾಣಪುರವು ಹನ್ನೆರಡು ಯೋಜನ ವಿಸ್ತಾರವುಳ್ಳದ್ದು.. ಆದಕ್ಕೆ ಮೂನ್ನೂರರವತ್ತು ಬಾಗಿಲುವಾಡಗಳು, ಅವುಗಳಿಗೆ ನೂರಐವತ್ತೈದು ವಜ್ರದ ಕದಗಳು, ಇನ್ನೂರು ಇಪ್ಪತ್ತೈದು ಕಲ್ಲಿನ ದ್ವಾರವಟ್ಟಗಳಲ್ಲಿ ನಾನೂರಐವತ್ತು ಸುವರ್ಣದ ಕೆಲಸ ಮಾಡಿದ ಕದಗಳು, ನೂರ ಹದಿನೈದು ದೋರಕಂಡಿಗಳು, ನೂರ ಹದಿನೈದು ಮೊಳೆಯ ಕದಗಳು, ಇಪ್ಪತ್ತು ಬಾಗಿಲುಗಳ ಅಳ್ವೇರಿಯೊಳಗಿರುವುದರಿಂದ ಅವುಗಳಿಗೆ ಕದಗಳಿಲ್ಲ; ಈ ಪಟ್ಟಣವನ್ನಾವರಿಸಿರುವ ಕೋಟೆಯ ಉದ್ದ ನಲವತ್ತೆಂಟು ಯೋಜನ; ಬಾಹತ್ತರ ನಿಯೋಗಿಗಳ, ಸಾಮಂತರ, ಮಾಂಡಳಿಕರ ಮನೆಗಳು ಲಕ್ಷದಂತೆ ದ್ವಾದಶಯೋಜನದ ಸೂರ್ಯ ವೀಧಿಗಳು ನೂರಿಪ್ಪತ್ತು, ಅಂತಹವೇ ನೂರಿಪ್ಪತ್ತು ಸೋಮವೀಧಿಗಳು ಅಸಂಖ್ಯಾತವಾದ ಒಳಕೇರಿ-ಹೊರಕೇರಿಗಳು ಅಲ್ಲಿ ಹಲವಾರು ಶಿವಾಲಯಗಳು, ಅನೇಕ ಸರೋವರಗಳು, ದಾಸೋಹದ ಮಠಗಳೂ ಇದ್ದವೆನ್ನಲಾಗಿದೆ.

ಶಿವಶರಣರು ತಮ್ಮ ವಚನಗಳಲ್ಲಿ ಕಲ್ಯಾಣದ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. 'ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು, ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು, ತೊಳಗಿ ಬೆಳೆಗುತ್ತಿದ್ದಿತಯ್ಯಾ ಶಿವನ ಪ್ರತಾಪ. ಆ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯ ಅಸಂಖ್ಯಾತ ಭಕ್ತಗಣಂಗಳು; ಶಿವಭಕ್ತನಿರ್ದ ಕ್ಷೇತ್ರ ಅವಿಮುಕ್ತಯೆಂಬುದು ಹುಸಿಯೇ ? ಶಿವಭಕ್ತನಿರ್ದ ದೇಶ ಪಾವನವೆಂಬುದು ಹುಸಿಯೆ? ಗುಹೇಶ್ವರ ಲಿಂಗದಲ್ಲಿ ಎನ್ನ ಪರಮಾರಾಧ್ಯರು ಸಂಗನಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯಾ' ಎಂದು ಅಲ್ಲಮಪ್ರಭು ದೇವರು ಕಲ್ಯಾಣ ಮತ್ತು ಬಸವಣ್ಣನವರ ಮಹಿಮೆಯನ್ನು ಕೊಂಡಾಡಿದ್ದಾರೆ.

ಕಲ್ಯಾಣಪುರದ ಅರಮನೆಗೆ ಬೆಂಕಿ : ಕಲ್ಯಾಣ ಚಾಲುಕ್ಯ ಮೊದಲನೇ ಸೋಮೇಶ್ವರನ ಕಾಲದಲ್ಲಿ ಚೋಳರಾಜ ರಾಜಾಧಿರಾಜನು ದಾಳಿಯನ್ನು ಮುಂದುವರಿಸಿ ಕಲ್ಯಾಣಪುರವನ್ನು ಆಕ್ರಮಿಸಿ ಅರಮನೆಗೆ ಬೆಂಕಿಯಿಟ್ಟನು. ಈ ದಿಗ್ವಿಜಯದ ನೆನಪಿಗಾಗಿ ಅವನು ತನ್ನ ವೀರಾಭಿಷೇಕೋತ್ಸವವನ್ನು ಆಚರಿಸಿ 'ವಿಜಯರಾಜೇಂದ್ರ' ಬಿರುದನ್ನು ಪಡೆದನೆಂದು ಚೋಳರ ಶಾಸನಗಳು ವರ್ಣಿಸುತ್ತವೆ. ಚೋಳರ ನಾಲ್ಕನೇ ಯುದ್ಧ 'ಪುಂಡೂರ' ಮೇಲೆ ನಡೆದಾಗ ಚಾಲುಕ್ಯರ ದಂಡನಾಯಕರಾದ ಕಾಳಿದಾಸ, ಕೊಮಾರಯ್ಯ ಮುಂತಾದವರು ಸೋತರು. ಆ ದಿಗ್ವಿಜಯದ ನಂತರ ಕಲ್ಯಾಣಪುರದ ಮೇಲೆ ಯುದ್ಧ ಮಾಡಿ, ಅಂತಃಪುರವನ್ನು ಸುಟ್ಟರೆಂದು ದಾಖಲೆಗಳು ತಿಳಿಸುತ್ತವೆ.

ಎರಡು ಸಲ ಚೋಳರು ಕಲ್ಯಾಣದ ಅಂತಃಪುರಕ್ಕೆ ಬೆಂಕಿಯನ್ನು ಇಟ್ಟ ಸಂದರ್ಭದಲ್ಲಿ ಕಲ್ಯಾಣ ರಾಜಧಾನಿಯಿಂದ ಸಂಪತ್ತು, ಶಿಲ್ಪ ಇತ್ಯಾದಿ ವಸ್ತುಗಳನ್ನು ಚೋಳರು ದೋಚಿಕೊಂಡು ಹೋದರು. ತಮಿಳುನಾಡಿನಲ್ಲಿ ಸುಂದರ ಶೈವ ದ್ವಾರಪಾಲಕ ಶಿಲ್ಪವೊಂದು ಬೆಳಕಿಗೆ ಬಂದಿದೆ. ಈ ಮೂರ್ತಿ ಶಾಸನ ಹೊಂದಿರುವುದು ವಿಶೇಷವಾಗಿದೆ. ಶ್ರೀ ವಿಜಯ ರಾಜೇಂದ್ರನು (ಮೊದಲ ರಾಜಾಧಿರಾಜ) ಕಲ್ಯಾಣಪುರವನ್ನು ಮುತ್ತಿಗೆ ಹಾಕಿ ಆ ಶೈವದ್ವಾರ ಪಾಲಕನ ಮೂರ್ತಿಯನ್ನು ಒಯ್ದನೆಂದು ಆ ಶಾಸನ ಹೇಳುತ್ತದೆ. ತಮಿಳುನಾಡಿನ ದರಾಸುರಂ ದೇವಾಲಯದಲ್ಲಿ ಮೊದಲು ಪತ್ತೆಯಾಗಿದ್ದ ಈ ಶಿಲ್ಪ ಈಗ ಅದನ್ನು ಹತ್ತಿರದ ತಂಜಾವೂರಿನ ಶಿಲ್ಪಗಳ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಎರಡು ಸಾಲಿನ ಈ ತಮಿಳು ಶಾಸನದ ಪಾಠ ಈ ರೀತಿಯಿದೆ.

೧. ಸ್ವಸ್ತಿ [೧]ಶ್ರೀಉಡ್ಯೆಯರ್ ಶ್ರೀ ವಿಜಯರಾಜೇಂದ್ರದೇವರ್

೨. ಕಲ್ಯಾಣಪುರಂ ಎರಿಂದು ಕೊಡುವಯ್ಯ ತುವಾಕ ಪಾಲಕರ್

ಕೆರೆಯ ದಂಡೆಯ ಮೇಲಿದ್ದ ಪ್ರಾಚೀನ ತ್ರಿಪುರಾಂತಕೇಶ್ವರ ದೇವಾಲಯ ಕಲ್ಯಾಣ ಚಾಲುಕ್ಯರ ಮತ್ತು ಕಳಚೂರಿಗಳ ಕಾಲದಲ್ಲಿ ಒಂದು ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಈ ದೇವಾಲಯಕ್ಕೆ ಸಂಬಂಧಿಸಿದ ಘಟನೆಯೊಂದು ಕುತೂಹಲ ಕೆರಳಿಸುತ್ತದೆ. ಒಮ್ಮೆ ಮಾಗಳದ ಮನ್ನೆಯನಾಗಿದ್ದ ಬೊಪ್ಪನೆಂಬುವವನು ಅಲ್ಲಿಯ ಮಹಾಜನರಿಗೆ ನೀಡಿದ ಕಿರುಕುಳವನ್ನು ಸ್ಥಳೀಯ ಬ್ರಾಹ್ಮಣರು ಮಹಾರಾಜನಿಗೆ ಮನವಿ ಮಾಡಿದರು. ಆಗ, ಚಾಲುಕ್ಯದೊರೆ ೬ನೇ ವಿಕ್ರಮಾದಿತ್ಯ ಬೊಪ್ಪನನ್ನು ಕಲ್ಯಾಣಕ್ಕೆ ಕರೆಸಿದನು. ಅಲ್ಲಿಯ ತ್ರಿಪುರಾಂತಕೇಶ್ವರ ದೇವಾಲಯದ ಮುಂದೆ ತ್ರಿಪುರಾಂತಕ ಕೆರೆಯ ನೀರನ್ನು ಕುಡಿದು ಅನೇಕರ ಸಮ್ಮುಖದಲ್ಲಿ ತನ್ನ ಮನ್ನೆಯತನವನ್ನು ವಂಶಪರಂಪರಾಗತವಾಗಿ ಬಿಟ್ಟುಕೊಟ್ಟಿರುವೆನೆಂದು ಪ್ರಮಾಣ ಮಾಡಿದನೆಂದು ಶಾಸನದಲ್ಲಿ ಹೇಳಲಾಗಿದೆ.

ಬಸವಕಲ್ಯಾಣದ ಕೋಟೆಯ ಒಳಗೆ, ಮ್ಯೂಜಿಯಂ ದಕ್ಷಿಣಕ್ಕೆ ಒಂದು ಕಿರು ಪ್ರಾಚೀನ ದೇವಾಲಯದ ಕುರುಹು ಇದೆ. ಅದನ್ನು ಲಕ್ಷ್ಮಿ ದೇವಾಲಯವೆಂದು ಕೆಲವರು ಕರೆದಿದ್ದಾರೆ. ಸಧ್ಯದ ಮ್ಯೂಜಿಯಂ ಕಳಚೂರಿಯ ಅರಮನೆಯಾಗಿತ್ತೆನ್ನುವರು. ಅಲ್ಲಿಯ ಶಾಸನವೊಂದರಲ್ಲಿ ಅರಮನೆಯ ತೆಂಕಣದ ಭೀಮೇಶ್ವರದ ಉಲ್ಲೇಖವಿದೆ. ಮೇಲೆ ಹೇಳಿದ ಪ್ರಾಚೀನ ದೇವಾಲಯ ಮ್ಯೂಜಿಯಂ ದಕ್ಷಿಣಕ್ಕಿದೆ. ಅಲ್ಲಿ ಚಾಲುಕ್ಯರ ಕಾಲದ ಒಂದು ಕಿರು ಗರ್ಭಗೃಹ ಅದರ ಬಾಗಿಲು ಚೌಕಟ್ಟಿನಲ್ಲಿ ಅನೇಕ ಅಲಂಕರಿಸಿದ ಶಾಖೆಗಳು, ಲಲಾಟದಲ್ಲಿ ಗಣೇಶ ಚಿತ್ರವಿದೆ. ಇದರಿಂದ ಇದೊಂದು ಶೈವ ದೇವಾಲಯವೆಂದು ಮತ್ತು ಶಾಸನಸ್ಥ ಭೀಮೇಶ್ವರವೆಂದು ತರ್ಕಿಸಬಹುದು.

ಶೈವ ಮತದ ತ್ರಿಪುರಾಂತಕೇಶ್ವರ, ತ್ರ್ಯಂಬಕೇಶ್ವರ, ಸಿದ್ಧೇಶ್ವರ, ಭೀಮೇಶ್ವರ ಮತ್ತು ಮಧುಕೇಶ್ವರ ;ವೈಷ್ಣವ ಮತದ ಕೇಶವ, ನಾರಾಯಣ - ಬ್ರಹ್ಮ-ಸೂರ್ಯ; ಶಾಕ್ತರ- ದುರ್ಗಾ ಪರಮೇಶ್ವರಿ, ಗೂರ್ಜರ ಮಲಯಮತಿ ಮಹಾದೇವಿ ಹಾಗೂ ಜೈನರ-ಚಂದ್ರಪ್ರಭ ಜೀನೇಂದ್ರಾಲಯಗಳು ಈ ನಗರದ ಪ್ರಾಚೀನ ಮತ್ತು ಪ್ರಸಿದ್ಧ ಸ್ಮಾರಕಗಳು. ಮುಸ್ಲಿಂರ ಆಳ್ವಿಕೆಯ ಕಾಲದ ಅನೇಕ ಸ್ಮಾರಕಗಳೂ ಅಲ್ಲಿವೆ. ಅವುಗಳಲ್ಲಿ ಮಸೀದಿ, ದರ್ಗಾ, ಪೀರ್‌ಭಾಷಾ ಬಂಗಲೆ, ಸಮಾಧಿಗಳು ಎದ್ದು ಕಾಣುತ್ತವೆ.

ದಕ್ಷಿಣದಲ್ಲಿ ರಾಜಧಾನಿಗಳ ಸ್ಥಳಾಂತರ : ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಕೆಲವು ಅರಸು ಮನೆತನಗಳ ರಾಜಧಾನಿಗಳು ವಿಭಿನ್ನ ಕಾರಣಗಳಿಂದ ಬದಲಾವಣೆಗೊಂಡವು. ಆ ಅರಸು ಮನೆತನಗಳು ಚಾಲುಕ್ಯರು, ಚೋಳರು, ಪರಮಾರರು ಮತ್ತು ವೆಂಗಿ ಚಾಲುಕ್ಯರು.

ಚೋಳರು : ಕ್ರಿ.ಶ. ೧೦೨೪ರಲ್ಲಿ ಚೋಳ ಅರಸ ಮೊದಲ ರಾಜೇಂದ್ರನು ತನ್ನ ರಾಜಧಾನಿಯನ್ನು ಗಂಗೈಕೊಂಡ ಚೋಳಪುರಕ್ಕೆ ಬದಲಾಯಿಸಿದನು.

ಕಲ್ಯಾಣ ಚಾಲುಕ್ಯರು : ಚಾಲುಕ್ಯರ ಮೊದಲ ಸೋಮೇಶ್ವರ ಮಾನ್ಯಖೇಟ, ಏತಗಿರಿ, ಕೊಲನುಪಾಕ ಮುಂತಾದ ಸ್ಥಳಗಳಿಂದ ಕಲ್ಯಾಣಪುರಕ್ಕೆ ತನ್ನ ರಾಜಧಾನಿಯನ್ನು ಕ್ರಿ.ಶ. ೧೦೪೮ರಲ್ಲಿ ಬದಲಾಯಿಸಿದನು.

ಪರಮಾರರು : ಮಾಳವದ ಭೋಜನು ಉಜ್ಜೈನಿಯಿಂದ ಧಾರಾಕ್ಕೆ ತನ್ನ ರಾಜಧಾನಿಯನ್ನು ಬದಲಾಯಿಸಿದನು.

ವೆಂಗಿ ಚಾಲುಕ್ಯರು: ವೆಂಗಿಪುರ (ಬೆಜವಾಡ-ತೆಡವೆಗಿ, ಎಲ್ಲೆರೆ ಹತ್ತಿರ)ವನ್ನು ರಾಜ ರಾಜ ನರೇಂದ್ರನು ತನ್ನ ರಾಜಧಾನಿಯನ್ನು ಗೋದಾವರಿ ಪೂರ್ವದಂಡೆಯ ರಾಜಹಮಹೇಂದ್ರಿಗೆ ಬದಲಾಯಿಸಿದನು.

ಈ ಪೂರ್ವದ ಅಧ್ಯಯನಗಳು : ಅಭೂತಪೂರ್ವ ರಾಜಕೀಯ-ಸಾಂಸ್ಕೃತಿಕ ಚರಿತ್ರೆಯುಳ್ಳ ಕಲ್ಯಾಣವನ್ನು ಕುರಿತು ಹಲವಾರು ಸಂಶೋಧಕರು, ಉತ್ಸಾಹಿಗಳು ಅಧ್ಯಯನ ಮಾಡಿದ್ದಾರೆ. ಕಲ್ಯಾಣ ನಾಡಿನ ಪ್ರಾಚ್ಯವಸ್ತುಗಳ ಅನ್ವೇಷಣೆ ಸುಮಾರು ಕ್ರಿ.ಶ. ೧೯೩೭ರಿಂದ ನಡೆದಿದೆ. ಅಲ್ಲಿಯ ಕೆಲವು ಶಾಸನಗಳನ್ನು, ದೇವಾಲಯಗಳನ್ನು, ಮೂರ್ತಿಗಳನ್ನು, ಕೋಟೆ, ಮಸೀದಿಗಳನ್ನು ಕೆಲವರು ಅಧ್ಯಯನ ಮಾಡಿದ್ದಾರೆ. ಕೆಲವು ದೇವಾಲಯ, ಶಿಲ್ಪ ಹಾಗೂ ಶಾಸನಗಳನ್ನು ಮುಖ್ಯವಾಗಿ ಡಾ. ಪಿ.ಬಿ.ದೇಸಾಯಿ, ಶ್ರೀ ಎಂ. ಆರ್. ಜೋಶಿ, ಡಾ. ಬಿ.ಆರ್. ಗೋಪಾಲ, ಡಾ. ಎಂ. ಚಿಂದಾನಂದಮೂರ್ತಿ, ಡಾ. ವಿ.ಎಸ್. ಕುಲಕರ್ಣಿ, ಡಿ.ಸಿ. ಸರ್ಕಾರ, ಡಾ. ಕಾಟಕರ್ ಮುಂತಾದವರು ಸ್ಥೂಲವಾಗಿ ಅಧ್ಯಯನ ಮಾಡಿದ್ದಾರೆ. ಕೆಲವರ ಅಧ್ಯಯನಗಳಲ್ಲಿ ಮಾತ್ರ ಕಲ್ಯಾಣದ ಸ್ಥೂಲ ವಿವರಗಳು ಪರಿಚಯವಾಗುತ್ತವೆ. ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ನಿರ್ದೇಶನಾಲಯ ಹಾಗೂ ಭಾರತ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವರದಿಗಳಲ್ಲಿ ಈ ಸ್ಥಳದ ಕೆಲವು ಪ್ರಾಚ್ಯವಸ್ತುಗಳ ವಿವರಗಳಿವೆ. ಅಲ್ಲಿಯ ಶಿವಶರಣರಿಗೆ ಸಂಬಂಧಿಸಿದ ಐತಿಹ್ಯದ ವಿವರಗಳನ್ನು ಡಾ. ಬಿ. ಶಿವಮೂರ್ತಿ ಶಾಸ್ತ್ರಿ, ಬಿ.ಆರ್. ಹಿರೇಮಠ ಮುಂತಾದವರು ಪ್ರಕಟಿಸಿದ್ದಾರೆ. ಅನೇಕರು ಕಲ್ಯಾಣದ ಶಿವಶರಣರ ವಚನ ಸಾಹಿತ್ಯವನ್ನು ಅಧ್ಯಯನ ಮಾಡಿದ್ದಾರೆ. ಅಲ್ಲಿನ ಇಂಡೋ ಇಸ್ಲಾಮಿಕ್ ಶಾಸನವನ್ನು ಡಾ. ಝಡ್. ಎ. ದೇಸಾಯಿ ಅವರು ಅಧ್ಯಯನ ಮಾಡಿದ್ದಾರೆ. ಈ ಭಾಗದ ಪ್ರಾಗೈತಿಹಾಸ ಕಾಲದ ಉಪಕರಣ ಮತ್ತು ಒಂದೆರಡು ನೆಲೆಗಳ ವಿವರಗಳು ಹಿಂದಿನ ಹೈದರಾಬಾದ ರಾಜ್ಯದ ವರದಿಯಲ್ಲಿವೆ. ಡಾ. ಶಂಕರಣ್ಣ ಮೂಗಿಯವರು ಮೊದಲು ಬಸವಕಲ್ಯಾಣ ತಾಲೂಕಿನ ದರ್ಶನ ಎಂಬ ಕಿರು

ಕೃತಿಯನ್ನು ಪ್ರಕಟಿಸಿದರು. ಇತ್ತೀಚೆಗೆ ಬಸವಕಲ್ಯಾಣ ತಾಲೂಕು ಪರಿಚಯ ಎಂಬ ಕಿರು ಕೃತಿಯನ್ನು ಪ್ರೊ. ಹೆಬ್ಬಾಳಕರ ಈಶ್ವರ ಅವರು ಸಂಪಾದಿಸಿ (೨೦೦೩) ಪ್ರಕಟಿಸಿರುವರು. ಆದರೆ ಕಲ್ಯಾಣದ ಸಮಗ್ರ ಪುರಾತತ್ವ ಪುರಾವೆಗಳನ್ನು ಬಳಸಿಕೊಂಡು ಅಧ್ಯಯನ ಮಾಡಿದ ಕೃತಿಯೊಂದು ಇದುವರೆಗೆ ಬೆಳಕನ್ನು ಕಂಡಿಲ್ಲ. ಪ್ರಸ್ತುತ ಲೇಖಕರು ಬೀದರ ಜಿಲ್ಲೆಯ ಆರುನೂರ ಐವತ್ತು ಹಳ್ಳಿಗಳಲ್ಲಿ ಅನ್ವೇಷಣೆ ನಡೆಸಿ ಆಕರಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಿದ್ದಾರೆ. ಆದರಿಂದ ಹಲವಾರು ಮಾಹಿತಿಗಳು ಪ್ರಥಮಬಾರಿಗೆ ಬಯಲುಗೊಂಡಿದೆ. ಈ ಲೇಖಕರು ಸಂಗ್ರಹಿಸಿದ ಜಿಲ್ಲೆಯ ಸುಮಾರು ೧೦೦ಕ್ಕೂ ಹೆಚ್ಚು ಶಾಸನಗಳ ಹೊತ್ತಿಗೆಯು ಮುದ್ರಣದಲ್ಲಿದೆ. ಇದಲ್ಲದೆ ಈ ಜಿಲ್ಲೆಯ ಶಿಲಾಯುಗಕಾಲ ಮತ್ತು ಪ್ರಾಚೀನ ಇತಿಹಾಸ ಕಾಲದ ಸಂಸ್ಕೃತಿಯ ಅಧ್ಯಯನವನ್ನೊಳಗೊಂಡ ಕೃತಿಯನ್ನು ಹಾಗೂ ಈ ಜಿಲ್ಲೆಗೆ ಸಂಬಂಧಿಸಿದ ಕೆಲವು ಬಿಡಿ ಲೇಖನಗಳನ್ನು ಹೊರತಂದಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಲೇಖಕರು ಸಂಗ್ರಹಿಸಿದ ಪುರಾತತ್ವ ಪುರಾವೆಗಳು ಅಧ್ಯಯನದ ಮುಖ್ಯ ಆಕರಗಳಾಗಿವೆ.

ಪ್ರಾಚೀನ ಕರ್ನಾಟಕದ ಪ್ರಸಿದ್ಧ ರಾಜಧಾನಿ ಬೀದರ ಜಿಲ್ಲೆಯ ಒಂದು ತಾಲೂಕು ಕೇಂದ್ರ ಬಸವಕಲ್ಯಾಣ. ಇತರ ರಾಜಧಾನಿ ಪಟ್ಟಣಗಳಿಗೆ ಹೋಲಿಸಿದರೆ ಬಸವಕಲ್ಯಾಣದ ಕುರಿತು ನಡೆದ ಅಧ್ಯಯನ ಅತ್ಯಲ್ಪ. ಪ್ರಸ್ತುತ ಗ್ರಂಥ ಆ ಕೊರತೆಯನ್ನು ತಕ್ಕಮಟ್ಟಿಗೆ ತುಂಬಿಕೊಡುತ್ತದೆ ಎಂದು ಭಾವಿಸಿದ್ದೇನೆ.

ಬೀದರ ಜಿಲ್ಲಾ ನಕ್ಷೆ





ಅಧ್ಯಯನದ ವ್ಯಾಪ್ತಿ : ಬಸವಕಲ್ಯಾಣದ ಕಲೆ ಮತ್ತು ಸಂಸ್ಕೃತಿಯ ಅಧ್ಯಯನದ ಕಾಲಮಿತಿ ಸು. ಕ್ರಿ.ಶ. ೨ನೇ ಶತಮಾನದಿಂದ ಸು. ಕ್ರಿ.ಶ. ೧೭ನೇ ಶತಮಾನ. ಈ ಕಾಲಮಿತಿಯಲ್ಲಿ ಬರುವ ಸ್ಮಾರಕ, ಶಿಲ್ಪ, ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಸ್ವರೂಪ : ಬಸವಕಲ್ಯಾಣ ಪಟ್ಟಣದ (ನಾರಾಯಣಪುರ, ಶಿವಪುರ, ಪರ್ತಾಪುರಗಳನ್ನೊಳಗೊಂಡಿದೆ) ಉಪಲಬ್ಧ ಪುರಾತತ್ವ ಪುರಾವೆಗಳನ್ನು ದಾಖಲೀಕರಿಸಿ, ಶಾಸನ, ಶಿಲ್ಪ, ದೇವಾಲಯ, ಬಸದಿಗಳು, ಕೋಟೆ-ಕೊತ್ತಳ, ಬಾವಿ, ಮಠ, ಮಸೀದಿ, ದರ್ಗಾ ಮೊದಲಾದವುಗಳನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿ ಇತರರ ಅಭಿಪ್ರಾಯಗಳೊಂದಿಗೆ ತುಲನ ಮಾಡಿ, ಜೊತೆಯಲ್ಲಿ ಸಂಬಂಧಿಸಿದ ಸಾಹಿತ್ಯಕ ಮತ್ತು ಪುರಾತತ್ವ ಪುರಾವೆಗಳನ್ನು ಹಾಗೂ ದಂತ ಕಥೆಗಳನ್ನು ಅವಶ್ಯವಿದ್ದಲ್ಲಿ ಪೂರಕವಾಗಿ ಬಳಸಿ ಪ್ರಸ್ತುತ ಅಧ್ಯಯನವನ್ನು ಸಿದ್ಧಪಡಿಸಲಾಗಿದೆ. ಕರ್ನಾಟಕ ಸರಕಾರ ಇತ್ತೀಚೆಗೆ ಸ್ಥಾಪಿಸಿರುವ 'ಬಸವಕಲ್ಯಾಣ ಪ್ರತಿಷ್ಠಾನ' ಈ ಅಧ್ಯಯನದ ವಿವರಗಳಿಂದ ಮಾರ್ಗದರ್ಶನ ಪಡೆದು, ಸರ್ವಧರ್ಮ ಸಮನ್ವಯದ ಹಾಗೂ ವೀರಶೈವ ಧರ್ಮದ ''ಮಾದರಿ ಮಹಾನಗರ''ವನ್ನು ಪುನರ್‌ರಚಿಸುವ ಮಹತ್ವದ ಕಾರ್ಯವನ್ನು ಆಗುಮಾಡಲೆಂದು ಹಾರೈಸಲಾಗಿದೆ.

೨. ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆ

ಚಿಕ್ಕಹಳ್ಳಿ ರೂಪದಲ್ಲಿ ಕಾಣಿಸಿಕೊಂಡ ಕಲ್ಯಾಣವು ಕಾಲಾಂತರದಲ್ಲಿ ಪಟ್ಟಣವಾಗಿ ಬೆಳೆದಿದೆ. ಮಧ್ಯ ಇತಿಹಾಸಕಾಲದಲ್ಲಿ ಹಲವು ನಗರಗಳು ರಾಜಕೀಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೇಂದ್ರಗಳಾದವು. ಅಂತಹ ಕೇಂದ್ರಗಳಲ್ಲಿ ಕಲ್ಯಾಣಪುರ ಒಂದಾಗಿತ್ತು. ಮೌರ್ಯ, ಶಾತವಾಹನ ಮತ್ತು ಆದಿ ಕಂದಬರ ಆಳ್ವಿಕೆಗೆ ಬಸವಕಲ್ಯಾಣ ಪ್ರದೇಶವೂ ಇನ್ನಿತರ ನಾಡುಗಳ ಜತೆ ಒಳಗೊಂಡಿದ್ದಿತ್ತು. ಈ ಕಾಲದ ಯಾವ ಶಾಸನಗಳೂ ಮತ್ತು ಶಿಲ್ಪಗಳು ಅಲ್ಲಿ ದೊರೆತಿಲ್ಲ. ಆದರೆ ಕಲ್ಯಾಣದಲ್ಲಿ ಕ್ರಿ.ಶ. ೨-೩ನೇ ಶತಮಾನದ ವಸತಿ ನೆಲೆಯಿದೆ. ಪ್ರಾಚ್ಯ ಅವಶೇಷಗಳಾದ ಗಡಿಗೆ-ಮಡಿಕೆಗಳು ಅಲ್ಲಿವೆ. ಸು. ಕ್ರಿ.ಶ. ೨ನೇ ಶತಮಾನದಲ್ಲಿ ಕಲ್ಯಾಣ ಜೈನರ ಯಾಪನೀಯ ಪಂಥದವರ ಬೀಡಾಗಿತ್ತು. ಆದರೆ ಕಲ್ಯಾಣ ನಾಡಿನ ಇತಿಹಾಸವನ್ನು ಹೇಳುವ ಯಾವ ಪ್ರಾಚ್ಯ ಅವಶೇಷಗಳು ಸುಮಾರು ಕ್ರಿ.ಶ. ೪ನೇ ಶತಮಾನದಿಂದ ಕ್ರಿ.ಶ. ೭ನೇ ಶತಮಾನದವರೆಗೆ ದೊರೆತಿಲ್ಲ. ಆದರೆ ಎಂಟನೇ ಶತಮಾನದ ಅಂತ್ಯಭಾಗದಲ್ಲಿ ಈ ನಾಡಿನಲ್ಲಿ ಭಲ್ಲುಂಕಿ ದೇಶ ಮತ್ತು ಮೊರಖಂಡಿಗಳು ಕಾಣುತ್ತವೆ. ಬಾದಾಮಿ ಚಾಲುಕ್ಯ ದೊರೆ ವಿಜಯಾದಿತ್ಯನ ಕ್ರಿ.ಶ. ೬೯೬ರ ಜಮಲಗಾವ ತಾಮ್ರಪಟ ಶಾಸನದಿಂದ ಈ ವಿಷಯ ಗೊತ್ತಾಗುತ್ತದೆ. ಬೀದರ ಜಿಲ್ಲೆಯ ಈಗಿನ ಭಾಲ್ಕಿಯನ್ನು ಭಲ್ಲುಂಕೆ ದೇಶ, ಬಲ್ಲುಂಕೆ-೮೪ ಮುಂತಾದ ಹೆಸರಿನಿಂದ ಸುಮಾರು ಕ್ರಿ.ಶ. ೧೧-೧೨ನೇ ಶತಮಾನದವರೆಗಿನ ಶಾಸನಗಳಲ್ಲಿ ಕರೆಯಲಾಗಿದೆ. ಮೊರಖಂಡಿಯು ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಒಂದು ಚಿಕ್ಕ ಗ್ರಾಮ. ಅಲ್ಲಿ ಮಾತ್ರ ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಕಾಲದ ಕೆಲವು ಗುಹದೇವಾಲಯಗಳು ಮತ್ತು ಶಿಲ್ಪಗಳಿವೆ. ತದನಂತರ ರಾಷ್ಟ್ರಕೂಟರ ಕಾಲದ ಕೆಲವೇ ಅವಶೇಷಗಳು ಕಲ್ಯಾಣದಲ್ಲಿವೆ. ಕ್ರಿ.ಶ. ೧೧ನೇ ಶತಮಾನದ ಪೂರ್ವದಲ್ಲಿ ಕಲ್ಯಾಣ ಅಂದಿನ ಪ್ರಸಿದ್ಧ ೧೨ ಪಟ್ಟಣಗಳಲ್ಲಿ ಒಂದಾಗಿದ್ದಿತು.

ಕಲ್ಯಾಣ ಚಾಲುಕ್ಯರು : ಬಾದಾಮಿ ಚಾಲುಕ್ಯ ಮನೆತನದ ಇಮ್ಮಡಿ ತೈಲ (ಕ್ರಿ.ಶ. ೯೭೩-೯೭೭) ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ಅಧೀನದಲ್ಲಿ ತರ್ದವಾಡಿ-೧೦೦೦ ನಾಡಿನ ಅಧಿಕಾರಿ ಆಗಿ ಮೊದಲು ಗೋಚರಿಸಿದ. ಮುಮ್ಮಡಿ ಕೃಷ್ಣನ ತರುವಾಯ ಆತನ ಹಿರಿಯ ಮಗ ಖೊಟ್ಟಿಗ ಅರಸನಾಗಿ ಆಳ್ವಿಕೆ ನಡೆಸಿದ (ಕ್ರಿ.ಶ. ೯೬೭-೯೭೨). ಈತನ ವಿರುದ್ಧ ಉತ್ತರದ ಪರಮಾರ ರಾಜ ಶ್ರೀಮುಖ ಹರ್ಷ ಯುದ್ಧಮಾಡಿ ರಾಜಧಾನಿ ಮಳಖೇಡವನ್ನು ಧ್ವಂಸಗೊಳಿಸಿದ. ರಾಷ್ಟ್ರಕೂಟರ ನೆಂಟರಾದ ಗಂಗ ಮಾರಸಿಂಹ ತಕ್ಷಣ ಸೈನ್ಯದೊಂದಿಗೆ ಅಲ್ಲಿಗೆ ಧಾವಿಸಿ ರಾಜಧಾನಿಯನ್ನು ರಕ್ಷಿಸಿದ. ಅವನ ತರುವಾಯ ಅವನ

ತಮ್ಮ ನಿರುಪಮನ ಮಗ ಕರ್ಕ ನಾಲ್ಮಡಿ ಇಂದ್ರ ಅರಸನಾಗಿ ಆಳಿದನು. (ಕ್ರಿ.ಶ. ೯೭೨-೯೭೩). ಈತನ ಕಾಲದಲ್ಲಿ ಅಶಿಸ್ತು-ಅಶಾಂತಿ ನೆಲೆಯೂರಿದವು. ಈತನ ವಿರುದ್ಧ ಚಾಲುಕ್ಯ ವಂಶದ ಇಮ್ಮಡಿ ತೈಲ ಯುದ್ಧಮಾಡಿ ಜಯಗಳಿಸಿದ. ರಣರಂಗದಿಂದ ಕರ್ಕ ಓಡಿಹೋದ. ಈ ವಿಷಮ ಸ್ಥಿತಿಯಿಂದ ಗಂಗ ಮಾರಸಿಂಹ ನಾಲ್ಮಡಿ ಇಂದ್ರನನ್ನು ಪಾರು ಮಾಡಲು ಪ್ರಯತ್ನಿಸಿದ. ಆದರೆ ಯಶಸ್ಸು ಸಿಗಲಿಲ್ಲ. ತೈಲಪ ಮಳಖೇಡವನ್ನು ಆಕ್ರಮಿಸಿ, ಚಾಲುಕ್ಯ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸುವಲ್ಲಿ ಯಶಸ್ಸನ್ನು ಗಳಿಸಿದ.

ರಾಷ್ಟ್ರಕೂಟರು ತೈಲಪನ ಪೂರ್ವಜರನ್ನು ಕೊಂದು ಅವರ ಸಾಮ್ರಾಜ್ಯವನ್ನು ತಮ್ಮ ಕೈವಶ ಮಾಡಿಕೊಂಡು (ಸುಮಾರು ಎರಡು ಶತಮಾನ ಆಳಿದರು) ಆಳುತ್ತಿದ್ದರು. ತೈಲಪ ಅವರನ್ನು ಅಂತ್ಯಗೊಳಿಸಿ ತಮ್ಮ ಪ್ರತೀಕಾರವನ್ನು ತೀರಿಸಿಕೊಂಡನೆಂದು ರಂಜೋಳದ ಶಾಸನದಿಂದ ತಿಳಿಯುವುದು.

ಈತನ ಆಳ್ವಿಕೆಯಲ್ಲಿ ಗಂಗರನ್ನು ಸದೆಬಡಿದ ಬನವಾಸಿಯ ಕನ್ನಪನು ಮೊದಲು ತೈಲನ ಆಳ್ವಿಕೆಯನ್ನು ಒಪ್ಪಿಕೊಂಡ. ನಂತರ ಸೌಂದತ್ತಿಯ ರಟ್ಟರು, ಸಿಂಧರು, ಶಿಲಾಹಾರರು ಮತ್ತು ದೇವಗಿರಿಯ ಸೇವುಣರು ತೈಲನ ಆಳ್ವಿಕೆಯನ್ನು ಒಪ್ಪಿಕೊಂಡು ಅವನ ಅಧೀನದಲ್ಲಿ ಸಾಮಂತರಾಗಿ ಅಧಿಕಾರ ಮುಂದುವರಿಸಿದರು. ಇದರಿಂದ ತನ್ನ ಪೂರ್ವಜರು ಹೊಂದಿದ್ದ ವಿಶಾಲ ಸಾಮ್ರಾಜ್ಯ ಕ್ರಮೇಣವಾಗಿ ಆತನ ಅಧೀನಕ್ಕೆ ಬರತೊಡಗಿತು.

ಈತನ ಬೆಳವಣಿಗೆ ದಕ್ಷಿಣದಲ್ಲಿದ್ದ ಚೋಳರಿಗೆ ಸಹಿಸಲಾಗಲಿಲ್ಲ. ಆಗ ವೆಂಗಿ ಮನೆತನದವರು ಚೋಳರ ಅಧೀನಕ್ಕೆ ಒಳಪಟ್ಟರು. ಇದರಿಂದ ಚಾಲುಕ್ಯ ಮತ್ತು ಚೋಳರ ನಡುವೆ ಯುದ್ಧ ನಡೆಯಿತು. (ಕ್ರಿ.ಶ. ೯೯೨) ಪರಮಾರ ಮುಂಜನು ಸಹ ತೈಲನ ವಿರುದ್ಧ ಸುಮಾರು ೧೬ ಸಲ ಯುದ್ಧಮಾಡಿ ಅವನನ್ನು ಸೋಲಿಸಿದ. ಆದರೆ ಕೊನೆಯ ಯುದ್ಧದಲ್ಲಿ ಮುಂಜನು ಸೋತು ಕ್ರಿ.ಶ. ೯೯೬ರಲ್ಲಿ ಮರಣ ಹೊಂದಿದ. ನಂತರ ಗುಜರಾತನ್ನು ತೈಲನು ಗೆದ್ದುಕೊಂಡ. ಈತ ಸುಮಾರು ೨೪ ವರ್ಷ ರಾಜ್ಯಭಾರ ಮಾಡಿದ.

ಸತ್ಯಾಶ್ರಯ (ಕ್ರಿ.ಶ. ೯೯೭-೧೦೦೮) : ತೈಲನ ರಾಣಿ ಜಾಕವ್ವೆಗೆ ಸತ್ಯಾಶ್ರಯ ಮತ್ತು ದಶವರ್ಮರೆಂಬ ಇಬ್ಬರು ಮಕ್ಕಳು. ರಾಜಕುಮಾರನಾಗಿ ತನ್ನ ತಂದೆಗೆ ಚೋಳರ ಮತ್ತು ಪರಮಾರರ ವಿರುದ್ಧ ನಡೆದ ಯುದ್ಧಗಳಲ್ಲಿ ಸತ್ಯಾಶ್ರಯ ಸಹಾಯ ಮಾಡಿದ.

ಈತನ ಕಾಲದಲ್ಲಿ ಚೋಳರಾಜ ಮೊದಲನೆಯ ರಾಜರಾಜ ಚಾಲುಕ್ಯರ ದಕ್ಷಿಣ ಪ್ರಾಂತದ ಮೇಲೆ ದಾಳಿಮಾಡಿ ಚಾಲುಕ್ಯರ ದಂಡನಾಯಕ ಕೇಶವನನ್ನು ಸೆರೆಹಿಡಿದನು. ರಾಜನ ಸಹೋದರ ದಶವರ್ಮನನ್ನು ಕೊಂದನು. ಚೋಳರ ದಾಳಿಯು ವಿಜಾಪುರ

ಜಿಲ್ಲೆಯ ದನ್ನೂರವರೆಗೆ ನಡೆಯಿತು. ಚೋಳರ ಸೈನ್ಯವು ಒಂಬತ್ತುನೂರು ಸಾವಿರವಿತ್ತೆನ್ನಲಾಗಿದೆ. ಈ ಯುದ್ಧದಲ್ಲಿ ಆಸ್ತಿ-ಪಾಸ್ತಿ ನಾಶವಾದವು. ಬ್ರಾಹ್ಮಣರನ್ನು, ಮಕ್ಕಳನ್ನು ಮತ್ತು ಮಹಿಳೆಯರನ್ನು ಕೊಲ್ಲಲಾಯಿತು. ಕೆಲವು ಮಹಿಳೆಯರನ್ನು ಸೆರೆ ಹಿಡಿದುಕೊಂಡು ಚೋಳರು ಹೋದರೆನ್ನಲಾಗಿದೆ.

ರನ್ನನ ಗದಾಯುದ್ಧದಲ್ಲಿ ಸತ್ಯಾಶ್ರಯ ತನ್ನ ಸಹೋದರನನ್ನು ಕೊಂದು ಚೋಳರ ಮೇಲೆ ಪ್ರತೀಕಾರ ತೀರಿಸಿಕೊಂಡನೆನ್ನಲಾಗಿದೆ. ಆಗ ತನ್ನ ದಂಡನಾಯಕ 'ಬಯಲನಂಬಿ' ಯನ್ನು ವೆಂಗಿಗೆ ಸೈನ್ಯದೊಂದಿಗೆ ಕಳಿಸಿದಾಗ ಆತನು ಕೈಗಳಲ್ಲಿ ಕತ್ತಿ ಮತ್ತು ಬೆಂಕಿಗಳನ್ನು ಹಿಡಿದುಕೊಂಡು ಭೇಬ್ರಲುವರೆಗೆ ಹೋಗಿ ರಣಮಂಡಲ ಮತ್ತು ಧರಣಿ ಕೋಟೆಗಳನ್ನು ಸುಟ್ಟುಹಾಕಿದನು. ಈ ಯುದ್ಧದಲ್ಲಿ ಬಯಲನಂಬಿಗೆ ಸಹಾಯ ಮಾಡಿದವನು ಚಾಲುಕ್ಯರ ಮತ್ತೊಬ್ಬ ಸಾಮಂತ ನೊಳಂಬ ಘಂಟೆಯಂಕಕಾರ (ಕ್ರಿ.ಶ. ೧೦೦೬).

ಪಶ್ಚಿಮದ ಶಿಲಾಹಾರ, ಅಪರಾಜಿತ ಮತ್ತು ಉತ್ತರದ ಮೂಲರಾಜನ ಸಂಗಡ ಯುದ್ಧ ಮಾಡಬೇಕಾಯಿತು. ಸತ್ಯಾಶ್ರಯ ಅಪರಾಜಿತನನ್ನು ಸೋಲಿಸಿ ಕೊಂಕಣದ ಅಂಶನಗರವನ್ನು ಸುಟ್ಟುಹಾಕಿದನೆಂದು ರನ್ನ ಹೇಳಿರುವನು. ಇದಲ್ಲದೇ ಅಪರಾಜಿತನು ಈ ಯುದ್ಧದಲ್ಲಿ ಹೇಗೆ ನಡುಗುತ್ತಿದ್ದನೆಂದು ವರ್ಣಿಸಲಾಗಿದೆ. ಒಂದು ಕಡೆ ಸತ್ಯಾಶ್ರಯನ ಸೈನ್ಯ ಮತ್ತೊಂದು ಕಡೆ ಸಮುದ್ರ ಇವುಗಳ ಮಧ್ಯದಲ್ಲಿ ಅಪರಾಜಿತ ಸಿಲುಕಿ ಒದ್ದಾಡುತ್ತಿದ್ದ. ಅದು ಹೇಗಿತ್ತೆಂದರೆ ಒಂದು ಕಡ್ಡಿಯ ಎರಡು ತುದಿಗಳಲ್ಲಿ ಉರಿಯುವ ಬೆಂಕಿಯ ಮಧ್ಯದಲ್ಲಿ ಇದ್ದು ಒದ್ದಾಡುವ ಇರುವೆಯಂತಾಗಿತ್ತು. ತದನಂತರ ಅಲ್ಲಿಂದ ಸತ್ಯಾಶ್ರಯನು ೨೧ ಆನೆಗಳನ್ನು ತೆಗೆದುಕೊಂಡು ತನ್ನ ರಾಜ್ಯಕ್ಕೆ ಮರಳಿದನ್ನೆನ್ನಲಾಗಿದೆ. ದಕ್ಷಿಣ ಗುಜರಾತಿನ ಲಾಟನನ್ನು ಚಾಲುಕ್ಯ ಮೂಲರಾಜ ಸೋಲಿಸಿದ.

ಸತ್ಯಾಶ್ರಯನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಒಬ್ಬಳು ಮಹಾದೇವಿ. ಈಕೆಯನ್ನು ನೊಳಂಬರಿಗೆ ಕೊಟ್ಟುಮದುವೆ ಮಾಡಿದ. ಇನ್ನೊಬ್ಬಳು ಪಂಪಾದೇವಿ ಈಕೆಯನ್ನು ತನ್ನ ನೆಚ್ಚಿನ ಮತ್ತೊಬ್ಬ ಸಾಮಂತ ಕುಂದಮರಸನಿಗೆ ಕೊಟ್ಟು ಲಗ್ನ ಮಾಡಿದ. ಈತನು ತನ್ನ ತಂದೆಯ ರಾಜನೀತಿಯನ್ನೇ ಮುಂದುವರಿಸಿ ಆಡಳಿತವನ್ನು ಇನ್ನೂ ಬಲಿಷ್ಠಗೊಳಿಸಿದ. ಈತನ ಕಾಲದಲ್ಲಿದ್ದ ದಾನಚಿಂತಾಮಣಿ ಅತ್ತಿಮಬ್ಬೆ ಕಲ್ಯಾಣದಲ್ಲಿದ್ದ ಜೈನರ ಚಂದ್ರಪ್ರಭ ಬಸದಿಯನ್ನು ಜೀರ್ಣೋದ್ಧಾರ ಮಾಡಿದಳೆಂದು ಕಲ್ಯಾಣದ ಶಾಸನವೊಂದು ಹೇಳುತ್ತದೆ.

ಐದನೇ ವಿಕ್ರಮಾದಿತ್ಯ (ಕ್ರಿ.ಶ. ೧೦೦೮-೧೦೧೫) : ನಂತರ ಸತ್ಯಾಶ್ರಯನ ಸಹೋದರ ದಶವರ್ಮನ ಮಗ ಐದನೇ ವಿಕ್ರಮಾದಿತ್ಯ ಅರಸನಾದ. ಈತನ ಕಾಲದಲ್ಲಿ ಚೋಳರ (ರಾಜೇಂದ್ರ ಚೋಳ) ಯುದ್ಧಗಳೇ ಮುಖ್ಯವಾಗಿ ಕಾಣುತ್ತವೆ. ಆತನ ಸಹೋದರಿ ಅಕ್ಕಾದೇವಿಯು ಕಿಸುಕಾಡ-೭೦ ನಾಡಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದಳು; ಆಕೆಯನ್ನು ಲಕ್ಷ್ಮಿಯ ಅವತಾರವೆನ್ನಲಾಗಿದೆ. ಆತನ ಇಬ್ಬರು ಸಹೋದರರು ಅಯ್ಯಣ ಮತ್ತು ಜಯಸಿಂಹ.

ಅಯ್ಯಣ (ಕ್ರಿ.ಶ. ೧೦೧೪-೧೦೧೫) : ಅಯ್ಯಣ ಕೇವಲ ಕೆಲವು ತಿಂಗಳ ಮಾತ್ರ ರಾಜನಾಗಿದ್ದನು. ಅಯ್ಯಣ ವಂಶ ಚರಿತ್ರೆಯಲ್ಲಿ ಆತನು ಕೆಲವು ಕಾಲ ಆಳಿ ಸಿಂಹಾಸನವನ್ನು ಬಿಟ್ಟುಕೊಟ್ಟು, ರಾಜಕೀಯ ಜೀವನದಿಂದ ನಿವೃತ್ತಿ ಹೊಂದಿದ ಎಂದು ತಿಳಿದು ಬರುತ್ತದೆ.

ಇಮ್ಮಡಿ ಜಯಸಿಂಹ (ಕ್ರಿ.ಶ. ೧೦೧೫-೧೦೪೪) : ತೆಲಗು ಬಸವ ಪುರಾಣದಲ್ಲಿ ಕಲ್ಯಾಣದ ಜಗದೇಕ ಮಲ್ಲನು ಹೊಸದಾಗಿ ಸ್ಥಾಪಿಸಿದ ವಿಷ್ಣು ಮೂರ್ತಿಯನ್ನು ಶಿವಯೋಗಿ ಎಂಬವನ ಪವಾಡದಿಂದ ಆ ಮೂರ್ತಿಯು ಬೇಕಾದಾಗ ಭೆಟ್ಟಿಯಾಗಲು ಹಾಗೂ ಮಾಯವಾಗುವುದನ್ನು ತೋರಿಸಿದನೆಂದು ಹೇಳಿದೆ. (ನಾಲ್ಕನೇ ಅಶ್ವಾಸ) ಆದರೆ (ಆರನೇ ಸರ್ಗದಲ್ಲಿ) ಜೈನನಾಗಿದ್ದ ಜಯಸಿಂಹನನ್ನು ಶೈವನನ್ನಾಗಿ ಆತನ ರಾಣಿ ಸುಗ್ಗಲದೇವಿ ತನ್ನ ಪವಾಡದಿಂದ ಬದಲಾಯಿಸಿದಳೆಂದು ಹೇಳಿದೆ. ಕ್ರಿ.ಶ. ೧೦೧೫ರಲ್ಲಿ ಈತ ಸಿಂಹಾಸನವನ್ನೇರಿದ. ಈತನ ಆಳ್ವಿಕೆಯ ಕಾಲದಲ್ಲಿ ಚೋಳರು ತಮ್ಮ ಯುದ್ಧಭೀತಿಯನ್ನು ನಿರಂತರವಾಗಿ ಜಯಸಿಂಹನ ವಿರುದ್ಧ ನಡೆಸಿದರು. ವೆಂಗಿ ಮತ್ತು ತುಂಗಭದ್ರ ಪ್ರದೇಶಗಳು ಈ ಇಬ್ಬರು ಪೈಪೋಟಿ ನಡೆಸಲು ಕಾರಣವೂ ಆಯಿತು. ತನ್ನ ಆಳ್ವಿಕೆಯಲ್ಲಿ ಈತ ಬಹುಕಾಲ ವೈರಿಗಳ ಸಂಗಡ ಯುದ್ಧ ಮಾಡುವುದರಲ್ಲಿ ಕಳೆದ. ಆತನ ವಿರುದ್ಧ ಪರಮಾರ ಭೋಜ ಯುದ್ಧ ಮಾಡಿದ. ಭೋಜ ಗೋದಾವರಿ ನದಿ ದಡದಲ್ಲಿ ಚೋಳರಾಜೇಂದ್ರ ಮತ್ತು ಕಳಚೂರಿ ಗಂಗೆಯ ದೇವರನ್ನು ಕೂಡಿಸಿಕೊಂಡು ಚಾಲುಕ್ಯರ ವಿರುದ್ಧ ಯುದ್ಧ ಮಾಡಿದ. ತಮಿಳು ದಾಖಲೆಗಳಲ್ಲಿ ರಾಜೇಂದ್ರ, ಮಾನ್ಯಖೇಟ ರಾಜಧಾನಿಯನ್ನು ಸುಟ್ಟುಹಾಕಿದನೆಂದೂ ಭೋಜ ರಾಜನು ಕೊಂಕಣವನ್ನು ಗೆದ್ದ (ಕ್ರಿ.ಶ. ೧೦೨೦)ನೆನ್ನಲಾಗಿದೆ. ಈ ಸಂದರ್ಭದಲ್ಲಿ ಚಾಲುಕ್ಯರ ದಂಡನಾಯಕ ವಾವಣರಸ ಪನ್ನಾಳವನ್ನು ಸುಟ್ಟುಹಾಕಿದ. ಸೇವುಣ ಮುಮ್ಮಡಿ ಬಿಲ್ಲಮನಿಗೆ ತನ್ನ ಮಗಳನ್ನು ಕೊಟ್ಟು ಅವರ ಸಂಗಡ ವೈವಾಹಿಕ ಸಂಬಂಧ ಬೆಳೆಸಿದ. ವೆಂಗಿ ಮನೆತನದಲ್ಲಿ ಸಿಂಹಾಸನಕ್ಕೆ ಕಚ್ಚಾಟ ಶುರುವಾಯಿತು. ಜಯಸಿಂಹ ಏಳನೇ ವಿಜಯಾದಿತ್ಯನನ್ನು ವೆಂಗಿ ರಾಜ್ಯದ ಸಿಂಹಾಸನದ ಮೇಲೆ ಕೂಡಿಸಲು ಕಾರಣನಾದ. ಅದೂ ತಾತ್ಕಾಲಿಕವಾಯಿತು. ನಂತರ ಅಲ್ಲಿ ರಾಜೇಂದ್ರ ಸಿಂಹಾಸನವೇರಿದ. ಈತನ ಕಾಲದಲ್ಲಿ ಕಲ್ಯಾಣವೊಂದು ನೆಲವೀಡಾಗಿದ್ದಿತು.

ಆತನ ಕುಟುಂಬ : ಇಮ್ಮಡಿ ಜಯಸಿಂಹನಿಗೆ ಸುಗ್ಗಲದೇವಿ, ದೇವಲದೇವಿ ಮತ್ತು ಲಕ್ಷ್ಮೀದೇವಿಯೆಂಬ ಮೂವರು ಪತ್ನಿಯರು, ಇಬ್ಬರು ಪುತ್ರರು. ಮೊದಲನೇ ಸೋಮೇಶ್ವರ ಮತ್ತು ಜಯಸಿಂಹ, ಇಬ್ಬರು ಪುತ್ರಿಯರು ಅವ್ವಲದೇವಿ ಮತ್ತು ಸೋಮಲದೇವಿ. ಕದಂಬ ಮಯೂರವರ್ಮನಿಗೆ ತನ್ನ ಸಹೋದರಿ ಅಕ್ಕಾದೇವಿಯನ್ನು ಕೊಟ್ಟು ಲಗ್ನ ಮಾಡಿದ.

ಮೊದಲನೇ ಸೋಮೇಶ್ವರ (ಕ್ರಿ.ಶ. ೧೦೪೪-೧೦೬೮) : ಜಯಸಿಂಹನ ಮಗ ಸೋಮೇಶ್ವರ, ಆಹವಮಲ್ಲ ಮತ್ತು ತ್ರೈಲೋಕ್ಯಮಲ್ಲನೆಂಬ ಬಿರುದುಗಳಿಂದ ಚಾಲುಕ್ಯ ಸಿಂಹಾಸನವೇರಿದ. ಕಲ್ಯಾಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ಅನೇಕ ನೂತನ-ಭವ್ಯವಾದ ಕಟ್ಟಡಗಳನ್ನು ಕಟ್ಟಿಸಿದನೆಂದು ಬಿಲ್ಹಣ ಹೇಳಿದ್ದಾನೆ. ಈತ ರಾಜಧಾನಿಯನ್ನು ಮಾನ್ಯಖೇಟದಿಂದ ಕಲ್ಯಾಣಕ್ಕೆ ವರ್ಗಾಯಿಸಿದ. ಈ ಕಾಲಾವಧಿಯಲ್ಲಿ ಚೋಳರು ಅವರ ರಾಜಧಾನಿಯನ್ನು ಗಂಗೈಕೊಂಡ ಚೋಳಪುರಕ್ಕೆ ವರ್ಗಾಯಿಸಿದರು. ಪರಮಾರಭೋಜನು ತನ್ನ ರಾಜಧಾನಿಯನ್ನು ಉಜ್ಜಯಿನಿಯಿಂದ ಧಾರಾನಗರಕ್ಕೆ ವರ್ಗಾಯಿಸಿದ. ವೆಂಗಿಯ ರಾಜರು ತಮ್ಮ ರಾಜಧಾನಿಯನ್ನು ವೆಂಗಿಪುರದಿಂದ ರಾಜಮುಂಡ್ರಿಗೆ ವರ್ಗಾಯಿಸಿದನು.

ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಚಾಲುಕ್ಯ ಮತ್ತು ಚೋಳರ (ರಾಜಾಧಿರಾಜ ಮತ್ತು ಇಮ್ಮಡಿ ರಾಜೇಂದ್ರ) ನಡುವೆ ನಿರಂತರವಾಗಿ ಅನೇಕ ಕಡೆಗಳಲ್ಲಿ ಯುದ್ಧಗಳು ನಡೆದವು. ಸೋಮೇಶ್ವರ ಉತ್ತರದ ಕಡೆ ಯುದ್ಧಕ್ಕೆ ಹೋದಾಗ ಚೋಳರು ಚಾಲುಕ್ಯರ ರಾಜಧಾನಿಯಾದ ಕಲ್ಯಾಣಪುರದ ಮೇಲೆ ಯುದ್ಧಮಾಡಿ ಅಲ್ಲಿಯ ಕೋಟೆಯನ್ನು ಸುಟ್ಟರು. ಈ ವಿಷಯವನ್ನು ಅರಿತ ಚಾಲುಕ್ಯರ ಮತ್ತೊಂದು ಸೈನ್ಯದ ಮುಂದಾಳತ್ವವಹಿಸಿ ಕೊಂಕಣದಲ್ಲಿ ಯುದ್ಧ ಮಾಡುತ್ತಿದ್ದ ದಂಡನಾಯಕ ಪುಲಕೇಶಿ ಚೋಳರನ್ನು ದಿಕ್ಕುತಪ್ಪಿಸಲು ಅಲ್ಲಿಂದ ನೇರವಾಗಿ ಚೋಳರ ರಾಜ್ಯದ ಮೇಲೆ ದಾಳಿ ಇಟ್ಟ. ಅಲ್ಲಿ ಕಾಂಚಿನಗರವನ್ನು ಸುಟ್ಟು ಮರಳಿ ಬಂದನು. ನಂತರ ಸೋಮೇಶ್ವರ ತನ್ನ ಉತ್ತರದ ದಿಗ್ವಿಜಯವನ್ನು ಮುಗಿಸಿಕೊಂಡು ಕಲ್ಯಾಣಕ್ಕೆ ಬಂದನು.

ವೆಂಗಿಪುರ ತನ್ನ ಅಧೀನದಲ್ಲಿದ್ದುದರಿಂದ ಚೋಳರು ತುಂಗಭದ್ರೆಯನ್ನು ದಾಟಿ ಕಂಪಿಲ, ಕೊಪ್ಪ ಮುಂತಾದ ಸ್ಥಳಗಳಲ್ಲಿ ಈತನ ವಿರುದ್ಧ ಯುದ್ಧ ಮಾಡಿದರು. ಕೊಪ್ಪ ಯುದ್ಧದಲ್ಲಿ ಸೈನ್ಯದ ಮುಂದೆ ನಿಂತು ಯುದ್ಧ ಮಾಡುತ್ತಿದ್ದ ಚೋಳ ಅರಸ ರಾಜಾಧಿರಾಜ ಆನೆಯನ್ನು ಚಾಲುಕ್ಯರ ದಂಡನಾಯಕ ಮೊದಲು ಅದನ್ನು ತಿವಿದು ಕೆಡವಿ ನಂತರ ರಾಜಾಧಿರಾಜನನ್ನು ಕೊಂದನು. ಇದನ್ನು ತಿಳಿದ ಅವನ ಸಹೋದರ ಇಮ್ಮಡಿ ರಾಜೇಂದ್ರ

ಹೆದರದೆ ಮುಂದೆ ಬಂದು ಚಾಲುಕ್ಯ ಸೈನ್ಯವನ್ನು ಸದೆಬಡಿದ (ಕ್ರಿ.ಶ. ೧೦೫೪). ಕುಮ್ಮಟದ ಕೋಟೆಗೆ ದಾಳಿಯಿಟ್ಟು ಕೊಲ್ಲಾಪುರದವರೆಗೆ ಹೋಗಿ ದಿಗ್ವಿಜಯಸ್ತಂಭ ನೆಟ್ಟು, ದಾರಿಯಲ್ಲಿಯ ಕೆಲವು ದೇವಾಲಯಗಳನ್ನು ಸುಟ್ಟನು! ಕ್ರಿ.ಶ. ೧೦೬೪ರಲ್ಲಿ ವೀರ ರಾಜೇಂದ್ರ ಚೋಳ ಸಿಂಹಾಸವನ್ನೇರಿದ ಬಳಿಕ ಚಾಲುಕ್ಯ ಸೋಮೇಶ್ವರ ಕೂಡಲ ಸಂಗಮದಲ್ಲಿ ಮೂರನೇ ಸಲ ಚಾಲುಕ್ಯರ ಮೇಲೆ ಯುದ್ಧ ಮಾಡಿದ ಆತನು ಹೂವಿನ ಹಡಗಲಿ, ಅರಸಿಕೆರೆ, ಪೂಲಿ ಮುಂತಾದ ಕಡೆಗಳಲ್ಲಿ ತಂಗಿದ್ದನು. ಹೊಯ್ಸಳ ವಿನಯಾದಿತ್ಯ ಕ್ರಿ.ಶ.೧೦೪೭ ರಲ್ಲಿ ಸಿಂಹಾಸನವೇರಿದ. ಚಾಲುಕ್ಯರ ಅಧಿಪತ್ಯವನ್ನು ಒಪ್ಪಿಕೊಂಡು ಆತನಿಗೆ ತಮ್ಮ ಮಗಳಾದ ರಾಜಕುಮಾರಿ ಹೊಯ್ಸಳ ಮಹಾದೇವಿಯನ್ನು ಕೊಟ್ಟು ವಿವಾಹ ಮಾಡಿದನು. ಕಾಯಿಲೆಯಿಂದ ಬಳಲುತ್ತಿದ್ದ ಸೋಮೇಶ್ವರ ಅದು ಗುಣವಾಗದೆಂದು ಕುರುವತ್ತಿ ಹತ್ತಿರದ ತುಂಗಭದ್ರೆಯಲ್ಲಿ ಮುಳುಗಿ ಪ್ರಾಣಬಿಟ್ಟನು. ಆತನಿಗೆ ಎಂಟು ರಾಣಿಯರಿದ್ದರು. ತನ್ನ ಒಬ್ಬ ರಾಣಿ ಬಾಚಲದೇವಿಗೆ ಮೂವರು ಪುತ್ರರು ಇಮ್ಮಡಿ ಸೋಮೇಶ್ವರ (ಬೆಳ್ವೊಲ ಮತ್ತು ಪುಲಿಗೆರೆ ಪ್ರಾಂತ್ಯಕ್ಕೆ ರಾಜ್ಯಪಾಲನಾಗಿದ್ದ) ಆರನೇ ವಿಕ್ರಮಾದಿತ್ಯ (ಗಂಗವಾಡಿಗೆ ರಾಜ್ಯಪಾಲ) ಮತ್ತು ನಾಲ್ಮಡಿ ಜಯಸಿಂಹ (ತರ್ದವಾಡಿ ನಾಡಿನ ರಾಜ್ಯಪಾಲ). ಆತನ ಪುತ್ರಿ ಸುಗ್ಗಲದೇವಿಯನ್ನು ಸಾಮಂತ ಸಿಂಗಣದೇವರಸನಿಗೆ ಕೊಟ್ಟು ವಿವಾಹ ಮಾಡಿದ. ಈತನ ಕಾಲದಲ್ಲಿ ನಿರಂತರವಾಗಿ ಚೋಳರಿಂದ ಯುದ್ಧಗಳು ನಡೆದರೂ ತನ್ನ ಸಾಮ್ರಾಜ್ಯವನ್ನು ವಿಸ್ತಾರಗೊಳಿಸಿ ಅದನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಆಳ್ವಿಕೆಯನ್ನು ನಡೆಸಿದನು.

ಇಮ್ಮಡಿ ಸೋಮೇಶ್ವರ (ಕ್ರಿ.ಶ.೧೦೬೮-೧೦೭೬) : ಕ್ರಿ.ಶ.೧೦೬೮ ಏಪ್ರಿಲ್ ೧೧ರಂದು ತನ್ನ ತಂದೆ ಸೋಮೇಶ್ವರನ ಆಳ್ವಿಕೆಯ ಬಳಿಕ ಚಾಲುಕ್ಯ ಸಿಂಹಾಸನವೇರಿದ. ಆದ ಕಾರಣ ಸಹೋದರರಲ್ಲಿ ಸಿಂಹಾಸನಕ್ಕಾಗಿ ಜಗಳಗಳು ಆರಂಭಗೊಂಡವು. ಬಾಹ್ಯದಿಂದ ಚೋಳರ ಉಪಟಳಗಳು ಮುಂದುವರೆದವು. ಆತ ರಾಜನಾದ ಬಳಿಕ ತನ್ನ ಸಹೋದರರನ್ನು ವಿವಿಧ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸಿದ. ಆದರೆ ಸಹೋದರ ಆರನೇ ವಿಕ್ರಮಾದಿತ್ಯನ ಅನುಪಸ್ಥಿತಿಯಲ್ಲಿ ಈತ ರಾಜನಾಗಿ ಸಿಂಹಾಸನವನ್ನೇರಿದ್ದು ಆತನಿಗೆ ಬೇಸರತಂದಿತು. ಆಗ ಆತನು ಉತ್ತರದ ದಿಗ್ವಿಜಯದಲ್ಲಿದ್ದನು. ಮುಂದೆ ಅಣ್ಣನ ಸೈನ್ಯ ಈತನನ್ನು ಬೆನ್ನು ಹತ್ತಿತು. ಅದನ್ನು ಸೋಲಿಸಿ ತನ್ನ ಜೀವವನ್ನು ಸಂರಕ್ಷಿಸಿಕೊಳ್ಳುವ ಕಾರಣದಿಂದ ತನ್ನ ಸಹೋದರ ಜಯಸಿಂಹನನ್ನು ಕರೆದುಕೊಂಡು ಸೇರಿ ಕಲ್ಯಾಣವನ್ನು ಬಿಟ್ಟು ಹೊರ ನಡೆದರೆಂದು ಬಿಲ್ಹಣ ಹೇಳಿದ್ದಾನೆ. ಆ ಸಂದರ್ಭದಲ್ಲಿ ರಾಜನು ಸೈನ್ಯವನ್ನು ಸುಲಭವಾಗಿ ಸೋಲಿಸಿ ಬನವಾಸಿ ಕಡೆ ನಡೆದನು. ಗೋವಾ ಕದಂಬರು ಮತ್ತು ಇನ್ನಿತರರು ಆತನ ಅಣ್ಣನ

ಕ್ರಮವನ್ನು ತಿಳಿದು ವಿಕ್ರಮಾದಿತ್ಯನ ಪರವಹಿಸಿದರು. ಅವರು ಸಾಮಂತರಾಗಿರಲು ಒಪ್ಪಿಕೊಂಡರು. ನಂತರ ಚೋಳರಾಜ ವಿಕ್ರಮಾದಿತ್ಯನ ವಿರುದ್ಧ ಯುದ್ಧ ಮಾಡುವುದನ್ನು ಬಿಟ್ಟು ವೈವಾಹಿಕ ಸಂಬಂಧವನ್ನು ಬೆಳೆಸಿದ. ವಿಕ್ರಮಾದಿತ್ಯನಿಗೆ ಚೋಳರಾಜ ವೀರರಾಜೇಂದ್ರನು ತನ್ನ ಮಗಳನ್ನು ವಿಕ್ರಮಾದಿತ್ಯನಿಗೆ ಕೊಟ್ಟು ಲಗ್ನಮಾಡಿದ. ತದನಂತರ ವಿಕ್ರಮಾದಿತ್ಯ ಕಾಂಚಿಗೆ ಹೋಗಿ ವೆಂಗಿ ಅರಸರ ಸಂಚನ್ನು ಮುರಿದು ಗಂಗೈಕೊಂಡ ಚೋಳಪುರಂಗೆ ಆಗಮಿಸಿ ತನ್ನ ಭಾವ ಅಧಿರಾಜೇಂದ್ರನನ್ನು ಸಿಂಹಾಸನಕ್ಕೆ ಕೂಡಿಸಿದ. ನಂತರ ತುಂಗಭದ್ರೆಯ ಕಡೆಗೆ ಮರಳಿದ. ಮುಂದೆ ಕೇವಲ ಆರೇಳು ವರ್ಷಗಳಲ್ಲಿ ವಿಕ್ರಮಾದಿತ್ಯ ತಮ್ಮ ಜಯಸಿಂಹ ಹಾಗೂ ಅನೇಕ ತನ್ನ ಸಾಮಂತರ ಸಹಾಯದಿಂದ ಅಣ್ಣ ಸೋಮೇಶ್ವರನನ್ನು ಸೋಲಿಸಿ ವಿಕ್ರಮಾದಿತ್ಯ ಚಾಲುಕ್ಯ ಸಾಮ್ರಾಜ್ಯದ ರಾಜನಾದ. ಅನೇಕ ಸಾಮಂತರು ಹೊಸ ರಾಜನ ಆಳ್ವಿಕೆಯನ್ನು ಒಪ್ಪಿಕೊಂಡರು. ಇಮ್ಮಡಿ ಸೋಮೇಶ್ವರನಿಗೆ ಕಾಂಚಲದೇವಿ ಮತ್ತು ಮೈಳಲದೇವಿಯರೆಂಬ ಇಬ್ಬರು ರಾಣಿಯರಿದ್ದರು.

ಆರನೆಯ ವಿಕ್ರಮಾದಿತ್ಯ (ಕ್ರಿ.ಶ. ೧೦೭೬-೧೧೨೬) : ವಿಕ್ರಮಾದಿತ್ಯನ ಆಳ್ವಿಕೆಯ ಆರಂಭದಿಂದಾಗಿ ತನ್ನ ವಂಶದ ಹುಟ್ಟು ವೈರಿಗಳೆನಿಸಿದ್ದ ಚೋಳರು ನಡೆಸುವ ಯುದ್ಧಗಳು ಅಂತ್ಯಗೊಂಡವು. ವಿಕ್ರಮಾದಿತ್ಯನು ಸುಮಾರು ೧೦೭೩ ರಲ್ಲಿ ಸ್ವತಂತ್ರನಾಗಿ ಆಳ್ವಿಕೆಯನ್ನು ಆರಂಭಿಸಿದ. ಆದರೆ ತನ್ನ ಪಟ್ಟಬಂಧೋತ್ಸವವನ್ನು ಕ್ರಿ.ಶ. ೧೦೭೬ ಫೆಬ್ರುವರಿ ೨೬ ರಂದು ನೆರವೇರಿಸಿದ. ಅಲ್ಲಿಂದ ಆತ ಚಾಲುಕ್ಯ ವಿಕ್ರಮ ವರ್ಷವನ್ನು ಆರಂಭಿಸಿದ. ತ್ರಿಭುವನಮಲ್ಲನೆಂಬ ಹೆಸರಿನಿಂದ ಆತ ಆಳ್ವಿಕೆಯನ್ನು ನಡೆಸಿದ. ಆತನು ಸುಮಾರು ಅರ್ಧ ಶತಮಾನ ಆಳ್ವಿಕೆ ನಡೆಸಿದ.

ಚಾಲುಕ್ಯ ರಾಜ್ಯದಲ್ಲಿ ಸುಖ-ಶಾಂತಿ ನೆಲೆಸಿತು. ಆದರೂ ಚಿಕ್ಕ-ಪುಟ್ಟ ಕೆಲವು ಯುದ್ಧಗಳು ನಡೆದವು. ಮುಂದೆ ತನ್ನ ಪ್ರೀತಿಯ ತಮ್ಮ ಜಯಸಿಂಹ ಮತ್ತು ಹೊಯ್ಸಳರು ಅವನ ವಿರುದ್ಧ ಯುದ್ಧ ಮಾಡಿದ್ದು ಮುಖ್ಯವಾಗಿವೆ. ಶಿವಮೊಗ್ಗ ಜಿಲ್ಲೆಯ ಹಲಸೂರಿನ ಹತ್ತಿರ ಹೊಯ್ಸಳ ವಿಷ್ಣುವರ್ಧನ ಆರನೆಯ ವಿಕ್ರಮಾದಿತ್ಯನ ಸಂಗಡ ಯುದ್ಧ ಮಾಡಿ ಸೋತನು. ವಿಕ್ರಮಾದಿತ್ಯನ ಅನೇಕ ನೆಚ್ಚಿನ ದಂಡನಾಯಕರಲ್ಲಿ ಅನಂತಪಾಲ, ಗೋವಿಂದರಸ ಮತ್ತು ಲಕ್ಷ್ಮಣ ಮುಂತಾದವರು ಕಾಣುವರು. ಆತನ ಆಸ್ಥಾನದಲ್ಲಿ ಕಾಶ್ಮೀರದ ಬಿಲ್ಹಣ ಮತ್ತು ಮಾಸೆವಾಡಿಯ ವಿಜ್ಞಾನೇಶ್ವರ ಎಂಬ ಇಬ್ಬರು ವಿದ್ವಾಂಸರಿದ್ದರು. ಇವನ ಕಾಲದಲ್ಲಿ ಶಿಲ್ಪಕಲೆ, ಭಾಷೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ, ನೃತ್ಯಕಲೆ, ಚಿತ್ರಕಲೆ, ರಾಜಕೀಯ, ಆಡಳಿತವ್ಯವಸ್ಥೆ, ಶೈಕ್ಷಣಿಕ ವ್ಯವಸ್ಥೆ, ಸಾಮಾಜಿಕ,

ಆರ್ಥಿಕ ಮತ್ತು ಧಾರ್ಮಿಕ ಸ್ಥಿತ್ಯಂತರಗಳು ಚಟುವಟಿಕೆಗಳು ಇನ್ನೂ ಹೆಚ್ಚು ಅಭಿವೃದ್ಧಿಗೊಂಡವು. ಹೇರಳ ಶಾಸನಗಳನ್ನು ಹೊರಡಿಸಿದ. ಈತ ಹೊರಡಿಸದಷ್ಟು ಶಾಸನಗಳನ್ನು ಜಗತ್ತಿನಲ್ಲಿ ಬೇರಾವ ದೊರೆಗಳು ಹೊರಡಿಸಿಲ್ಲ. ದೇವಾಲಯಗಳಿಗೆ ನಿತ್ಯ ಭೂಮಿಯನ್ನು ದಾನ ಮಾಡಲು ಪ್ರಮಾಣ ಮಾಡಿದ. ರಾಜ್ಯದಲ್ಲಿ ಕನಿಷ್ಠ ಹಳ್ಳಿಗೊಂದು ದೇವಾಲಯ ನಿರ್ಮಾಣಗೊಂಡವು. ರಾಜಧಾನಿ ಕಲ್ಯಾಣ ವೈಭವದಿಂದ ಮೆರೆಯಿತು.

ವಿಕ್ರಮಾದಿತ್ಯನಿಗೆ ಸುಮಾರು ೨೦ ರಾಣಿಯರಿದ್ದರು. ಅನೇಕ ರಾಣಿಯರು ರಾಜ್ಯದ ವಿವಿಧ ಪ್ರಾಂತ್ಯಾಡಳಿತಗಾರರಾಗಿದ್ದರು. ವಿಕ್ರಮಾದಿತ್ಯ ರಾಜಧಾನಿ ಕಲ್ಯಾಣಪುರದಲ್ಲಿದ್ದಾಗ ಆತನ ರಾಣಿ ಚಂದಲದೇವಿಯ ವಿನಂತಿ ಮೇರೆಗೆ ಮೊರಂಬ-೯೪ರಲ್ಲಿಯ ಅಗ್ರಹಾರ ರುದ್ರವಾಡಿಯ ಶ್ರೀವಾಸವ ದೇವರಿಗೆ, ವಾಸುದೇವ ಭಟ್ಟೋಪಾಧ್ಯಾಯ ಪ್ರಮುಖರಿಗೆ ಮತ್ತು ೫೦ ಮಹಾಜನರಿಗೆ೧೨೦ ಗದ್ಯಾಣ ಪೊನ್ನುಗಳನ್ನು ದಾನ ನೀಡಿದ. ತನ್ನ ಮತ್ತೊಬ್ಬ ರಾಣಿ ಪಿರಿಯರಸಿ ಲಕ್ಷ್ಮಾದೇವಿ ರಾಜನ ಸಂಗಡ ಕಲ್ಯಾಣದಲ್ಲಿದ್ದಾಗ ಸೂಡಿಯ (ರೋಣ ತಾಲೂಕು) ಅಚಲೇಶ್ವರ ದೇವರ ಸೋಮೇಶ್ವರ ಪಂಡಿತರಿಗೆ ಕಿಸುಕಾಡು-೭೦ರಲ್ಲಿಯ ಬಾಡ 'ಪೊಂಗರಿ' ಯನ್ನು ದಾನ ಬಿಟ್ಟಳು. ಕ್ರಿ.ಶ. ೧೦೮೫ರಲ್ಲಿ ಈಕೆಯು ಕಲ್ಯಾಣದಿಂದ ಆಳ್ವಿಕೆಯನ್ನು ಮಾಡಿದ ಏಕೈಕ ರಾಣಿ. ಮತ್ತೊಬ್ಬ ರಾಣಿ ಜಾಕಲದೇವಿ ವಿಕ್ರಮಾದಿತ್ಯನ ಸಂಗಡ ರಾಜಧಾನಿ ಕಲ್ಯಾಣದ ಅರಮನೆಯಲ್ಲಿ ರಾಜ ಖರೀದಿಸಿದ ಚಲುವಾದ ಜಿನವಿಗ್ರಹವನ್ನು ಆಕೆಯು ಆಳುತ್ತಿದ್ದ ಇಂಗುಣಿಗೆ ಊರಿನಲ್ಲಿ ಬಸದಿಯನ್ನು ಕಟ್ಟಿಸಿ ಅಲ್ಲಿ ಅದನ್ನು ಪ್ರತಿಷ್ಠಾಪಿಸಿದಳು. ಇಂದ್ರಭಟ್ಟಾರಕರ ಪಾದತೊಳೆದು ಭೂದಾನ ನೀಡಿದಳು. ಮತ್ತೊಬ್ಬ ರಾಣಿ ಗೂರ್ಜರ ದೇಶದ ಮಲಯವತಿ ಮಹಾದೇವಿ. ಆಕೆಯ ಹೆಸರಿನ ದೇವಾಲಯವನ್ನು ಕಲ್ಯಾಣದಲ್ಲಿ ಕಟ್ಟಲಾಗಿತ್ತು.

ವಿಕ್ರಮಾದಿತ್ಯನಿಗೆ ನಾಲ್ವರು ಪುತ್ರರು, ಮಲ್ಲಿಕಾರ್ಜುನ, ಮುಮ್ಮಡಿ ಸೋಮೇಶ್ವರ, ತೈಲಪ ಮತ್ತು ಜಯಕರ್ಣ. ಒಬ್ಬಳೇ ಮಗಳಾದ ಮೈಲಳ ಮಹಾದೇವಿಯನ್ನು ತನ್ನ ಸಾಮಂತನಾಗಿದ್ದ ಗೋವಾ ಕದಂಬ ದೊರೆ ಇಮ್ಮಡಿ ಜಯಕೇಶಿಗೆ ಕೊಟ್ಟು ಲಗ್ನ ಮಾಡಿದ. ಯುವರಾಜ ಮಲ್ಲಿಕಾರ್ಜುನ ಅಳಂದೆ-೧೦೦೦, ತರ್ದವಾಡಿ-೧೦೦೦ ಮತ್ತು ಕರಹಾಡ-೧೦೦೦ ನಾಡುಗಳನ್ನು ಆಳಿದ. ಆತನೊಬ್ಬ ಕೊಲ್ಲಾಪುರದ ಮಹಾಲಕ್ಷ್ಮಿಯ ಪರಮ ಭಕ್ತನಾಗಿದ್ದ. ಆತನ ರಾಜಗುರು ಲಕ್ಷ್ಮೀಧರಭಟ್ಟೋಪಾಧ್ಯಾಯ. ಆತನು ತಂದೆಗೆ ಸುಭದ್ರ ಆಡಳಿತ ನೀಡಲು ಅನೇಕ ರೀತಿಯಲ್ಲಿ ನೆರವಾದ. ಆತನ ಆಳ್ವಿಕೆಯು ತನ್ನ ಚಿಕ್ಕಪ್ಪನಾದ ಮುಮ್ಮಡಿ ಜಯಸಿಂಹನು ತನ್ನ ತಂದೆಯ ವಿರುದ್ಧ ಬಂಡಾಯವೆದ್ದು ಸೋತ ಬಳಿಕವೇ ಕಾಣುತ್ತದೆ.

ವಿಕ್ರಮಾದಿತ್ಯನ ರಾಜಗುರುಗಳಲ್ಲಿ ಮುಖ್ಯವಾಗಿ ಕಾಣುವವರು ಮಹಾಪ್ರಧಾನ ದಂಡನಾಯಕ ರುದ್ರಭಟ್ಟೋಪಾಧ್ಯಾಯ, ತರ್ದವಾಡಿ ನಾಡಿನ ರುದ್ರಮಿಶ್ರ, ಕೊಮ್ಮಣ ಭಟ್ಟೋಪಾಧ್ಯಾಯ, ವಿಜ್ಞಾನೇಶ್ವರ ಭಟ್ಟಾರಕ, ತ್ರ್ಯಪ್ರಚರ ಭಟ್ಟಾರಕದೇವ, ತಲಪುರುಷ ಶಿವಚಿಂತಾಯಿಕ, ಇಂದ್ರಶಿವದೇವಾಚಾರ್ಯ ಮತ್ತು ಉಣಕಲ್ಲಿನ ಅನಂತಶಿವರಾಜ ಗುರುದೇವರು. ಇವರಲ್ಲಿ ಇಂದ್ರ ಶಿವದೇವಾಚಾರ್ಯರು ಕುಂತಳದೇಶದ ಸಮಗ್ರ ಏಳುವರಿಲಕ್ಷದ ಶೈವ ದೇವಾಲಯಗಳ ಮುಖ್ಯಸ್ಥರಾಗಿದ್ದರು.

ಆತನ ಉತ್ತರದ ದಿಗ್ವಿಜಯದ ಬಳಿಕ ಅಲ್ಲಿಯ ಕಳಚೂರಿಯರ ರಾಜಧಾನಿ ರತ್ನಾಪುರದಿಂದ ಬಂದಿದ್ದ ಆನೆಗಳನ್ನು, ಕುದುರೆಗಳನ್ನು, ಬಿಳಿಕೊಡೆ, ಬಂಡಾರ ಮತ್ತು ಸುಂದರ ಬಾಲಕಿಯರನ್ನು ಲಕ್ಷ್ಮೇಶ್ವರದಿಂದ ಆಳುತ್ತಿದ್ದ ಶ್ರೀಪತಿ ಅರಸ ರಾಜಧಾನಿ ಕಲ್ಯಾಣಪುರಕ್ಕೆ ತಂದು ಅರಸ ವಿಕ್ರಮಾದಿತ್ಯನಿಗೆ ಒಪ್ಪಿಸಿದನು.

ಅನೇಕ ನೆಚ್ಚಿನ ಸಾಮಂತರು, ಅಧಿಕಾರಿಗಳು ಆತನ ವಿಶಾಲ ಸಾಮ್ರಾಜ್ಯದಲ್ಲಿದ್ದರು. ತಪ್ಪು ಮಾಡಿದ ಅಧಿಕಾರಿಗಳಿಗೂ ಶಿಕ್ಷೆಯನ್ನು ಕೊಡುತ್ತಿದ್ದನು. ಒಮ್ಮೆ ಗಂಡಾರಾದಿತ್ಯ ಹೊಳಲಿನ ಬ್ರಾಹ್ಮಣರನ್ನು ಕೊಂದು ಅವರ ಆಸ್ತಿ-ಪಾಸ್ತಿಯನ್ನು ಭಗ್ನಗೊಳಿಸಿದ ಅಲ್ಲಿಯ ಅಧಿಕಾರಿ ಮನ್ನೆಯ ಬೊಪ್ಪನಿಗೆ ಈ ರೀತಿ ಶಿಕ್ಷೆ ನೀಡಿದ. ಸ್ಥಳಿಕ ಮಹಾಜನರು ವಿಕ್ರಮಾದಿತ್ಯನಿಗೆ ಈ ಕುರಿತು ಮೊದಲು ಮನವಿನಯನ್ನು ಅರ್ಪಿಸಿದರು. ಅದಕ್ಕೆ ವಿಕ್ರಮಾದಿತ್ಯ ಪುರೋಹಿತರನ್ನು ಮತ್ತು ಅಧಿಕಾರಿಗಳನ್ನು ಕರೆಯಿಸಿ ಬೊಪ್ಪನಿಗೆ ಕೈಯಲ್ಲಿ ನೀರನ್ನು ಹಿಡಿಸಿ ಆತನಿಂದ ಪ್ರಮಾಣವನ್ನು ಮಾಡಿಸಿ ಅವನ ಮೊನ್ನೆಯತನವನ್ನು ಕಡಿತಗೊಳಿಸಲಾಯಿತು. ಈ ವಿಷಯವನ್ನು ಅಲ್ಲಿಯ ಸಾಮಂತನಾಗಿದ್ದ ನೊಳಂಬ ದೊರೆಗೂ ತಿಳಿಸಲಾಯಿತು.

ಅನೇಕ ದೇಶಗಳ ರಾಜರು, ಸಾಮಂತರು, ವಿದ್ವಾಂಸರು, ಕವಿಗಳು, ವ್ಯಾಪಾರಸ್ಥರು, ರಾಜಕೀಯ-ಧಾರ್ಮಿಕ ವ್ಯಕ್ತಿಗಳು ಇನ್ನಿತರರು ದೂರ ದೂರದಿಂದ ಕಲ್ಯಾಣಕ್ಕೆ ಆಗಮಿಸಿದರು. ಅನೇಕ ಅರಸರಿಗೆ ವಸ್ತುಗಳನ್ನು ಕಳುಹಿಸಿಕೊಟ್ಟು ಸ್ನೇಹ ಸಂಬಂಧವನ್ನು ವೃದ್ಧಿಸಿಕೊಂಡನು. ಸಿಲೋನಿನ ರಾಜ ವಿಜಯಭಾಹು ಎಂಬವನಿಗೆ ತನ್ನ ರಾಜಧೂತನ ಮೂಲಕ ಅನೇಕ ವಸ್ತುಗಳನ್ನು ಕಳಿಸಿದನೆಂದು ತಿಳಿಯಲಾಗಿದೆ. ಆತನು ಒಂದೊಂದು ಮಹತ್ವದ ಪ್ರಾಂತದ ಮಹಾಸಾಮಂತರ ಜೊತೆಗಿನ ವೈವಾಹಿಕ ಸಂಬಂಧ ಮತ್ತು ನಂಬಿಕೆ ಅಧಿಕಾರಿಗಳ, ಮಕ್ಕಳ ಹಾಗೂ ಹಾಗೂ ತನ್ನ ರಾಣಿಯರ ಪ್ರಾಂತ್ಯಾಡಳಿತದಿಂದ ಹಾಗೂ ಅನೇಕ ರಾಜಗುರುಗಳ ಮಾರ್ಗದರ್ಶನದಿಂದ ವಿಕ್ರಮಾದಿತ್ಯ ಅರ್ಧಶತಮಾನಕಾಲ ವಿಸ್ತಾರ ಸಾಮ್ರಾಜ್ಯದ ಅಧಿಪತಿಯಾಗಿ ಆಳಲು

ಸಾಧ್ಯವಾಯಿತು. ಆತನ ಆಳ್ವಿಕೆಯ ಅಂತ್ಯದಿಂದ ಅನೇಕ ಸಾಮಂತರು ಸ್ವತಂತ್ರರಾಗಿ ಆಳುವ ಕಡೆ ಗಮನಹರಿಸಿದರು.

ಮುಮ್ಮಡಿ ಸೋಮೇಶ್ವರ (ಕ್ರಿ.ಶ. ೧೧೨೬-೧೧೩೮): ಭೂಲೋಕಮಲ್ಲ ಸರ್ವಜ್ಞಚಕ್ರವರ್ತಿ ಎಂಬ ಬಿರುದುಗಳಿಂದ ಸೋಮೇಶ್ವರ ತನ್ನ ತಂದೆಯ ಆಳ್ವಿಕೆಯ ತರುವಾಯ ರಾಜ್ಯಭಾರ ಮಾಡಿದನು. ಈತನ ಆಳ್ವಿಕೆಯ ಕಾಲದಲ್ಲಿ ಅನೇಕ ಸಾಮಂತರು ಕ್ರಮೇಣ ಸ್ವತಂತ್ರರಾಗಲು ಹವಣಿಸತೊಡಗಿದರು. ಅವರಲ್ಲಿ ಗೋವಾ ಕಂದಬರು, ಕಾಕತೀಯ, ಬಿಜ್ಜಳ, ಹೊಯ್ಸಳ ವಿಷ್ಣುವರ್ಧನ (ಕ್ರಿ. ಶ.೧೧೩೭) ಮುಂತಾದವರು ಪ್ರಮುಖರು. ಸೋಮೇಶ್ವರ 'ಮಾನಸೊಲ್ಲಾಸ' ಎಂಬ ಕೃತಿ ಬರೆದ. ರಾಜಧಾನಿ ಕಲ್ಯಾಣದಲ್ಲಿ ಸುಖ-ಶಾಂತಿ ನೆಲೆಯೂರಿತ್ತು. ಆತನಿಗೆ ಎಕ್ಕಲದೇವಿ ಮತ್ತು ಬರ್ಮಲ ದೇವಿಯರೆಂಬ ರಾಣಿಯರು. ಎಕ್ಕಲದೇವಿಗೆ ಇಬ್ಬರು ಪುತ್ರರು ಇಮ್ಮಡಿ ಜಗದೇಕಮಲ್ಲ ಮತ್ತು ಮುಮ್ಮಡಿ ತೈಲಪ.

ಇಮ್ಮಡಿ ಜಗದೇಕಮಲ್ಲ(ಕ್ರಿ.ಶ೧೧೩೮-೧೧೫೧): ಈತ ಪೆರ್ಮ, ಜಗದೇಕಮಲ್ಲ ಎಂಬ ಹೆಸರಿಂದ ಕ್ರಿ.ಶ.೧೧೩೮ರಲ್ಲಿ ಚಾಲುಕ್ಯ ಸಿಂಹಾಸನವೇರಿದ. ಈತನು ತನ್ನ ಪಟ್ಟಭಂದೋತ್ಸವ ಮಾಡಿಸಿಕೊಂಡ ಸಮಯದಲ್ಲಿ ಅಣಂದೂರು (ಬೀದರ ಜಿಲ್ಲೆ) ನಾರಣೇಶ್ವರ ದೇವಾಲಯಕ್ಕೆ ಕಳಸರೋಹಣವನ್ನು ಮಾಡಿ ಆ ದೇವರ ಪೂಜೆಗೆ, ತಪೋಧವರ ಅನ್ನದಾನಕ್ಕೆ ಕ್ರಿ.ಶ. ೧೧೩೮ರಲ್ಲಿ ಭೂಧಾನ ಮಾಡಿದ. ಈತನ ಆಳ್ವಿಕೆಯ ಕಾಲದಲ್ಲಿ ವಿಶಾಲ ಸಾಮ್ರಾಜ್ಯವು ಛಿದ್ರಗೊಳ್ಳತೊಡಗಿತು. ಕಾಕತೀಯರು, ವೆಂಗಿಯರು, ಗೋವೆ ಕದಂಬರು ಸ್ವತಂತ್ರರಾದರು. ನಂತರ ಚಾಲುಕ್ಯರು ಹಲಸಿಗೆ ಮತ್ತು ಕೊಂಕಣಗಳನ್ನು ಕಳೆದುಕೊಂಡರು. ಹೊಯ್ಸಳ ವಿಷ್ಣುವರ್ಧನ ಚಾಲುಕ್ಯರ ಅನೇಕ ಪ್ರಾಂತ್ಯಗಳನ್ನು ಗೆದ್ದುಕೊಂಡನು. ಆದರೆ ಚಾಲುಕ್ಯರ ದಂಡನಾಯಕರಾದ ಬರ್ಮದೇವ, ಆತನ ಸಹೋದರ ಮಾಧವ ಮತ್ತು ಇನ್ನಿತರರು ಹೊಯ್ಸಳ ವಿಷ್ಣವರ್ಧನನ ಮಗ ನರಸಿಂಹನನ್ನು ಸೋಲಿಸಿ ಕಳೆದುಕೊಂಡಿದ್ದ ಪ್ರಾಂತಗಳನ್ನು ಮರುಗಳಿಸಿದರು. ನಂತರ ದಂಡನಾಯಕ ಬರ್ಮರಸನ ಶಾಸನ ಕಲ್ಯಾಣದಲ್ಲಿದೆ. ಈತನ ಕಾಲದಲ್ಲಿ ಕಳಚೂರಿ ಬಿಜ್ಜಳ ಹೆಚ್ಚು ಪ್ರಬಲನಾಗಿ ಆತ ಕರಹಾಡ-೪೦೦೦ ನಾಡನ್ನು ಆಳುತ್ತಿದ್ದ. ಈತನ ಆಳ್ವಿಕೆಯ ಕಾಲದಲ್ಲಿ ಕಲ್ಯಾಣಪುರ ಅವನ ನೆಲವೀಡಾಗಿದ್ದಿತು.

ಮುಮ್ಮಡಿ ತೈಲ(ಕ್ರಿ.ಶ೧೧೫೧-೧೧೬೨):ಜಗದೇಕಮಲ್ಲನ ತಮ್ಮ ತೈಲ ತ್ರೈಲೋಕ್ಯ ಮಲ್ಲನೆಂಬ ಬಿರುದಿನಿಂದ ಆಳ್ವಿಕೆ ನಡೆಸಿದ. ಬಿಜ್ಜಳನು ಈ ಕಾಲದಲ್ಲಿ ಸ್ವತಂತ್ರನಾಗಿ ಆಳತೊಡಗಿದ. ಆತಂಕದ ಸಮಯದಲ್ಲೇ ಈತ ಸಿಂಹಾಸನವೇರಿದ. ಈ ಕಾಲದಲ್ಲಿ

ಚಾಲುಕ್ಯ ಸಾಮಂತರಾಗಿದ್ದ ಸೇವುಣರು, ಶಿಲಾಹಾರರು, ಹೊಯ್ಸಳರು, ಕಾಕತೀಯರು ಸ್ವತಂತ್ರರಾದರು. ಕ್ರಿ.ಶ.೧೧೬೭ರಲ್ಲಿ ಈತ ಮರಣ ಹೊಂದಿರಬೇಕು. ಆಗ ಬಿಜ್ಜಳ ಕಲ್ಯಾಣವನ್ನು ಆಕ್ರಮಿಸಿ ಆಳ್ವಿಕೆಯನ್ನು ಆರಂಭಿಸಿದ.

ನಾಲ್ಮಡಿ ಸೋಮೇಶ್ವರ (ಕ್ರಿ. ಶ.೧೧೮೩-೧೧೯೮): ಈತ ಕ್ರಿ.ಶ. ೧೧೮೩ ರಲ್ಲಿ ಅಲ್ಪಕಾಲ ಚಾಲುಕ್ಯ ಅರಸನಾದ. ಆಗ ಕಳಚುರಿ ಬಿಜ್ಜಳನ ವಿರುದ್ಧ ಶಿವಶರಣರಿಂದ ಸಾಮಾಜಿಕ ಧಾರ್ಮಿಕ ಕ್ರಾಂತಿ ಉಂಟಾಗಿತ್ತು. ಕಳಚುರಿಯರ ಆಳ್ವಿಕೆಯ ವಿರುದ್ಧ ಹಲವಾರು ಕಡೆಗಳಿಂದ ದಂಗೆಗಳೆದ್ದವು. ಅವರ ಆಳ್ವಿಕೆಯ ಕಾಲದಲ್ಲಿ ೨೦ವರ್ಷ ಗುಪ್ತವಾಗಿದ್ದ. ಕ್ರಿ.ಶ.೧೧೭೫ರಲ್ಲಿ ಕಳಚುರಿಯರ ವಿರುದ್ಧ ಅನೇಕ ದಂಡನಾಯಕರಿಗೆ ಅತೃಪ್ತಿ ಮೂಡಿತ್ತು. ಅವರು ಚಾಲುಕ್ಯರನ್ನು ಪುನಃ ಅರಸರನ್ನಾಗಿ ಮಾಡಲು ಕಳಚುರಿಯರ ಜೊತೆ ಸಂಬಂಧವನ್ನು ಮುರಿದುಕೊಂಡರು. ಅಂಥವರಲ್ಲಿ ರಂಜೋಳದ ಸಿಂಧರು ಒಬ್ಬರು.

ದಂಡನಾಯಕ ಕಾವಣನ ಮಗ ದಂಡನಾಯಕ ಬ್ರಹ್ಮ ಕಳಚುರಿಯರ ಜೊತೆ ಸಂಬಂಧ ಮುರಿದುಕೊಂಡನು. ಆತನ ತಂದೆ ಕಳಚುರಿಯರ ಪರ ಸೇರಿದ. ಬ್ರಹ್ಮ ಚಾಲುಕ್ಯನ ಸೈನ್ಯದೊಂದಿಗೆ ಇನ್ನಿತರ ಅಧಿಕಾರಿಗಳ ಜೊತೆಗೂಡಿಸಿದ. ಕಳಚುರಿ ಸಂಕಮನನ್ನು ಕ್ರಿ.ಶ.೧೧೮೩ ರಲ್ಲಿ ಸಿಂಹಾಸನದಿಂದ ಕಿತ್ತು ಹಾಕಿ ಚಾಲುಕ್ಯ ಸೋಮೇಶ್ವರನನ್ನು ರಾಜನನ್ನಾಗಿ ಮಾಡಿದ. ಸೇವುಣರ ೫ನೇ ಬಿಲ್ಲಮ ರಾಯಮುರಾರಿ ದೇವನ ಮಗ ಮುಮ್ಮಡಿ ಬಿಜ್ಜಳನನ್ನು ಸೋಲಿಸಿದ. ಸೇವುಣ ಬಿಲ್ಲಮನ ಸೈನ್ಯದ ಒತ್ತಡಕ್ಕೆ ಮಣಿದು ನಾಲ್ಮಡಿ ಸೋಮೇಶ್ವರ ಸುಮಾರು ಎರಡು ವರ್ಷವೂ ಪೂರ್ಣ ಆಳ್ವಿಕೆಯನ್ನು ಕಲ್ಯಾಣದಿಂದ ನಡೆಸದೆ ಬನವಾಸಿಯ ಕದಂಬರ ಆಶ್ರಯದಲ್ಲಿ ಸೇರಿದನು. ಬಹುಶಃ ಈತನನ್ನು ಚಾಲುಕ್ಯರ ಸಾಮ್ರಾಟನನ್ನಾಗಿ ಮಾಡಲು ರಂಜೋಳದ ಸಿಂಧವಂಶದವರೂ ಸೇರಿದ್ದರೆಂದು ಕಾಣುತ್ತದೆ. ಅವರ ಒಂದು ಶಾಸನದಲ್ಲಿ ಈ ವಂಶದವನೊಬ್ಬ ಚಾಲುಕ್ಯ ರಾಜ್ಯ ಪ್ರತಿಷ್ಠಾಪನಾಚಾರ್ಯನೆಂಬ ಬಿರುದನ್ನು ಹೊಂದಿದ ವಿಷಯವಿದೆ. ಮುಂದೆ ಸೇವುಣ ೫ನೇ ಬಿಲ್ಲಮನು ಕಲ್ಯಾಣವನ್ನು ಗೆದ್ದುಕೊಂಡು ಅದನ್ನು ತನ್ನ ಕೈವಶಮಾಡಿಕೊಂಡನು. ಚಾಲುಕ್ಯ ದಂಡನಾಯಕ ಬ್ರಹ್ಮನನ್ನು ಹೊಯ್ಸಳ ಇಮ್ಮಡಿ ಬಲ್ಲಾಳ ಸೋಲಿಸಿದನು. ಆದರೆ ಚಾಲುಕ್ಯರ ಸಾಮಂತರಾಗಿದ್ದ ಆ ಭಾಗದ ರಂಜೋಳ ಸಿಂಧರು ಸೇವುಣರ ಅಧೀನವನ್ನು ಒಪ್ಪಿಕೊಳ್ಳಲಿಲ್ಲ. ಮುಂದೆ ಸೇವುಣ ಮತ್ತು ಕಾಕತೀಯರ ನಡುವೆ ಪದೇ ಪದೇ ಯುದ್ಧಗಳು ನಡೆಯುತ್ತಿದ್ದವು. ಆಗ ರಂಜೋಳ ಸಿಂಧರ ಹಿರಿಯ ಭೈರವ ಕಾಕತೀಯರ ಜೊತೆಗೂಡಿ ಸೇವುಣರನ್ನು ಸೋಲಿಸಿ ಕಾಕತೀಯರ ರಾಣಿ ರುದ್ರದೇವಿಯನ್ನು ಸಿಂಹಾಸನಕ್ಕೆ ಕೂಡಿಸಲು ಕಾರಣನಾದ.

ಕಳಚುರಿ ಅರಸುಗಳು : ಕಳಚುರಿಯರು ಬಾದಾಮಿ ಚಾಲುಕ್ಯರ ಸಮಕಾಲೀನರು. ಸುಮಾರು ಕ್ರಿ.ಶ. ೬ನೇ ಶತಮಾನದಲ್ಲಿ ಬದಾಮಿ ಚಾಲುಕ್ಯ ಮಂಗಳೇಶ ಇವರನ್ನು ಸೋಲಿಸಿದ ಬಳಿಕ ಈ ಮನೆತನದವರು ದೇಶದ ವಿವಿಧೆಡೆಗೆ ಹರಿದುಹೋದರು. ಅಂಥವರಲ್ಲಿ ಮಧ್ಯಯುಗೀನ ಕಾಲದಲ್ಲಿ ಕಾಣುವ ಕಳಚುರಿಯರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ತರಿಕಾಡು ನಾಡಿನಿಂದ ಆಳುತ್ತಿದ್ದರು. ಮಂಗಳವೇಡ ಅವರ ರಾಜಧಾನಿಯಾಗಿತ್ತು. ಸುಮಾರು ಕ್ರಿ.ಶ. ೧೦ನೇ ಶತಮಾನದಲ್ಲಿ ಈಮನೆತನದಲ್ಲಿ ಕ್ರಮವಾಗಿ ಉಚಿತ, ರಾಜ, ಅಸಗ, ಮೊದಲನೆಯ ಕಂದಮ, ಕಿರಿಯ ಅಸಗ, ಮೊದಲನೆಯ ರಾಜ, ಮೊದಲನೆಯ ಬಿಜ್ಜಳ ಆಳಿದರು. ಈ ಮನೆತನದ ಬೊಂತಾ ದೇವಿ ನಾಲ್ಮಡಿ ವಿಕ್ರಮಾದಿತ್ಯನ ರಾಣಿ. ಇವರ ಮಗನೆ ಇಮ್ಮಡಿ ತೈಲಪ. ಈ ತೈಲಪನ ಮರಿಮೊಮ್ಮಗ ಮೊದಲನೆಯ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಕಳಚುರಿಯರ ಮೊದಲನೆಯ ಬಿಜ್ಜಳ ಸಾಮಂತನಾಗಿ ಆಳುತ್ತಿದ್ದ. ನಂತರ ಅವನ ಮಗ ಕರ್ಣ ಅರಸನಾದ. ಈತ ೫೦ ಯುದ್ಧಗಳಲ್ಲಿ ಭಾಗವಹಿಸಿ ಹನ್ನೆರಡು ವೈರಿಗಳನ್ನು ಕೊಂದು ಮಂಗಳವೇಡವನ್ನು ಸ್ವತಂತ್ರಗೊಳಿಸಿದ. ಚಾಲುಕ್ಯರ ಪರ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದ. ಈತನ ಮಗ ಜೋಗಮನ ಆಳ್ವಿಕೆಯಲ್ಲಿ ತನ್ನ ಮಗಳಾದ ಸಾವಳದೇವಿಯನ್ನು ಆರನೆಯ ವಿಕ್ರಮಾದಿತ್ಯನಿಗೆ ಕೊಟ್ಟು ಲಗ್ನ ಮಾಡಿದ. ಈತನ ತರುವಾಯ ಈತನ ಮಗ ಪೆರ್ಮಾಡಿ ಆಳ್ವಿಕೆ ನಡೆಸಿದ. ವಿಕ್ರಮಾದಿತ್ಯನ ಮಗಳನ್ನು ಪೆರ್ಮಾಡಿ ಲಗ್ನವಾದ. ಕ್ರಿ.ಶ. ೧೧೨೯ರಲ್ಲಿ ವಿಕ್ರಮಾದಿತ್ಯನ ಮಗ ಮುಮ್ಮಡಿ ಸೋಮೇಶ್ವರನು ಆಳುವಾಗಲೂ ಪೆರ್ಮಾಡಿ ಸಾಮಂತನಾಗಿದ್ದನು. ಪೆರ್ಮಾಡಿಯ ಮಗನೇ ಬಿಜ್ಜಳನು ಕ್ರಿ.ಶ. ೧೧೩೬ರಲ್ಲಿ ಆಳ್ವಿಕೆಯನ್ನು ಆರಂಭಿಸಿದನು. ಈತನು ಚಾಲುಕ್ಯರ ಸಾಮಂತನಾಗಿ ಕ್ರಿ.ಶ. ೧೧೩೧-೧೧೩೫ರವರೆಗೆ ಆಳ್ವಿಕೆ ನಡೆಸಿದ. ಒಮ್ಮೆ ಆನೆಯ ಮೇಲೆ ಕುಳಿತು ತನ್ನ ಸೈನ್ಯದೊಂದಿಗೆ ಹಾನಗಲ್ ಕೋಟೆಗೆ ದಾಳಿಯಿಟ್ಟ. ಹಾನಗಲ್ ಕೋಟೆಯ ಅಧಿಕಾರಿಯಾಗಿದ್ದ ಮಹಾಮಂಡಳೇಶ್ವರ ಕೇತನಯ್ಯ ನಾಯಕನ ಅಧಿಕಾರಿ ಬಿಜ್ಜಳನ ವಿರುದ್ಧ ಹೋರಾಡಿ ಸಾವನ್ನಪ್ಪಿದ. ಈ ವಿಜಯವು ಹಾಗೂ ಈ ಕಾಲದಲ್ಲಿ ಹೊಯ್ಸಳರು ಸ್ವತಂತ್ರರಾಗಿ ಆಳುತ್ತಿರುವುದನ್ನು ಗಮನಿಸಿದ ಬಿಜ್ಜಳನಿಗೆ ತಾನೂ ಸ್ವತಂತ್ರನಾಗಿ ಆಳುವ ಸ್ಫೂರ್ತಿ ಮೂಡಿತು. ಮುಂದು ಕ್ರಮೇಣವಾಗಿ ಕ್ರಿ.ಶ. ೧೧೪೨ರಲ್ಲಿ ಕರಹಾಳ-೪೦೦೦ ನಾಡನ್ನು, ಕ್ರಿ.ಶ. ೧೧೪೬ರಲ್ಲಿ ತರ್ದವಾಡಿ-೧೦೦೦ ನಾಡನ್ನು ಚಾಲುಕ್ಯರ ಸಾಮಂತನಾಗಿ ಆಳತೊಡಗಿದನು. ಮುಂದೆ ಮುಮ್ಮಡಿ ತೈಲನ ಆಳ್ವಿಕೆಯ ಕಾಲದಲ್ಲಿ ಅನೇಕ ಸಾಮಂತರು ಸ್ವತಂತ್ರರಾದರು. ಚಾಲುಕ್ಯ ವಿಶಾಲ ಸಾಮ್ರಾಜ್ಯ ಹರಿದು ಹಂಚಿಹೋಯಿತು. ಆಗ ಮಹಾಪ್ರಧಾನ ದಂಡನಾಯಕ ಕಶಪಯ್ಯನಾಯಕ, ಶಿಲಾಹರ ವಂಶದ ಮಹಾಪ್ರಧಾನ

ಮೈಲರಯ್ಯ, ನಾಗರಖಂಡದ ದಂಡಾಧಿಪತಿ ಮುಂತಾದವರು ಬಿಜ್ಜಳನನ್ನು ಅರಸನ್ನನ್ನಾಗಿ ಮಾಡಲು ಕಾರಣರಾದರು. ಈ ಕಾಲದಲ್ಲಿ ಮತ್ಸರನೆಂಬುವವನು ಬಿಜ್ಜಳನ ಆಳ್ವಿಕೆಯಲ್ಲಿ ಅಗ್ರಹಾರ ಜಂಬರವನ್ನು ಕೈವಶ ಮಾಡಿಕೊಂಡನು. ಆಗ ದಿವಾನ ಹೋರಾಡಿ ಅನೇಕರನ್ನು ಕೊಂದು ತಾನೂ ಸತ್ತನು. ಬಿಜ್ಜಳ ಪದೇ ಪದೇ ಬನವಾಸಿ ನಾಡಿನಲ್ಲಿ ಬೀಡು ಬಿಡುತ್ತಿದ್ದನು. ಈ ನಾಡು ಆತನ ಆಳ್ವಿಕೆಗೆ ರಕ್ಷಣೆಯನ್ನು ನೀಡಿತ್ತು. ಒಮ್ಮೆ ಬಳ್ಳಿಗಾವಿಯಲ್ಲಿ ಕಾಳಮುಖಯತಿ ವಾಮಶಕ್ತಿಯೊಬ್ಬನನ್ನು ಬಂಧಿಸಲಾಯಿತು. ಆಗ ಅಲ್ಲಿ ಬಾಬಯ್ಯ ನಾಯಕ ಈ ಕೃತ್ಯವನ್ನು ವಿರೋಧಿಸಿದನು. ಕಬ್ಬನೂರಿನ ಶಿವನ ಆರಾಧಕ ಏಕಾಂತದ ರಾಮಯ್ಯ ಜೈನರೊಂದಿಗೆ ಜಿದ್ದು ಕಟ್ಟಿ ತನ್ನ ಶಿರಪವಾಡವನ್ನು ತೋರಿಸಿದ. ಬಿಜ್ಜಳ ಅಲ್ಲಿಗೂ ಹೋಗಿ ಆತನನ್ನು ಭೇಟ್ಟಿಯಾದ. ಈತನು ಆಳುವಾಗ ಚಾಲುಕ್ಯ ವಂಶದವರನ್ನು ಕೊಲ್ಲಲು ಹಿಂಜರಿಯುತ್ತಿರಲಿಲ್ಲ ಎನ್ನಾಲಾಗಿದೆ. ಅಷ್ಟೊಂದು ವೈರತ್ವ ಚಾಲುಕ್ಯರ ವಿರುದ್ಧ ಇತ್ತೆಂಬುದು ತಿಳಿಯುವುದು. ಈತನ ಆಳ್ವಿಕೆಯ ಕಾಲದಲ್ಲಿ ಬಸವಣ್ಣನವರ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿ ಕಲ್ಯಾಣದಲ್ಲಿ ಉಂಟಾಯಿತು. ಬಸವಣ್ಣವರ ಕುರಿತ ವಿವರಗಳನ್ನು ಶಿವಶರಣರ ನೆಲೆಗಳು ಎಂಬ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಸಂದರ್ಭದಲ್ಲಿ ಬಸವಣ್ಣನವರು ಅಂತರ್ಜಾತಿ ವಿವಾಹವನ್ನು ಮಾಡಿದರು. ಬಿಜ್ಜಳನು ಈ ವಿವಾಹದಲ್ಲಿ ಪಾಲ್ಗೊಂಡವರನ್ನು (ವಧು ಮತ್ತು ವರನ ತಂದೆಯರನ್ನು) ಕೊಲೆ ಮಾಡಿಸಿದನು. ಈ ಕೃತ್ಯದಿಂದ ರಾಜನ ವಿರುದ್ಧ ಜನರು ದಂಗೆ ಎದ್ದರು. ಮಲ್ಲಿದೇವ, ಬೊಮ್ಮಯ್ಯ ಮತ್ತು ಬಿಜ್ಜಳನ ಮಂತ್ರಿ ಜಗದೇವ ಸೇರಿ ಬಿಜ್ಜಳನನ್ನು ಕೊಲೆ ಮಾಡಿದರು.

ಬಿಜ್ಜಳನಿಗೆ ಆರು ಗಂಡು ಮಕ್ಕಳಿದ್ದರು. ಆತನ ಆಳ್ವಿಕೆಯ ಕಾಲದಲ್ಲಿ ಸಿಂಹಾಸನಕ್ಕಾಗಿ ಮಕ್ಕಳಲ್ಲಿ ಜಗಳಗಳು ಆರಂಭಗೊಂಡವು. ಈ ಸಂದರ್ಭದಲ್ಲಿ ದಂಡನಾಯಕ ಕಸಪ್ಪಯ್ಯ ಕರ್ಣನನ್ನು ಕೊಂದು, ಬಿಜ್ಜಳನ ಮಗ ರಾಯಮುರಾರಿ ಸೋವಿದೇವನನ್ನು ರಾಜನನ್ನಾಗಿ ಮಾಡಲು ಕಾರಣನಾದನು. ಇನ್ನೊಬ್ಬ ಸಹೋದರ ಮೈಲುಗಿ ಮಸನೂರಿನಿಂದ ಆಳುತ್ತಿದ್ದ. ಮತ್ತೊಬ್ಬ ಮಗ ಸಂಕಮ ಸುಮಾರು ಮೂರು ವರ್ಷ ಆಳ್ವಿಕೆಯನ್ನು ನಡೆಸಿದ. ಚಾಲುಕ್ಯ ಒಬ್ಬ ದಂಡನಾಯಕ ಬರಮದಂಡನಾಯಕನ ತಮ್ಮ ನರಸಿಂಹ ಸಂಕಮನನ್ನು ಕೊಂದನು. ಹೀಗೆ ಕ್ರಮೇಣವಾಗಿ ಕಳಚುರಿಯರ ಆಳ್ವಿಕೆ ಅಂತ್ಯವಾಯಿತು.

ಮುಸ್ಲಿಂ ಅರಸು ಮನೆತನಗಳು : ದೆಹಲಿಯ ಗುಲಾಮ್ ಅರಸು ವಂಶದ ಜುಲಾ ಉದ್ದೀನ್ ಖಿಲ್ಜಿಯ ಅಳಿಯ ಅಲ್ಲಾವುದ್ದೀನ್ ಖಿಲ್ಜಿಯು ಕ್ರಿ.ಶ. ೧೨೯೬ರ ಫೆಬ್ರುವರಿ

೨೫ರಂದು ಸೇಉಣರ ರಾಜದಾನಿಯಾದ ದೇವಗಿರಿಯ ಮೇಲೆ ದಾಳಿಮಾಡಿ ಅವರನ್ನು ಸೋಲಿಸಿ ಮರಳಿ ದೆಹಲಿಗೆ ಹೋದನು. ಆತ ತನ್ನ ದಂಡನಾಯಕ ಮಲ್ಲಿಕಾಫರನನ್ನೂ ದಕ್ಷಿಣಕ್ಕೆ ಕ್ರಿ.ಶ. ೧೩೦೮ರಲ್ಲಿ ಕಾಕತೀಯರ ಮೇಲೆ ದಾಳಿ ಮಾಡಲು ಕಳಿಸಿದ. ಆತ ಅಲ್ಲಾ ಉದ್ದೀನನು ಕಾಯಿಲೆಯಿಂದ ನರಳುವ ವಿಷಯವನ್ನು ದಾರಿಯಲ್ಲಿ ತಿಳಿದು ಮರಳಿ ದೆಹಲಿಗೆ ಹೋದ. ಕ್ರಿ.ಶ. ೧೩೧೮ರಲ್ಲಿ ಸೇವುಣ ರಾಜ್ಯವು ದೆಹಲಿ ಸುಲ್ತಾನರ ಕೈವಶವಾಯಿತು. ಮುಂದೆ ತುಘಲಕ್‌ನು ಕಾಕತೀಯನ ದೊರೆ ಪ್ರತಾಪರುದ್ರನನ್ನು ಸೋಲಿಸಿ ಆತನ ಕೈವಶದಲ್ಲಿದ್ದ ಬೀದರ ಮತ್ತು ಕಲ್ಯಾಣಗಳನ್ನೂ ತನ್ನ ಕೈವಶ ಮಾಡಿಕೊಂಡನು. ಈತನ ಕಾಲದಲ್ಲಿ ಕಲ್ಯಾಣನಗರ ಕಸಬಾ ಕಲ್ಯಾಣವೆಂದು ಕರೆಸಿಕೊಂಡಿತು. ಕ್ರಿ.ಶ. ೧೩೨೬ರಲ್ಲಿ ಕಲ್ಯಾಣವು ಶ್ರೀ ಸುಲ್ತಾನ್ ಮಹಮ್ಮದ್ ಮತ್ತು ಆತನ ಪ್ರಧಾನಿ ಮಲ್ಲಿಕ್ ಮದಿನ್ ಅವರ ಅಧೀನದಲ್ಲಿದ್ದಿತು. ಮದಿನ್ ಕಲ್ಯಾಣದ ಮಧುಕೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಪೂಜೆ, ಪುನಸ್ಕಾರಗಳನ್ನು ಮುಂದುವರಿಸಿಕೊಂಡು ಹೋಗಲು ನೆರವಾದ. ಈ ವಿಷಯವನ್ನು ಆತನ ಅಲ್ಲಿಯ ಶಾಸನವೊಂದು ತಿಳಿಸುತ್ತದೆ. ತದನಂತರ ದೌಲತಾಬಾದ್‌ನ್ನು ಮತ್ತೊಂದು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ. ಹೊಸ ಬೆಳವಣಿಗೆಗಳು ಅಲ್ಲಿ ಆರಂಭವಾಗಿ ಕೊನೆಗೆ ಹಸನ್ ಎಂಬವನು ಜಫರ್‌ಖಾನ್ ಎಂಬ ನಾಮಾಂಕಿತದಿಂದ ಕ್ರಿ.ಶ. ೧೩೪೭, ಆಗಸ್ಟ್ ೩, ಶುಕ್ರವಾರ ದೌಲತಾಬಾದ್‌ನ್ನು ಗೆದ್ದುಕೊಂಡ ನಂತರ ಆತ ಗುಲ್ಬರ್ಗಾದಲ್ಲಿ ಬಹುಮನಿ ಸಾಮ್ರಾಜ್ಯವನ್ನು ಸ್ಥಾಪಿಸಿದ. ಆರುವರ್ಷಗಳ ಮೊದಲೇ ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಯಾಗಿತ್ತು.

ಮುಂದೆ ಅಲ್ಲಾವುದ್ದೀನ್ ಬಹಮನ್ ಷಾಹನು ತನಗೆ ವಿರುದ್ಧರಾಗಿದ್ದ ದಖನ್ನಿನ ಕಲ್ಯಾಣ, ಅಕ್ಕಲಕೋಟೆ, ಕಂದಾರ, ಕೊಟಗೀರ್ ಮತ್ತು ಮೀರಜ್ ಇತ್ಯಾದಿಗಳ ವಿರುದ್ಧ ಸೈನ್ಯ ಕಳಿಸಿದ. ಕಲ್ಯಾಣವನ್ನು ಐದು ತಿಂಗಳ ಕಾಲ ಹಿಡಿದು ಆಳುತ್ತಿದ್ದ ಖಿರಖಾನ್ ಮೇಲೆ ದಂಡೆಯಾತ್ರೆ ಕಳಿಸಿ ಮಹತ್ವದ ಕಲ್ಯಾಣದ ಕೋಟೆಯನ್ನು ಹಾಳುಗೆಡವಿದನು. ಕಲ್ಯಾಣ, ಉದಗೀರ್ ಮುಂತಾದ ಪ್ರಾಂತಗಳು ಖಸಿಮ್ ಬರಿದ್ ತುರ್ಕನ, ಅಧೀನದಲ್ಲಿದ್ದವು. ಆತ ರಾಜ್ಯದ ಪೊಲೀಸರ ಮುಖ್ಯಸ್ಥನಾಗಿದ್ದ ಮತ್ತು ಅಫಿಕಿಸರ ಮುಖ್ಯಸ್ಥನಿದ್ದ. ಆತನನ್ನು ರಾಜ್ಯದ ಪ್ರಧಾನಮಂತ್ರಿ (ವಕೀಲ್-ಎ-ಸುಲ್ತಾನ್) ಯನ್ನಾಗಿ ನೇಮಿಸಲಾಯಿತು.

ಕೃಷ್ಣದೇವರಾಯ ಗುಲ್ಬರ್ಗಾ ಮತ್ತು ಬೀದರಗಳವರೆಗೆ ಯುದ್ಧ ಮಾಡುತ್ತ ಬಂದು ಹೋದನು. ೧೫೨೭ರಲ್ಲಿ ವಿಜಾಪುರದ ಆದಿಲ್‌ಷಾಹ ಬೀದರ ಮೇಲೆ ದಾಳಿಮಾಡಿ ಅಲ್ಲಿಯ ಅಮಿರ್ ಅಲಿಬರೀದ್‌ನನ್ನು ನಮ್ರನನ್ನಾಗಿ ಮಾಡಿದ ಮತ್ತು ಕಲ್ಯಾಣ,

ಕಂದಹಾರಗಳನ್ನು ವಿಜಾಪುರಕ್ಕೆ ಬಿಟ್ಟುಕೊಡುವಂತೆ ಮಾಡಿದ. ಅಹಮದ್ ನಗರದ ನಿಜಾಮ್ ಷಾ ಕಲ್ಯಾಣದ ಮೇಲೆ ವಿಜಯನಗರ ರಾಮರಾಯನ ಸಹಾಯದಿಂದ ದಾಳಿಮಾಡಿದ. ವಿಜಾಪುರದ ಆದಿಲ್‌ಷಾ ವಿಜಯನಗರ ಸೈನ್ಯದ ವಿರುದ್ಧ ಬಿರುಸಿನಿಂದ ಹೋರಾಡಿದ. ಆತ ತನ್ನ ಸೈನ್ಯವನ್ನು ತೆಗೆದುಕೊಂಡು ತಾನೇ ಕಲ್ಯಾಣಕ್ಕೆ ಹೋರಾಡಲು ಹೋದ. ಈ ಇಬ್ಬರ ಸೈನ್ಯದ ದಾಳಿಯಲ್ಲಿ ಆದಿಲ್‌ಷಾಹಿ ಸೋತುಹೋದನು. ಈ ಸಂದರ್ಭದಲ್ಲಿ ವಿಜಯನಗರ ಸೈನ್ಯದ ಮುಂದಾಳತ್ವವಹಿಸಿಕೊಂಡು ಕೆಳದಿ ಸದಾಶಿವನಾಯಕ ಬಿರುಗಾಳಿಯಂತೆ ಬಂದು ಕಲ್ಯಾಣದ ಕೋಟೆಯನ್ನು ಕೈವಶ ಮಾಡಿಕೊಂಡನು. ಅಲಿಬರೀದ್‌ನನ್ನು ಜೀವಂತವಾಗಿ ಹಿಡಿದು ಅವನನ್ನು ಮತ್ತು ಅವನ ಏಳು ತುಕಡಿಗಳನ್ನು ವಿಜಯನಗರ ರಾಜನ ಮುಂದೆ ನಿಲ್ಲಿಸಿದನು. ಅದಕ್ಕಾಗಿ ಆತನಿಗೆ 'ಶಸ್ರ ಸಪ್ತಾಂಗ ಹರಣಾ' ಎಂಬ ಬಿರುದು ಬಂದಿದೆ.

ಆದಿಲ್‌ಷಾಹಿಗಳು ಅಳಿಯ ರಾಮರಾಯನ ಸಹಾಯ ಪಡೆದು ಅಹಮದ್ ನಗರದ ವಿರುದ್ಧ ನಡೆದ ಯುದ್ಧಗಳಲ್ಲಿ ಕಳೆದುಕೊಂಡಿದ್ದ ಕಲ್ಯಾಣ ಮತ್ತು ಸೊಲ್ಲಾಪುರ ಪ್ರದೇಶಗಳನ್ನು ೧೫೪೯ ರಿಂದ ೧೬೬೧ರಲ್ಲಿ ಮರುಗಳಿಸಿದನು. ವಿಜಾಪುರ ಮತ್ತು ವಿಜಯನಗರ ಸೈನ್ಯಗಳು ಅಹಮದ್‌ನಗರದ ನಿಜಾಮ್‌ಷಾಹನನ್ನು ಒಂದೇ ಸಮನೆ ಸೋಲಿಸತೊಡಗಿದವು. ಕ್ರಿ.ಶ. ೧೫೬೧ರಲ್ಲಿ ನಿಜಾಮ್‌ಷಾಹ್ ರಾಮರಾಯನ ಹತ್ತಿರ ಹೋಗಿ ಆತನ ಸಹಾಯ ಕೇಳಿದ. ಕ್ರಿ.ಶ. ೧೫೬೨ರಲ್ಲಿ ನಿಜಾಮ್‌ಷಾಹ ಗೋಲ್ಕೊಂಡಾದ ಕುತುಬ್ ಷಾಹನ ಸಹಾಯದಿಂದ ಕಲ್ಯಾಣದ ಕೋಟೆಯನ್ನು ಮುತ್ತಿಗೆ ಹಾಕಿದ. ಇನ್ನೊಂದೆಡೆ ವಿಜಾಪುರದ ಆದಿಲ್‌ಷಾಹಿ ವಿಜಯನಗರ ಮತ್ತು ಬೀದರಿನ ಅಲಿ ಬರೀದ್ ಷಾಹಿ ಸಹಾಯದಿಂದ ಸೊಲ್ಲಾಪುರ ಮತ್ತು ಕಲ್ಯಾಣವನ್ನು ಗೆದ್ದುಕೊಂಡನು.

ಬೀದರನ್ನು ವಿಜಾಪುರಕ್ಕೆ ಸೇರಿಸಿದ್ದರಿಂದ ಬೀದರ ಸ್ವತಂತ್ರ ರಾಜಧಾನಿತ್ವ ಕೊನೆಗೊಂಡಿತು. ಅನೇಕ ಸೂಫಿ ಸಂತರು ಬೀದರ ಸುತ್ತ ಬಂದು ನೆಲೆಸಿದರು. ಬೀದರ ಕೋಟೆ, ಕಲ್ಯಾಣ ಕೋಟೆ. ಮಹಮ್ಮದ್ ಗವಾನನ ಮದರಸ ಕಟ್ಟಲ್ಪಟ್ಟವು. ೧೬೩೧ರಲ್ಲಿ ಮೊಗಲರ ಸೈನ್ಯವು ಅಸಫ್ ಖಾನನ ಮುಂದಾಳತ್ವದಲ್ಲಿ ಭಾಲ್ಕಿ ಮತ್ತು ಗುಲಬರ್ಗಾವನ್ನು ಸ್ವಾಧೀನಪಡಿಸಿಕೊಂಡರು. ವಿಜಾಪುರವನ್ನು ಕೈವಶ ಮಾಡಿಕೊಂಡರು. ಆದರೆ, ಅದು ವಿರುದ್ಧವಾಯಿತು. ಕೊನೆಗೆ ಮಹಮ್ಮದ್ ೨೦,೦೦,೦೦೦ ರೂಪಾಯಿಗಳನ್ನು ಮೊಗಲರಿಗೆ ಕಪ್ಪಕೊಡಲು ಒಪ್ಪಿದರು. ಕ್ರಿ.ಶ. ೧೬೩೬ರಲ್ಲಿ ಅವರ ಆದೀನವನ್ನು ಒಪ್ಪಿಕೊಂಡರು. ಅದರ ಫಲವಾಗಿ ಆದಿಲ್ ಶಾಹಿ ಅಧಿಕಾರ ವ್ಯಾಪ್ತಿಯು ಕಲ್ಯಾಣ, ಬೀದರ್, ಚಿಟಗುಪ್ಪ ಮತ್ತು ಭ್ಾಲ್ಕಿ ಮೇರೆಗಳವರೆಗೆ ಹಬ್ಬಿತು. ಶಿವಾಜಿ ಮಹಾರಾಜ ಒಂದು ಕೋಟೆಯ ನಂತರ

ಇನ್ನೊಂದುಕೋಟೆಗಳನ್ನು ಗೆಲ್ಲತೊಡಗಿದ. ಔರಂಗಜೇಬ ಬೀದರ ಮತ್ತು ಕಲ್ಯಾಣಗಳ ಸಂಗಡ ಬಹುಕಾಲ ಯುದ್ಧ ಮಾಡಿ ಬಹಳ ಆಕ್ರಮಣದ ತರುವಾಯ ಕೈವಶಮಾಡಿಕೊಂಡ.

ಮುಲ್ಕ ಅಹಮದ್‌ನು ಕಲ್ಯಾಣಕ್ಕೆ ಆದಿಲ್‌ಶಾಹಿಯರ ರಾಜ್ಯಪಾಲನಾಗಿದ್ದ. ಈತನನ್ನು ಶಿವಾಜಿಯು ಸ್ಥಾನಪಲ್ಲಟ ಮಾಡಿದ್ದ. ಈತ ಮೊಗಲರ ಜೊತೆ ಸೇರಿದ. ಆಗ ಮೊಗಲರ ತಾಣದಲ್ಲಿ ಅನೇಕ ಬದಲಾವಣೆ ಹೊಂದಿತು. ತನ್ನ ಆಸೆ ಪ್ರಕಾರ ಮರಾಠರನ್ನು ಬಗ್ಗು ಬಡಿಯದೆ ಔರಂಗಜೇಬನು ಅಹಮದ್‌ನಗರದಲ್ಲಿ ಮರಣ ಹೊಂದಿದ (ಕ್ರಿ.ಶ. ೧೭೦೭)ನು. ಮುಂದೆ ಡೆಕ್ಕನ್ ಪ್ರದೇಶ ಆರು ವಿಭಾಗಗಳಾಗಿ ವಿಂಗಡಣೆಯಾದವು. ಅದರಲ್ಲಿ ಬೀದರ ಒಂದಾಗಿತ್ತು. ಒಪ್ಪಂದದಂತೆ ಸರ್‌ದೇಶಮುಖಿ ಮತ್ತು ಚೌತ್‌ರಿಗೆ ಹಣಪಾವತಿ ನಿಲ್ಲಿಸಿದರೂ ಚಂದ್ರಸೇನ ಜಾದವ್‌ನಿಗೆ ಭಾಲ್ಕಿ ಜಿಲ್ಲೆಯನ್ನು ಜಾಗೀರಾಗಿ ನೀಡಲಾಯಿತು. ಈ ರಾಜ್ಯಕ್ಕೆ ಚಿನ್‌ಕಿಲಿಜ್ ಖಾನ್ ನಿಜಾಮುಲ್- ಉಲ್- ಮುಲ್ಕ್ ಮೊದಲರಾಜನಾದ. ಅವನು ಕಲ್ಯಾಣವನ್ನು ಜಾಗೀರ್ ಆಗಿ ತನ್ನ ಅಳಿಯ ನವಾಬ್ ಮಿರ್ ಕಲಂದ ಖಾನ್‌ನಿಗೆ ನೀಡಿದ. ಕ್ರಿ.ಶ. ೧೭೪೮ರಲ್ಲಿ ಫ್ರೆಂಚರು ಈ ಭಾಗದಲ್ಲಿ ಕಾಣಿಸ ತೊಡಗಿದರು. ಹೈದರಾಬಾದ್ ಒಳ ರಾಜಕೀಯ ಆಡಳಿತದಲ್ಲಿ ಇಬ್ಬರು ಯುರೋಪಿಯನ್‌ರ ಅಧಿಕಾರ ಒಳಗೊಂಡಿತು!

ಕ್ರಿ.ಶ. ೧೭೫೧ರಲ್ಲಿ ಬಾಲಾಜಿ ಬಾಜಿರಾವ್ ಮತ್ತು ಸಬಲತ್‌ಜಂಗ್ ನಡುವೆ ಯುದ್ಧವಾಯಿತು. ಭಾಲ್ಕಿಯಲ್ಲಿ ಖಂಡೇಶನನ್ನು ಮರಾಠರಿಗೆ ಬಿಟ್ಟುಕೊಡುವ ಒಪ್ಪಂದದಿಂದ ಅದು ಅಂತ್ಯವಾಯಿತು. ಆದರಿಂದ ಹೈದರಾಬಾದ್‌ನಲ್ಲಿ ಫ್ರೆಂಚ್ ಪ್ರಭಾವವು ಅಂತ್ಯವಾಯಿತು. ಇಂಗ್ಲೀಷ್‌ರ ಪ್ರಭಾವವು ಆರಂಭವಾಯಿತು!

ಮುಕ್ತಾರ ಖಾನ್ ಬೀದರಿನ ರಾಜ್ಯಪಾಲನಾಗಿದ್ದಾಗ (ಕ್ರಿ.ಶ. ೧೭೫೨) ಮರಾಠರು ನಿಜಾಮನಿಂದ ಬರ್ಹನ್‌ಪುರ, ದೌಲತಾಬಾದ್, ವಿಜಾಪುರ, ಗುಲ್ಬರ್ಗಾ, ರಾಯಚೂರು, ಯಾದಗಿರಿ, ಸೋರಾಪುರ, ಚಿತ್ತಾಪುರ, ಕಲ್ಯಾಣಗಳನ್ನು ಒತ್ತಾಯದಿಂದ ಕಿತ್ತುಕೊಂಡರು.

ಇಂಗ್ಲೀಷ್‌ರ ಪ್ರಭಾವ ಡೆಕ್ಕನ್ನಿನಲ್ಲಿ ಕ್ರಮೇಣ ಹೆಚ್ಚಾಗತೊಡಗಿತು. ಕ್ರಿ.ಶ. ೧೭೭೦ರಲ್ಲಿ ನಿಜಾಮನು ಮರಾಠರಿಂದ ಕಲ್ಯಾಣದ ಕೋಟೆಯನ್ನು ಮರಳಿ ಪಡೆದುಕೊಂಡ. ಸುಬಾಹ್‌ದಲ್ಲಿ ಏಳು ಸರಕಾರ(ಜಿಲ್ಲೆ)ಗಳಿದ್ದವು. ಅದರಲ್ಲಿ ೮೩ ಪರಗಣಗಳಾದವು. ಬೀದರ ಒಂದು ಸುಬಾಹ್ ಆಗಿತ್ತು. ನಿಜಾಮ ಸರಕಾರವು ಗುಲ್ಬರ್ಗಾದ ಸ್ವಾಮಿರಮಾನಂದ ತೀರ್ಥರು ಗಾಂಧೀಜಿ ಜೊತೆಕೂಡಿ ಆಂದೋಲನದಲ್ಲಿ ಭಾಗವಹಿಸಿದ್ದರು. ಅವರು ಬಸವಕಲ್ಯಾಣದಲ್ಲಿ ಆರಂಭಿಕ ವಿದ್ಯಾಭ್ಯಾಸ ಮಾಡಿದ್ದರು. ವಂದೇಮಾತರಂ ಚಳುವಳಿ ನಡೆಯಿತು. ೧೯೩೦ ರಿಂದ ೧೯೪೦ರವರೆಗೆ ರಜಾಕರ

ಹಾವಳಿಯಿತ್ತು. ಸ್ವಾತಂತ್ರ್ಯ ಬರುವ ಮೊದಲು ಕಲ್ಯಾಣವೂ ಹೈದ್ರಾಬಾದ ನಿಜಾಮರ ಅಧೀನಕ್ಕೆ ಒಳಪಟ್ಟಿತ್ತು. ನಂತರ ಅದು ಚಿಟಗುಪ್ಪ ಜಿಲ್ಲೆಯ ಹುಮನಾಬಾದ ತಾಲೂಕಿನ ವ್ಯಾಪ್ತಿಗೆ ಸೇರಿತ್ತು. ೧೩, ಸೆಪ್ಟಂಬರ್ ೧೯೪೮ರಲ್ಲಿ ಹೈದರಾಬಾದ್ ನಿಜಾಮರ ಆಳ್ವಿಕೆ ಅಂತ್ಯವಾಗಿ, ಸ್ವತಂತ್ರ ಭಾರತದ ಭಾಗವಾಯಿತು. ರಾಜ್ಯಗಳ ಪುನರ್‌ವಿಂಗಡಣೆಯಿಂದ ೧೯೫೬ ನವೆಂಬರ್ ೧ರಂದು ಶ್ರೀ ಎಸ್. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಮೈಸೂರು ರಾಜ್ಯಕ್ಕೆ ಬೀದರ, ಭಾಲ್ಕಿ, ಔರಾದ ಮತ್ತು ಹುಮನಾಬಾದ ಬೀದರ ಜಿಲ್ಲಾ ಪ್ರದೇಶದಲ್ಲಿ ಸೇರಿಕೊಂಡವು. ಮೈಸೂರು ರಾಜ್ಯ ೧೯೭೩ ನವೆಂಬರ್ ೧ರಂದು ಕರ್ನಾಟಕದ ರಾಜ್ಯವೆಂದು ತನ್ನ ಹೆಸರನ್ನು ಬದಲಾಯಿಸಿಕೊಂಡಿತು. ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗಲೇ ಕಲ್ಯಾಣ ಬಸವಕಲ್ಯಾಣವೆಂಬ ಹೆಸರನ್ನು ಪಡೆಯಿತು.

ಸಂಸ್ಕೃತಿ

ಸಮಾಜ: ಸಾಮಾಜಿಕ ರಚನೆಯಲ್ಲಿ ಪ್ರಾಚೀನ ಪರಂಪರೆಯ ನಾಲ್ಕು ವರ್ಗಗಳಿದ್ದವು. ಅವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ. ಆದರೆ ಅವೇ ಸು. ಕ್ರಿ.ಶ. ೧೧ನೇ ಶತಮಾನದಷ್ಟೊತ್ತಿಗೆ ನೂರೆಂಟು ಜಾತಿಗಳಾಗಿದ್ದವು! ಕೆಲವು ಬ್ರಾಹ್ಮಣರು ಚಾಲುಕ್ಯರಿಗೆ ದಂಡನಾಯಕರಾಗಿದ್ದರು. ಒಂದು ಮನೆತನದವರು, ಮೊದಲನೇ ಸೋಮೇಶ್ವರನಿಂದ ಹಿಡಿದು ಆರನೇ ವಿಕ್ರಮಾದಿತ್ಯ, ಇಮ್ಮಡಿ ಜಗದೇಕಮಲ್ಲನವರೆಗೂ ದಂಡನಾಯಕ ರಾಗಿದ್ದರು. ಬ್ರಾಹ್ಮಣರಲ್ಲಿ ಕೆಲವರು ಕಾಶ್ಮೀರದಿಂದ ಬಂದವರು. ಅವರನ್ನು 'ಸಾವಾಸಿ ಬ್ರಾಹ್ಮಣ'ರೆಂದು ಕರೆಯಲಾಗಿದೆ. ಕ್ರಿ.ಶ.೧೧೧೪ರ ಬಸವಕಲ್ಯಾಣ ಶಾಸನವೊಂದರಲ್ಲಿ ಸಾವಾಸಿ ನಾರಾಯಣಭಟ್ಟ ಮುಂತಾದವರು ಕಾಣಿಸುತ್ತಾರೆ. ಬ್ರಾಹ್ಮಣರು ಆಡಳಿತ ಹಾಗೂ ಸೈನ್ಯದ ಅಧಿಕಾರಿಗಳಾಗಿದ್ದರು. ಅವರು ಜಪ, ತಪ, ಹೋಮ, ಧ್ಯಾನ, ಧಾರಣ, ಮೌನ, ಅನುಷ್ಠಾನ ಆಚರಿಸುತ್ತಿದ್ದರು. ಧರ್ಮಶಾಸ್ತ್ರ ಅನುಸರಿಸುತ್ತಿದ್ದರು. 'ಮಹಾಜನರು' ಅಗ್ರಹಾರ ನೋಡಿಕೊಳ್ಳುತ್ತಿದ್ದರು. ಆದರೆ ಕಲ್ಯಾಣದಲ್ಲಿ ಅಗ್ರಹಾರ ಅಥವಾ ಬ್ರಹ್ಮಪುರಿಗಳು ಇರಲಿಲ್ಲ. ಅಲ್ಲಿ ಸಾಮಂತರು, ದಂಡನಾಯಕರು, ಅಧಿಕಾರಿಗಳು, ತಾಂಬೂಲಿಗರು, ವೈಶ್ಯರು, ಗಂಧಿಗರು ವಿವಿಧ ವರ್ಗದ ಕರಕುಶಲ ಜನರು, ಬಡಿಗ, ಕಮ್ಮಾರ, ಕುಂಬಾರ, ಕಲ್ಕುಟಿಗ, ನೃತ್ಯಗಾರರು, ಸೂಳೆಯರು, ಚಂಡರು ಮುಂತಾದವರಿದ್ದರು. ಸ್ತ್ರೀ ಆಡಳಿತ, ನೃತ್ಯ ಮನೋರಂಜನ ಕೆಲಸಗಳಲ್ಲಿ ಪಾಲ್ಗೊಳ್ಳುತ್ತಿದ್ದಳು. ಸತಿಪದ್ಧತಿ ಅಲ್ಲಿ ನೆಲೆಸಿತ್ತು. ವಿವಿಧ ಹಬ್ಬಗಳನ್ನು ಆಚರಿಸುತ್ತಿದ್ದರು. ಸಾಮಾಜದಲ್ಲಿ ಅನ್ಯೋನ್ಯತೆಯಿತ್ತು. ವಿವಿಧ ಧರ್ಮದ ದೇವಾಲಯ ಬಾವಿ, ಛತ್ರ-ಕೆರೆ ಕಟ್ಟುವಿಕೆಗೆ ಪ್ರೋತ್ಸಾಹವಿತ್ತು. ವಿಜ್ಞಾನೇಶ್ವರ ವೇಶ್ಯೆಯು

(ಅಪ್ಸರೆಯರು)ರನ್ನು 'ಪಂಚಚೂಡರು' ಎಂದು ಕರೆದಿದ್ದಾನೆ. ಕಲ್ಯಾಣದಲ್ಲಿ ವೇಶ್ಯ ಭುಜಂಗ, ದಿಟಚಕ್ರವರ್ತಿ, ಸೂಳರಧಿಷ್ಠಾಯಕ, ಸೂಳವಳಿಕೆ ಎಂಬ ಅಧಿಕಾರಿಗಳಿದ್ದರು.

ಶಿವಶರಣರ ವಚನ ಸಾಹಿತ್ಯದಲ್ಲಿ ಹದಿನೆಂಟು ಜಾತಿಗಳು ಕಂಡು ಬರುತ್ತವೆ. ಸೊಡ್ಡಲ ಬಾಚರಸನು ೧೮ ಜಾತಿಗಳನ್ನು ಈ ರೀತಿ ಹೇಳಿದ್ದಾನೆ. ಬ್ರಾಹ್ಮಣ, ಕ್ಷತ್ರಿಯ, ಬಣಜಿಗ, ಒಕ್ಕಲಿಗ, ಗೊಲ್ಲ, ಕುಂಬಾರ, ಪಂಚಾಲ, ಉಪ್ಪಾರ, ನಾಯಿಂದ, ಡೊಂಬ, ಅಗಸ, ಜೇಡ, ಹೆಂಡಗಾರ, ಕಲುಕುಟಿಗ, ಅಕ್ಕಸಾಲಿಗ, ಬಡಿಗ, ಕೋಮಟಿಗ, ಕಾಲಿಂಜಿ, ಕುಡುವೊಕ್ಕಲಿಗ, ಸಮಗಾರ, ಮಚ್ಚಿಗ, ಹೊಲೆಯ ಮತ್ತು ಬ್ಯಾಲಗಂಗಾರ, (೧೭ ಜಾತಿಗಳಿವೆ) ಬ್ರಾಹ್ಮಣ ಮತ್ತೊಂದಿರಬೇಕು. ಈಗ ಬಸವಕಲ್ಯಾಣದಲ್ಲಿ ವೀರಶೈವರು, ಮುಸಲ್ಮಾನರು, ಪಾಂಚಾಳ, ಅಕ್ಕಸಾಲಿಗ, ಮರಾಠ, ಪಟಗಾರ, ಅಗಸ, ಗೊಲ್ಲ, ಪೂಲವಾಲಿ, ಚಮ್ಮಾರ, ಸೋನಾರ, ಕುರುಬ, ಹಡಪದ, ವಡ್ಡ, ಕೊರವ, ಬೂರಬೂರಪೋಚಿ, ಬೋವಿ, ಕೋಳಿ, ಖುರುಡ, ಗೋದೊಳಿ (ಗೊಂದಳಿ), ಉಪ್ಪಾರ, ಜಾಡರ, ತೇಲಗಾರ, ಸಿಂಪಿ, ರಂಗೇರಿ, ಹೂಗ್ಯಾರ ಮುಂತಾದ ಜನವರ್ಗದ ಬಣಗಳಿವೆ ಎಂಬ ವಿಚಾರ ಪ್ರಸ್ತಾಪವಾಗಿದೆ.

ಕಲ್ಯಾಣದಲ್ಲಿ ಚಾಲುಕ್ಯರ ಸಚಿವ, ಅಧಿಕಾರಿ, ವರ್ತಕ ವರ್ಗಗಳು: ಕಲ್ಯಾಣ ಚಾಲುಕ್ಯರ ಆಡಳಿತದಲ್ಲಿ ಕೇಂದ್ರ, ಪ್ರಾಂತ ಹಾಗೂ ಸ್ಥಾನಿಕ ಆಡಳಿತ ನಡೆಸುವ ಅಧಿಕಾರಿಗಳಿದ್ದರು. ಅವರಲ್ಲಿ ಧರ್ಮಾಧಿಕಾರಿ, ಹೇರಿಸಂಧಿ ವಿಗ್ರಹಿ, ಕೋಶಾಧ್ಯಕ್ಷ, ಮಹಾಮಾತ್ಯ ರಾಜಗುರು ಮತ್ತು ಅಧಿಕಾರಿಗಳು, ಕಲ್ಯಾಣ ರಾಜಧಾನಿಯ ಅಂತಃಪುರದ ಮಂತ್ರಿಗಳು ಅಂತಃಪುರಾಧ್ಯಕ್ಷ, ಬಾಣಸವೆರ್ಗ್ಗಡೆ, ಮನೆವೆರ್ಗಡೆ, ಮಹಾಪಸಾಯಿತ, ಅಷ್ಟನವಸ್ತು ನಾಯಕ, ಅಡಪದ, ತಂತ್ರಪಾಳ, ರಾಜ್ಯಾಧ್ಯಕ್ಷ ರಾಣಿವಾಸದ ರಾಜ್ಯಾಧ್ಯಕ್ಷ, ಎಪ್ಪತ್ತೆರಡು ಅಥವಾ ಅರವತ್ತಾರು ವಿಭಾಗಗಳನ್ನು ನೋಡುವ ಭಟ್ಟರ ನಿಯೋಗಾಧಿಪತಿ, ಕರಿತುರಗ ಪಟ್ಟಸಾಹಣಿ, ಆನೆಯ ಸಾಹಣಿ, ಕಡಿತವೆರ್ಗ್ಗಡೆ, ಸೇನಾಪತಿ, ಗಾವುಂಡ, ಮಂನ್ನೆಯಧೂತ, ಸಾಹವಾಸಿಗಳಧಿಷ್ಠಾಯಕ, ಭಟ್ಟರ ನಿಯೋಗಾಧಿಷ್ಠಾಯಕ, ಶ್ರೀಕರಣಧಿಷ್ಠಾಯಕ, ಸುಂಕವೆರ್ಗಡೆ, ವೆರ್ಗ್ಗಡೆ, ವ್ಯಾಪಾರಸ್ಥರಾದ ಐಯ್ಯಾ ಹೊಳೆಯ ಐನೂರರ ಸ್ವಾಮಿಗಳು, ನಖರರು, ವೀರಬಣಂಜರು, ನಾನಾ ದೇಶಿಗಳು ಮುಂಮುರಿದಂಡರು, ಉಭಯ ನಾನಾದೇಶಿಗಳು, ಸೆಟ್ಟಿಗುತ್ತರು (ಪಟ್ಟಣಸ್ವಾಮಿಗಳು), ಇನ್ನಿತರ ವ್ಯಾಪಾರಿಗಳಾದ ಆರ್ಯದೇಶ, ಬೋಧನ, ಹೊಟ್ಟಳಕೆರೆ, ಭುವನಗಿರಿ, ಕಲಂಬರ್ಗೆ, ಮಳೆಯಖೇಡ, ಗೇಡಿಂಜಿ, ಉಜ್ಜಲಬೆ ಮುಂತಾದ ವರ್ತಕರು ಮುಖ್ಯರಾಗಿ ಕಾಣುವರು. ಅಂತಃಪುರಕ್ಕೆ ಮತ್ತು ವಿವಿಧ ಬ್ರಾಹ್ಮಣ ಕುಲಬಾಂಧವ ಅಧಿಕಾರಿಗಳಿಗೆ

ಪ್ರತ್ಯೇಕವಾಗಿ ಮೂರಕ್ಕಿಂತ ಹೆಚ್ಚು ಮಂತ್ರಿ ಹಾಗೂ ಅಧಿಕಾರಿಗಳನ್ನು ನೇಮಿಸಿರುವುದು ಇಲ್ಲಿ ವಿಶೇಷವಾಗಿದೆ. ರಾಜಧಾನಿ ಕಲ್ಯಾಣಪುರದ ಕೋಟೆ, ಮುದ್ರಾವಣ, ಟಂಕಶಾಲೆಗಳಿಗೆ ವಿವಿಧ ಅಧಿಕಾರಿಗಳಿದ್ದರು.

ಕಲ್ಯಾಣದಲ್ಲಿ ರಾಜಗುರುಗಳು : ಸಾಹಿತ್ಯ ಸಂಸ್ಕೃತಿಯ ಬೆಳವಣಿಗೆಗೂ ಕಲ್ಯಾಣ ಚಾಲುಕ್ಯರು ಪ್ರೋತ್ಸಾಹವನ್ನು ನೀಡಿದರು. ಇದರಿಂದ ಕನ್ನಡ, ಸಂಸ್ಕೃತದ ಹಲವಾರು ಕೃತಿಗಳು ಹೊರಬಂದಿವೆ. ಆಶ್ರಯ ಪಡೆದ ಕಲ್ಯಾಣ ಚಾಲುಕ್ಯರ ಶೈವರಾಜಗುರುಗಳು ಸೂಡಿಯ ಅಚಲೇಶ್ವರ ದೇವಾಲಯದ ಸೋಮೇಶ್ವರ ಭಟ್ಟ (ಭಟ್ಟೋಪಾಧ್ಯಯ) ತರ್ದವಾಡಿ ನಾಡಿನಿಂದ ಬಂದು ಕಲ್ಯಾಣಪುರ ಹತ್ತಿರದ ಗೋರ್ಟಾ ಗ್ರಾಮದಲ್ಲಿ ನೆಲಸಿದ ರುದ್ರಮಿಶ್ರ ಪಂಡಿತ ಮತ್ತು ಭಾಲ್ಕಿ ತಾಲೂಕಿನ ಚಂದಾಪುರದ ಭೋಗದೇವ ಭಟ್ಟೋಪಾಧ್ಯಾಯ ಮುಖ್ಯರಾಗಿದ್ದಾರೆ. ಮೊದಲ ಇಬ್ಬರು ಆರನೇ ವಿಕ್ರಮಾದಿತ್ಯನ ರಾಜಗುರುಗಳಾಗಿದ್ದರೆ, ಮೂರನೆಯವನು ಆರನೇ ವಿಕ್ರಮಾದಿತ್ಯನ ಮಗ ಯುವರಾಜ ಮಲ್ಲಿಕಾರ್ಜುನನ ರಾಜಗುರುವಾಗಿದ್ದಾನೆ. ಸಾಮಾಜಿಕ, ಧಾರ್ಮಿಕ ಕ್ರಾಂತಿಯೋಗಿ ಬಸವಣ್ಣನವರ ಊರು ತರ್ದವಾಡಿನಾಡಿನ ಬಾಗೇವಾಡಿ. ಅದೊಂದು ಅಗ್ರಹಾರ, ಬಸವಣ್ಣನವರ ತಂದೆ ಮಾದರಸ ಅದರ ಒಡೆಯ.

ಆರ್ಥಿಕ ಸ್ಥಿತಿ : ಈ ದೇಶದ ಆರ್ಥಿಕ ಸ್ಥಿತಿಯು ಕೃಷಿ ಮೇಲೆ ಅವಲಂಬಿಸಿತ್ತು. ಆದುದರಿಂದ ಕೃಷಿಸಾಗುವಳಿಗೆ ಮಹತ್ವ ನೀಡಲಾಗಿದೆ. ಬಸವಕಲ್ಯಾಣದಲ್ಲಿ ತ್ರಿಪುರಾಂತಕ ಕೆರೆ ಮತ್ತು ನಾರಾಯಣಪುರಕೆರೆ ಎಂಬ ಎರಡು ಮುಖ್ಯ ಕೆರೆಗಳಿವೆ. ಚಾಲುಕ್ಯರ ಕಾಲದಲ್ಲಿ ಈ ಕೆರೆಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ತ್ರಿಪುರಾಂತಕ ಕೆರೆ ಇಮ್ಮಡಿ ತೈಲನ ಕಾಲದಲ್ಲಿ ಹಾಗೂ ನಾರಾಯಣಪುರ ಕೆರೆ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಾಣಗೊಂಡಿವೆ. ಅಲ್ಲಿ ಕಬ್ಬು, ಜೋಳ, ತೊಗರಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದರು.

ಭೂಮಿಯನ್ನು ಕೋಲು/ಗಳೆ/ಘಳೆಯಿಂದ ಅಳೆಯುತ್ತಿದ್ದರು. ಕೆಲವು ವಿಶೇಷ ರೀತಿಯ ಅಳತೆಗೋಲುಗಳಿದ್ದವು. ಅವು ಮಾಣಿಕೇಶ್ವರದ ಕೋಲು, ಗಂಡರಾದಿತ್ಯನ ಕೋಲು ಇತ್ಯಾದಿ. ಭೂಮಿಯ ಅಳತೆ ಮಾಪನವನ್ನು ಕಮ್ಮ, ಮತ್ತರ್ ಮುಂತಾಗಿ ಕರೆಯುತ್ತಿದ್ದರು. ಧವಸ-ಧಾನ್ಯಗಳನ್ನು ಗಿಡ್ಡ, ಮಣ (ಬಳ್ಳ) ಕೊಳಗ, ವಕ್ಕಲುಗಳಿಂದ ಅಳತೆ ಮಾಡುತ್ತಿದ್ದರು. ಕಲ್ಯಾಣ ಪಟ್ಟಣಕ್ಕೆ ವಿವಿಧ ಭಾಗಗಳಿಂದ ವರ್ತಕರು ಸಾಮಾನುಗಳನ್ನು ತಂದು ಮಾರುತ್ತಿದ್ದರು. ಅವುಗಳಲ್ಲಿ ಬಿದಿರು, ಬೆತ್ತ, ಸಕ್ಕರೆ, ಲೋಹದ ಸಾಮಾನು, ಬಟ್ಟೆ, ಆಭರಣ ಇತ್ಯಾದಿ ಮುಖ್ಯವಾಗಿವೆ.

ಕೋಣಕತ್ತೆ, ಕುದುರೆ, ಇತ್ಯಾದಿ ಪ್ರಾಣಿಗಳ ಮೇಲೆ ವಸ್ತುಗಳನ್ನು ಹೇರಿಕೊಂಡು ಸಂಚರಿಸಿ ವ್ಯಾಪಾರ ನಡೆಸುತ್ತಿದ್ದರು. ವಿವಿಧ ನಾಣ್ಯಗಳು ಚಲಾವಣೆಯಲ್ಲಿದ್ದವು. ಕಲ್ಯಾಣದಲ್ಲಿ ಬಾದುಮ್ಮೆಯ ದ್ರಮ್ಮ, ಗದ್ಯಾಣ, ಪೊನ್ನಗದ್ಯಾಣ, ದ್ರಮ್ಮ, ವೀಸ, ಕಾಗಿಣಿ ಇತ್ಯಾದಿ ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆಯೊಂದು ಕ್ರಿ.ಶ. ೧೧೧೬ರಲ್ಲಿ ಕಲ್ಯಾಣದಲ್ಲಿತ್ತು (?)

ವಿವಿಧ ಬಗೆಯ ಸುಂಕ/ಕರಗಳನ್ನು ಆಕರಿಸಲಾಗುತ್ತಿತ್ತು. ಸಿದ್ಧಾಯ, ಆರುವಣ ವಸ್ತುಗಳ ಮೇಲೆ ಹೇರುವ ಕರಗಳಾಗಿದ್ದವು. ಕರಸಂಗ್ರಹಿಸಲು ವಿವಿಧ ರೀತಿಯ ಸುಂಕಾಧಿಕಾರಿಗಳಿದ್ದರು. ವರ್ತಕರಲ್ಲಿ ಬಡ್ಡಿ ವ್ಯವಹಾರಿ, ಗಂಧಿಗರು, ಫಳಿಸಾಸರು, ಎಲೆ ಮಾರುವ ತಾಂಬುಲಿಗರು, ಹೊನ್ನ ವಣಜಿಗರು ಕಾಣುವರು. ಕಮ್ಮಾರ, ಕುಂಬಾರ, ಬಡಿಗ ಮುಂತಾದವರಿದ್ದರು. ರಾಣಿಯರು ಸಹ ಆಡಳಿತಗಾರರಾಗಿ ಸಂಗೀತ, ನೃತ್ಯಗಾರ್ತಿಯರಾಗಿದ್ದರು.

ಧಾರ್ಮಿಕ ಸ್ಥಿತಿ : ಕಲ್ಯಾಣದಲ್ಲಿ ಕ್ರಿ.ಶ. ೧೩ನೇ ಶತಮಾನದವರೆಗೆ ಶೈವ, ವೈಷ್ಣವ, ಶಾಕ್ತ, ಜೈನ, ಬೌದ್ಧ, ವೀರಶೈವ ಧರ್ಮಗಳಿದ್ದವು. ಮುಂದೆ ಇಸ್ಲಾಂ ಧರ್ಮ ಅಲ್ಲಿ ಅಸ್ತಿತ್ವಕ್ಕೆ ಬಂತು. ಕಲ್ಯಾಣದಲ್ಲಿ ಬೌದ್ಧ, ಜೈನ, ಶೈವ, ಶಾಕ್ತ ಮತ್ತು ವೈಷ್ಣವ ಧರ್ಮಗಳ ನೆಲೆ ಹಿನ್ನೆಲೆಯನ್ನು ಈಗ ಬೆಳಕಿಗೆ ಬಂದ ಶಾಸನ, ಶಿಲ್ಪಗಳು ತಿಳಿಸುತ್ತವೆ. ಜೈನ ಹಾಗೂ ಶೈವ ಧರ್ಮದ ಶಾಸನ ಶಿಲ್ಪ ಮತ್ತು ದೇವಾಲಯಗಳ ಸಂಖ್ಯೆ ಹೆಚ್ಚು. ಇವುಗಳಲ್ಲಿ ಜೈನ, ವೈಷ್ಣವ, ಶೈವ ಧರ್ಮಗಳ ಶಿಲ್ಪಗಳು ಸುಮಾರು ಪ್ರಮಾಣದಲ್ಲಿ ಚದುರಿ ಹೋಗಿವೆ. ಸುಮಾರು ಮೂವತ್ತು ಕನ್ನಡಸಂಸ್ಕೃತ ಶಿಲಾಶಾಸನಗಳು, ನೂರಕ್ಕೂ ಹೆಚ್ಚು ಜೈನ, ವೈಷ್ಣವ ಮತ್ತು ಶೈವ ಶಿಲ್ಪಗಳು; ವೈಷ್ಣವ, ಜೈನ ಮತ್ತು ಶೈವ ದೇವಾಲಯಗಳ ಅವಶೇಷಗಳು ಬಸವಕಲ್ಯಾಣದ ಕೋಟೆ ಒಳಗೆ, ಹೊರಗೆ, ಗೋಡೆಯಲ್ಲಿ ಮತ್ತು ಆ ಊರ ಸುತ್ತಮುತ್ತಲು ಸುಮಾರು ನಾಲ್ಕೈದು ಕಿ.ಮೀ. ಅಂತರದಲ್ಲಿ ಚದುರಿಹೋಗಿವೆ. ಈಗ ಹೇಳಿಕೊಳ್ಳುವ ಯಾವ ಪ್ರಾಚೀನ ದೇವಾಲಯಗಳು ಕಲ್ಯಾಣದಲ್ಲಿ ಇರುವುದಿಲ್ಲ. ಒಂದೆರೆಡು ಮಾತ್ರ ಅಲ್ಲಿಂದ ಸುಮಾರು ೬ ಕಿ.ಮೀ. ದೂರದಲ್ಲಿವೆ. ಅವುಗಳ ಅಧ್ಯಯನ ಅಂದಿನ ಕಲಾ ಸಿರಿತನವನ್ನು ಪರಿಚಯಿಸುತ್ತವೆ. ದೇವಾಲಯಗಳಲ್ಲಿ ಆಚಾರ್ಯ, ಪೂಜಾರಿ ಹಾಗೂ ಇನ್ನಿತರ ಪರಿಚಾರಕ ವರ್ಗದವರಿದ್ದರು. ಶೈವ ಶಿಲ್ಪಗಳಲ್ಲಿ ಗಣೇಶ, ಸಿದ್ಧಿಗಣೇಶ, ಶಿವಲಿಂಗ, ಚತುರ್ಮುಖಲಿಂಗ, ತ್ರಿಪುರಾಂತಕ ಶಿವ, ಉಮಾಮಹೇಶ್ವರ, ಭೈರವ ಮುಂತಾದ ಶಿಲ್ಪಗಳಿದ್ದು, ಅವುಗಳ ಆರಾಧನೆ ಇದ್ದಿತು. ವೈಷ್ಣವರ ವಿಭಿನ್ನ ದೇವಾಲಯ ಶಿಲ್ಪಗಳಿದ್ದವು. ಶಿಲ್ಪಗಳಲ್ಲಿ ವೈಕುಂಠ ವಿಷ್ಣು, ಕೇಶವ, ನಾರಾಯಣ,

ಭೂವರಾಹ, ಲಕ್ಷ್ಮಿನಾರಾಯಣ, ಸೂರ್ಯ, ಬ್ರಹ್ಮ ಇತ್ಯಾದಿ ದೇವತೆಗಳು ಕಾಣುವರು. ಶಾಕ್ತರಲ್ಲಿ ದುರ್ಗಾ ಪರಮೇಶ್ವರಿ, ಗುರ್ಜರ ಮಹಾದೇವಿ ದೇವಾಲಯಗಳು ಕಾಣುತ್ತವೆ. ಜೈನರಲ್ಲಿ ಚಂದ್ರಪ್ರಭ ಜಿನಾಲಯ ಮುಖ್ಯವಾಗಿತ್ತು. ಬೌದ್ಧ ಧರ್ಮದ ವಿಚಾರ ಬೌದ್ಧರ ಕೊಂಗದೇವನಾಯಕ ಶಾಸನದಲ್ಲಿ ಕಾಣುವುದು. ಆದರೆ ಬುದ್ಧನ ಪುರಾವೆಗಳು ಅಲ್ಲಿ ದೊರೆತಿಲ್ಲ. ವೀರಶೈವ ಧರ್ಮದ ೧೦೧ ಮಠಗಳು ಅಲ್ಲಿವೆ. ಶಿವಶರಣರ ಗುಹೆಗಳು ಅಲ್ಲಿವೆ. ವೀರಶೈವ ಧರ್ಮವನ್ನು ಶಿವಶರಣರು ಉದ್ಧಾರಗೊಳಿಸಿದರು. ಇಸ್ಲಾಂ ಧರ್ಮದ ಅನೇಕ ಆರಾಧನ ಕೇಂದ್ರಗಳು ಅಲ್ಲಿವೆ.

ಭಾಷೆ ಮತ್ತು ಸಾಹಿತ್ಯ : ಕಲ್ಯಾಣದಲ್ಲಿ ಕನ್ನಡ, ಸಂಸ್ಕೃತ, ಉರ್ದು, ಮರಾಠಿ ಮುಂತಾದ ಭಾಷೆಗಳು ಅಸ್ತಿತ್ವದಲ್ಲಿದ್ದವು. ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮತ್ತು ಕಳಚೂರಿ-ಸೇಉಣ-ಕಾಕತೀಯರ ಕಾಲದ ಅನೇಕ ಕವಿಗಳು ಮತ್ತು ಪಂಡಿತರು ಅನೇಕ ಕೃತಿಗಳನ್ನು ಬರೆದು ಬೆಳಕಿಗೆ ತಂದರು. ಅವರಲ್ಲಿ ವಾದಿರಾಜ, ಬಿಲ್ಲಣ, ವಿಜ್ಞಾನೇಶ್ವರ, ಗುಣವರ್ಮ, ರನ್ನ, ಇಮ್ಮಡಿ ಚಾವುಂಡರಾಯ, ವಸುಭಟ್ಟ, ಶ್ರೀಧರ ತಿಲಕ, ನಯಸೇನ, ಬ್ರಹ್ಮಶಿವ ಮೊದಲಾದವರನ್ನು ಹೆಸರಿಸಬಹುದು. ಶಿವಶರಣರು ಅನುಭವ ಮಂಟಪವನ್ನು ಸ್ಥಾಪಿಸಿ ಸರಳ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿದರು. ಮುಸ್ಲಿಂರ ಆಳ್ವಿಕೆಯಲ್ಲಿ ಮಹಮದ್ ಗವಾನನ ಪಾತ್ರ ಗಮನ ಸೆಳೆಯುತ್ತದೆ.

ಹೀಗೆ ಅಂದಿನ ಕಲ್ಯಾಣ ರಾಜಧಾನಿ ಪಟ್ಟಣವಾಗಿ, ಸಕಲ ಸುಸಂಸ್ಕೃತ ಕಾರ್ಯಗಳ ಕೇಂದ್ರವಾಗಿ, ಹಲವಾರು ಧರ್ಮಕ್ಷೇತ್ರಗಳ ನೆಲವೀಡು ಆಗಿ, ವಿವಿಧ ವರ್ಣ-ವರ್ಗ-ಜಾತಿಗಳ ಸಮರಸಜೀವನದ ಕೇಂದ್ರವಾಗಿ ಬೆಳಗಿದುದರ ಚಿತ್ರಣ ಆಳವಾಗಿ ಮೂಡುತ್ತದೆ. ಈಗ ಅಳಿದುಳಿದ ಅವಶೇಷಗಳು ಈ ರಾಜಧಾನಿಯ ಮಹತ್ವದ ಮೂಕ ಸಾಕ್ಷಿಗಳು, ದೇವಾಲಯಗಳು, ಶಿಲ್ಪಗಳು, ನಗರ ರಚನೆ, ಜೀವನಾವಶ್ಯಕ ವಸ್ತುಗಳ ವಿಪುಲತೆ, ಶಾಸನ-ಸಾಹಿತ್ಯ ಗ್ರಂಥಗಳಲ್ಲಿ ದೊರೆಯುವ ಮಾಹಿತಿಯೇ ''ಸಮೃದ್ಧ ರಾಜಧಾನಿ ಕಲ್ಯಾಣ ಪಟ್ಟಣ''ದ ಕಲ್ಪನೆ ಮೂಡಿಸುತ್ತದೆ. ಶಿವಶರಣರಿಂದ ಇದೊಂದು ಮಹಾಮನೆಯ ಕೇಂದ್ರವಾಗಿ, ಧರ್ಮ ಸಮನ್ವಯದ ಬೀಡಾಗಿದ್ದುದು ಅಭಿಮಾನದ ಸಂಗತಿ. 'ವಿಶ್ವಮಾನವ ಧರ್ಮ'ದ ಮೂಲ-ಚೂಲಗಳನ್ನು ಚಿಂತಿಸಿದ ''ಮಹಾಮನೆ''-ಅನುಭವ ಮಂಟಪ, ಶಿವಶರಣರ ಸ್ಮಾರಕಗಳು-ಮಾನವತ್ವದ ಘನತೆ, ಕಾಯಕ-ದಾಸೋಹ- ಪ್ರಸಾದಗಳ ಪರಿಕಲ್ಪನೆ ಹಾಗೂ ಅನುಷ್ಠಾನಗೊಂಡ ಕೇಂದ್ರಗಳಾಗಿ ವಿಶ್ವದ ಗಮನವನ್ನು ಸೆಳೆಯುತ್ತವೆ. ಈ ನಿಟ್ಟಿನಲ್ಲಿ ಇದೊಂದು ಪ್ರಪ್ರಥಮ ಅಳಿಲುಸೇವೆ.

■

೩. ಶೈವ ದೇವಾಲಯ-ಶಿಲ್ಪಗಳು

ದೇವಾಲಯಗಳು: ಕಲ್ಯಾಣದಲ್ಲಿ ತ್ರಿಪುರಾಂತಕೇಶ್ವರ, ತ(ತ್ರ್ಯ)ಂಬಕೇಶ್ವರ, ಮಧುಕೇಶ್ವರ, ಭೀಮೇಶ್ವರ ಮತ್ತು ಸಿದ್ಧೇಶ್ವರ ದೇವಾಲಯಗಳಿದ್ದವೆಂದು ಶಾಸನಗಳು ತಿಳಿಸುತ್ತವೆ.

ಕ್ರಿ.ಶ. ೧೦೭೦ರ ನಂದವಾಡಗಿ ಶಾಸನ ಕಲ್ಯಾಣದಲ್ಲಿ ತ(ತ್ರ್ಯ)ಂಬಕೇಶ್ವರ ದೇವಾಲಯ, ಮಠ, ದೀಪಮಾಲೆ ಹಾಗೂ ಕೆರೆಯನ್ನು, ಭಾವಗಂಧವಾರಣ ಎಂಬ ಬಿರುದಿನ ಸಾಮಂತ ಕಟ್ಟಿಸಿದನೆಂದು ಹೇಳಲಾಗಿದೆ. ಆದರೆ ಈ ದೇವಾಲಯ ಕಲ್ಯಾಣದಲ್ಲಿ ಎಲ್ಲಿತ್ತು ಎಂಬುದು ತಿಳಿದಿಲ್ಲ. ಅಲ್ಲಿಯ ಇನ್ನೊಂದು ದೇವಾಲಯ ತ್ರಿಪುರಾಂತಕ ಅದು ಚಾಲುಕ್ಯರ ಮತ್ತು ಕಳಚುರಿಯರ ಕಾಲದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿತ್ತು. ಅಪರಾಧಿಯಾಗಿದ್ದ ಮಾಗಳದ ಮನ್ನೆಯಬೊಪ್ಪನನ್ನು ಕಲ್ಯಾಣಕ್ಕೆ ಕರೆಸಿ ಆತನಿಂದ ತ್ರಿಪುರಾಂತಕ ದೇವರ ಮುಂದೆ ತನ್ನ ಮನ್ನೆಯತನವನ್ನು ಬಿಟ್ಟುಕೊಡಲು ಪ್ರಮಾಣ ಮಾಡಿಸಿಲಾಯಿತೆಂದು ಕುರುವತ್ತಿ ಶಾಸನ ತಿಳಿಸುತ್ತದೆ. ಈಗ ಅಲ್ಲಿಯ ಕೆರೆಯ ದಂಡೆಯ ಮೇಲೆ ತ್ರಿಪುರಾಂತ ದೇವಾಲಯುದ ಅವಶೇಷಗಳು ಚದುರಿಹೋಗಿರುವುದನ್ನು ಕಾಣಬಹುದು. ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಒಂದು ಶಾಸನದಲ್ಲಿ ಸಿದ್ದೋಗಿ ಎಂಬ ವೈಶ್ಯನೊಬ್ಬ ಕಲ್ಯಾಣದಲ್ಲಿ ಸಿದ್ಧೇಶ್ವರ ದೇವಾಲಯ ಕಟ್ಟಿಸಿದನೆಂದು ಹೇಳಲಾಗಿದೆ. ಅದು ಶಿವಪುರದ ಶಿವದೇವಾಲಯ ವಿರಬಹುದು.



ಶಿವಲಿಂಗಗಳು : ನಗರದಲ್ಲಿ ೪೨ ಶಿವಲಿಂಗಗಳಿವೆ. ಲಿಂಗ ಪೀಠಗಳು ಆಯತಾಕಾರ, ಚೌಕಾಕಾರ, ವೃತ್ತಾಕಾರ ದಲ್ಲಿವೆ. ಕೆಲವು ಶಿವಲಿಂಗಗಳ ಮುಖಗಳಲ್ಲಿ ಬ್ರಹ್ಮಸೂತ್ರ ಗೆರೆಗಳಿವೆ. ಅಂಥದೊಂದು ಸೋಮೇಶ್ವರ ದೇವಾಲಯ ದಲ್ಲಿದೆ. ಕೆಲವು ಮೂಲ ಸ್ಥಾನದಿಂದ ಪಲ್ಲಟಗೊಂಡಿವೆ. ಒಂದು ಪೀಠದಲ್ಲಿ ಮೂರು ಲಿಂಗಗಳಿವೆ. ಅಥವಾ ಕೇವಲ ನಾಲ್ಕು ಮುಖಗಳಿವೆ. ಒಂದರಲ್ಲಿ ಅನೇಕ ಲಿಂಗಗಳಿವೆ ಮತ್ತು ಅದರಲ್ಲಿ ಫಲಗಳಿವೆ! ಕೆಲವು ಶಿವಲಿಂಗಗಳಿಗೆ ನಾಲ್ಕು ಮುಖಗಳಿವೆ. ಕೆಲವು ಶಿವಲಿಂಗಗಳ ಪೀಠಗಳಲ್ಲಿ ಕೇವಲ ಮುಖಗಳನ್ನು ಕೂಡಿಸಲಾಗಿದೆ.

ಮುಖಲಿಂಗಗಳು : ಲಿಂಗ ಪೀಠಗಳಲ್ಲಿ ಶಿಲೆಯ ಮುಖಗಳನ್ನು ಕೂಡಿಸಲಾಗಿದೆ. ಮುಖದಲ್ಲಿ ಕಣ್ಣು, ಮೂಗು, ಬಾಯಿ, ಹುಬ್ಬು, ಹಣೆಪಟ್ಟಿಗಳಿವೆ. ಇಂತಹ ಎರಡು ಪಾಶಾಪುರ ಓಣಿಯ ನಾಗರಕಟ್ಟೆಯ ಮೇಲಿವೆ. ಮೂರುಲಿಂಗೇಶ್ವರ ದೇವಾಲಯದಲ್ಲಿ ಒಂದಿದೆ. ಅದೇ ರೀತಿ ಬಡಿಗೇರ ಓಣಿಯ ಗುಂಡ್ಡಪ್ಪ ಚೌದರಿ ಮನೆ ಮುಂದಿನ ಹಿರೋಡಕಟ್ಟೆಯ ಮೇಲಿದೆ ಹಾಗೂ ಅಂಬಿಗರ ಚೌಡಯ್ಯನ ಮಠ ಇತ್ಯಾದಿ ಸ್ಥಳಗಳಲ್ಲಿವೆ.

ಪಂಚಮುಖ ಲಿಂಗಗಳು : ಶಿವಲಿಂಗದ ನಾಲ್ಕು ಮುಖಗಳಲ್ಲಿ ಶಿವನ ಮುಖಗಳನ್ನು ಕಂಡರಿಸಲಾಗಿದೆ. ತಲೆಯ ಮೇಲೆ ಮುಖವಿಲ್ಲ ಆದರೆ ಲಿಂಗಭಾಗವಿದೆ. ಅವು ಶಿವನ





ಐದು ಮುಖಗಳಾದ ಸದ್ಯೋಜಾತ, ವಾಮದೇವ, ತತ್ಪುರುಷ, ಅಘೋರ ಮತ್ತು ಈಶಾನ್ಯರನ್ನು ಪ್ರತಿನಿಧಿಸುತ್ತವೆ. ಅಂಥ ವಿಗ್ರಹ ಪರುಷಕಟ್ಟೆ ಹತ್ತಿರವಿದೆ. ಕೇವಲ ಚತುರ್ಮುಖವುಳ್ಳ ಶಿರಭಾಗವೊಂದು ಅಲ್ಲಿಯ ವಸ್ತುಸಂಗ್ರಹಾಲಯದಲ್ಲಿದೆ. ತಲಾ ಒಂದಕ್ಕೆ ಜಟಾ ಮುಕುಟವಿದೆ. ಆದರ ಅಲಂಕಾರ ಕಿರೀಟ ಮುಕುಟವನ್ನು ಹೋಲುತ್ತದೆ. ಕರ್ಣ ಕುಂಡಲಗಳನ್ನು ಧರಿಸಲಾಗಿದೆ (ಸು. ಕ್ರಿ. ಶ. ೧೧ ನೇ ಶತಮಾನ).

ಬ್ರಹ್ಮಸೂತ್ರವುಳ್ಳ ಶಿವಲಿಂಗ : ಈ ಮಾದರಿಯ ಶಿವಲಿಂಗಗಳು ನಗರದ ಮಲ್ಲಿಕಾರ್ಜುನ ಗುಡಿ, ಸೋಮೇಶ್ವರ ದೇವಾಲಯ, ಬಸವೇಶ್ವರ, ಶಿಶುವಿಹಾರ ಶಾಲೆ ಮತ್ತು ಶಿವಪುರದ ಶಿವಮಂದಿರ, ತ್ರಿಪುರಾಂತಕ ಕೆರೆಯ ಹತ್ತಿರದ ಹನುಮಾನ ಮಂದಿರ ಇತ್ಯಾದಿ ಸ್ಥಳಗಳಲ್ಲಿವೆ. ಪೀಠವಿಲ್ಲದ ಈ ಬಗೆಯ ಲಿಂಗಗಳು ಸಾಮಾನ್ಯವಾಗಿ ಸಮಾನ ಎತ್ತರದ ಮೂರು ಭಾಗಗಳು ಶಿವಪುರಾಣದ ಪ್ರಕಾರ ತಲಾ ಒಂದು ಭಾಗ ಶಿವ, ವಿಷ್ಣು ಮತ್ತು ಬ್ರಹ್ಮ ದೇವರನ್ನು (ಏಕ ಶಿಲೆಯಲ್ಲಿ) ಪ್ರತಿನಿಧಿಸುತ್ತವೆ. ಅದರ ಕೆಳಭಾಗ ಚೌಕಾಕಾರ, ಮಧ್ಯಭಾಗ ಅಷ್ಟಮುಖ, ಮೇಲ್ಭಾಗ ನಯವಾಗಿರುತ್ತದೆ. ಮೇಲಿನ ಅರ್ಧವೃತ್ತಾಕಾರ ಮುಖದಲ್ಲಿ ಬ್ರಹ್ಮಸೂತ್ರಗಳ ರೇಖೆಗಳಿರುತ್ತವೆ. (ಸು. ಕ್ರಿ. ಶ. ೧೧-೧೨ನೇ ಶತಮಾನ).

ಗಣೇಶ : ನಗರದಲ್ಲಿ ಒಟ್ಟು ೪೫ ಗಣೇಶನ ಶಿಲ್ಪಗಳಿವೆ. ಅವುಗಳು ಕುಳಿತ/ನೃತ್ಯ ಭಂಗಿಯಲ್ಲಿವೆ. ಒಂದೆಡೆ ಮಾತ್ರ ಗಣೇಶ ಸಿದ್ಧಿ ಸಂಗಡ ಕುಳಿತಿದ್ದಾನೆ. ಅಲ್ಲಿ ಗಣೇಶನ ದ್ವಿಭುಜ/ಚತುರ್ಭುಜಧಾರಿ ಶಿಲ್ಪಗಳಿವೆ. ದ್ವಿಭುಜ ಗಣೇಶನ ಶಿಲ್ಪಗಳು ವಿರಳ.

ದ್ವಿಭುಜ ಗಣೇಶ : ಒಂದೇ ದ್ವಿಭುಜಧಾರಿ ಗಣೇಶ ಅಲ್ಲಿದೆ: ಆತನ ಕೈಗಳಲ್ಲಿ ದಂತ ಮತ್ತು ಮೋದಕಗಳಿವೆ. ಕುಳಿತ ಭಂಗಿ ವಸ್ತ್ರಾಭರಣಗಳನ್ನು ಧರಿಸಿರುವನು. ಭಾಲ್ಕಿ ಭಾಗದಲ್ಲಿ ಈ ಮಾದರಿಯ ಗಣೇಶನ ಶಿಲ್ಪ ಸ್ವಲ್ಪ ಅಧಿಕ.

ನೃತ್ಯ ಗಣೇಶ : ಎರಡು ನೃತ್ಯ ಗಣೇಶನ ಶಿಲ್ಪಗಳಿವೆ. ಒಂದು ಚತುರ್ಭುಜ ಇನ್ನೊಂದು ಅಷ್ಠ ಭುಜ. ವಸ್ತ್ರಾಭರಣಗಳನ್ನು ಧರಿಸಿರುವನು. ತನ್ನ ಕೈಗಳಲ್ಲಿ ವಿಭಿನ್ನ ಉಪಕರಣಗಳನ್ನು ಹಿಡಿದು ನೃತ್ಯ ಭಂಗಿಯಲ್ಲಿರುವನು.



ಗಣೇಶನ ವಿಶಿಷ್ಠ ಶಿಲ್ಪಗಳು : ಶಿವಪುರದ ಶಿವ ದೇವಾಲಯದಲ್ಲಿರುವ ಗಣೇಶನ ಕೆಳಗಡೆ ಆತನ ವಾಹನ ಇಲಿಯಿದೆ. ಅದು ಬಾಯಲ್ಲಿ ಮೋದಕವನ್ನು ಕಚ್ಚಿದೆ. ಇನ್ನೊಂದು ಕಡೆ ಒಬ್ಬ ಭಕ್ತ ಕೈಮುಗಿದು ಕುಳಿತಿದ್ದಾನೆ. ಕೆಲವು ಗಣೇಶನ ಶಿಲ್ಪಗಳಲ್ಲಿ ಆತನ ದೇಹಕ್ಕೆ ನಾಗಸರ್ಪದಿಂದ ಯಜ್ಞೋಪವೀತವನ್ನು ಕಟ್ಟಲಾಗಿದೆ. ಅಂಥ ಶಿಲ್ಪ ಬಸವಕಲ್ಯಾಣದ ಮಹದೇವನ ಗುಡಿ ಮತ್ತು ನಾರಾಯಣಪುರ ಇತ್ಯಾದಿ ಸ್ಥಳಗಳಲ್ಲಿವೆ. ಬಸವಕಲ್ಯಾಣದ ಗಣೇಶವಾಡಿಯಲ್ಲಿ ಭವ್ಯವಾದ ಗಣೇಶನಿದ್ದಾನೆ. ಗೋಡೆಯಲ್ಲಿಟ್ಟಿರುವ ಈ ವಿಗ್ರಹದಲ್ಲಿ ಗಣೇಶನ ಕೈಗಳಲ್ಲಿ ದಂತ, ಪರಶು, ಕಮಲ ಮತ್ತು ಮೋದಕಗಳಿವೆ. ಆತನು ಕಿರೀಟಮುಕುಟ, ಕುಂಡಲ ಇನ್ನಿತರ ವಸ್ತ್ರಾಭರಣಗಳನ್ನು ಧರಿಸಿರುವನು. ಮಕರ ತೋರಣದ ಅಲಂಕಾರವಿದೆ. ಈ ಕಾಲದ ಗಣೇಶನ ಶಿಲ್ಪಗಳು ವಿರಳ ಹಾಗೂ ಬೀದರ ಜಿಲ್ಲೆಯಲ್ಲೇ ಉಮಾಪುರದ ಗಣೇಶನ ನಂತರ ಇದು ಅತ್ಯಂತ ದೊಡ್ಡ ಶಿಲ್ಪ ! (ಸು. ಕ್ರಿ.ಶ. ೧೫ನೇ ಶತಮಾನ).

ಸಿದ್ಧಿ-ಗಣೇಶ : ಪತ್ನಿಸಮೇತ ಗಣೇಶನ ಶಿಲ್ಪವೊಂದು ನಗರದ ಬಸವೇಶ್ವರ ಶಿಶುವಿಹಾರ ಶಾಲೆಯ ಮುಂದಿದೆ. ಪತ್ನಿ ಸಿದ್ಧಿಯನ್ನು ಗಣೇಶ ತನ್ನ ತೊಡೆಯ ಮೇಲೆ ಕೂಡಿಸಿಕೊಂಡಿದ್ದಾನೆ. ಅವಳ ಮುಖಭಾಗ ಶಿಥಿಲವಾಗಿದೆ. ವಸ್ತ್ರಾಭರಣಗಳನ್ನು ಧರಿಸಿರುವರು (ಸು. ಕ್ರಿ.ಶ. ೧೨ನೇ ಶತಮಾನ).

ಪಾದ ಪೀಠಗಳು : ಪಾದಗಳುಳ್ಳ ಪೀಠಗಳು ಅಥವಾ ಆವಿಗೆ ಚಿತ್ರಗಳುಳ್ಳ ಪೀಠಗಳು ನಗರದಲ್ಲಿ ಅನೇಕ ಕಡೆಗಳಿವೆ. ಅವು ಆಚಾರ್ಯ/ಮುನಿವರ್ಯರ ನೆನಪಿನ ಪಾದಪೀಠಗಳಿರಬೇಕು.

ನಟರಾಜ : ನಟರಾಜನ ಪ್ರತ್ಯೇಕ ಶಿಲ್ಪಗಳಿವೆ. ಕೆಲವು ಗೋಡೆ ಶಿಲ್ಪಗಳಾಗಿವೆ. ಚತುರ್ಭುಜ ಮತ್ತು ಅಷ್ಟಭುಜಗಳ ನೃತ್ಯಭಂಗಿಯ ನಟರಾಜನ ಶಿಲ್ಪಗಳಿವೆ. ಕೋಟೆಯ ಮ್ಯೂಜಿಯಂ ಒಳಗಿನ ನಟರಾಜನಿಗೆ ಎಂಟು ಕೈಗಳಿವೆ. ಅವುಗಳಲ್ಲಿ ವರದ (ಜಪಮಾಲೆ), ಮೇಲಿನ ಎರಡೂ ಕೈಗಳಲ್ಲಿ ನಾಗಸರ್ಪ ಹಿಡಿದಿರುವನು. ಕಾಲುಗಳು, ಬಲಗಡೆಯ ಮತ್ತು ಎಡಗಡೆಯ ಮೂರು ಕೈಗಳು ಮುರಿದಿವೆ. ಸುರನ ಮೇಲೆ ಶಿವ ನೃತ್ಯ ಮಾಡುತ್ತಿರುವನು. ಸರಳ ಹೂವಿನ ತೋರಣ ಬದಿಗಳಲ್ಲಿ ಸಿಂಹಗಳನ್ನೂ (ಮೇಲ್ಗಡೆ) ವಾದ್ಯಗಾರ, ನೃತ್ಯಗಾರ್ತಿ, ಭಕ್ತರನ್ನು ಕೆಳಗಡೆ ತೋರಿಸಲಾಗಿದೆ. ಮಲಗಿದ ಸುರನ ಕೈಯಲ್ಲಿ ಖಡ್ಗವಿದೆ. ಸುಂದರ ಪ್ರಭಾಮಂಡಲವಿದೆ. ವಿಶಿಷ್ಟ ರೀತಿಯ ಕರ್ಣಕುಂಡಲ, ಕೊರಳಹಾರ, ಯಜ್ಞೋಪವೀತ, ಸೊಂಟಪಟ್ಟಿ, ಹಾರ, ಬಳೆ-ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಆತನನ್ನು ಅರ್ಧಗಂಬಗಳ ಮಧ್ಯೆ ಚಿತ್ರಿಸಲಾಗಿದೆ. ಬಲಗಡೆ ಮತ್ತು ಮೇಲೆ ಸೇವಕರಿದ್ದಾರೆ. ಈ ಶಿಲ್ಪವು ಆಯತಾಕಾರದಲ್ಲಿದೆ. ಅದು ಶಿಥಿಲಗೊಂಡ ದೇವಾಲಯದ ಗೋಡೆಫಲಕ.

ಸದಾನಂದಮಠ ಹತ್ತಿರದ ಬಾವಿಗೋಡೆಯಲ್ಲಿ ಈ ರೀತಿಯ ನಟರಾಜನ ಶಿಲ್ಪವಿದೆ. ಕೆಳಗೆ ವಾದ್ಯಮೇಳ ಹಾಗೂ ಭಕ್ತರಿದ್ದಾರೆ. ಆತ ಸುರನ ಮೇಲೆ ನಿಂತು ನೃತ್ಯ ಮಾಡುತ್ತಿರುವನು. ಅಲ್ಲಿಯ ಗೋಡೆ ಫಲಕದಲ್ಲಿ ನಟರಾಜನಿದ್ದಾನೆ. ಅವನ ಕೈಗಳಲ್ಲಿ ಜಪಮಾಲೆ (ಅಭಯಹಸ್ತ), ಡಮರು, ನಾಗ (ಮೇಲಿನ ಕೈಗಳಲ್ಲಿ), ಖಟ್ವಾಂಗ ಮತ್ತು ಕಪಾಲಗಳಿವೆ. ಕಪಾಲದ ಸಂಗಡ ರುಂಡವಿದೆ. ನಂದಿಯ ಮೇಲೆ ನಿಂತು ನೃತ್ಯ ಮಾಡುತ್ತಿರುವನು? ಬಸವಕಲ್ಯಾಣ ಕೋಟೆಯ ಒಳಗಿನ ಎರಡು ಶಿಲ್ಪಗಳಲ್ಲಿ ನಟರಾಜನನ್ನು ತೋರಿಸಲಾಗಿದೆ. ವಾದ್ಯಮೇಳದವರ ಮಧ್ಯ ನೃತ್ಯ ಮಾಡುತ್ತಿರುವನು. ಆತನಿಗೆ ಎಂಟು ಕೈಗಳಿವೆ. ಜಪಮಾಲೆ, ಡಮರು, ನಾಗ, ಖಟ್ವಾಂಗ, ಕಪಾಲ ಇತ್ಯಾದಿ ಉಪಕರಣಗಳನ್ನು ಹಿಡಿದು ನೃತ್ಯಮಾಡುತ್ತಿರುವನು. ಆತನ ಬದಿಗೆ ನಂದಿಯಿದೆ.

ಗಜಮರ್ಧನ : ಬಸವಕಲ್ಯಾಣ ಮ್ಯೂಜಿಯಂನಲ್ಲಿ ಸುಂದರ ಗಜಮರ್ಧನ ಶಿಲ್ಪವಿದೆ. ಅದನ್ನು ಉಮಾಪುರದ ಶಿವದೇವಾಲಯದಿಂದ ತರಲಾಗಿದೆಯಂತೆ. ಎಂಟು ಕೈಯುಳ್ಳ ಶಿವನು ನೃತ್ಯಭಂಗಿಯಲ್ಲಿದ್ದಾನೆ. ಕೆಳಗಿನ ಎರಡೂ ಕೈಗಳು ಒಡೆದುಹೋಗಿವೆ.



ಬಲಗಾಲನ್ನು ಬಗ್ಗಿಸಿ ಎಡಗಾಲನ್ನು ಮೇಲೆತ್ತಿ ಮಡಿಚಿ ದೇಹವನ್ನು ಒಂದು ಕಡೆ ಬಗ್ಗಿಸಿಕೊಂಡು ಕೈಗಳನ್ನು ಎರಡೂ ಬದಿಗೆ ಹರಡಿಕೊಂಡು ನೃತ್ಯಮಾಡುತ್ತಿರುವನು. ತಲೆಗೂದಲನ್ನು ತಲೆಯ ಸುತ್ತಲೂ ಹರಡಿಕೊಂಡಿದ್ದಾನೆ. ಆ ಕೂದಲುಗಳ ಅಂಚುಗಳನ್ನು ಹೂವಿನ ದಳಗಳಂತೆ ಚಿತ್ರಿಸಲಾಗಿದೆ. ಮೇಲಿನ ಎರಡೂ ಬದಿಯ ಕೈಗಳನ್ನು ಮೇಲಕ್ಕೆತ್ತಿ, ಗಜಾಸುರನನ್ನು ಸಂಹಾರ ಮಾಡಿದ ನಂತರ ಗಜದ ಚರ್ಮವನ್ನು ಗಟ್ಟಿಯಾಗಿ ಮೇಲಕ್ಕೆತ್ತಿಕೊಂಡು ಹಿಡಿದಿರುವನು. ಉಳಿದ ಆರು ಕೈಗಳಲ್ಲಿ ಬಲಗಡೆಯ (ಕೆಳಗಿನಿಂದ) ಎರಡನೇ-ಮೂರನೇ ಕೈಗಳಲ್ಲಿ ತ್ರಿಶೂಲವಿದೆ. ಇನ್ನೊಂದು ಕೈಯಲ್ಲಿ ಡಮರಿದೆ. ಎಡಗಡೆಯಲ್ಲಿ (ಮೇಲಿಂದ) ಎರಡನೇ ಕೈಮೇಲಕ್ಕೆತ್ತಿ ಗಜದ ಚರ್ಮ ಹಿಡಿದಿರುವನು. ಮೂರನೇ ಕೈಯಲ್ಲಿ ವೃತ್ತಾಕಾರದ ಗುರಾಣಿಯಿದೆ. ಕೊನೆಯ ಕೈಯಲ್ಲಿ ಕಪಾಲವಿದೆ (ಒಡೆದಿದೆ). ಗಜದ ಚರ್ಮವನ್ನು ಹೊತ್ತ ಲಕ್ಷಣವನ್ನು ಮೇಲ್ಗಡೆ ದಪ್ಪವಾಗಿ ಅಂಚಿನಲ್ಲಿ ತೋರಿಸಲಾಗಿದೆ. ಕಿವಿಯಲ್ಲಿ ಓಲೆಗಳು, ದೇಹದ ಮೇಲೆ ಯಜ್ಞೋಪವೀತ, ಕೊರಳಲ್ಲಿ ಹಾರ, ದೊಡ್ಡಹಾರ, ಸೊಂಟಪಟ್ಟಿ, ಕಟಿಸೂತ್ರ, ಕಡಗ, ಕೈಬಳೆ, ತೋಳುಬಳೆಗಳನ್ನು ಧರಿಸಲಾಗಿದೆ. ಎರಡೂ ಬದಿಗಳಲ್ಲಿ ಕೆಳಗೆ ಒಟ್ಟು ಇಬ್ಬರು ವಾದ್ಯಮೇಳದವರಿದ್ದಾರೆ. ಮೊಟ್ಟೆಯಾಕಾರದ ಈ ಶಿಲ್ಪಕ್ಕೆ ಮಿತವಾದ



ತ್ರಿಪುರಾಂತಕ : ಬಸವಕಲ್ಯಾಣ ದಿಂದ ಹುಲಸೂರು ಕಡೆ ಹೋಗುವ ರಸ್ತೆ ಬದಿಯಲ್ಲಿ ಚಿಕ್ಕ ಈಶ್ವರ ಗುಡಿಯ ಗೋಡೆಯಲ್ಲಿ ಮತ್ತು ಬಸವಕಲ್ಯಾಣದಿಂದ ನಾರಾಯಣಪುರಕ್ಕೆ ಹೋಗುವ ಹಾಲುಬಸವ ಮಂದಿರದ ಗೋಡೆಯಲ್ಲಿ ತ್ರಿಪುರಾಂತಕನ ಶಿಲ್ಪಗಳಿವೆ. ಈ ಶಿಲ್ಪಗಳಲ್ಲಿ ಚತುರ್ಭುಜ ಶಿವನು ತಲೆಯನ್ನು ಮೇಲಕ್ಕೆತ್ತಿ ಬಿಲ್ಲನ್ನು ಹಿಡಿದು ನಿಂತಿರುವನು. ಎಡಗಾಲನ್ನು ಮೇಲಕ್ಕೆತ್ತಿ ಕೆಳಗಡೆ ಕುಳಿತ ನಂದಿಯ ಮೇಲಿಟ್ಟಿದ್ದಾನೆ. ಬಲಗಾಲು ನಂದಿಯ ಬಾಲದ ಪಕ್ಕದಲ್ಲಿದೆ. ಕೆಳಗಿನ ಬಲಗೈಯನ್ನು ಎದೆಯ ಮೇಲಿಟ್ಟಿದ್ದು, ಮೇಲಿನ ಬಲಕೈಯಿಂದ ಎದೆಗೆ ಹಿಂದೆ ಕಟ್ಟಿದ ಬಾಣವನ್ನು ಹಿಡಿದಿರುವನು.

ಕೆಳಗಿನ ಕೈ (ಎಡ) ಸ್ವಲ್ಪ ಒಡೆದಿದೆ. ಬಲಗಾಲಿನ ಬದಿಗೆ ಸವ್ಯಲಲಿತಾಸನದಲ್ಲಿ ಪಾರ್ವತಿಯಿದ್ದು ಬಿಲ್ಲಿನ ಮೇಲ್ಗಡೆ ಒಬ್ಬ ವ್ಯಕ್ತಿಯ ಮುಖವನ್ನು ಚಿಕ್ಕಗೂಡಿನಲ್ಲಿ ತೋರಿಸಲಾಗಿದೆ. ಬಹುಶಃ ಆ ಗೂಡು ಕಮಾನದ ಸುಕನಾಶಿಯಾಗಿರಬೇಕು. ಮೂರು ಚಿಕಣಿಯಾಕಾರದ ವಿಮಾನಗಳಿವೆ. ಧರಿಸಿದ ಜಟಾಮುಕುಟ, ಕಿವಿಓಲೆ, ಮಣಿ, ಹಾರಗಳ ಕಟಿಬಂಧ, ಹಾರ, ಕಡಗ, ಕೈಬಳೆ, ತೋಳಬಳೆ, ಇತ್ಯಾದಿ ವಸ್ತ್ರಾಭರಣಗಳಿವೆ. ಶಿಲ್ಪದ ಕಾಲ ಸುಮಾರು ಕ್ರಿ.ಶ. ೧೧-೧೨ನೇ ಶತಮಾನ.

ಕ್ರಿ.ಶ. ಸುಮಾರು ೭ನೇ ಶತಮಾನದ ಪಟ್ಟದಕಲ್ಲಿನ ತ್ರಿಪುರಾಂತಕ (ಶಿವ)ನಿಗೆ ಅಷ್ಟಭುಜಗಳಿವೆ. ಮುಖ್ಯವಾಗಿ ಬಿಲ್ಲನ್ನು ಹಿಡಿದು ಮೇಲಕ್ಕೆ ಬಾಣವನ್ನು ಹೊಡೆಯುವ ದೃಶ್ಯವಿದೆ. ಬಾಣ ತುದಿಯಲ್ಲಿ ಮೇಲ್ಗಡೆ ಚಿಕಣಿಯಾಕಾರದ ಮೂರು ವಿಮಾನಗಳಿವೆ. ಪಾರ್ವತಿ ಮತ್ತು ಬ್ರಹ್ಮರು ಅವನ ಬದಿಗಿರುವರು. ನಾಲ್ಕು ಕುದುರೆಯುಳ್ಳ ರಥದಲ್ಲಿ ಶಿವನು ನಿಂತಿದ್ದಾನೆ. ಅವು ನಾಲ್ಕು ವೇದಗಳನ್ನು ಸೂಚಿಸುತ್ತವೆ.

ಬಸವಕಲ್ಯಾಣದ ತ್ರಿಪುರಾಂತಕ (ಶಿವ) ಶಿಲ್ಪದಲ್ಲಿ ಮೇಲೆ ತಿಳಿಸಿದ ಮುಖ್ಯ ಲಕ್ಷಣಗಳು ಈ ರೀತಿಯಿವೆ : ರಥದ ಬದಲು ನಂದಿಯನ್ನು ಮೆಟ್ಟಿ ನಿಂತಿರುವನು. ಅಷ್ಟಭುಜದ ಬದಲು ಚತುರ್ಭುಜಗಳಿವೆ. ಬದಿಗೆ ಪಾರ್ವತಿಯಿರುವಳು. ಮೂರು ಕಿರು ವಿಮಾನಗಳಿವೆ. ಸುಕನಾಸಿಯಲ್ಲಿ ಒಂದು ಮುಖವಿದೆ ಅದು ಹೊಸದೆನಿಸಿದೆ. ಕಾಲಮಾನದಲ್ಲಿ ವ್ಯತ್ಯಾಸವಿದ್ದರೂ ಅದು ಕ್ರಿ.ಶ. ಸುಮಾರು ೧೧ನೇ ಶತಮಾನದ್ದು. ಈ ರೀತಿಯ ಶಿಲ್ಪ ಈ ಭಾಗದಲ್ಲಿ ಕಾಣುವುದು ಅಪರೂಪ.

ಶಿವ: ದೇವಾಲಯಗಳ ಗೋಡೆ ಮತ್ತು ಗೂಡು ಫಲಕಗಳಲ್ಲಿ ಪ್ರತ್ಯೇಕ ಶಿವನ ಶಿಲ್ಪಗಳಿವೆ. ಸಮಭಂಗ ಅಥವಾ ಪದ್ಮಾಸನದಲ್ಲಿರುವನು. ತನ್ನ ಚತುರ್ಭುಜಗಳಲ್ಲಿ ಅಭಯ (ಜಪಮಾಲೆ), ತ್ರಿಶೂಲ, ನಾಗ ಮತ್ತು ಬಹುಬೀಜ ಫಲಗಳಿವೆ. ಜಟಾಮುಕುಟ, ಕರ್ಣಕುಂಡಲ, ವಿವಿಧ ಕೊರಳ ಹಾರಗಳು, ಯಜ್ಞೋಪವೀತ ಸೊಂಟಕ್ಕೆ ವಸ್ತ್ರ ಮತ್ತು ಪಟ್ಟಿ, ತೋಳಿನಲ್ಲಿ ಪಟ್ಟಿ, ಕೈ-ಕಾಲುಗಳಲ್ಲಿ ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳು ಸಾಮಾನ್ಯ.

ಆತನ ಬಲಗಡೆ ನಂದಿ ನಿಂತಿದೆ. ಎಡಕ್ಕೆ ಚೌರಿ ಹಿಡಿದ ಸೇವಕಿಯಿದ್ದಾಳೆ. ಸಮಭಂಗಿಯಲ್ಲಿ ನಿಂತ ಶಿವನ ಶಿಲ್ಪವು ಕೋಟೆ ಒಳಗಿದೆ. ಅಂಬಿಗರ ಚೌಡಯ್ಯನ ಮಠದ ಹೊರಗಡೆಯಲ್ಲಿ ಕುಳಿತ ಶಿವನ ಶಿಲ್ಪವಿದೆ. ಅಲ್ಲಿ ಮೇಲಿನ ಎಡಗೈಯಲ್ಲಿ ನಾಗನ ಬದಲು ಖಟ್ವಾಂಗಹಿಡಿದಿರು ವ'ನ'ು.

ಆದರೆ ಉರಿಲಿಂಗಪೆದ್ದಿ ಮಠದ ಹೊರಗೆ ಸವ್ಯಲಲಿತಾಸನದಲ್ಲಿ ಶಿವನು ಕುಳಿತಿರುವನು. ನಾಲ್ಕು ಕೈಗಳಲ್ಲಿ ಜಪಮಾಲೆ(ಅಭಯ), ತ್ರಿಶೂಲ, ನಾಗ ಮತ್ತು ಕಪಾಲಗಳಿವೆ. ಸದಾನಂದ ಮಠದ ಬಾವಿಯ ಗೋಡೆಯ ಶಿಲ್ಪವೊಂದರಲ್ಲಿ ಶಿವನು ಕುಳಿತ ಭಂಗಿಯಲ್ಲಿರುವನು. ಕೈಗಳಲ್ಲಿ ಅಭಯ, ತ್ರಿಶೂಲ, ಡಮರು ಮತ್ತು ಫಲಗಳಿವೆ.




ಕಾರ್ತಿಕೇಯ: ಬಸವಕಲ್ಯಾಣದ ಪರುಷಕಟ್ಟೆ ಹತ್ತಿರ ಮಾಲೀಪಾಟೀಲರ ಮನೆ ಮುಂದೆ ಒಂದು ಸುಂದರ ಕಾರ್ತಿಕೇಯ ವಿಗ್ರಹವಿದೆ. ಕಾರ್ತಿಕೇಯನ ಶಿಲ್ಪಗಳು ಕಡಿಮೆ. ಆತನಿಗೆ ಆರು ಮುಖಗಳು ಚತುರ್ಭುಜಧಾರಿ ಅಭಯ (ಜಪಮಾಲೆ), ಅಂಕುಶ, ಪಾಶ ಮತ್ತು ಫಲಗಳು ಕೈಗಳಲ್ಲಿವೆ. ಸವ್ಯಲಲಿತಾಸನದಲ್ಲಿ ಕುಳಿತಿದ್ದು ತನ್ನ ಎಡಗಾಲನ್ನು ಮಾತ್ರ ತನ್ನ ವಾಹನ ನವಿಲಿನ ಹಿಂದಿನ ರಕ್ಕೆಯ ಮೇಲೆ ಇಟ್ಟಿದ್ದಾನೆ. ಎಡಗಡೆಯ ಕೊನೆಯ ಮುಖ ಒಡೆದಿದೆ. ಕಾಮಿಕಾಗಮ ಪ್ರಕಾರ ಆಳುವ ಅರಸರ ರಾಜಧಾನಿಯಲ್ಲಿ ಕಾರ್ತಿಕೇಯ / ಸುಬ್ರಹ್ಮಣ್ಯನ ದೇವಾಲಯದ ಮೂರ್ತಿಗೆ ಆರು ಮುಖಗಳು ಇರುತ್ತವೆನ್ನಲಾಗಿದೆ. ಆರು ಕೈಗಳು, ಹನ್ನೆರಡು ಕಣ್ಣು ಮತ್ತು ಹನ್ನೆರಡು ಅಥವಾ ಆರು ಕಿವಿಗಳಿರುತ್ತವೆನ್ನಲಾಗಿದೆ. ಈ ರೀತಿಯ ಕಾರ್ತಿಕೇಯನ ವಿಗ್ರಹಗಳನ್ನು ಗ್ರಾಮ ಅಥವಾ ಪ್ರಾಸಾದದಲ್ಲಿ ನಿಲ್ಲಿಸಿರುತ್ತಾರೆ. ಅದಕ್ಕೆ ಹನ್ನೆರಡು ಕೈಗಳಿರುತ್ತವೆ. ಕೈಯಲ್ಲಿ ಯಾವ ಯಾವ ಉಪಕರಣಗಳಿರಬೇಕು ಎಂಬುದನ್ನು ಅದರಲ್ಲಿ ವಿವರಿಸಲಾಗಿದೆ (ಗೋಪಿನಾಥರಾವ್, ಭಾಗ-೨, ಪು. ೪೨೮-೨೯). ಹೀಗಾಗಿ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ ಈ ರೀತಿಯ ಕಾರ್ತಿಕೇಯ ಶಿಲ್ಪ ಸಿಕ್ಕಿರುವುದು ಕಲ್ಯಾಣ ರಾಜಧಾನಿಯ ವೈಶಿಷ್ಟ್ಯ ಇಲ್ಲಿಯೂ ಎದ್ದು ಕಾಣುತ್ತದೆ.

ಉಮಾಮಹೇಶ್ವರ: ಉಮಾ ಮಹೇಶ್ವರರ ಪ್ರತ್ಯೇಕ ಮತ್ತು ನಂದಿ ಮೇಲೆ ಕುಳಿತು ಸವಾರಿ ಮಾಡುವಶಿಲ್ಪಗಳಿವೆ. ಉಮೆಯನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡಿರುವಾ'ಂ. ಆತನ ವಾಹನ ನಂದಿಯಿರುತ್ತದೆ. ಮಹೇಶ್ವರ ಚತುರ್ಭುಜನಾಗಿದ್ದು ಕೈಗಳು ಅಭಯಹಸ್ತ (ಜಪಮಾಲೆ), ತ್ರಿಶೂಲ, ನಾಗ ಮತ್ತು ತೊಡೆಯ ಮೇಲೆ ಕೂಡಿಸಿಕೊಂಡ ಉಮೆಯನ್ನು ಹೆಗಲಮೇಲೆ ಕೈಹಾಕಿ ಅಪ್ಪಿಕೊಂಡಿರುವನು. ಉಮೆಯು ದ್ವಿಭುಜಧಾರಿಣಿ ಬಲಗೈಯಿಂದ ಮಹೇಶ್ವರನ ಸೊಂಟವನ್ನು ಹಿಡಿದು ಅಪ್ಪಿಕೊಂಡಿರುವಳು. ಎಡಗೈಯಲ್ಲಿ ಕಮಲ



ಹಿಡಿದಿರುವಳು. ಕೆಲವು ಶಿಲ್ಪಗಳಲ್ಲಿ ಅವರ ಕೆಳಗೆ ಅಥವಾ ಬದಿಗಳಲ್ಲಿ ಗಣೇಶ, ಕಾರ್ತಿಕೇಯ, ಭಕ್ತ, ವಾದ್ಯಮೇಳದವರ ಚಿತ್ರಗಳಿವೆ, ಉಮಾ-ಮಹೇಶ್ವರರ ಮೇಲ್ಗಡೆ ಹೂ-ಬಳ್ಳಿಯ ತೋರಣದ ಅಲಂಕಾರವಿವೆ. ಅವರ ದೇಹಬದಿಗಳಲ್ಲಿ ಮತ್ತು ಮೇಲ್ಗಡೆ ಮಧ್ಯದಲ್ಲಿ ಚಿಕಣಿಯಾಕಾರದ ಗೂಡುಗಳಿದೆ. ಅದರಲ್ಲಿ ಶಿವ, ಸೂರ್ಯ, ವಿಷ್ಣು ಮತ್ತು ಬ್ರಹ್ಮರ ಚಿತ್ರಗಳಿರುತ್ತವೆ. ಈ ಸಂಪ್ರದಾಯ ಮಧ್ಯ ಭಾರತದ ಲಕ್ಷಣವಾಗಿದೆ. ಶಿವ ದ್ವಿಭುಜಧಾರಿ ಉಳಿದವರು ಚತುರ್ಭುಜಧಾರಿಗಳು. ಉಮಾ-ಮಹೇಶ್ವರರು ವಸ್ತ್ರಾಭರಣಗಳಿಂದ ಅಲಂಕೃತ ಗೊಂಡಿದ್ದು ಮಹೇಶ್ವರ ಜಟಾಮುಕುಟ, ಕರ್ಣಕುಂಡಲ, ಕಂಠಹಾರ, ಸೊಂಟಪಟ್ಟಿ (ಕಟಿಸೂತ್ರ), ಯಜ್ಞೋಪವೀತ, ಬಳೆ, ನಾಗಬಂಧ, ಕಡಗಗಳನ್ನು ಉಮೆ ಕಿರೀಟಮುಕುಟ, ಕರ್ಣಕುಂಡಲ, ಹಾರ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವುದು ಸಾಮಾನ್ಯ.

ಶಿವಪುರದ ಶಿವಮಂದಿರ ಶಿಲ್ಪದಲ್ಲಿ ಉಮಾ-ಮಹೇಶ್ವರರು ನಂದಿಯ ಮೇಲೆ ಕುಳಿತಿರುವರು. ಮಹೇಶ ತನ್ನ ಎಡಗಾಲನ್ನು ವಾಹನ ನಂದಿಯ ಮೇಲೆ ಇಟ್ಟಿರುವನು. ಬಸವೇಶ್ವರ ಶಿಶುವಿಹಾರ ಶಾಲೆಯ ಆವರಣದ ಶಿಲ್ಪದಲ್ಲಿ ಈ ದಂಪತಿಗಳ ಕೆಳಗಡೆ ಸಿಂಹವಿದೆ. ಪೇಟೆ ರಸ್ತೆ ಬದಿಯ ಮಾರುತಿ ಮಂದಿರದ ಶಿಲ್ಪದಲ್ಲಿ ಉಮೆಯ ಕೆಳಗೆ ನಂದಿಯಿದೆ. ಮಹೇಶನು ತನ್ನ ಕೆಳ ಎಡಗೈಯಿಂದ ಉಮೆಯ ಕುಚವನ್ನು ಹಿಡಿದಿರುವನು. ಅವರ ಕೆಳಗೆ ಎಡಕ್ಕ ಚತುರ್ಭುಜ ಗಣೇಶ, ಮೇಲೆ ಚೌರಿ ಹಿಡಿದ ಸೇವಕ, ಮಹೇಶನ ತಲೆ ಬಲಕ್ಕೆ ಉಮೆ, ತಲೆ ಎಡಗಡೆ ಚೌರಿ ಹಿಡಿದ ಹೆಂಗಸು ಇರುವುದು ವಿಶೇಷ. ಕೋಟೆ ಒಳಗಿನ ಶಿಲ್ಪದಲ್ಲಿ ಕೆಳಗೆ ಎಡಗಡೆ ಕಾರ್ತಿಕೇಯ ಹಾಗೂ ಮೂರು ಚಿಕ್ಕ ಗೂಡುಗಳಲ್ಲಿ ಗರುಡ ಹೊತ್ತ ವಿಷ್ಣು ಸಮಭಂಗದಲ್ಲಿ ನಿಂತಿರುವನು. ಮೇಲ್ಭಾಗದಲ್ಲಿ ಬ್ರಹ್ಮ ನಿಂತಿರುವನು. ಇಬ್ಬರು ಭಕ್ತರು ಕೈಮುಗಿದು ಕುಳಿತಿದ್ದಾರೆ. ತ್ರಿಪುರಾಂತದ ಒಂದು ಮಠದ ಒಳಗಿನ ಗೋಡೆಯ ಶಿಲ್ಪದಲ್ಲಿ ಶಿವನು ನಂದಿಮೇಲೆ ಸವಾರಿ ಮಾಡುತ್ತಿರುವನು. ಶಿಲ್ಪ ಈ ಭಾಗದಲ್ಲಿ ವಿಶಿಷ್ಟವಾಗಿದೆ.



ನಂದಿ : ಸಾಮಾನ್ಯವಾಗಿ ಶೈವ ದೇವಾಲಯಗಳಲ್ಲಿ ಶಿವ ಲಿಂಗದ ಎದುರು ನಂದಿ ವಿಗ್ರಹ ಕೂಡಿಸುವರು. ಹೆಚ್ಚಾಗಿ ಅದನ್ನು ಸಭಾಮಂಟಪ ಅಥವಾ ಪ್ರತ್ಯೇಕ ತೆರೆದ ಮಂಟಪಗಳಲ್ಲಿ ಕೂಡಿಸಲಾಗುತ್ತದೆ. ಶಿಲ್ಪಗಳಲ್ಲಿ ಹೆಚ್ಚಾಗಿ ನಂದಿಯು ಕುಳಿತ ಭಂಗಿಯಲ್ಲಿರುತ್ತದೆ. ಇಲ್ಲಿ ನ ನಂದಿ ಶಿಲ್ಪಗಳ ಕಾಲ ಸು. ಕ್ರಿ.ಶ. ಸುಮಾರು ೧೧-೧೫ನೇ ಶತಮಾನ. ಇತ್ತೀಚಿನ ನಂದಿ ವಿಗ್ರಹಗಳೂ ಅಲ್ಲಿವೆ. ನಾರಾಯಣಪುರ ದಾರಿಯ ಬದಿಯಲ್ಲಿ ಹಾಲುಬಸವನ ಗುಡಿಯಲ್ಲಿರುವ ನಂದಿ ಬೀದರ ಜಿಲ್ಲೆಯಲ್ಲೇ ದೊಡ್ಡದು.



ಭೈರವ : ಬೀದರ, ಭಾಲ್ಕಿ ತಾಲೂಕುಗಳ ಹಲವಾರು ಹಳ್ಳಿಗಳಲ್ಲಿ ಅನೇಕ ಭೈರವನ ಶಿಲ್ಪಗಳಿವೆ. ಬಸವಕಲ್ಯಾಣದಲ್ಲಿ ಭೈರವನ್ ಶಿಲ್ಪಗಳು ಅಲ್ಪ ಪ್ರಮಾಣದಲ್ಲಿ ಕಾಣಿಸಿವೆ. ಭೈರವನು ತ್ರಿಭಂಗದಲ್ಲಿ ಬತ್ತಲೆಯಾಗಿ ನಿಂತಿರುವನು (ಉಂಗುರ ಕೂದಲು). ಕಿವಿಯಲ್ಲಿ ಕುಂಡಲ, ಕೊರಳಲ್ಲಿ ಸರ, ರುಂಡಮಾಲೆ, ಸೊಂಟಕ್ಕೆ ಗೆಜ್ಜೆಯ ಪಟ್ಟಿ, ಕಡಗ ಇತ್ಯಾದಿ ಆಭರಣಗಳನ್ನು ಧರಿಸಿರುವನು. ಕಲ್ಯಾಣ ಭಾಗದ ಭೈರವನ ಶಿಲ್ಪಗಳ ಕಾಲ ಸುಮಾರು ಕ್ರಿ.ಶ. ೧೧-೧೨ನೇ ಶತಮಾನ. ಕೋಟೆ ಹತ್ತಿರ ಗೀರ ಕುಟುಂಬದ ಮನೆಗಳಲ್ಲಿರುವ ಸಮಾಧಿಗಳ ಬದಿ ಕೆಲವು ಶಿಲ್ಪಗಳಿವೆ. ಅಲ್ಲಿಯ ಒಂದು ಶಿಲ್ಪದಲ್ಲಿ ಭೈರವ ಆವಿಗೆಗಳನ್ನು ಧರಿಸಿ, ನಾಗಬಂಧವನ್ನು ತೊಡೆಗೆ, ತಲೆಯ ಕೂದಲಿಗೆ ಧರಿಸಿ, ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲಗಳನ್ನು ಹಿಡಿದು ನಿಂತಿದ್ದಾನೆ. ಬದಿಗೆ ಬೇತಾಳ, ನಾಯಿ (ಎಡ) ಮತ್ತು ಚೌರಿ ಹಿಡಿದ ಸೇವಕಿಯರಿದ್ದಾರೆ. ಕಾಲ ಸು. ೧೨ನೇ ಶತಮಾನ.

ನಾರಾಯಣಪುರದ ದೇವಾಲಯಗಳು : ನಾರಾಯಣಪುರ ಬಸವಕಲ್ಯಾಣದಿಂದ ಕೇವಲ ಮೂರು ಕಿ.ಮೀ. ಅಂತರದಲ್ಲಿದ್ದು, ಅಲ್ಲಿಯ ಶಿವದೇವಾಲಯು ಮಹತ್ವದ್ದೆನಿಸಿದೆ. ಅಲ್ಲಿಯ ಇನ್ನಿತರ ದೇವಾಲಯಗಳು ಘಟ್ಟಿವಾಳಯ್ಯ, ಮುದ್ದಯ್ಯ, ಬೋರಯ್ಯ, ಸಕಲೇಶ

ಮಾದರಸ, ಮೃತ್ಯುಂಜಯ, ಮುಗ್ಧಸಂಗಯ್ಯ (ಜೀವಂತ ಸಮಾಧಿ), ರೇವಣ ಸಿದ್ಧಯ್ಯ ಮಲ್ಲಿಕಾರ್ಜುನ (ಮಲಕಾರ್ಜದೇವರು).

ಶಿವದೇವಾಲಯ : ಶಿವದೇವಾಲಯವು ಪೂರ್ವಕ್ಕೆ ಮುಖವಾಗಿದೆ. ಎತ್ತರದ ಅಧಿಷ್ಠಾನವನ್ನು ಹೊಂದಿದೆ. ಶಿಖರದ ಭಾಗ ಈಗ ಇರುವುದಿಲ್ಲ. ಅದು ಮೂಲತಃ ತ್ರಿಕೂಟ ಮಾದರಿಯಲ್ಲಿದ್ದಿತು. ಸಭಾಮಂಟಪದ ತಳಪಾಯದಲ್ಲಿ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಗರ್ಭಗೃಹಗಳ ಕುರುಹುಗಳಿವೆ. ಅದನ್ನು ಸಂಪೂರ್ಣವಾಗಿ



ಪರಿವರ್ತಿಸಲಾಗಿದೆ. ಮಧ್ಯದ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳು ಸುಸ್ಥಿತಿಯಲ್ಲಿ ಉಳಿದಿವೆ. ಗರ್ಭಗೃಹದ ಮಧ್ಯ ವೃತ್ತಾಕಾರದ ಪೀಠದಲ್ಲಿ ಶಿವಲಿಂಗ ಇದೆ. ಮೇಲಿನ ಭಾಗ ಇತ್ತೀಚಿನದು. ಗರ್ಭಗೃಹದ ನೆಲವು ಒಡೆದಿದೆ. ಛತ್ತಿನಲ್ಲಿ ಪದ್ಮದ ಅಲಂಕರಣವಿದೆ. ಉತ್ತರ ಗೋಡೆಯ ಒಳಭಾಗದಲ್ಲಿ ಶಿಲಾಹಲಗೆಯನ್ನು ಮುಂದೆ ಚಾಚಿ ಕೂಡಿಸಲಾಗಿದೆ. ಹೊಸ್ತಿಲ ಮುಖಭಾಗದಲ್ಲಿ ಸಾಲಾಗಿ ಮೂರು ಗೂಡುಗಳು ಅದರಲ್ಲಿ ನೃತ್ಯಗಾರ, ಬದಿಗಳಲ್ಲಿ ಮದ್ದಳೆ ಬಾರಿಸುವವರಿದ್ದಾರೆ. ಮುಂದೆ ಅಲಂಕರಣವುಳ್ಳ ಚಂದ್ರಶಿಲೆಯಿದೆ. ದ್ವಾರಪಟ್ಟಿಯಲ್ಲಿ ಆರು ಶಾಖೆಗಳು ಪಟ್ಟಿಕೆಗಳ ಕೆಳಭಾಗದಲ್ಲಿ ದ್ವಾರಪಾಲಕ, ಸೇವಕ-ಸೇವಕಿಯರು, ಒಬ್ಬಳು ಕಮಲ ಮತ್ತು ಪೂರ್ಣ ಕುಂಭವನ್ನು, ಇನ್ನೊಬ್ಬಳು ಚೌರಿಯನ್ನು, ಇಬ್ಬರು ಚೌರಿ ಮತ್ತು ಫಲಗಳನ್ನು ಮತ್ತೊಬ್ಬನು ಚೌರಿಯನ್ನು ಹಿಡಿದು ನಿಂತಿರುವರು. ಒಬ್ಬ ದ್ವಾರಪಾಲಕನ ಮೇಲಿನ ಎರಡೂ ಕೈಗಳು ಶಿಥಿಲವಾಗಿವೆ. ಕೆಳಗಿನ ಕೈಗಳಲ್ಲಿ ಗದೆ ಮತ್ತು ಕಮಲಗಳಿವೆ. ಇನ್ನೊಂದು ಪಟ್ಟಿಕೆಯೂ ಇದೇ ರೀತಿಯಲ್ಲಿದೆ. ಆದರೆ ಆತನ ಕೆಳಗಿನ ಎರಡೂ ಕೈಗಳು ಮುಕ್ಕಾಗಿವೆ. ಮೇಲಿನ ಕೈಗಳಲ್ಲಿ ಚಕ್ರ ಮತ್ತು ಶಂಖಗಳಿವೆ. ಬದಿಗೆ ಕಮಲ ಮತ್ತು ಕಳಸ ಹಿಡಿದು ನಿಂತ ಸೇವಕಿ ಮತ್ತು ಚೌರಿ ಮತ್ತು ಫಲ ಹಿಡಿದು ನಿಂತ ಸೇವಕಿ, ಕಮಂಡಲ ಮತ್ತು ಚೌರಿ ಹಿಡಿದ ಸೇವಕಿಯರು ಹಾಗೂ ಎರಡೂ ಕೈಗಳಲ್ಲಿ ಚೌರಿಯನ್ನು ಮೇಲಕ್ಕೆತ್ತಿ ಹಿಡಿದು ನಿಂತ ಸೇವಕಿಯರಿದ್ದಾರೆ. ಬದಿಗೆ ನಿಂತ ಸೇವಕನ ಕೈಯಲ್ಲಿ ಚೌರಿಯಿದೆ. ದ್ವಾರಪಾಲಕರ ಕೈಗಳಲ್ಲಿ ಶಂಖ ಮತ್ತು

ಚಕ್ರಗಳಿರುವುದರಿಂದ ಅವರು ವೈಷ್ಣವ ದ್ವಾರಪಾಲಕರೆಂದು ಮತ್ತು ಅದು ವೈಷ್ಣವ ದೇವಾಲಯವೆಂದು ಸ್ಪಷ್ಟವಾಗುತ್ತದೆ. ದ್ವಾರಪಟ್ಟಿಯ ಆರು ಶಾಖೆಗಳಲ್ಲಿ ವಿಭಿನ್ನ ಚಿತ್ರಗಳಿವೆ. ಮೊದಲನೆಯ ಶಾಖೆಯು ಲಲಾಟ ಭಾಗದಲ್ಲೂ ವಿಸ್ತರಿಸಿದೆ. ಅದರಲ್ಲಿ ಕೆಳಗಿನಿಂದ ಮೇಲಿನವರೆಗೆ ಸ್ತ್ರೀಪುರುಷರ ಚಿತ್ರಗಳಿವೆ. ಆದರೆ ಲಲಾಟಪಟ್ಟಿಯಲ್ಲಿ ಕಿನ್ನರರು ಹೂವಿನ ಹಾರ ಹಿಡಿದಿರುವರು. ಉಳಿದ ಶಾಖೆಗಳಲ್ಲಿ ಅರ್ಧಗಂಭ, ಸಿಂಹಗಳ ಸಾಲು,



ಅರ್ಧ ಮನುಷ್ಯ-ಅರ್ಧ ಪ್ರಾಣಿ ರೂಪದ ನಾಗ-ನಾಗಿಣಿಯರ ಸಾಲು ಮತ್ತು ಪತ್ರಗಳ ಸಾಲಿದೆ. ಕೊನೆಯಲ್ಲಿ ಪತ್ರದ ಶಾಖೆಯ ಅಲಂಕರಣ ಉತ್ತರಾಂಗ ಬುಡ ಪಟ್ಟಿಕೆಯಲ್ಲೂ ವಿಸ್ತರಿಸಿದೆ. ಲಲಾಟ ಪಟ್ಟಿಕೆಯ ಮಧ್ಯ ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿದ್ದಾಳೆ. ದ್ವಿಭುಜಧಾರಿಣಿಯಾದ ಈಕೆಯ ಕೈಗಳಲ್ಲಿ ಪದ್ಮಗಳಿವೆ.

ಉತ್ತರಾಂಗ ಪಟ್ಟಿಯಲ್ಲಿ ಸಾಲಾಗಿ ಅರ್ಧಗಂಬಗಳುಳ್ಳ ಐದು ಗೂಡುಗಳಿವೆ. ಗೂಡುಗಳಲ್ಲಿ ಮತ್ತು ಅವುಗಳ ಬದಿಗಳಲ್ಲಿ ಕಿರು ಆಕಾರದ ಒಂಬತ್ತು ಚಿತ್ರಗಳಿವೆ. ಅವುಗಳು ಅಷ್ಟ ಮಾತೃಕೆಯರದ್ದಾಗಿವೆ. ಕ್ರಮವಾಗಿ ವೀರಭದ್ರ, ಬ್ರಾಹ್ಮೀ, ಭೈರವಿ, ಮಹೇಶ್ವರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಕೌಮಾರಿ ಮತ್ತು ಗಣೇಶ ಶಿಲ್ಪಗಳಿವೆ. ಗೂಡುಗಳಲ್ಲಿ ತಲಾ ಒಂದರ ಬದಿಗಳಲ್ಲಿ ಆನೆ ಮತ್ತು ಸಿಂಹಗಳಿವೆ.

ಎರಡು ಉದ್ದ ಕಂಬಗಳುಳ್ಳ ತೆರೆದ ಅಂತರಾಳ. ಮುಂದೆ ಎರಡು ಕಂಬಗಳು ಅವುಗಳ ಬೋದುಗೆ ಮತ್ತು ತೊಲೆಗೆ ಹೊಂದಿಸಿ ಮದನಿಕೆಯರ ಶಿಲ್ಪಗಳನ್ನು ಕೂಡಿಸಲಾಗಿದೆ. ಛತ್ತಿನಲ್ಲಿ ಮೊಟ್ಟೆಯಾಕಾರದ ಪದ್ಮದ ಅಲಂಕರಣವಿದೆ. ಮಧ್ಯದಲ್ಲಿ ಮೂರು ಪದ್ಮ ವೃತ್ತಗಳಿವೆ. ಅದರ ಮೂಲೆಗಳಲ್ಲಿ ಕೀರ್ತಿಮುಖಗಳ ಚಿತ್ರಪಟ್ಟಿಕೆಗಳಿವೆ. ಒಬ್ಬ ಮದನಿಕೆಯ ಕೈಗಳಲ್ಲಿ ಕಮಲ ಮತ್ತು ಗಿಳಿಗಳಿವೆ. ಅವಳ ಕೆಳಗಡೆ ಸೇವಕಿ ನಿಂತಿದ್ದಾಳೆ. ಇನ್ನೊಂದರಲ್ಲಿ ಮದನಿಕೆಯ ಮೈಮೇಲೆ ಹತ್ತಿದ ಮಂಗವನ್ನು ಆಕೆ ಕೋಪಿಷ್ಠಳಾಗಿ ಹೊಡೆಯಲು ಒಂದು ಕೋಲನ್ನು ಹಿಡಿದು ನಿಂತಿದ್ದಾಳೆ. ತನ್ನ ಇನ್ನೊಂದು ಕೈಯಲ್ಲಿ ಚೌರಿ ಹಿಡಿದಿದ್ದಾಳೆ. ಅವಳ ಕೊರಳಲ್ಲಿ ರುದ್ರಾಕ್ಷಿ ಸರಮಾಲೆಯಿದೆ. ಹೊರಗಿನ ಅರ್ಧಗಂಬಗಳಿಗೆ

ಕೆಳಗಿನಿಂದ ಮೇಲಕ್ಕೆ ಚಿತ್ರಗಳಿವೆ. ಉತ್ತರ ಮುಖದಲ್ಲಿ ಗಣೇಶ, ಸರಸ್ವತಿ ಮತ್ತು ಕೀರ್ತಿಮುಖ, ಪೂರ್ವಮುಖದಲ್ಲಿ ವಾದ್ಯಮೇಳ, ಚೌರಿ ಹಿಡಿದ ಸೇವಕಿ ಮತ್ತು ಕೀರ್ತಿಮುಖ ; ಎಡಗಡೆಯ ಅರ್ಧಗಂಭದ ದಕ್ಷಿಣ ಮುಖದಲ್ಲಿ ಮದ್ದಳೆಗಾರ ಮತ್ತು ಕೀರ್ತಿಮುಖ ಹಾಗೂ ಪೂರ್ವಮುಖದಲ್ಲಿ ಕಮಲ ಹಿಡಿದು ನಿಂತ ಭೂದೇವಿ ನಾಟ್ಯ ಸರಸ್ವತಿ ಮತ್ತು ಕೀರ್ತಿಮುಖ ಚಿತ್ರಗಳಿವೆ. ಪ್ರತಿಯೊಂದು ದೇವತೆಗಳ ಬದಿಗಳಲ್ಲಿ ಸೇವಕರಿದ್ದಾರೆ. ಸಭಾಮಂಟಪದ ಮಧ್ಯದಂಕಣದಲ್ಲಿ ನಾಲ್ಕು ಕಂಬಗಳಿವೆ. ಕಂಬಗಳಿಗೆ ಪೀಠ, ಕಾಂಡದಲ್ಲಿ ಎರಡು ಚೌಕ, ಕಂಠ ಮತ್ತು ಬೋಧಿಗೆಗಳಿವೆ. ಚೌಕಪಟ್ಟಿಯಲ್ಲಿ ಹಾರಗಳಿವೆ. ಬೋಧಿಗೆಯಲ್ಲಿ ಚತುರ್ಭುಜ ಕುಬ್ಜರಿದ್ದಾರೆ. ಸಭಾಮಂಟಪದ ಮಧ್ಯ ಗರ್ಭಗುಡಿಗೆ ಮುಖವಾಗಿ ನಂದಿಯನ್ನು ಕೂಡಿಸಲಾಗಿದೆ. ಮುಂಭಾಗದ ಗೋಡೆ ಭಾಗ ತೆರೆದಿದ್ದು ಅಲ್ಲಿ ಎತ್ತರದ ಗೋಡೆ ಅದರ ಉತ್ತರ ಮತ್ತು ದಕ್ಷಿಣ ಗೋಡೆ ಭಾಗಗಳನ್ನು ಬದಲಿಸಿ ಕಟ್ಟಲಾಗಿದೆ. ಸುಂದರವಾದ ಕಮಲದ ಅಲಂಕರಣ ಎರಡು ಸ್ಥರಗಳಲ್ಲಿದೆ. ಅದು ನಕ್ಷತ್ರಾಕಾರದಲ್ಲಿದೆ. ಮೂಲೆಗಳಲ್ಲಿ ಕೀರ್ತಿಮುಖಗಳಿವೆ. ಹೊರಸುತ್ತಿನಲ್ಲಿ ಸಿಂಹ ಮುಖಗಳಿವೆ. ಸಭಾಮಂಟಪದ ಪ್ರವೇಶಗೋಡೆಗಳು ಸಮಾಂತರವಾಗಿ ಮುಂದಕ್ಕೆ (ಪೂರ್ವಕ್ಕೆ) ಚಾಚಿವೆ. ಅಲ್ಲಿ ಕಿರುಕಂಬಗಳುಳ್ಳ ಆಸನಗಳಿವೆ ಅದು ಕಕ್ಷಾಸನ. ಮುಖಮಂಟಪದ ಮುಂದುಗಡೆ ಎರಡು ಸುಂದರವಾದ ಒಂದು ಮಕರ ತೋರಣದ ಎರಡು ತುಂಡುಗಳಿವೆ. ತಲಾ ಒಂದರಲ್ಲಿ ಎರಡೂ ಮುಖಗಳ ಒಂದೇ ರೀತಿಯ ಚಿತ್ರಗಳು ಕಂಗೊಳಿಸುತ್ತಿದೆ. ಪ್ರಮುಖ ಚಿತ್ರಗಳು ಮಕರಗಳನ್ನೇರಿ ಕುಳಿತ ಸವಾರರು ಅಂಚಿನ ಸುತ್ತ ಸಿಂಹ ಸವಾರರು, ಸೈನಿಕರು ಇತ್ಯಾದಿ ಚಿತ್ರಗಳಿವೆ. ಇನ್ನೊಂದರ ಫಲಕದಲ್ಲಿ ಇದೇ ರೀತಿಯ ಕುಸುರು ಕೆತ್ತನೆಯ ಚಿತ್ರ ಹೊಯ್ಸಳರ ವಾಸ್ತುಶಿಲ್ಪವನ್ನು ನೆನಪಿಸುತ್ತದೆ. ದೇವಾಲಯದ ಪ್ರವೇಶಕ್ಕೆ ಮೆಟ್ಟಿಲುಗಳಿವೆ. ಮುಖಮಂಟಪ ಕಕ್ಷಾಸನದ ಹೊರ ಮುಖಗಳಲ್ಲಿ ಚಿತ್ರಗಳಿವೆ.



ಅವುಗಳು ಎರಡು ಸಾಲಿನಲ್ಲಿವೆ. ಕೆಳಗಿನ ಸಾಲಿನಲ್ಲಿ ಗೂಡುಗಳು ಒಳಗಡೆ ನೃತ್ಯಗಾರರು, ವಾದ್ಯಮೇಳ ಮತ್ತು ಕನ್ನಡಿ ನೋಡಿಕೊಳ್ಳುವ ಬಾಲಕಿಯರಿದ್ದಾರೆ. ಬದಿಗಳಲ್ಲಿ ರತ್ನ ಪಟ್ಟಿಕೆಗಳ ಅಲಂಕರಣ. ಮೇಲಿನ

ಅರ್ಧಭಾಗದಲ್ಲಿ ಸಾಲಾಗಿ ಹದಿನಾಲ್ಕು ಬಾಲಕಿಯರಿದ್ದಾರೆ. ದಕ್ಷಿಣಮುಖದ ಕಕ್ಷಾಸನದ ಹೊರಮೈ ಭಾಗದಲ್ಲಿ ೨೧ ಬಾಲಕಿಯರು ಮತ್ತು ನೃತ್ಯ ಗಣೇಶರ ಚಿತ್ರಗಳಿವೆ.

ಅಧಿಷ್ಠಾನವು ಎತ್ತರವಾಗಿದ್ದು, ಅದಕ್ಕೆ ಐದು ಸ್ಥರಗಳು. ಮೇಲಿನ ಎರಡು ಸ್ಥರಗಳಲ್ಲಿ ಹೂಬಳ್ಳಿಗಳ ಅಲಂಕರಣ. ಲಕ್ಷ್ಮಿ, ಒಬ್ಬ (ದೇವತೆ), ಕುಳಿತ ಬುದ್ಧ (ಯೋಗ ಮುದ್ರೆ ಮತ್ತು ವಸ್ತ್ರದಾರಿ) ಕುಂಭ ಹಿಡಿದು ನಿಂತ ದೇವತೆ, ತಾಯಿ-ಮಗು, ಎರಡೂ ಕೈಗಳನ್ನು ಮೇಲಕ್ಕೆತ್ತಿ ನಿಂತ ದೇವತೆಯರಿದ್ದಾರೆ. ಇನ್ನೂ ಮೂರು ಚಿತ್ರಗಳು ನಾಶವಾಗಿವೆ. ಗರ್ಭಗೃಹದ ಪಶ್ಚಿಮ ಮುಖದಲ್ಲಿ ಕ್ರಮವಾಗಿ ಎರಡು ಚಿತ್ರಗಳು ನಾಶವಾಗಿದ್ದು ಉಬ್ಬಿದ ಹೊಟ್ಟೆಯುಳ್ಳ ನಿಂತ ಕುಬ್ಜ ಮತ್ತು ಗರುಡರಿದ್ದಾರೆ.

ಗರ್ಭಗೃಹದ ಭಿತ್ತಿಯ ಉತ್ತರ, ಪಶ್ಚಿಮ ಮತ್ತು ದಕ್ಷಿಣದ ಮೂರು ಕಡೆಗಳಲ್ಲಿ ಮುಂದೆ ಚಾಚಿದ ಭವ್ಯವಾದ ದೇವಕೋಷ್ಠಗಳಿವೆ. ಉತ್ತರ ಮತ್ತು ದಕ್ಷಿಣದ ದೇವಕೋಷ್ಠಗಳು ಹಾಳಾಗಿವೆ. ಅಲ್ಲಿಯ ವಿಗ್ರಹಗಳು ಸ್ಥಳಾಂತರಗೊಂಡಿವೆ. ಅವುಗಳ ದ್ವಾರ ಚೌಕಟ್ಟುಗಳು ಎತ್ತರವಾಗಿವೆ. ಉತ್ತರದಲ್ಲಿ ದೇವಕೋಷ್ಠದ ಬಾಗಿಲ ಚೌಕಟ್ಟಿನ ಲಲಾಟದಲ್ಲಿ ಗಣೇಶ ಕುಳಿತಿರುವನು. ಬದಿಗಳಲ್ಲಿ ಸೇವಕಿಯರು ಚೌರಿ ಬೀಸುತ್ತಿರುವರು. ದ್ವಾರ ಪಟ್ಟಿಕೆಯಲ್ಲಿ ದ್ವಾರಪಾಲಕರು ನಿಂತಿದ್ದಾರೆ. ಬದಿಗಳಲ್ಲಿ ಚೌರಿ ಬೀಸುವ ಸೇವಕಿಯರಿದ್ದಾರೆ. ಅವುಗಳ ಭಿತ್ತಿ ಭಾಗ ಹಾಳಾಗಿವೆ. ಆದರೆ ಪಶ್ಚಿಮ ಮುಖದ ದೇವಕೋಷ್ಠ ಗರ್ಭಗೃಹದಷ್ಟು ಎತ್ತರವಾಗಿದೆ. ಅದರ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಗರ್ಭಗೃಹಕ್ಕೆ ಎತ್ತರದ ದ್ವಾರ ಚೌಕಟ್ಟಿದೆ. ಲಲಾಟದಲ್ಲಿ ಗಣೇಶನಿದ್ದಾನೆ. ಉತ್ತರಾಂಗದಲ್ಲಿ ಚತುರ್ಭುಜ ದೇವತೆಯರಿದ್ದಾರೆ. ಕೆಳಭಾಗದ ಭಿತ್ತಿ ಹಾಳಾಗಿದೆ. ಸಭಾಮಂಟಪದ ಉತ್ತರ ಮತ್ತು ದಕ್ಷಿಣ ಗೋಡೆಗಳಿಗೆ ಹೊಂದಿಸಿ ಕಟ್ಟಿದ ಗರ್ಭಗೃಹಗಳು ಹಾಳಾಗಿವೆ. ಈಗ ಅಲ್ಲಿ ಏನನ್ನು ಉಳಿಸಿಲ್ಲ. ಅಲ್ಲಿ ಗೋಡೆಯನ್ನು ಎರಡೂ ಕಡೆಗಳಲ್ಲಿ ಕಟ್ಟಿರುವ ಸೂಚನೆಗಳಿವೆ. ಭಿತ್ತಿಯ ಮೇಲ್ಭಾಗದ ಚಿತ್ರಗಳು ದೊಡ್ಡ ಗಾತ್ರದಲ್ಲಿವೆ. ತುಂಬಾ ಆಕರ್ಷಣೀಯವೆನಿಸಿವೆ.

ವಿಶ್ಲೇಷಣೆ : ಸ್ಥಳೀಯ ಕೆರೆಯಲ್ಲಿ ಈಗ ಕಾಣುವ ತೆರೆದ ನಾಲ್ಕು ಕಂಬವುಳ್ಳ ಮಂಟಪವೇ ಆಗಿನ ವಿಷ್ಣುದೇವಾಲಯವೆನ್ನುವರು. ಅಲ್ಲಿ ಇನ್ನಿತರ ಕುರುಹುಗಳು ಉಳಿದಿಲ್ಲ. ಹೀಗಾಗಿ ಸ್ಥಳಿಕರ ಅಭಿಪ್ರಾಯಕ್ಕೆ ಪುಷ್ಟಿ ನೀಡುವ ಯಾವ ಅಂಶಗಳೂ ಅಲ್ಲಿಲ್ಲ. ಈಗ ಕರೆಯುವ ಪ್ರಸ್ತುತ ಅಧ್ಯಯನದ ಶಿವದೇವಾಲಯವೇ ಆಗಿನ ನಾರಾಯಣ ದೇವಾಲಯವಿರಬೇಕು. ಏಕೆಂದರೆ, ಈ ದೇವಾಲಯದ ಗರ್ಭಗೃಹದ ಬಾಗಿಲ ದ್ವಾರಪಟ್ಟಿಯಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಭಿತ್ತಿಯಲ್ಲಿರುವ ವಿಭಿನ್ನ ಚಿತ್ರಗಳಲ್ಲಿ ಗರುಡ, ಲಕ್ಷ್ಮಿ ಚಿತ್ರಗಳಿವೆ. ಬುದ್ಧನು ಇಲ್ಲಿ ವಿಷ್ಣುವಿನ ಒಂದು ಅವತಾರದಲ್ಲಿರಬೇಕು. ಗರ್ಭಗೃಹದ ಉತ್ತರಾಂಗದಲ್ಲಿ ಚಿತ್ರಿಸಿದ ಅಷ್ಟ ಮಾತೃಕೆಯರಿದ್ದಾರೆ. ಇದೇ ಬಗೆಯ ಅಷ್ಟಮಾತೃಕೆಯರನ್ನು ಈ ಕಾಲದ ಹಾವೇರಿಯ ಸಿದ್ಧೇಶ್ವರ ದೇವಾಲಯದಲ್ಲಿ ಕಾಣಬಹುದು.

ಅರ್ಧಗಂಬದಲ್ಲಿ ರೇಖಾನಾಗರ ಶೈಲಿಯ ಶಿಖರ ಮತ್ತು ಅಂತರಾಳದಲ್ಲಿ ಉದ್ದವಾದ ಕಂಬಗಳಿವೆ. ಅಳವಡಿಸಿದ ಮದನಿಕೆಯರ ಅಥವಾ ಸಾಲಭಂಜಿಕೆಯರ ಶಿಲ್ಪಗಳು ಮತ್ತು ಮುಖಮಂಟಪದ ಪ್ರವೇಶದ ಬದಿಗಳಲ್ಲಿ ಕೂಡಿಸಿದ ಕುಸುರು ಕೆತ್ತನೆಯ ತೋರಣ ಭಾಗಗಳು ಹೊಯ್ಸಳರ ವಾಸ್ತು ಲಕ್ಷಣಗಳನ್ನು ನೆನಪಿಸುತ್ತವೆ. ಗರ್ಭಗೃಹ, ನವರಂಗ ಮತ್ತು ಸಭಾಮಂಟಪಗಳ ಭಿತ್ತಿನ ಭುವನೇಶ್ವರಿಯ ಮೂಲೆಗಳಲ್ಲಿ ಅಳವಡಿಸಿದ ಕೀರ್ತಿಮುಖಗಳು ಕಲ್ಯಾಣ ಚಾಲುಕ್ಯರ ಸಾಮಂತರು ಮತ್ತು ತದನಂತರ ಸ್ವತಂತ್ರರಾಗಿ ಆಳಿದ ಕಾಕತೀಯರ ಲಕ್ಷಣವೆಂದು ಭಾವಿಸಿದ ಅಭಿಪ್ರಾಯವು ಇಲ್ಲಿ ಹುಸಿಗೊಳ್ಳುವುದು. ಇದಕ್ಕೆ ಈ ದೇವಾಲಯದ ರಚನೆಯ ಕಾಲಮಾನ ಸು. ಕ್ರಿ.ಶ.೧೧ ಅಥವಾ ೧೨ನೇ ಶತಮಾನದ ಆದಿ ಭಾಗವಾಗಿದೆ. ಅದರಲ್ಲಿಯ ಅನೇಕ ಲಕ್ಷಣಗಳು ಕಲ್ಯಾಣ ಚಾಲುಕ್ಯರ ವಾಸ್ತು ಶೈಲಿಯಲ್ಲಿವೆ. ಕಲ್ಯಾಣ ಚಾಲುಕ್ಯರ ದೊರೆ ಆರನೇ ವಿಕ್ರಮಾದಿತ್ಯನ ಕಾಲದ ಸ್ಥಳೀಯ ಶಿಲಾಶಾಸನ ಒಂದರಲ್ಲಿ ಗೂರ್ಜ್ಜರ ಮಲಯಮತಿ ಮಹಾದೇವಿಯರ ದೇಗುಲದ ಪಡುವಣ ನಾರಾಯಣ ದೇವರು ಎಂದಿದೆ. ಹೀಗಾಗಿ ಈ ಕಾಲದಲ್ಲಿ ಈ ದೇವಾಲಯ ಹೆಚ್ಚು ಪ್ರಖ್ಯಾತಿಯನ್ನು ಹೊಂದಿದ್ದಿತ್ತೆಂದು ತರ್ಕಿಸಬಹುದು. ಜೊತೆಯಲ್ಲಿ ಗರ್ಭಗುಡಿಯಲ್ಲಿ ಮೂಲತಃ ನಾರಾಯಣ/ ವಿಷ್ಣು ವಿಗ್ರಹವನ್ನು ಸ್ಥಾಪಿಸಿದ್ದು ತದನಂತರ ಅದು ಸ್ಥಾನ ಪಲ್ಲಟನೆ ಹೊಂದಿರುವ ಸಾಧ್ಯತೆ ಹೆಚ್ಚು. ಏಕೆಂದರೆ ಅಲ್ಲಿರುವ ಶಿವಲಿಂಗದ ಭಾಗ ಇತ್ತೀಚಿನದಾಗಿದೆ. ಅದರ ಮೂಲ ಪೀಠದ ರಂಧ್ರದಲ್ಲಿ ಸರಿಹೊಂದುವಂತೆ ಕತ್ತರಿಸಿ ಅದನ್ನು ಕೂಡಿಸಲಾಗಿದೆ.

ಲಗ್ನಮಂಟಪ / ಶಿವಹಂದರ : ಶಿವಮಂದಿರದ ಬದಿಗೆ ಈಶಾನ್ಯಕ್ಕೆ ಒಂದು ಕಿರು ದೇವಾಲಯವಿದೆ. ಅದನ್ನು ಶಿವಹಂದರ ಅಥವಾ ಲಗ್ನಮಂಟಪ ಎಂದು ಕರೆಯುವರು. ಪೂರ್ವಕ್ಕೆ ಮುಖಮಾಡಿದ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಗರ್ಭಗೃಹದ ತಳಪಾಯ ನಕ್ಷತ್ರಾಕಾರದಲ್ಲಿದೆ. ಈ ದೇವಾಲಯಕ್ಕೆ ಮೂರು ಕಡೆಗಳಿಂದ ಪ್ರವೇಶಗಳಿವೆ. ಗರ್ಭಗೃಹದ ಹಿಂಬದಿ ಮತ್ತು ಸಭಾಮಂಟಪದ ಪೂರ್ವ ಮತ್ತು ಉತ್ತರ ಭಾಗಗಳು ಬಿದ್ದು ಹೋಗಿವೆ. ಅದರಲ್ಲಿ ಒಂದು ಎರಡು ಮತ್ತು ಮೂರನೆಯ ಅಂಕಣಗಳು ಅಲ್ಲಲ್ಲಿ ಬಿದ್ದು ಹೋಗಿವೆ. ಮಧ್ಯದಲ್ಲಿ ಗೋಡೆ ಬಿದ್ದಿದೆ. ಗರ್ಭಗೃಹದಲ್ಲಿ ವಿಷ್ಣು ವಿಗ್ರಹವಿದೆ. ಅದರ ಬಾಗಿಲು ಚೌಕಟ್ಟಿನಲ್ಲಿ ತಲಾ ಒಂದುಕಡೆ ಪಂಚ ಶಾಖೆಗಳಿವೆ. ಬಲಗಡೆಯ ಶಾಖೆಗಳಲ್ಲಿ ಕಳಸ ಹಿಡಿದ ಮಹಿಳೆ, ಚೌರಿ ಹಿಡಿದ ಸೇವಕಿ, ವೈಷ್ಣವ ದ್ವಾರಪಾಲಕರಿದ್ದಾರೆ. ದ್ವಾರಪಾಲಕರ ಕೈಯಲ್ಲಿ ಗದೆ, ಶಂಖ, ಚಕ್ರ(ಒಡೆದಿದೆ) ಮತ್ತು ಅಭಯ ಮುದ್ರೆಯಲ್ಲಿವೆ. ಬದಿಗಳಲ್ಲಿ ಚೌರಿಹಿಡಿದ ಸೇವಕಿ ಮತ್ತು ಸೇವಕರು ನಿಂತಿರುವರು. ಎಡಗಡೆಯ ಶಾಖೆಗಳಲ್ಲಿ ಇದೇ ಮಾದರಿಯ ಚಿತ್ರಗಳಿವೆ. ಲಲಾಟಪಟ್ಟಿ ಮಧ್ಯಲಕ್ಷ್ಮಿಯು ಕಮಲಗಳನ್ನಿಡಿದು ಕೂತಿದ್ದಾಳೆ. ಉತ್ತರಾಂಗದಲ್ಲಿ ಪಂಚಗೂಡುಗಳಿದ್ದು ಅವುಗಳಲ್ಲಿ ಪಂಚದೇವತೆಗಳಿದ್ದಾರೆ.

ಕ್ರಮವಾಗಿ ಅವರು ಪದ್ಮಾಸನ ಮತ್ತು ಸವ್ಯಲಲಿತಾಸನದಲ್ಲಿರುವರು. ಆ ಫಲಕದ ಮೇಲುಗಡೆ ಸಾಲಾಗಿ ಸಿಂಹ-ಆನೆ ಮತ್ತು ಆನೆ-ಸಿಂಹಗಳಿವೆ. ಈ ಗೂಡುಗಳ ಬದಿಗಳಲ್ಲಿ ರತ್ನಪಟ್ಟಿಕೆಗಳ ಅಲಂಕರಣವಿದೆ. ಶಾಖೆಗಳಲ್ಲಿ ಹೂಬಳ್ಳಿ, ಪುರುಷ, ಅರ್ಧಗಂಬ, ಸಿಂಹ ಮತ್ತು ಪತ್ರಗಳಿವೆ.

ಬಾಗಿಲು ಚೌಕಟ್ಟಿನ ಹೊಸ್ತಿಲ ಮುಖದಲ್ಲಿ ಮಧ್ಯ ಚತುರ್ಭುಜಧಾರಿ ದೇವತೆಗಳಿದ್ದಾರೆ. ಅಭಯ ಮುದ್ರಿಕೆಯನ್ನು ಬಿಟ್ಟರೆ ಉಳಿದವುಗಳು ಒಡೆದಿವೆ. ಬದಿಗಳಲ್ಲಿ ಕೀರ್ತಿಮುಖ ಮತ್ತು ಸಿಂಹಗಳಿವೆ. ಮುಂದೆ ಚಂದ್ರಶಿಲಾ ಇದೆ. ಗರ್ಭಗೃಹದ ಮುಂದೆ ತೆರೆದ ಸ್ತಂಭಗಳುಳ್ಳ ಅರ್ಧಮಂಟಪ ಅದರ ಛತ್ತಿನಲ್ಲಿ ವೃತ್ತಾಕಾರ ಕಮಲದ ಅಲಂಕರಣವುಳ್ಳ ಭುವನೇಶ್ವರಿ ಇದೆ. ಸಭಾಮಂಟಪಕ್ಕೆ ಒಂಬತ್ತು ಅಂಕಣಗಳು ತಲಾ ಒಂದು ಅಂಕಣದ ಮಧ್ಯ ಛತ್ತಿನಲ್ಲಿ ರತ್ನಪಟ್ಟಿ ಆಕಾರದ ಭುವನೇಶ್ವರಿ, ಅದಕ್ಕೆ ಎರಡು ಸ್ಥರಗಳು. ತಲಾ ಒಂದರ ಮೂಲೆಗಳಲ್ಲಿ ಕೀರ್ತಿಮುಖ ಫಲಕಗಳಿವೆ. ಸಭಾಮಂಟಪದ ಬದಿಗಿನ ಗೋಡೆಯಲ್ಲಿ ಕಕ್ಷಾಸನ. ಅದರ ಹೊರ ಮಗ್ಗಲು ಕೆಳಭಾಗದಲ್ಲಿ ಮಿಥುನ ಚಿತ್ರಗಳು ಎರಡು ಅರ್ಧಗಂಬಗಳುಳ್ಳ ಗೂಡಿನಲ್ಲಿವೆ. ಈ ಗೂಡುಗಳ ಬದಿಯಲ್ಲಿ ರತ್ನಗಳನ್ನು ಅಲಂಕರಿಸಲಾಗಿದೆ. ಮೇಲಿನ ಭಾಗ ಹೆಚ್ಚು ಹಾಳಾಗಿ ಹೋಗಿದೆ. ದೊಡ್ಡ ಅರ್ಧಗಂಬಗಳಿವೆ. ಗೂಡುಗಳ ಮಧ್ಯೆ ಪುರುಷರ ಚಿತ್ರಗಳಿವೆ. ಅದರ ಭಿತ್ತಿ ಚಿತ್ರಗಳು ಕುತೂಹಲಕಾರಿಯಾಗಿವೆ. ಅವುಗಳನ್ನು ಎರಡು ಸಾಲುಗಳಲ್ಲಿ ತೋರಿಸಲಾಗಿದೆ. ಕೆಳಗಿನ ಸಾಲು ಸರಳವಾಗಿದೆ. ಮೇಲಿನ ಸಾಲಿನಲ್ಲಿ ಹೆಚ್ಚಾಗಿ ಬಾಲಕಿಯರ ಚಿತ್ರಗಳಿವೆ. ಅಲ್ಲಿಯ ಕೆಲವು ಶಿಲಾಬಾಲಕಿಯರ ಪಟ್ಟಿಕೆಗಳು ಸ್ಥಳಾಂತರಗೊಂಡಿವೆ. ಒಬ್ಬಳು ಬೀಸಣಿಕೆ ಹಿಡಿದು ಅರೆಬೆತ್ತಲೆಯಲ್ಲಿ ನಿಂತಿದ್ದಾಳೆ. ಇನ್ನೊಬ್ಬಳು ರುಂಡಮಾಲೆ ಧರಿಸಿ ನಿಂತಿದ್ದಾಳೆ. ಆಕೆಯು ಭೈರವಿಯಂತಿರುವಳು. ಆಕೆಯ ಕೈಗಳು ಮುರಿದು ಹೋಗಿವೆ. ಮತ್ತೊಬ್ಬಳು ಅರೆಬತ್ತಲೆಯಲ್ಲಿದ್ದು ತನ್ನ ಕೈಗಳನ್ನು ಎತ್ತಿ ನಿಂತಿದ್ದಾಳೆ. ಆಕೆಯ ತಲೆಯ ಮೇಲೆ ಒಂದು ಛತ್ರಿಯಿದೆ. ಅದರ ಮೇಲೆ ಹೂಬಳ್ಳಿಗಳ ಅಲಂಕರಣವಿದ್ದು ಕೆಳಗಿನ ಭಾಗ ಒಡೆದಿದೆ. ಒಬ್ಬ ಬಾಲಕಿ ಕಮಲ ಹಿಡಿದು ನಿಂತಿರುವಳು. ಇವಳ ತಲೆಯ ಮೇಲೆ ಹೂಬಳ್ಳಿಗಳ ಅಲಂಕರಣವಿದೆ. ಈ ದೇವಾಲಯವೊ ಮೂಲತಃ ವಿಷ್ಣು ಗೃಹವಿರಬೇಕು. ಅದರ ಕಾಲ ಸು.ಕ್ರಿ.ಶ. ೧೨ನೇ ಶತಮಾನ. ಅಧಿಷ್ಠಾನಭಾಗದಲ್ಲಿ ಒಂದೇ ಸಾಲಿನಲ್ಲಿ ಶಿಖರ ನಮೂನೆಗಳಿವೆ. ಹೊರಗಡೆ ಶಿವಲಿಂಗಕ್ಕೆ ಎದುರು ಮುಖಮಾಡಿ ನಂದಿ ವಿಗ್ರಹವನ್ನು ಕೂಡಿಸಲಾಗಿದೆ. ಇದರ ಕಾಲ ಸು.ಕ್ರಿ.ಶ.೧೨ನೇ ಶತಮಾನದ ಆದಿಭಾಗ.

ದೀಪಸ್ತಂಭ - ಸುರಂಗ ಇತ್ಯಾದಿ : ಈ ಗ್ರಾಮದ ಪಶ್ಚಿಮಕ್ಕೆ ಒಂದು ಹೊಲದಲ್ಲಿ ಆಯತಾಕಾರದ ಬೃಹತ್ ಶಿಲೆಯ ದೀಪಸ್ತಂಭದ ಭಾಗಗಳಿವೆ. ಈ ಕಂಬದಲ್ಲಿ ಸರಳ ಆಯತಾಕಾರದ ಭಾಗ ಮತ್ತು ಪೂರ್ಣಕುಂಭ ಭಾಗಗಳಿವೆ. ಬದಿಯಲ್ಲಿ ನಾಲ್ಕು ಸಿಂಹಗಳುಳ್ಳ ಕೈಪಿಡಿ ಎರಡು, ವೈಷ್ಣವ ದ್ವಾರಚೌಕಟ್ಟಿದೆ. ಎತ್ತರದ ಆನೆಗಳಿರುವ ದೇವಾಲಯದ ಫಲಕಗಳು

ಅಲ್ಲಲಿ ಬಿದ್ದಿವೆ. ಈ ಪರಿಸರದಲ್ಲಿ ಎರಡು ಹಗೆಗಳಿದ್ದು, ಅವುಗಳು ಸುಮಾರು ನಾಲ್ಕು ಮೀಟರ್ ಆಳವಿರಬೇಕು. ಸ್ಥಳೀಕರು ಅವುಗಳ ತಳದಿಂದ ಕಲ್ಯಾಣ ಕೋಟೆಯ ಒಳ್ಳಗಿನ ಆವರಣಕ್ಕೆ ಪ್ರವೇಶಿಸಲು ಸುರಂಗವಿರುವುದೆಂದು ಹೇಳುವರು. ಈ ಸ್ಥಳದಲ್ಲಿರುವ ಚೌಡಯ್ಯನ ಮಠಕ್ಕೆ ಏಕಗರ್ಭ ಗೃಹವಿದ್ದು. ಒಳಗೆ ಸಮಾಧಿಯಿದೆ. ಅದರ ಬಾಗಿಲು ಚೌಕಟ್ಟಿನಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಕಾಲ ಸು.ಕ್ರಿ.ಶ. ೧೨ನೇ ಶತಮಾನ.

ಶಿವಪುರ : ಸಿದ್ದೇಶ್ವರ ದೇವಾಲಯ : ತ್ರಿಪುರಾಂತಪುರಕ್ಕೆ ಸುಮಾರು ೧ ಕಿ.ಮೀ ಅಂತರದಲ್ಲಿ ಶಿವಪುರವಿದೆ. ಶಿವಪುರದ ಹೆಸರು ಕಾಶಿಕಾಂಡ ಪುರಾಣದಲ್ಲಿ ಬರುತ್ತದೆನ್ನುವರು. ದೈತರನ್ನು ಸಂಹಾರ ಮಾಡುವುದಕ್ಕಾಗಿ ಶಿವ-ಪಾರ್ವತಿ ಇಲ್ಲಿ ಬಂದು ಧ್ಯಾನ ಮಾಡಿದರು ಎನ್ನುವರು. ಅದಕ್ಕಾಗಿ ಈ ಸ್ಥಳವನ್ನು ಶಿವಪುರ ಎಂದು ಕರೆಯಲಾಗಿದೆಯಂತೆ ಹಾಗೂ ಅಲ್ಲಿ ಗಾಣಾಗಪುರದ ದತ್ತಾತ್ರೇಯ ಪಾದರಕ್ಷೆಗಳನ್ನು ಬಿಟ್ಟು ಹೋಗಿರುವ ಕುರುಹುಗಳು ಇಲ್ಲಿವೆ ಎನ್ನುವರು.

ಅಲ್ಲಿಯ ಕೆರೆಯ ಪಶ್ಚಿಮದ ದಂಡೆಯ ಮೇಲೆ ಒಂದು ಪ್ರಾಚೀನ ಶಿವಮಂದಿರವಿದೆ. ಬಸವಣ್ಣನವರ ಕಾಲದಲ್ಲಿ ಶಿವಶರಣರಿಗೆ ಈ ಸ್ಥಳವು ಒಂದು ಕೇಂದ್ರಸ್ಥಾನವಾಗಿದ್ದಿತು. ಈ ಮಂದಿರವನ್ನು ಸಿದ್ದೇಶ್ವರ ದೇವಾಲಯವೆಂದು ಕರೆಯುವರು. ನಾಂದೇಡ ಶಾಸನದಲ್ಲಿ ಹೇಳಿದ ಸಿದ್ದೇಶ್ವರ ದೇವಾಲಯ ಇದಾಗಿರಬಹುದು.

ಪೂರ್ವಕ್ಕೆ ಮುಖ ಮಾಡಿದ ಈ ದೇವಾಲಯದ ತಳಪಾಯದಲ್ಲಿ ಚೌಕಾದ ಗರ್ಭಗೃಹವಿದ್ದು ಅದು ತಗ್ಗಿನಲ್ಲಿದೆ. ಮಧ್ಯ ಶಿವಲಿಂಗವಿದೆ. ಅದಕ್ಕೆ ವೃತ್ತಾಕಾರದ ಪೀಠವಿದೆ. ಗರ್ಭಗೃಹ ಛತ್ತಿನ ಮಧ್ಯಕಮಲದ ಅಲಂಕರಣವುಳ್ಳ ಭುವನೇಶ್ವರಿ. ಈ ತಳಪಟ್ಟಿಗಳ ಮೂಲೆಗಳಲ್ಲಿ ನಾಲ್ಕು ಕೀರ್ತಿಮುಖಗಳಿವೆ. ಸುತ್ತಲೂ ಹೂಬಳ್ಳಿಗಳ ಅಲಂಕರಣ ಕೀರ್ತಿಮುಖಗಳ ಸುತ್ತಲೂ ಮಣಿಹಾರಗಳಿವೆ. ಗರ್ಭಗೃಹದ ನಾಲ್ಕು ಮೂಲೆಗಳಲ್ಲಿ ಅರ್ಧಗಂಬಗಳಿವೆ. ಶಿವಲಿಂಗದ ಜಲಧಾರೆಯ ಪ್ರಣಾಳ ಉತ್ತರಕ್ಕಿದೆ. ಗರ್ಭಗೃಹದಿಂದ ಮೇಲಕ್ಕೆ ಹತ್ತಿ ಸಭಾಮಂಟಪಕ್ಕೆ ಬರಲು ಮೆಟ್ಟಿಲುಗಳಿವೆ. ಗರ್ಭಗೃಹದ ದ್ವಾರದಲ್ಲಿ ಶೈವದ್ವಾರಪಾಲಕರಿರುವರು. ಬದಿಗಳಲ್ಲಿ ಐದು ಸೇವಕ-ಸೇವಕಿಯರಿದ್ದಾರೆ. ಅವರು ಕುಂಭ, ಹಾರ, ಚೌರಿ ಹಿಡಿದಿದ್ದಾರೆ. ದ್ವಾರಪಾಲಕರು ತ್ರಿಭಂಗಿಯಲ್ಲಿ, ಸೇವಕಿಯರು ಅಡ್ಡಗಾಲನ್ನಿಟ್ಟು ತ್ರಿಭಂಗಿಯಲ್ಲಿ ನಿಂತಿದ್ದಾರೆ. ತೊಡೆಗಳಿಗೆ ನಾಗದಿಂದ ಬಿಗಿದಿದ್ದಾರೆ. ವಸ್ತ್ರಾಭರಣ ಮತ್ತು ಉಷ್ಣೀಶವನ್ನು ಹೊಂದಿರುವ ಕುಬ್ಜರಿದ್ದಾರೆ.

ಸಭಾಮಂಟಪಕ್ಕೆ ಒಂಭತ್ತು ಅಂಕಣಗಳಿವೆ. ಮಧ್ಯದ ಸ್ತಂಭಗಳುಳ್ಳ ಅಂಕಣ ಚೌಕಾಗಿದೆ. ನೆಲ ಸ್ವಲ್ಪ ಎತ್ತರವಾಗಿದೆ. ಗರ್ಭಗೃಹದಲ್ಲಿರುವ ಭುವನೇಶ್ವರಿಯಂತೆ ಸಭಾಮಂಟಪದ ಮಧ್ಯದ ಛತ್ತಿದೆ. ಬದಿಗಳ ಕೆಲವು ಅಂಕಣಗಳ ಛತ್ತುಗಳು ಸರಳವಾಗಿವೆ.



ಕೀರ್ತಿಮುಖ ಮತ್ತು ಪತ್ರದ ಅಲಂಕರಣಗಳಿವೆ. ಕಂಬಗಳಿಗೆ ಪೀಠ, ಕಾಂಡ, ಕಂಠ ಮತ್ತು ಬೋಧುಗೆಗಳಿವೆ. ಕಂಬಗಳ ಕಾಂಡಭಾಗ ಕ್ರಮವಾಗಿ ಚೌಕಾಗಿ, ಆಯತಾಕಾರವಾಗಿ ಎರಡು, ಎಂಟು ಮುಖಗಳ ಪಟ್ಟಿ, ಎರಡು ವೃತ್ತಾಕಾರ ಪಟ್ಟಿಗಳು ಮಧ್ಯದ ಪಟ್ಟಿಕೆಗಳ ನಡುವೆ ನಾಲ್ಕು ತ್ರಿಕೋನಾಕಾರಗಳು, ಅವುಗಳ ಮಧ್ಯೆ ವೃತ್ತಾಕಾರದ ಪಟ್ಟಿಕೆಗಳಿವೆ. ವೃತ್ತಾಕಾರ ಕಂಠವಿದೆ. ನಾಲ್ಕು ಬಾಹುವುಳ್ಳ ಬೋಧುಗೆಗಳಿವೆ. ಪ್ರತಿಯೊಂದು ಬಾಹುಗಳಲ್ಲಿ ಬೋಧುಗೆಗಳನ್ನು ಹೊತ್ತ ಕುಬ್ಜರಿದ್ದಾರೆ. ಸಭಾಮಂಟಪದ ಅರ್ಧಗಂಭದಲ್ಲಿ ಶಿಖರದ ನಮೂನೆಗಳಿವೆ. ಒಂದರಲ್ಲಿ ಸೇವಕನಿದ್ದು ಕೆಳಗಿನ ಕೈಗಳಲ್ಲಿ ಗದಾ ಮತ್ತು ಚಕ್ರಗಳಿವೆ. ಉಳಿದ ಕೈಗಳು ಮುರಿದಿವೆ. ನೆಲಕ್ಕೆ ಶಿಲಾ ಹಲಿಗೆಯನ್ನು ಕೂಡಿಸಲಾಗಿದೆ. ಸಭಾಮಂಟಪದ ದ್ವಾರ ಚೌಕಟ್ಟಿನಲ್ಲಿ ಶೈವದ್ವಾರಪಾಲಕರಿದ್ದಾರೆ. ಗರ್ಭಗೃಹದಲ್ಲೂ ಶೈವದ್ವಾರಪಾಲಕರಂತೆ ಇವರು ಇರುವರು. ಇನ್ನೊಂದರಲ್ಲಿ ವೈಷ್ಣವ ದ್ವಾರಪಾಲಕನಿರುವನು. ಬದಿಗಳಲ್ಲಿ ಚೌರಿಹಿಡಿದ ಸೇವಕ-ಸೇವಕಿಯರಿದ್ದಾರೆ. ಲಲಾಟದಲ್ಲಿ ಗಣೇಶನಿರುವನು. ಉತ್ತರಾಂಗದ ಮಧ್ಯದಲ್ಲಿರುವ ಚಿತ್ರ ಒಡೆದಿದ್ದು ಅದರ ಮೇಲೆ ಛತ್ರಿಯಿದೆ. ಬದಿಗಳಲ್ಲಿ ಆನೆಗಳಿವೆ. ಹೀಗಾಗಿ ಇದೊಂದು ಗಜಗಳುಳ್ಳ ಜಿನಬಿಂಬವಿರಬೇಕು. ಕೆಳಬದಿಗಳಲ್ಲಿ ನಿಧಿಗಳಿರುವವು. ಹೀಗಾಗಿ ಈ ಪಟ್ಟಿಕೆಯು ಜೈನ ಬಸದಿಯ ಕುರುಹು ಆಗಿದೆ. ಸಭಾಮಂಟಪಕ್ಕೆ ಇನ್ನೊಂದು ದ್ವಾರ ಉತ್ತರ ಗೋಡೆಯಲ್ಲಿದೆ. ದ್ವಾರ ಚೌಕಟ್ಟನಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸುವಾಗ ಅದರ ಮೂಲ ಕಟ್ಟಡದ ಅನೇಕ ಭಾಗಗಳು ಬದಲಾವಣೆ ಹೊಂದಿವೆ. ಅದರ ಪರಿಸರದಲ್ಲಿ ಹೊರಗಡೆ ಉಮಾಮಹೇಶ್ವರ, ಬಾಲಕಿ, ಸೂರ್ಯ, ಗಣೇಶ, ಭೈರವ, ನಾಗ, ಚಾಮುಂಡಿ, ಆನೆ ಮತ್ತು ಸಿಂಹ, ಕೈಪಿಡಿ ಇತ್ಯಾದಿ ಅನೇಕ ಶಿಲಾಫಲಕಗಳಿವೆ. ಈ ದೇವಾಲಯದ ಮತ್ತು ಶಿಲ್ಪಗಳ ಕಾಲ ಸು. ಕ್ರಿ. ಶ. ೧೨ನೇ ಶತಮಾನ. ■

೪. ವೈಷ್ಣವ ದೇವಾಲಯ-ಶಿಲ್ಪಗಳು

ಕಲ್ಯಾಣದ ಶಿಲಾಶಾಸನಗಳಲ್ಲಿ ವೈಷ್ಣವ ದೇವಾಲಯಗಳ ಉಲ್ಲೇಖವಿದೆ. ಅವು ನಾರಾಯಣ,ಕೇಶವ ಇತ್ಯಾದಿ. ನಾರಾಯಣ ದೇವಾಲಯದ ಹೆಸರಿನಿಂದ ಆ ಗ್ರಾಮಕ್ಕೆ ನಾರಾಯಣ ಪುರವೆಂದು ಹೆಸರು ಬಂದಿದೆ. ಈ ದೇವಾಲಯವು ಅಲ್ಲಿ ಕ್ರಿ.ಶ.೧೧೧೬ರಲ್ಲಿ ಗೂರ್ಜ್ಜರ ಮಲಯಮತಿ ಮಹಾದೇವಿಯರ ದೇಗುಲದ ಪಶ್ಚಿಮಕ್ಕೆ ಇದ್ದಿತೆನ್ನಲಾಗಿದೆ. ಅಲ್ಲಿಯ ಇನ್ನೊಂದು ಶಾಸನದಲ್ಲಿ ಕೇಶವ ಮಂಟಪದ ಹೆಸರಿದೆ.

ಅನೇಕ ವೈಷ್ಣವ ಶಿಲ್ಪಗಳು ಅಲ್ಲಿವೆ. ಕೆಲವು ವೈಷ್ಣವ ದೇವಾಲಯಗಳ ಗೋಡೆ ಫಲಕಗಳಾಗಿವೆ. ರಾಮಾಯಣದ ಕೆಲ ದೃಶ್ಯಗಳಿವೆ. ಅವುಗಳು ಮೂಲಸ್ಥಳದಿಂದ ಚದುರಿಹೋಗಿವೆ. ವೈಷ್ಣವ ಶಿಲ್ಪಗಳಲ್ಲಿ ಕೇಶವ, ನಾರಾಯಣ, ನರಸಿಂಹ, ಗೋಪಾಲಕೃಷ್ಣ, ಯೋಗ ನಾರಾಯಣ, ಭೂವರಾಹ, ಅನಂತಶಯನ, ರಾವಣ, ಶಕಟವಿಷ್ಣು, ಕೂರ್ಮ,ಹನುಮ ಹೊತ್ತ ಲಕ್ಷ್ಮಣ, ಲಕ್ಷ್ಮೀನಾರಾಯಣ, ಹನುಮ-ರಾಮ,ಹನುಮ- ಅಕ್ಷಯಕುಮಾರರ ಹೋರಾಟ ಶಿಲ್ಪಗಳು ಮುಖ್ಯವೆನಿಸಿವೆ. ಶಿಲ್ಪಗಳು ಮತ್ತು ದೇವಾಲಯ ಅವಶೇಷಗಳು ಡಾಲರೈಟ್ ಮತ್ತು ಸಿಸ್ಟ್ ಶಿಲೆಗಳದ್ದಾಗಿವೆ. ಅದರಿಂದ ಅಲ್ಲಿ ಎರಡು ಪ್ರತ್ಯೇಕ ವೈಷ್ಣವ ದೇವಾಲಯಗಳಿದ್ದವೆಂದು ಹೇಳಬಹುದು.

ದೇವಾಲಯಗಳು : ವೈಷ್ಣವ ದೇವಾಲಯದ ಅವಶೇಷಗಳು ಇಲ್ಲಿ ಕಂಡುಬರುತ್ತವೆ. ಗೋಡೆ ಫಲಕದ ಉಬ್ಬು ಚಿತ್ರಗಳು, ಸುಕನಾಸಿ ಭಾಗದ ಪಟ್ಟಿಕೆ, ದ್ವಾರ ಪಟ್ಟಿಕೆಗಳು ಲಲಾಟಪಟ್ಟಿಕೆಗಳು, ಕೇಶವನ ಚಿತ್ರವಿರುವ ಸುಕನಾಸಿ ಫಲಕಗಳು ಅಲ್ಲಿವೆ.

ಕೇಶವನ ಶಿಲ್ಪವಿರುವ ಫಲಕವನ್ನು ಬಾಲಾಜಿ ಮಂದಿರದಲ್ಲಿಟ್ಟು ಪೂಜಿಸಲಾಗುತ್ತಿದೆ. ಅದನ್ನೇ ಬಾಲಾಜಿ ಎಂದು ಕರೆಯುವರು. ಈ ಫಲಕದ ಮಧ್ಯಕೇಶವನು ಸಮಭಂಗದಲ್ಲಿ ನಿಂತಿರುವನು. ಚತುರ್ಭುಜಧಾರಿಯಾದ ಈತನ ಕೈಗಳಲ್ಲಿ ಪದ್ಮ(ಅಭಯ ಮುದ್ರೆ), ಶಂಖ,ಚಕ್ರ ಮತ್ತು ಗದೆಗಳಿವೆ. ವಿಮಾನ ಮಾದರಿಯ ಅಲಂಕೃತದ ಮಧ್ಯ ಕೇಶವನನ್ನು ಚಿತ್ರಿಸಲಾಗಿದೆ. ವಿಮಾನದ ಎರಡು ದುಂಡಾದ ಅರ್ಧಗಂಬಗಳಿಗೆ ವಿವಿಧ ಅಡ್ಡ ಪಟ್ಟಿಕೆಗಳಿವೆ. ಅರ್ಧಗಂಬಗಳ ಹೊರಬದಿಗಳಲ್ಲಿ ಮೊಟ್ಟೆಯಾಕಾರದಲ್ಲಿ ಅರ್ಧವೃತ್ತಾಕಾರ ಪಟ್ಟಿಕೆಗಳನ್ನು ಹಿಗ್ಗಿಸಿದ ಅಲಂಕರಣವಿದೆ. ಪಟ್ಟಿಕೆಗಳು ವಿಮಾನದ ಅರ್ಧಗಂಬದ ತಳ ಮತ್ತು ಬುಡದಲ್ಲಿ ಸಂಧಿಸಿವೆ. ಇವುಗಳ ಮಧ್ಯ ಸೇವಕಿಯರು ತ್ರಿಭಂಗಿಯಲ್ಲಿದ್ದಾರೆ. ಕೇಶವನ ಬಲಕ್ಕೆ ಕೆಳಗಡೆ ಗರುಡನು ಕೈಮುಗಿದು ಕುಳಿತಿದ್ದಾನೆ. ಮಧ್ಯಭಾಗದಲ್ಲಿ ಬಾಯಿತೆರೆದ ಕೀರ್ತಿಮುಖವಿದೆ. ಸುತ್ತಲಿನ ಕಮಾನಿನ

ಒಳಗಡೆ ಚಿಕ್ಕ ಚಿಕ್ಕ ವೃತ್ತಗಳಿವೆ. ಒಳಗಡೆ ಒಂದೊಂದು ಪುಷ್ಪವಿದೆ. ಬದಿಗಳಲ್ಲಿ ಉದ್ದವಾದ ಹೂಬಳ್ಳಿಗಳಿವೆ. ಅದು ವೈಷ್ಣವ ದೇವಾಲಯದ ಶಿಖರ ಮುಂದಿನ ಸುಕನಾಸಿ ಭಾಗ. ಭಾರವಾದ ಈ ಫಲಕವು ಅಲ್ಲಿರುವುದರಿಂದ ಅಲ್ಲೊಂದು ವಿಷ್ಣು ದೇವಾಲಯವಿದ್ದಿತೆಂದು ತರ್ಕಿಸಬಹುದು.

ಗೋಡೆ ಫಲಕಗಳು : ಧರಮಪ್ರಕಾಶಗಲ್ಲಿಯ ಒಂದು ಗೋಡೆ ಫಲಕದಲ್ಲಿ ದೇವಕೋಷ್ಠವಿದೆ. ಮಧ್ಯ ಕೇಶವನಿರುವನು. ಈ ದೇವಕೋಷ್ಠದ ಅರ್ಧಗಂಬಗಳ ಮೇಲೆ ವಿಮಾನವಿದೆ.

ತ್ರಿಭಂಗಿಯಲ್ಲಿ ವಿಷ್ಣು : ನಗರದ ಸುಭಾಷ್ ಚೌಕ್ ಬದಿಯ ಶಂಕರಲಿಂಗೇಶ್ವರ ದೇವಾಲಯದ ಪಕ್ಕದಲ್ಲಿ ಫಲಕವಿದೆ. ಆ ಫಲಕದಲ್ಲಿ ವಿಷ್ಣು ತ್ರಿಭಂಗಿಯಲ್ಲಿ ನಿಂತಿರುವನು. ಬಸವಕಲ್ಯಾಣ-ನಾರಾಯಣಪುರ ಮಾರ್ಗದ ಬದಿಗೆ ಹಾಲು ಬಸವನ ದೇವಾಲಯದಲ್ಲಿ ಒಡೆದ ವಿಷ್ಣುವಿನ ಫಲಕವಿದೆ. ಈ ಫಲಕವನ್ನು ಸಿಸ್ಟ್ ಶಿಲೆಯಿಂದ ತಯಾರಿಸಲಾಗಿದೆ. ಇದೇ ರೀತಿ ತುಂಡಾದ ವಿಷ್ಣು ಫಲಕವೊಂದು ವಿಠೋಬ ಮಂದಿರದ ಹತ್ತಿರವಿರುವ ಗುಂಡಪ್ಪ ಮಂಜುನಾಥರ ಮನೆ ಮುಂದಿದೆ. ಸದಾನಂದ ಮಠದ ಹತ್ತಿರದ ಬಾವಿಯ ಗೋಡೆಯಲ್ಲಿ ವಿಷ್ಣು ಫಲಕವಿದೆ. ಅಲ್ಲಿ ವಿಷ್ಣು ತ್ರಿಭಂಗಿಯಲ್ಲಿರುವನು. ಚತುರ್ಭುಜಧಾರಿಯಾದ ಈತನ ಕೈಗಳಲ್ಲಿ ಗದೆ, ಚಕ್ರ, ಶಂಖ ಮತ್ತು ಜಪಮಾಲೆ (ಅಭಯಹಸ್ತ) ಗಳಿವೆ.

ಕೇಶವ : ನೂಲಿಚಂದಯ್ಯನ ಮಂದಿರದ ಮುಂದೆ ಒಂದು ವಿಷ್ಣುವಿಗ್ರಹವಿದೆ. ಕೆಳಗಿನ ಕೈಗಳು ಒಡೆದು ಹೋಗಿದ್ದು, ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಆತನ ಬಲಗಡೆಯ ಕಾಲಿನ ಬದಿಗೆ ಗರುಡನಿದ್ದಾನೆ. ಎಡಕಾಲಿನ ಬದಿಗೆ ಸೇವಕಿ ಚೌರಿ ಹಿಡಿದು ನಿಂತಿರುವಳು. ಅಲ್ಲಿಯ ಇನ್ನೊಂದು ಫಲಕದಲ್ಲಿ ವಿಷ್ಣುವಿನ ತಲೆಭಾಗ ಮಾತ್ರ ಉಳಿದಿದೆ. ಕಾಳೀಗಲ್ಲಿಯಲ್ಲಿರುವ ಶ್ರೀ ಬದ್ದಪ್ಪ ಮಾಲಿಪಾಟೀಲ ಅವರ ಮನೆಮುಂದಿನ ವಿಷ್ಣು ಶಿಲ್ಪ (ಫಲಕ) ಶಿಥಿಲಗೊಂಡಿದೆ.



ಗರುಡಾರೂಢ ಲಕ್ಷ್ಮೀ-ನಾರಾಯಣ : ಸ್ಥಳೀಯ ಗುಂಡಪ್ಪ ಮುಜನಾಕರ ಮನೆಯ ಮುಂದೆ ಇರುವ ವಿಠೋಬ ಗುಡಿಯ ಹತ್ತಿರದ ಶಿಲ್ಪದಲ್ಲಿ ಗರುಡನು ಲಕ್ಷ್ಮೀ-ನಾರಾಯಣರನ್ನು ಹೊತ್ತಿರುವನು. ಗರುಡನ ರೂಪ ಮತ್ತು ಧರಿಸಿದ್ದ ವಸ್ತ್ರಾಭರಣಗಳು ಆಕರ್ಷಣೀಯವಾಗಿವೆ. ಲಕ್ಷ್ಮಿಯ ಮುಖ, ನಾರಾಯಣನ ಕಿರೀಟ ಮುಕುಟ, ಕೈಗಳು ಮತ್ತು

ಮುಖಭಾಗಗಳು ಒಡೆದಿವೆ. ನಾರಾಯಣನು ಲಕ್ಷ್ಮಿಯನ್ನು ಎಡ ತೊಡೆಯ ಮೇಲೆ ಕೂಡಿಸಿಕೊಂಡಿರುವನು. ಈತನು ಸವ್ಯಲಲಿತಾಸನದಲ್ಲಿ ಕುಳಿತಿರುವನು. ಈತನು ಚತುರ್ಭುಜಧಾರಿ. ತನ್ನ ಮೇಲಿನ ಎಡಕೈಯಿಂದ ಲಕ್ಷ್ಮಿಯನ್ನು ಅಪ್ಪಿಕೊಂಡಿರುವನು. ವಿವಿಧ ವಸ್ತ್ರಾಭರಣಗಳನ್ನು ಈ ದೇವ-ದೇವತೆಯರು ಧರಿಸಿರುವರು. ಗರುಡನು ಮುಂದೆ ಚಾಚಿದ ಒಂದು ಪಟ್ಟಿಕೆಯ ಮೇಲೆ ತನ್ನ ಕೆಳಭಾಗದ ದೇಹಾಂಗವನ್ನು ಅಡ್ಡವಾಗಿ ಮಲಗಿಸಿ ಮೇಲಿನ ಭಾಗವನ್ನು ಎತ್ತಿಹಿಡಿದುಕೊಂಡು ಈ ದಂಪತಿಗಳನ್ನು ಹೆಗಲಮೇಲೆ ಹೊತ್ತುಕೊಂಡಿರುವನು. ಭುಜದ ಬದಿಗಳಲ್ಲಿ ರೆಕ್ಕೆಗಳು ಹರಡಿವೆ. ಈ ಸ್ಥಳದ ಇನ್ನೊಂದು ತುಂಡು ಶಿಲ್ಪದಲ್ಲಿ ಗರುಡನು ತನ್ನ ಕೈಗಳ ಮೇಲೆ ಲಕ್ಷ್ಮಿ-ನಾರಾಯಣರನ್ನು ಎತ್ತಿಹಿಡಿದ್ದಾನೆ. ಈ ದೇವತೆಗಳ ತೊಡೆ-ಕಾಲುಗಳು ಮಾತ್ರ ಉಳಿದಿವೆ.

ರಾಮ-ಹನುಮ : ರಾಮ-ಹನುಮರ ಪಯಣದ ಶಿಲ್ಪ ಫಲಕವೊಂದು ಕೋಟೆಯ ಒಳಗಿದೆ. ಅದರ ಮೇಲ್ಭಾಗ ಮತ್ತು ಹನುಮನ ಕಾಲುಗಳು ಒಡೆದಿವೆ. ರಾಮನು ಬಲಗೈಯಲ್ಲಿ ಬಾಣವನ್ನು ಎಡಗೈಯಲ್ಲಿ ಉದ್ದವಾದ ಬಿಲ್ಲನ್ನು ಹಿಡಿದಿರುವನು. ಕಿರೀಟಮುಕುಟ, ಕರ್ಣಕುಂಡಲ, ಮಣಿಮುತ್ತಿನಹಾರ, ಸೊಂಟಪಟ್ಟಿ, ಹಿಂದಕ್ಕೆ ಇಳಿಬಿಟ್ಟ ವಸ್ತ್ರ, ಕಡಗ, ಬಳೆ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವನು. ಹನುಮ ತನ್ನ ಬಲಗೈಯನ್ನು ಎದೆಯ ಮುಂದೆ ಇಟ್ಟಿರುವನು. ಹನುಮನ ಮುಖ ಮಂಗನಂತಿದೆ. ಆತನಿಗೆ ಒಂದು ಬಾಲವಿದೆ. ತನ್ನ ಎಡಗೈಯನ್ನು ಮೇಲಕ್ಕೆತ್ತಿಹಿಡಿದಿರುವನು. ಅವನು ಧರಿಸಿದ ಕರ್ಣಕುಂಡಲ, ಕೊರಳಹಾರ, ಸೊಂಟಪಟ್ಟಿ, ತೋಳುಬಳೆ, ಕಡಗಗಳು ರಾಮನ ಆಭರಣಗಳನ್ನು ಹೋಲುತ್ತವೆ. ಕೊರಳಲ್ಲಿ ದಪ್ಪನೆಯ ಹಾರ ಮತ್ತು ತೋಳಲ್ಲಿ ಧರಿಸಿದ ಬಳೆಗಳಲ್ಲಿ ಮಣಿಗಳಿವೆ. ಈರ್ವರೂ ಪ್ರತ್ಯೇಕ ಪೀಠದ ಮೇಲೆ ನಿಂತಿರುವರು.



ಹನುಮ ರೂಢ ಲಕ್ಷ್ಮಣ : ಹನುಮನು ಲಕ್ಷ್ಮಣನನ್ನು ಹೊತ್ತಿರುವ ಶಿಲ್ಪ ಫಲಕವೊಂದು ಕೋಟೆಯ ಒಳಗಿದೆ. ರಾಮಾಯಣದಲ್ಲಿ ಲಕ್ಷ್ಮಣನನ್ನು ರಾವಣನ ಮಗ ಇಂದ್ರಜಿತನು ಸಂಹಾರ ಮಾಡಲು ಹವಣಿಸಿದ ಸಂಗತಿ ಇದೆ. ಬೋಡುತಲೆ ಮತ್ತು ಮಂಗ ಮುಖದ ಹನುಮನು ತನ್ನೆರಡು ಕೈಗಳ ಮೇಲೆ ಲಕ್ಷ್ಮಣನನ್ನು ಹೊತ್ತಿರುವನು. ಲಕ್ಷ್ಮಣ ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿರುವನು. ಬಲಗೈಯಿಂದ ಬಾಣವನ್ನು ಹೊರಗಡೆ ತೆಗೆಯುತ್ತಿರುವನು. ಈ ದೃಶ್ಯದಲ್ಲಿ ಹನುಮನನ್ನು ಕಿರಿದಾಗಿ

ಲಕ್ಷ್ಮಣನನ್ನು ದೊಡ್ಡದಾಗಿ ಚಿತ್ರಿಸಲಾಗಿದೆ. ಇದರಿಂದ ಲಕ್ಷ್ಮಣನ ಚಿತ್ರಕ್ಕೆ ಹೆಚ್ಚು ಪ್ರಾತಿನಿಧ್ಯ ನೀಡಿರುವುದು ತಿಳಿಯುತ್ತದೆ. ಹನುಮನು ಮುಂಚಾಚಿದ ಪ್ರತ್ಯೇಕ ಪೀಠದ ಮೇಲೆ ನಿಂತಿರುವನು. ಲಕ್ಷ್ಮಣನ ತಲೆ, ಬಿಲ್ಲು, ಫಲಕದ ಕೆಳಗಿನ ಎಡ ಭಾಗಗಳು ಒಡೆದಿವೆ. ಲಕ್ಷ್ಮಣನು ಕುಂಡಲ, ಹಾರ, ಬಳೆ, ಸೊಂಟಪಟ್ಟಿ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾನೆ.



ಹನುಮ-ಅಕ್ಷಯಕುಮಾರ ಹೋರಾಟ : ಹನುಮ-ಅಕ್ಷಯ ಕುಮಾರರು ಹೋರಾಡುವ ದೃಶ್ಯವುಳ್ಳ ಫಲಕ ಕೋಟೆಯ ಒಳಗಡೆಯಿದೆ. ಅಲ್ಲಲ್ಲಿ ಶಿಲ್ಪ ಒಡೆದಿದೆ. ಶಿಲ್ಪದಲ್ಲಿ ಅಕ್ಷಯಕುಮಾರ ಮತ್ತು ಹನುಮರು ಕೈ-ಕೈಗಳನ್ನು ದೇಹಗಳನ್ನು ಬಿಗಿಯಾಗಿ ಹಿಡಿದು ಅಪ್ಪಿಕೊಂಡು ಹೋರಾಡುತ್ತಿರುವರು. ಹನುಮ ಅಕ್ಷಯಕುಮಾರನನ್ನು ಎತ್ತಿ ಕೆಳಗೆ ಹಾಕಿ ಅವನ ಕುತ್ತಿಗೆಯ ಮೇಲೆ ಕಾಲನ್ನಿಟ್ಟು ತಲೆಯನ್ನು ಕೆಳಮಾಡಿ ಹೊಡೆಯುತ್ತಿರುವನು. ಈ ದೃಶ್ಯವನ್ನು ಮುಂಚಾಚಿದ ಪೀಠದ ಮೇಲೆ ಚಿತ್ರಿಸಲಾಗಿದೆ.

ವಾಲಿ : ಕೋಟೆಯ ಒಳಗಡೆ ತುಂಡಾದ ಶಿಲ್ಪ ಫಲಕದಲ್ಲಿ ವಾಲಿಯ ಉಬ್ಬು ಚಿತ್ರವಿದೆ.



ರಾವಣ : ರಾವಣನ ಎರಡು ಉಬ್ಬು ಶಿಲ್ಪ ಫಲಕಗಳು ಅಲ್ಲಿವೆ. ಒಂದು ಫಲಕ ಕೋಟೆಯ ಗೋಡೆಯಲ್ಲಿದೆ. ಇನ್ನೊಂದು ನೆರೆಯ ಪರ್ತಾಪುರ ಗ್ರಾಮದ ಮಾರುತಿ ಮಂದಿರದ ಗೋಡೆಯಲ್ಲಿದೆ. ಕೋಟೆ ಗೋಡೆಯಲ್ಲಿರುವ ಶಿಲ್ಪದಲ್ಲಿ ರಾವಣನು ತನ್ನ ರಥದಲ್ಲಿ ನಿಂತು ಪ್ರಯಾಣ ಮಾಡುವ ದೃಶ್ಯವಿದೆ. ಆ ರಥವನ್ನು ನಾಲ್ಕು ಕುದುರೆಗಳು ಎಳೆಯುತ್ತಿವೆ. ಆದರೆ ಪರ್ತಾಪುರದ ಶಿಲ್ಪದಲ್ಲಿ ರಾವಣನು ಕುಳಿತಿದ್ದಾನೆ. ಆತನಿಗೆ ದಶಮುಖ ಮತ್ತು ಹದಿನೆಂಟು ಬಾಹುಗಳಿವೆ. ಆ ಕೈಗಳಲ್ಲಿ ವಿವಿಧ ಆಯುಧಗಳನ್ನು ಹಿಡಿದಿದ್ದಾನೆ. ಕೆಳಗಿನ ಬಲಗೈಯನ್ನು ಇಳಿಬಿಟ್ಟಿದ್ದು ಎಡಗೈಯನ್ನು ತನ್ನ ವಕ್ಷಕ್ಕೆ ಅಡಿಯಾಗಿ ಹಿಡಿದಿದ್ದಾನೆ. ಕೆಳಗಡೆ ಒಬ್ಬ ವ್ಯಕ್ತಿಯ ಚಿತ್ರವಿದೆ.



ಶಕುನಿವಧೆ : ತೊಟ್ಟಿಲಲ್ಲಿ ಮಲಗಿದ ವಿಷ್ಣು ಒಂದು ಕಾಲಿನಿಂದ ಕಂಬವನ್ನು ಒದ್ದು ಕೆಳಗಡೆ ಬೀಳಿಸುವ ದೃಶ್ಯವಿದೆ. ಇಳಿಬಿದ್ದ ಸರಪಳಿಗಳಿಂದ ತೊಟ್ಟಿಲನ್ನು ಕಟ್ಟಲಾಗಿದೆ. ವಿಮಾನದ ಕಂಬವೊಂದು ಬೀಳುವ ರೀತಿಯಲ್ಲಿದೆ. ಇದರ ಕಾಲ ಸುಮಾರು ಕ್ರಿ.ಶ. ೧೧-೧೨ನೇ ಶತಮಾನ



ಕೃಷ್ಣ-ಯಶೋಧೆ : ಬಸವ ಕಲ್ಯಾಣದ ಉತ್ತರಕ್ಕೆ ಸುಮಾರು ೨ ಕಿ.ಮೀ. ಅಂತರದಲ್ಲಿ ಹುಲಸೂರು ರಸ್ತೆಯ ಬದಿಯಲ್ಲಿ ಅರಳೀಗಿಡದ ಕೆಳಗೆ ಈಶ್ವರ ದೇವಾಲಯದ ಗೋಡೆಯಲ್ಲಿ ಕೃಷ್ಣ-ಯಶೋಧೆಯರ ಶಿಲ್ಪ ಫಲಕವಿದೆ. ಈ ಫಲಕದಲ್ಲಿ ಒಂದು ದೇವಾಲಯ ವಿಮಾನ ಮಾದರಿಯಲ್ಲಿದೆ. ಅದರ ಕೆಳಗಿನ ತಳಭಾಗದಲ್ಲಿ ಹೆಂಗಸೊಬ್ಬಳು ಮಗುವನ್ನು ತನ್ನ ಮಗ್ಗುಲಲ್ಲಿ ಹಾಕಿಕೊಂಡು ಮಲಗಿರುವಳು. ಈಕೆಯು ತನ್ನ ಬಲಗೈಯನ್ನು ತಲೆ ಬುಡದ ಕೆಳಗಡೆ ಇಟ್ಟಿರುವಳು. ವಿವಿಧ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ಆದರೆ ತಲೆಗೆ ಮಾತ್ರ ಕಿರೀಟವನ್ನು ಧರಿಸಿರುವುದಿಲ್ಲ. ಈಕೆಯು ದಪ್ಪನೆಯ ಗಾದೆ ಮೇಲೆ ಮಲಗಿರುವಳು. ಅವಳ ಪಾದದ ಬದಿಗೆ ಸೇವಕಿಯೊಬ್ಬಳು ನಿಂತಿದ್ದು ತನ್ನ ಬಲ ಕೈಯಿಂದ ಒಂದು ವಸ್ತುವನ್ನು ಮಲಗಿದ ಮಹಿಳೆಗೆ ನೀಡುತ್ತಿರುವಳು. ತನ್ನ ಎಡಗೈಯಲ್ಲಿ ಕಳಸ (?)ವನ್ನು ಎತ್ತಿ ಹಿಡಿದುಕೊಂಡು ಹೊಟ್ಟೆಯ ಮುಂದೆ ಕೈಯಿಟ್ಟುಕೊಂಡು ನಿಂತಿದ್ದಾಳೆ. ಈ ಚಿತ್ರದಲ್ಲಿ ತೋರಿಸಿದ ಭೂಮಿಜ (ಕದಂಬ-ನಾಗರ) ಶಿಖರವನ್ನು ಎರಡು ಅರ್ಧಗಂಬಗಳ ಮೇಲೆ ನಿಲ್ಲಿಸಲಾಗಿದೆ. ಈ ಅರ್ಧಗಂಭಗಳ ಮಧ್ಯ ದೇವ-ದೇವತೆಗಳ ಚಿತ್ರಗಳ ಬದಲು ಒಂದು ಕಮಂಡಲ ಮತ್ತು ಒಂದು ಗಿಂಡಿಗಳಿವೆ. ಕಮಂಡಲಿಗೆ ಎರಡೂ ಕಡೆಗಳಲ್ಲಿ ಹಿಡಿಕೆಗಳಿವೆ. ಕಮಂಡಲ ಮತ್ತು ಗಿಂಡಿಗಳನ್ನು ಮುಚ್ಚಳದಿಂದ ಮುಚ್ಚಲಾಗಿದೆ. ವಿಮಾನ ಮಾದರಿಯಲ್ಲಿ ನಾಲ್ಕು ತಲಗಳಿವೆ. ತಲಾ ಒಂದು ತಲಗಳಿಗೆ ಇಳಿಜಾರಾದ ಕಪೋತ ಪಟ್ಟಿಕೆಗಳಿವೆ. ಈ ವಿಮಾನದ ಕಂಠದಲ್ಲಿ ಕಳಸವಿದೆ. ಪ್ರತಿಯೊಂದು ತಳಗಳು ಅರ್ಧಗಂಬಗಳ ಮೇಲೆ ನಿಂತಿವೆ. ಸೇವಕಿ ಎಂದು ಭಾವಿಸಿದ ಮಹಿಳೆಯು ಕಿರೀಟ ಇನ್ನಿತರ ವಸ್ತ್ರಾಭರಣಗಳನ್ನು ಧರಿಸಿದ್ದಾಳೆ. ಮಗುವನ್ನು ಬದಿಗೆ ಹಾಕಿಕೊಂಡು ಮಲಗಿದ ತಾಯಿಯ ಈ ರೀತಿಯ ಶಿಲ್ಪಗಳು ಕರ್ನಾಟಕದ ವಾಸ್ತು ಶಿಲ್ಪಗಳಲ್ಲಿ ವಿರಳ. ಆದರೆ ಮಧ್ಯ ಭಾರತದ ಪಾಳ, ಪರಮಾರರ ಕಾಲದಲ್ಲಿ ಈ ರೀತಿಯ ಕೆಲವು ಶಿಲ್ಪಗಳು ಬೆಳಕನ್ನು ಕಂಡಿವೆ. ಈ ರೀತಿಯ ತಾಯಿ-ಮಗುವು ಕೃಷ್ಣ-ಯಶೋದೆ ಅಥವಾ ಬುದ್ಧ-ಮಾಯಾವತಿಯರಿರುವ ಸಾಧ್ಯತೆ ಹೆಚ್ಚು. ಈ ಲಕ್ಷಣವು ಮಧ್ಯಭಾರತದಿಂದ ಈ ಪ್ರದೇಶಕ್ಕೆ ಆ ಕಾಲದಲ್ಲಿ ಹರಿದುಬಂದಿದೆ ಎಂದು ಹೇಳಬಹುದು.

ಈ ದೃಶ್ಯದಲ್ಲಿ ಗಿಂಡಿ ಮತ್ತು ಕಮಂಡಲಗಳ ಚಿತ್ರಗಳು ಗಂಗ ನೀತಿಮಾರ್ಗನು ದೊಡ್ಡಹುಂಡಿ ಶಾಸನದಲ್ಲಿ ಕೀಲ್ಗುಂಟೆಯಾದ ನೆನಪಿನ ಸ್ಮಾರಕದಲ್ಲಿ ಚಿತ್ರಿಸಿದ ಲಕ್ಷಣದ ಸಾಮಿಪ್ಯವನ್ನು ಹೋಲುತ್ತದೆ. ಇದರಿಂದ ಈ ಶಿಲ್ಪ ಫಲಕವು ಒಂದು ನೆನಪಿನ ಸ್ಮಾರಕ ಫಲಕವಾಗಿರಲೂಬಹುದು.

ಶಿಲ್ಪಗಳು

ಕೇಶವ : ಕೇಶವನ ಶಿಲ್ಪಗಳು ಕೋಟೆ ಒಳಗಿನ ವಸ್ತು ಸಂಗ್ರಹಾಲಯದಲ್ಲಿ, ತ್ರಿಪುರಾಂತಕ ಕೆರೆ ದಂಡೆಯ ಮೇಲಿರುವ ಮಾರುತಿ ಮಂದಿರದ ಮುಂದಿವೆ. ಭೀಮಾನಗರದಲ್ಲಿ, ಗೌಂಡಿಗಲ್ಲಿಯ ಮಾರುತಿ ಮಂದಿರದಲ್ಲಿ, ಸದಾನಂದ ಮಠದ ಹತ್ತಿರದ ಬಾವಿಯ ಗೋಡೆಯಲ್ಲಿ ಮತ್ತು ಇನ್ನಿತರ ಕಡೆಗಳಲ್ಲಿವೆ. ಕೋಟೆಯ ಒಳಗಿನ ವಸ್ತು ಸಂಗ್ರಹಾಲಯದ ಶಿಲ್ಪದಲ್ಲಿ ಕೇಶವನ ಬದಿಗಳಲ್ಲಿ ಗರುಡ ಮತ್ತು ಭಕ್ತರಿದ್ದಾರೆ. ಚತುರ್ಭುಜನಾದ ಇವನ ಕೈಗಳಲ್ಲಿ ಪದ್ಮ (ಅಭಯ), ಶಂಖ, ಚಕ್ರ ಮತ್ತು ಗದೆಗಳಿವೆ. ಬದಿಗಳಲ್ಲಿರುವ ಭಕ್ತರು ಕೈಮುಗಿದು ಕೇಶವನನ್ನು ನೋಡುತ್ತ ಕುಳಿತಿರುವರು. ಈ ಶಿಲ್ಪದಲ್ಲಿ ಮಕರ ತೋರಣ ಪಟ್ಟಿಕೆಯ ಅಲಂಕರಣವಿದ್ದು ಈ ರೀತಿಯ ಲಕ್ಷಣ ಈ ಭಾಗದಲ್ಲಿ ವಿರಳ. ಬಳ್ಳಾರಿ ಮತ್ತು ಹಳೆಯ ಧಾರವಾಡ ಜಿಲ್ಲೆಗಳಲ್ಲಿ ಕಂಡುಬರುವ ಸಾಮಾನ್ಯ ಪ್ರಭಾವಳಿಯ ಸುತ್ತಲೂ ವಿಷ್ಣುವಿನ ದಶಾವತಾರ ಚಿತ್ರಗಳಿರುವ ಕೇಶವನ ಶಿಲ್ಪವೊಂದು ತ್ರಿಪುರಾಂತಕ ಕೆರೆ ದಂಡೆಯ ಮಾರುತಿ ಮಂದಿರದ ಮುಂದಿದೆ. ಕೇಶವನು ತನ್ನ ಕೆಳಗಿನ ಬಲಗೈಯಲ್ಲಿ ಪದ್ಮದ ಬದಲು ಜಪಮಾಲೆಯನ್ನು ಹಿಡಿದಿರುವನು. ಆತನ ಬದಿಗಳಲ್ಲಿ ಭೂದೇವಿ, ಶ್ರೀದೇವಿಯರು, ಸೇವಕಿ ಮತ್ತು ಗರುಡರಿರುವರು. ಈ ಶಿಲ್ಪದ ಅಲಂಕಾರ ಮಕರ ತೋರಣದಿಂದ ಕೂಡಿದೆ. ಅದರ ಪ್ರಭಾವಳಿಯ ಸುತ್ತಲೂ ವಿಷ್ಣುವಿನ ದಶಾವತಾರ ಚಿತ್ರಗಳಿವೆ. ಉಳಿದ ಕೈಗಳಲ್ಲಿ ಶಂಖ, ಚಕ್ರ ಮತ್ತು ಒಡೆದ ಗದೆಯಿದೆ. ತ್ರಿಕೋನಾಕಾರದ ಪ್ರಭಾವಳಿಯ ತೋರಣದ ಸುತ್ತಲೂ ದಶಾವತಾರದ ಚಿತ್ರಗಳಿವೆ. ತೋರಣದ ಅರ್ಧಗಂಬಗಳ ಹೊರಬದಿಯಲ್ಲಿ ಕುಬ್ಜರ ಚಿತ್ರಗಳಿರುವುದು ಗಮನೀಯ. ಆಮಲಕದ ಮೇಲೆ ಈ ಶಿಲ್ಪವಿದೆ. ಭೀಮಾನಗರದಲ್ಲಿರುವ ಕೇಶವನ ಶಿಲ್ಪದಲ್ಲಿ ಯಾವುದೇ ಹೊಸ ಲಕ್ಷಣಗಳಿರುವುದಿಲ್ಲ.

ಕೋಟೆ ಒಳಗಿನ ವಸ್ತುಸಂಗ್ರಹಾಲಯದಲ್ಲಿ ಇನ್ನೊಂದು ಕೇಶವನ ವಿಗ್ರಹವಿದೆ. ಆತನ ನಾಲ್ಕು ಕೈಗಳು ಮುರಿದಿವೆ. ಎಡಗಡೆಯ ಮೇಲಿನ ಕೈಯಲ್ಲಿ ಚಕ್ರ ಮತ್ತು ಕೆಳಗಡೆ ಕೈಯಲ್ಲಿ ಗದೆಗಳು ಉಳಿದುಕೊಂಡಿವೆ. ಕೇಶವನು ಸಮಭಂಗಿಯಲ್ಲಿರುವನು. ಆತನ ಬದಿಗಳಲ್ಲಿ ಕೆಳಗಡೆ ಫಲಗಳನ್ನು ಹಿಡಿದು ಸೇವಕರು ನಿಂತಿದ್ದಾರೆ ಮತ್ತು ಸೇವಕಿಯು ಎಡಗಡೆ ನಿಂತಿರುವಳು. ಕೇಶವನ ಬದಿಗಳಲ್ಲಿ ಮತ್ತು ಸೇವಕ, ಸೇವಕಿಯರ ಮೇಲ್ಭಾಗದಲ್ಲಿ ಆನೆ ಮತ್ತು ಸಿಂಹಗಳಿವೆ. ಅದಕ್ಕೆ ಸರಳ ಲತಾಸುರಳಿ ತೋರಣವಿದ್ದು ಕೇಶವನ ತಲೆಮೇಲೆ ಕೀರ್ತಿ

ಮುಖವಿದೆ. ತೋರಣದ ಸುತ್ತಲೂ ದಶಾವತಾರ ಚಿತ್ರಗಳಿವೆ. ಕೇಶವನ ಬದಿಗಳಲ್ಲಿ ತಲಾ ಒಂದು ಕಡೆ ಪಟ್ಟಿಕೆಗಳಲ್ಲಿ ಮೂರು ಪದರುಗಳಿವೆ. ಅಲ್ಲಿ ವಿವಿಧ ಚಿತ್ರಗಳನ್ನು ತೋರಿಸಲಾಗಿದೆ. ಮೊದಲನೆಯ ಪಟ್ಟಿಕೆಯ ಮೇಲೆ ಸೇವಕ ಭಕ್ತರ ಸಮೂಹವಿದೆ. ಎರಡನೇ ಪಟ್ಟಿಕೆಯಲ್ಲಿ ಕಿರುದಾಗಿ ಪ್ರಾಣಿಗಳನ್ನು ಕೆಳಗಡೆ ಪ್ರಾಣಿಗಳ ಮೇಲಿನ ಕಿರು ಚಿತ್ರಗಳು ಮತ್ತು ಮೂರನೇ ಪಟ್ಟಿಕೆಯು ಆಕರ್ಷಣೀಯವಾಗಿದೆ. ಸ್ಥಳೀಯ ಕಿರು ಮಾರುತಿ ದೇವಾಲಯದ ಗೋಡೆಯಲ್ಲಿರುವ ಕೇಶವ ಶಿಲ್ಪದ ಎರಡೂ ಬದಿಗಳಲ್ಲಿ ಕಿರಿದಾದ ಗೂಡುಗಳಿವೆ. ಅವುಗಳಲ್ಲಿ ಬ್ರಹ್ಮ ಮತ್ತು ಶಿವ ಪದ್ಮಾಸನದಲ್ಲಿ ಕುಳಿತಿರುವರು. ಈ ರೀತಿಯ ಉದ್ದ ಪಟ್ಟಿಕೆಯುಳ್ಳ ಶಿಲ್ಪವು ಉತ್ತರ ಕರ್ನಾಟಕದಲ್ಲಿ ವಿರಳ. ಈ ಲಕ್ಷಣವು ಉತ್ತರ ಭಾರತದ ಶಿಲ್ಪಗಳ ಮಾದರಿಯಲ್ಲಿದೆ.

ಗೌಂಡಿಗಲ್ಲಿಯ ಮಾರುತಿ ಮಂದಿರದಲ್ಲಿ ಎರಡು ಕೇಶವನ ಶಿಲ್ಪಗಳಿವೆ. ಒಂದರ ಕಿರೀಟಮುಕುಟಕ್ಕೆ ಉದ್ದ ಪಟ್ಟಿಕೆಗಳ ಅಲಂಕರಣವಿದೆ. ಈ ಲಕ್ಷಣವು ಮಧ್ಯ ಭಾರತದ ಶೈಲಿಯಲ್ಲಿದೆ. ಈ ಶಿಲ್ಪದಲ್ಲಿ ಕೇಶವನ ಬದಿಗೆ ಸೇವಕಿ ಮತ್ತು ಗರುಡನಿರುವರು. ಇನ್ನೊಂದರ ಕೇಶವ ವಿಗ್ರಹದ ತೋರಣದ್ದ ಅರ್ಧಗಂಬಗಳ ಬದಿಗೆ ಅಡ್ಡಪಟ್ಟಿಕೆಗಳು ಒಳಗೊಂಡಿವೆ. ಈ ಪಟ್ಟಿಕೆಗಳ ಮಧ್ಯ ಭಕ್ತವೃಂದದವರ ಚಿತ್ರಗಳನ್ನು ಕಿರುಗಾತ್ರದಲ್ಲಿ ಚಿತ್ರಿಸಲಾಗಿದೆ. ತೋರಣದ ಪ್ರಭಾವಳಿ ವೈವಿಧ್ಯಮಯವಾಗಿದೆ. ಆತನ ಬದಿಗಳಲ್ಲಿ ಗರುಡ ಮತ್ತು ಸೇವಕಿಯರಿದ್ದಾರೆ.

ಸದಾನಂದ ಮಠದ ಹತ್ತಿರದ ಬಾವಿಯಗೋಡೆ ಶಿಲ್ಪದಲ್ಲಿ ಕೇಶವನ ಬದಿಗಳಲ್ಲಿ ನಾಗರಹಾವು ಮತ್ತು ಭಕ್ತರಿರುವುದು ವಿಶಿಷ್ಟವೆನಿಸಿದೆ. ಆತನ ಎಡಗಡೆ ಕೆಳಗಿನಿಂದ ಮೇಲಿನವರೆಗೆ ಸುರುಳಿ ಸುರುಳಿಯಾಗಿ ನಾಗರಹಾವು ಹರಡಿದೆ. ಈ ನಾಗರಹಾವಿನ ಬದಿಗೆ ಭಕ್ತನಿದ್ದಾನೆ. ಈ ಶಿಲ್ಪದ ಬದಿಗೆ ಇನ್ನೊಂದು ವಿಷ್ಣುವಿನ ಶಿಲ್ಪವಿದೆ. ಅದರಲ್ಲಿ ವಿಷ್ಣುವು ತನ್ನ ನಾಲ್ಕು ಕೈಗಳಲ್ಲಿ ಅಭಯ, ಚಕ್ರ, ಶಂಖ ಮತ್ತು ಗದೆಗಳನ್ನು ಹಿಡಿದಿದ್ದಾನೆ. ಮಕರ ತೋರಣ ಪಟ್ಟಿಯ ಅಲಂಕರಣವಿದೆ. ಬದಿಗಳಲ್ಲಿ ಕೆಳಗಡೆ ಗರುಡ ಮತ್ತು ಇಬ್ಬರು ಭಕ್ತರಿದ್ದಾರೆ. ಪ್ರಭಾವಳಿಯಲ್ಲಿ ದಶಾವತಾರ ಚಿತ್ರಗಳಿವೆ.

ಅನಂತಶಯನ : ಸ್ಥಳೀಯ ಸೋಮವಾರಪೇಟೆಯ ಸೋಮೇಶ್ವರ ದೇವಾಲಯದ ಹೊರಗಡೆ ಒಂದು ತುಂಡಾದ ಅನಂತಶಯನ ವಿಗ್ರಹವಿದೆ. ಅದರಲ್ಲಿ ಕೇವಲ ಆತನ ಮುಖಭಾಗ ಮಾತ್ರ ಉಳಿದುಕೊಂಡಿದೆ. ಆತನ ತಲೆಯನ್ನು ಸರ್ಪವು ತನ್ನ ಏಳು ಹೆಡೆಯಿಂದ ಆವರಿಸಿದೆ. ಮೇಲಿನ ಒಂದು ಕೈಯಲ್ಲಿ ಚಕ್ರವಿದೆ. ಶಿವಪುರದ ಶಿವಮಂದಿರ ಪಕ್ಕದ ನರಸಪ್ಪನ ಗುಡಿ ಮುಂದೆ ಒಂದು ಅನಂತಶಯನ ಶಿಲ್ಪವಿದೆ. ಸರ್ಪದ ಹಾಸಿಗೆ ಮೇಲೆ ಮಲಗಿದ ವಿಷ್ಣುವಿನ ನಾಲ್ಕು ಕೈಗಳಲ್ಲಿ ಗದೆ, ಶಂಖ, ಚಕ್ರ ಮತ್ತು ಪದ್ಮಗಳಿವೆ. ತನ್ನ ಮೇಲಿನ

ಎಡಗೈಯಿಂದ ತಲೆಯನ್ನು ಆಸರೆಯಾಗಿ ಹಿಡಿದುಕೊಂಡು ಮಲಗಿರುವನು. ಅದರ ಮೇಲ್ಭಾಗದಲ್ಲಿ ವಿಷ್ಣುವಿನ ದಶಾವತಾರ ಚಿತ್ರಗಳಿವೆ. ಸ್ಥಳೀಯ ಬಾಲಾಜಿ ಮಂದಿರ ಮತ್ತು ಗೌಂಡಿಗಲ್ಲಿಯ ಮಾರುತಿ ಗುಡಿಯಲ್ಲಿರುವ ಅನಂತಶಯನ ಶಿಲ್ಪದಲ್ಲಿ ದಶಾವತಾರ, ಲಕ್ಷ್ಮಿ ಗರುಡ ವಕ್ಷದಿಂದ ಬಂದ ಕಮಲದಲ್ಲಿ ಬ್ರಹ್ಮರ ಚಿತ್ರಗಳಿವೆ ಆದರೆ ಕೋಟೆ ಒಳಗಿನ ಒಂದು ಶಿಲ್ಪ ಹೆಚ್ಚು ಶಿಥಿಲವಾಗಿದೆ.

ಭೂವರಾಹ : ವಿಷ್ಣು ವರಾಹರೂಪದಲ್ಲಿದ್ದು ತನ್ನ ಒಂದು ತೋಳಿನ ಮೇಲೆ ಭೂದೇವಿಯನ್ನು ಹೊತ್ತು ನಿಂತಿರುವ ಶಿಲ್ಪಗಳು ಅಲ್ಲಲ್ಲಿವೆ. ಚತುರ್ಭುಜಧಾರಿಯಾದ ಈತನ ಕೈಗಳಲ್ಲಿ ಪದ್ಮ, ಗದೆ, ಶಂಖ ಮತ್ತು ಚಕ್ರಗಳಿದ್ದರೆ ಬಲ ಬದಿಗೆ ಕೆಳಗಡೆಯಲ್ಲಿ ಗರುಡನು ಕೈಮುಗಿದು ಕುಳಿತಿರುವನು. ಈ ಲಕ್ಷಣವುಳ್ಳ ಭೂವರಾಹ ಶಿಲ್ಪಗಳು ಸ್ಥಳೀಯ ರಾಘವೇಂದ್ರಸ್ವಾಮಿಗಳ ಮಠದ ಸಂಕೀರ್ಣ, ಕೋಟೆಯ ಒಳಗಡೆ ಇನ್ನಿತರ ಕಡೆಗಳಲ್ಲಿವೆ. ಕೋಟೆಯ ಒಳಗಡೆ ಎರಡು ಭೂವರಾಹ ಶಿಲ್ಪಗಳಿವೆ. ವರಾಹರೂಪದಲ್ಲಿರುವ ವಿಷ್ಣು ತನ್ನ ಎಡತೋಳನ್ನು ಮೇಲಕ್ಕೆ ಎತ್ತಿ ಅದರ ಮೇಲೆ ಭೂದೇವಿಯನ್ನು ಕೂಡಿಸಿ ಕೊಂಡಿರುವನು. ವಿವಿಧ ವಸ್ತ್ರಾಭರಣಗಳಿಂದ ಭೂಷಿತನಾಗಿದ್ದಾನೆ. ಆತನು ಮುಂಚಾಚಿದ ಪೀಠದ ಮೇಲೆ ನಿಂತಿದ್ದಾನೆ. ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ವರಾಹದ ತಲೆಭಾಗ, ಮೇಲಿನ ಕೈಗಳು ಮತ್ತು ಎಡಕೈ ಭಾಗ ಮುರಿದಿವೆ. ತನ್ನ ಬಲಗೈಯನ್ನು ತೊಡೆಯ ಮೇಲಿಟ್ಟುಕೊಂಡು ಭೀಕರವಾಗಿ ನಿಂತಿರುವನು. ಕುಳಿತ ನಾಗೇಂದ್ರನ (ಪಾತಾಳ ಲೋಕ) ತಲೆಯ ಮೇಲೆ ತನ್ನ ಎಡಪಾದವನ್ನಿಟ್ಟಿರುವನು. ಉಳಿದೊಂದು ಶಿಲ್ಪದಲ್ಲಿ ತನ್ನ ಕೆಳಗಿನ ಕೈಯನ್ನು ಸೊಂಟದ ಮುಂದುಗಡೆ ಇಟ್ಟಿರುವನು. ಆ ಕೈಯಲ್ಲಿ ಗದೆಯಿದೆ. ಮೇಲಿನ ಬಲಗೈಯಲ್ಲಿ ಪದ್ಮ ಮತ್ತು ಎಡಗೈ ತೋಳಿನ ಮೇಲೆ ಭೂದೇವಿಯನ್ನು ಕೂಡಿಸಿದ್ದಾನೆ. ಆ ಕೈ ಬದಿಗೆ ಚಕ್ರವಿದೆ. ಈ ಶಿಲ್ಪದಲ್ಲೂ ನಾಗನ ತಲೆ ಮೇಲೆ ಪಾದವನ್ನಿಟ್ಟಿರುವನು. ಕೆಳಗಡೆ ಆತನ ಬಲಕ್ಕೆ ಕುಳಿತ ಗರುಡನು ಧ್ಯಾನಾಸಕ್ತನಾಗಿದ್ದಾನೆ. ಅದರ ಮೇಲ್ಭಾಗ ತ್ರಿಕೋನಾಕೃತಿಯಲ್ಲಿದೆ.

ಗೋಪಾಲಕೃಷ್ಣ : ಕೊಳಲನ್ನು ಹಿಡಿದು ನಿಂತ ಗೋಪಾಲಕೃಷ್ಣನ ಶಿಲ್ಪಗಳು ವಿವಿಧೆಡೆಯಲ್ಲಿ ಚದುರಿವೆ. ಈ ಶಿಲ್ಪಗಳಲ್ಲಿ ಕೃಷ್ಣನ ಬದಿಗೆ ಗೋಪಿಕಾಸ್ತ್ರೀಯರು, ಹಸು-ಕರುಗಳು ಮುಂತಾದವರಿದ್ದಾರೆ. ಸದಾನಂದ ಮಠದ ಹತ್ತಿರವಿರುವ ವಿಶಾಲವಾದ ಮೆಟ್ಟಿಲು ಬಾವಿಯ ಗೋಡೆಯಲ್ಲಿ ಗೋಪಾಲಕೃಷ್ಣನ ಒಂದು ಸುಂದರ ಶಿಲ್ಪವಿದೆ. ಅದರಲ್ಲಿ ಕೃಷ್ಣನು ಚುತರ್ಭುಜಧಾರಿಯಾಗಿದ್ದು ಕೈಗಳಲ್ಲಿ ಚಕ್ರ, ಗದೆ, ಕಮಲ ಮತ್ತು ಶಂಖಗಳಿವೆ. ತುಟಿ ಬಾಯಿಗೆ ಹೊಂದಿ ಕೊಳಲನ್ನು ಅಡ್ಡವಾಗಿ ಹಿಡಿದಿದ್ದಾನೆ. ಕೊಳಲು ಅಲ್ಲಲ್ಲಿ ಒಡೆದಿದೆ. ಆತನ ಬದಿಗಳಲ್ಲಿ ಗೋಪಿಕಾಸ್ತ್ರೀಯರಿದ್ದಾರೆ. ಚಿಕಣಿ ಆಕಾರದಲ್ಲಿ ತೋರಿಸಲಾಗಿದೆ. ಅವರನ್ನು ಮೂರು ಅಡ್ಡ ಸಾಲುಗಳಲ್ಲಿ ಚಿತ್ರಿಸಲಾಗಿದೆ. ಆತನ ಬಲಗಡೆ ಮೊದಲನೇ ಮತ್ತು

ಎರಡನೇ ಸಾಲುಗಳಲ್ಲಿ ಇಬ್ಬಿಬ್ಬರೂ ಮತ್ತು ಮೂರನೇ ಸಾಲಿನಲ್ಲಿ ಮೂವರು ಸ್ತ್ರೀಯರಿದ್ದಾರೆ. ಎಡಗಡೆಯ ಮೂರು ಅಡ್ಡ ಸಾಲುಗಳಲ್ಲಿ ತಲಾ ಒಬ್ಬರಂತೆ ಸ್ತ್ರೀಯರಿದ್ದಾರೆ. ಅಲ್ಲದೆ ಏಳು ಹಸುಗಳು ಬಲಗಡೆಯಲ್ಲಿ ಮತ್ತು ಒಂಬತ್ತು ಹಸುಗಳು ಎಡಗಡೆಯಲ್ಲಿವೆ. ಗೋಪಾಲಕೃಷ್ಣನ ತಲೆಯ ಮೇಲೆ ಛತ್ರಿಯಂತಹ (ಗೋವರ್ಧನಗಿರಿ) ಮುಂಚಾಚಿದ ಅರ್ಧ ವೃತ್ತಾಕಾರದ ಪಟ್ಟಿಕೆಯಿದೆ. ಅದರಲ್ಲಿ ವಿಷ್ಣುವಿನ ಅವತಾರದ ಚಿತ್ರಗಳಿವೆ.

ನರಸಿಂಹ : ವಿಷ್ಣು ನರಸಿಂಹನ ಅವತಾರದಲ್ಲಿ ಹಿರಣ್ಯ ಕಶ್ಯಪನನ್ನು ಸಂಹರಿಸುವ ಶಿಲ್ಪಗಳು ಅಲ್ಲಲ್ಲಿವೆ. ಸ್ಥಳೀಯ ಶಿವಪುರದ ಶಿವಮಂದಿರ ಬದಿಗಿನ ನರಸಪ್ಪನ ಗುಡಿಯಲ್ಲಿ ನರಸಿಂಹನ ಶಿಲ್ಪವಿದೆ. ಅದರಲ್ಲಿ ಬಲಭಾಗ ಒಡೆದಿದೆ. ಅಲ್ಲಿ ಗರುಡನ ಚಿತ್ರ ಉಳಿದಿದೆ. ವಿಷ್ಣುವಿನ ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ತನ್ನ ಕೆಳಗಿನ ಕೈಗಳಿಂದ ಹಿರಣ್ಯ ಕಶ್ಯಪನನ್ನು ತೊಡೆಯ ಮೇಲೆ ಮಲಗಿಸಿ ಆತನ ಕರುಳನ್ನು ಬಗೆಯುತ್ತಿರುವನು. ಆತನಿಗೆ ಸಿಂಹ ಮತ್ತು ಮಾನವ ದೇಹವಿದೆ.

ಉಗ್ರನರಸಿಂಹ: ವಿಷ್ಣು ನರಸಿಂಹ ಅವತಾರ ಧರಿಸಿ ಹಿರಣ್ಯ ಕಶ್ಯಪನನ್ನು ಸಂಹಾರ ಮಾಡಿದ ವೈವಿಧ್ಯಮಯ ಶಿಲ್ಪಗಳಿವೆ. ಅದರಲ್ಲಿ ವಿಷ್ಣುವು ಮನುಷ್ಯ ಮತ್ತು ಸಿಂಹ ರೂಪದಲ್ಲಿರುವನು. ಆತ ಹಿರಣ್ಯಕಶ್ಯಪನೊಂದಿಗೆ ಮುಷ್ಠಿ ಯುದ್ಧ ಮಾಡುವ ಅಪರೂಪದ ಶಿಲ್ಪವೊಂದು ಪರ್ತಾಪುರದ ಮಾರುತಿ ಗುಡಿಯ ಒಂದು ಗೂಡಿನಲ್ಲಿದೆ. ಮುಖದ ಸುತ್ತಲಿನ ಭಾಗವು ಕೂದಲಿನಿಂದ ಅಲಂಕರಣಗೊಂಡಿದೆ. ಹಿರಣ್ಯಕಶ್ಯಪನು ತನ್ನ ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆ ಎತ್ತಿ ಹಿಡಿದಿದ್ದಾನೆ. ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿರುವನು.



ಗರುಡ ರೂಢ ಲಕ್ಷ್ಮಿನಾರಾಯಣ : ಲಕ್ಷ್ಮಿನಾರಾಯಣರನ್ನು ಗರುಡ (ವೈಕುಂಠ ವಿಷ್ಣು) ತನ್ನ ಹೆಗಲಮೇಲೆ ಕೂಡಿಸಿಕೊಂಡು ಒಯ್ಯುವ ದೃಶ್ಯದ ಕೆಲವು ಶಿಲ್ಪಗಳು ಅಲ್ಲಲ್ಲಿ ಚದುರಿಹೋಗಿವೆ. ಅವುಗಳಲ್ಲಿ ಅಂಬಾಭವಾನಿ ಮಂದಿರ, ಗೋಸಾಯಿ ಗಲ್ಲಿಯ ಶಿವಾಜಿ ಚೌಕ ಬದಿಯ ಅಂಬಾಭವಾನಿ ಮಂದಿರಗಳಲ್ಲಿಟ್ಟಿರುವ ಶಿಲ್ಪಗಳು ಮುಖ್ಯವೆನಿಸಿವೆ. ಗೋಡೆಯ ಫಲಕದಲ್ಲೂ ಈ ರೀತಿಯ ಚಿತ್ರವನ್ನು ಕಂಡರಿಸಿದ್ದು ಈ ಮೊದಲೇ ವಿವರಿಸಲಾಗಿದೆ. ಆದರೆ ನಗರದ ಹಳೆಯ ಜನ ವಸತಿ ಮತ್ತು ಕೋಟೆಯ ಕಡೆ ಹೋಗುವ ರಸ್ತೆ ಬದಿಯಲ್ಲಿರುವ ಅಂಬಾಭವಾನಿ ಗುಡಿಯ ಮುಂದಿನ ಶಿಲ್ಪ ತುಂಬಾ ಮಹತ್ವದ್ದೆನಿಸಿದೆ. ಕೆಂಪು ಮರಳು ಶಿಲೆಯಲ್ಲಿ ಈ ಶಿಲ್ಪವನ್ನು ತಯಾರಿಸಲಾಗಿದೆ.

ನಾರಾಯಣನು ಸವ್ಯಲಲಿತಾಸನದಲ್ಲಿ ಕುಳಿತು ಲಕ್ಷ್ಮಿಯನ್ನು ಅಡ್ಡವಾಗಿ ಮಡಚಿದ ತನ್ನ ಎಡ ತೊಡೆಯ ಮೇಲೆ ಕೂಡಿಸಿಕೊಂಡಿರುವನು. ಚತುರ್ಭುಜಧಾರಿಯಾದ ಈತನ ಮೂರು ಕೈಗಳಲ್ಲಿ ಪದ್ಮ, ಚಕ್ರ, ಶಂಖಗಳಿವೆ. ಕೆಳಗಿನ ಎಡಗಡೆಯ ಕೈಯಿಂದ ಲಕ್ಷ್ಮಿಯನ್ನು ಅಪ್ಪಿಕೊಂಡಿರುವನು. ಈತನು ಕಿರೀಟ ಮುಕುಟ, ಕರ್ಣಕುಂಡಲ, ಯಜ್ಞೋಪವೀತ, ಉದರ ಬಂಧ, ಹಾರ (ವೈಜಯಂತಿ), ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳಿಂದ ಭೂಷಿತನಾಗಿದ್ದಾನೆ. ಆತನ ಕರ್ಣಕುಂಡಲಗಳಲ್ಲಿ ಸಿಂಹ ಮತ್ತು ಮಕರಗಳಿವೆ. ಕಿರೀಟಮುಕುಟಕ್ಕೆ ಸಮಾಂತರ ಉದ್ದ ಪಟ್ಟಿಕೆಗಳಿಗೆ ಅಡ್ಡ ಪಟ್ಟಿಕೆಗಳಿಂದ ಅಲಂಕೃತಗೊಳಿಸಲಾಗಿರುವುದು ವಿಶಿಷ್ಟ ಲಕ್ಷಣವಾಗಿದೆ. ವೃತ್ತಾಕಾರದ ಪ್ರಭಾಮಂಡಲವಿದೆ. ಲಕ್ಷ್ಮಿಯು ಸವ್ಯಲಲಿತಾಸನದಲ್ಲಿ ಕುಳಿತಿದ್ದು ತನ್ನ ಕೈಗಳಲ್ಲಿ ಪದ್ಮವನ್ನು ಹಿಡಿದಿದ್ದಾಳೆ. ತನ್ನ ಎಡ ಪಾದವನ್ನು ಕೆಳಗಿನಿಂದ ಬಂದ ಕಮಲದ ಮೇಲೆ ಇಟ್ಟಿರುವಳು. ಆಕೆಯು ಕಿರೀಟಮುಕುಟ, ಕೊರಳಹಾರ, ಉದರಬಂಧ, ವಕ್ಷಬಂಧ, ಹಾರ, ಬಳೆ, ಕಡಗಗಳನ್ನು ಧರಿಸಿರುವಳು. ಈ ದೇವ-ದೇವತೆಯನ್ನು ಹೊತ್ತಿರುವ ಗರುಡ ನಿಂತ ಭಂಗಿಯಲ್ಲಿರುವನು. ಆತನನ್ನು ಕಿರಿದಾಗಿ ಚಿತ್ರಿಸಲಾಗಿದೆ. ಹಾಗೂ ತನ್ನ ಕೈಗಳಲ್ಲಿ ಕಳಸವನ್ನು ಹಿಡಿದುಕೊಂಡಿರುವನು. ಗರುಡನ ರೆಕ್ಕೆಗಳು ಈ ದೇವತೆಗಳ ಬದಿಗಳಲ್ಲೂ ಹರಡಿದಂತೆ ತೋರಿಸಲಾಗಿದೆ. ಗರುಡನು ಓಲೆ, ಹಾರ, ಬಳೆ, ವಸ್ತ್ರ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವನು. ಲಕ್ಷ್ಮಿ-ನಾರಾಯಣರನ್ನು ಗರುಡ ಹೊತ್ತ ಈ ರೀತಿ ಶಿಲ್ಪಗಳನ್ನು ವೈಕುಂಠ ವಿಷ್ಣುವೆಂದು ಕರೆಯುವರು. ನಾರಾಯಣನ ಕಿರೀಟ ಮಕುಟದ ಲಕ್ಷಣವು ಉತ್ತರ ಭಾರತದ ಶೈಲಿಯಲ್ಲಿರುವುದು ಗಮನೀಯ.

ಲಕ್ಷ್ಮಿನಾರಾಯಣ: ಗೌಂಡಿಗಲ್ಲಿಯ ಮಾರುತಿ ಗುಡಿಯಲ್ಲಿ ಗರುಡನು ಹೊತ್ತಿರುವ ಲಕ್ಷ್ಮಿ-ನಾರಾಯಣರ ಶಿಲ್ಪದ ಶೈಲಿಯು ಸ್ವಲ್ಪ ಭಿನ್ನವಾಗಿದೆ. ಆದರೆ ಗೋಸಾಯಿಗಲ್ಲಿಯ ಅಂಬಾಭವಾನಿ ಗುಡಿಯ ಎದುರಿಗೆ ಲಕ್ಷ್ಮಿ-ನಾರಾಯಣರ ಶಿಲ್ಪವಿದ್ದು, ನಾರಾಯಣನು ಲಕ್ಷ್ಮಿಯನ್ನು ಎಡ ತೊಡೆಯ ಮೇಲೆ ಕೂಡಿಸಿಕೊಂಡು ತಾನೂ ಸವ್ಯಲಲಿತಾಸನದಲ್ಲಿ ಕೂತಿರುವನು. ಈ ದೇವತೆಗಳನ್ನು ಗರುಡನು ಹೊತ್ತಿರುವುದಿಲ್ಲ. ಈ ಲಕ್ಷಣವುಳ್ಳ ಶಿಲ್ಪಗಳು ಕರ್ನಾಟಕದಲ್ಲಿ ಸಾಮಾನ್ಯವಾಗಿವೆ.



ಕೂರ್ಮ : ತ್ರಿಪುರಾಂತಕದ ದಕ್ಷಿಣಕ್ಕೆ ಒಂದು ಹೊಲದಲ್ಲಿ ಕೂರ್ಮಾವತಾರದ ಶಿಲ್ಪವೊಂದಿದೆ. ವಿಷ್ಣುವಿನ ಒಂದು ಅವತಾರವಾದ ಕೂರ್ಮ(ಆಮೆ)ನನ್ನು ಹೂಗಳನ್ನಿಟ್ಟ ಹೂಜಿಯೊಂದರ ಮೇಲೆ ಚಿತ್ರಿಸಿರುವುದು ವಿಶಿಷ್ಟವೆನಿಸಿದೆ. ಈ ಆಮೆಗೆ ಪುಟ್ಟ ಕಾಲುಗಳಿದ್ದು ಅದರ ಮೈ ಮೇಲೆ ಅರ್ಧವೃತ್ತಾಕಾರದ ಚಿಪ್ಪಿದೆ. ಹೂಜಿಯು ಅರ್ಧವೃತ್ತಾಕಾರದ ಪೀಠದ ಮೇಲಿದೆ. ಬದಿಗಳಲ್ಲಿ ಭಕ್ತರು ಕೈಮುಗಿದುಕೊಂಡು ಕುಳಿತಿರುವರು. ಭಕ್ತನು ಎಡಗಡೆಗೆ ಮತ್ತು ಭಕ್ತಳು ಬಲಗಡೆಗೆ

ಇರುವರು. ಈ ರೀತಿಯ ಪ್ರತ್ಯೇಕ ಕೂರ್ಮಾವತಾರದ ಶಿಲ್ಪಗಳು ವಿರಳ. ಕೇವಲ ಕೂರ್ಮದ ದುಂಡು ಶಿಲ್ಪವೊಂದು ಬಸವಕಲ್ಯಾಣ ತಾಲೂಕಿನ ಉಮಾಪುರದ ಉಮೆಯ ದೇವಾಲಯದಲ್ಲಿದೆ. ಆದರೆ ಹೂಜಿಯ ಮೇಲೆ ಕೂರ್ಮ ಚಿತ್ರವುಳ್ಳ ಶಿಲ್ಪಗಳು ಅಪರೂಪ.

ಯೋಗ ನಾರಾಯಣ : ಯೋಗ-ನಾರಾಯಣನ ಶಿಲ್ಪವೊಂದು ಸ್ಥಳೀಯ ದರ್ಗಾದ ಬಳಿ ಇದೆ. ನಾರಾಯಣನು ಪದ್ಮಾಸನದಲ್ಲಿ ಕುಳಿತಿರುವನು. ಚತುರ್ಭುಜಧಾರಿ, ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಕೆಳಗಿನ ಕೈಗಳು ಯೋಗಮುದ್ರೆಯಲ್ಲಿವೆ. ಕೆಳಗಡೆ ಬಲಕ್ಕೆ ಭಕ್ತರು ಕೈಮುಗಿದುಕುಳಿತಿರುವರು. ಸರ್ಪವು ಏಳು ಹೆಡೆಗಳಿಂದ ಆತನ ತಲೆಯ ಮೇಲೆ ಆವರಿಸಿರುವುದು ಒಂದು ಅಪರೂಪದ ಲಕ್ಷಣವಾಗಿದೆ.

ಗರುಡ : ಗರುಡನ ಶಿಲ್ಪವೊಂದು ಕೋಟೆ ಒಳಗಿನ ವಸ್ತು ಸಂಗ್ರಹಾಲಯದಲ್ಲಿದೆ. ಗರುಡನು ಖಡ್ಗಾಸನದಲ್ಲಿ ಕುಳಿತಿದ್ದಾನೆ. ಆತನ ಕೈಗಳು ಅಂಜಲಿ ಮುದ್ರೆಯಲ್ಲಿವೆ. ತನ್ನ ಬುಜದ ಬದಿಗಳಲ್ಲಿ ರೆಕ್ಕೆಗಳಿವೆ. ಎಡಗಡೆಯ ರೆಕ್ಕೆ ಭಾಗ ಒಡೆದಿದೆ. ಈತನು ಕಿರೀಟ ಮುಕುಟ, ನಾಗಕುಂಡಲ, ನಾಗಹಾರ, ನಾಗಬಳೆ, ಕಡಗ, ಸೊಂಟಪಟ್ಟಿ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವನು. ಆತನ ಉದ್ದವಾದ ವಕ್ರ ಮೂಗು ಪಕ್ಷಿಯ ಕೊಕ್ಕಿನಂತಿದೆ.



ಒಟ್ಟಾರೆ ಈ ಸ್ಥಳದ ವೈಷ್ಣವ ದೇವಾಲಯ-ಶಿಲ್ಪಗಳು ವೈಷ್ಣವ ವಾಸ್ತು-ಕಲೆಯ ವೈವಿಧ್ಯಮಯ ಸಂಗತಿಗಳನ್ನು ಒಳಗೊಂಡಿವೆ. ಬಸವಕಲ್ಯಾಣ ನಗರದಲ್ಲಿ ಕ್ರಿ.ಶ. ೧೧-೧೨ನೇ ಶತಮಾನದಲ್ಲಿ ಬ್ರಹ್ಮನ ಆರಾಧನೆಯೂ ರೂಢಿಯಲ್ಲಿತ್ತು. ಅಲ್ಲಿಯ ಒಂದು ಬ್ರಹ್ಮ ಶಿಲ್ಪದ ಕಲಾ ಅಂಶಗಳು ಹೀಗಿವೆ.

ಬ್ರಹ್ಮ : ಹುಲಸೂರು ದಾರಿ ಬದಿಗಿನ ಕಿರು ಈಶ್ವರ (ಮಾಲ್) ಗುಡಿಯ ಗೋಡೆಯಲ್ಲಿ ಬ್ರಹ್ಮನ ಶಿಲ್ಪವಿದೆ. ಚತುರ್ಭುಜಗಳಿದ್ದು, ಸಮಭಂಗದಲ್ಲಿ ನಿಂತಿದ್ದಾನೆ. ಮೂರು ಮುಖಗಳಿವೆ. ಕೆಳಗಡೆ ಸೇವಕಿಯರು ಇರುವರು. ಸುತ್ತಲು ಮೇಲೆ ತೋರಣದ ಅಲಂಕಾರವಿದೆ. ಕಾಲ ಸು. ಕ್ರಿ.ಶ. ೧೧-೧೨ನೇ ಶತಮಾನ. ಬಸವಕಲ್ಯಾಣದ ಕ್ರಿ.ಶ. ೧೧೪೨ರ ಶಾಸನದಲ್ಲಿ ಹೇಳಿದ ಬ್ರಹ್ಮ ದೇವಾಲಯದ ವಿಗ್ರಹ ಇದಾಗಿರಬಹುದು. ಇನ್ನೆರಡು ಬ್ರಹ್ಮ ವಿಗ್ರಹಗಳು ತ್ರಿಪುರಾಂತದ ಮಾರುತಿ ದೇವಾಲಯದ ಮುಂದೆ ಮತ್ತು ನಗರದ ಉರಿಲಿಂಗಪೆದ್ದಿ ಮಠದ ಮುಂದಿವೆ. ಈ ಶಿಲ್ಪ ಕಲೆಯಲ್ಲಿ ವಸ್ತ್ರಾಭರಣ, ತೋರಣದ ಅಲಂಕಾರಗಳು ಮಧ್ಯ ಭಾರತದ ಕ್ರಿ.ಶ. ೧೧-೧೨ನೇ ಶತಮಾನದ ಲಕ್ಷಣಗಳನ್ನು ಹೋಲುತ್ತವೆ.



■

೫. ಸೂರ್ಯ ದೇವಾಲಯ-ಶಿಲ್ಪಗಳು

ಬಸವಕಲ್ಯಾಣ ನಗರದಲ್ಲಿ ಕಂಡುಬರುವ ವೈವಿಧ್ಯಮಯ ಸೂರ್ಯನ ಶಿಲ್ಪಗಳು. ಅಲ್ಲಿ ಸೂರ್ಯಾರಾಧನೆ ಇದ್ದುದಕ್ಕಾಗಿ ಸಾಕ್ಷಿಯಾಗಿವೆ. ಪರ್ತಾಪುರದಲ್ಲಿ ಸೂರ್ಯ ದೇವಾಲಯದ ತಳಪಾಯ ಕಂಡು ಬಂದಿದ್ದು, ಅದರ ಮುಂದೆ ಒಂದು ಸೂರ್ಯನ ವಿಗ್ರಹವಿದೆ. ಕ್ರಿ.ಶ. ೧೦-೧೨ನೇ ಶತಮಾನದ ಸೂರ್ಯನ ದೇವಾಲಯ ಮತ್ತು ಶಿಲ್ಪಗಳು ಬೀದರ ಜಿಲ್ಲೆಯಲ್ಲಿ ಕಾಣಿಸುತ್ತವೆ. ಈ ಶಿಲ್ಪಗಳ ಕಲಾ ಲಕ್ಷಣಗಳು ಎರಡು ರೀತಿಯಲ್ಲಿವೆ. ಒಂದು ಸ್ಥಳೀಯ ಮಾದರಿಯಾದರೆ ಇನ್ನೊಂದು ಉತ್ತರ ಭಾರತದ ಮಾದರಿ. ಬಸವಕಲ್ಯಾಣ ತಾಲೂಕಿನ ಮೊರಖಂಡಿ, ಬಸವಕಲ್ಯಾಣ ಮತ್ತು ತಡಾಲ ಗ್ರಾಮದ ಸೂರ್ಯನ ಶಿಲ್ಪಗಳು ಸು. ಕ್ರಿ.ಶ. ೧೦ನೇ ಶತಮಾನದವು. ಅವೇ ಈ ಜಿಲ್ಲೆಯ ಉಪಲಬ್ಧ ಪ್ರಾಚೀನ ಸೂರ್ಯನ ವಿಗ್ರಹಗಳು. ಉಳಿದವು ತದನಂತರ ಕಾಲದ್ದಾಗಿವೆ.

ನಗರದ ಬಸವೇಶ್ವರ ಶಿಶುವಿಹಾರ ಶಾಲೆ ಮುಂದೆ ಒಂದು ಸೂರ್ಯನ ವಿಗ್ರಹವಿದೆ. ಸೂರ್ಯನು ಸಮಭಂಗದಲ್ಲಿ ನಿಂತು ಎರಡೂ ಕೈಗಳಲ್ಲಿ ಕಮಲದ ಹೂವಿನ ದಂಟುಗಳನ್ನು ಭುಜಕ್ಕೆ ಆನಿಸಿ ಎತ್ತಿ ಹಿಡಿದಿರುವನು. ದೇಹಾಂಗಕ್ಕೆ ವಸ್ತ್ರಾಭರಣಗಳನ್ನು ಧರಿಸಿರುವನು. ಸೊಂಟಕ್ಕೆ ಕಟ್ಟಿದ ವಸ್ತ್ರ ಕಿರು ಚಡ್ಡಿಯಂತಿದೆ. ಆತನು ಸಪ್ತ ಅಶ್ವಗಳ ಮೇಲೆ ನಿಂತಿದ್ದಾನೆ. ಮೊರಖಂಡಿಯ ಶಿಲ್ಪದಲ್ಲಿ ಆತನ ಬದಿಗಳಲ್ಲಿ ಉಷಾ-ಪ್ರತ್ಯುಷೆಯರು ನಿಂತಿರುವರು. ತಲೆಯ ಸುತ್ತ ಪ್ರಭಾಮಂಡಲದ ಅಲಂಕಾರವಿದೆ. ವೈಜಯಂತಿಯನ್ನು ಧರಿಸಿರುವನು.

ಬಸವಕಲ್ಯಾಣದ ಸದಾನಂದಮಠ ಹತ್ತಿರದ ಬಾವಿಯ ಗೋಡೆಯಲ್ಲಿರುವ ಒಂದು ಸೂರ್ಯನ ವಿಗ್ರಹ ಮಹತ್ವದ್ದಾಗಿದೆ. ಅಲ್ಲಿ ಸಮಭಂಗದಲ್ಲಿ ನಿಂತಿರುವ ಸೂರ್ಯನು ಸಂಪೂರ್ಣ ಅರಳಿದ ಕಮಲಗಳನ್ನು ಮುಂದಕ್ಕೆ ಮುಖಮಾಡಿ ಎತ್ತಿ ಹಿಡಿದಿರುವನು. ಹೀಗಾಗಿ ತಲಾ ಒಂದು ಕಡೆಗಳ ಕಮಲಗಳಲ್ಲಿನ ವೃತ್ತಗಳ ವಿವರಗಳು ಎದ್ದು ಕಾಣುತ್ತವೆ. ಆತನ ಪರಿವಾರ ಬದಿಯಲ್ಲಿರುವುದು. ಆತನು ಕಿರೀಟ ಮುಕುಟ, ಕುಂಡಲ, ಹಾರ, ವೈಜಯಂತಿ, ವಸ್ತ್ರಗಳ ಪಟ್ಟಿ, ಯಜ್ಞೋಪವೀತ, ಬಳೆ, ಕಡಗ ಇತ್ಯಾದಿ ಆಭರಣ ಧರಿಸಿರುವನು. ಅರಳಿದ ಕಮಲ ಮತ್ತು ಧರಿಸಿದ ಕಿರೀಟ ಲಕ್ಷಣಗಳು ಉತ್ತರ ಭಾರತದ ಅಂಶಗಳನ್ನು ಪ್ರತಿನಿಧಿಸುತ್ತವೆ. ಈ ಶಿಲ್ಪದ ಕಾಲ ಸು. ಕ್ರಿ.ಶ. ೧೨ನೇ ಶತಮಾನ.



ನಗರದ ಕೋಟೆಯ ಒಳಗಡೆ ಕೆಲವು ಶಿಲ್ಪಗಳಿವೆ. ಒಂದರಲ್ಲಿ ಸೂರ್ಯನು ಸಮಭಂಗದಲ್ಲಿ ನಿಂತಿದ್ದಾನೆ. ಇಲ್ಲಿಯೂ ಕಮಲದ ಹೂಗಳನ್ನು ಎದುರು ಮುಖಮಾಡಿ ಎತ್ತಿ ಹಿಡಿದಿರುವನು. ಕಮಲದ ಹೂವಿನ ಪ್ರತಿಯೊಂದು ದಳಗಳನ್ನು ಬಿಡಿಯಾಗಿ ಚಿತ್ರಿಸಲಾಗಿದೆ. ತಲೆಯ ಮೇಲೆ ನಾಗ ಸರ್ಪಗಳ ಹೆಡೆಯಿದೆ. ಪ್ರತಿಯೊಂದು ಹೆಡೆಗೆ ಅಡ್ಡ ಪಟ್ಟಿಕೆಗಳಿವೆ. ಆತನು ಕಿರೀಟಮುಕುಟ, ಹಾರ, ವೈಜಯಂತಿ ಪಟ್ಟ, ಯಜ್ಞೋಪವೀತ, ಬಳೆ, ಕಡಗಗಳನ್ನು ಧರಿಸಿರುವನು. ಕಮಲದ ಹೂವಿನ ಮತ್ತು ಆಭರಣಗಳ ಶೈಲಿಯು ಉತ್ತರ ಭಾರತದ ಲಕ್ಷಣವನ್ನು ಪ್ರತಿನಿಧಿಸುವುದು. ಆದರ ಕಾಲ ಸು. ಕ್ರಿ.ಶ. ೧೨ನೇ ಶತಮಾನ.



ಸದಾನಂದ ಮಠದ ಬಾವಿ ಗೋಡೆಯಲ್ಲಿರುವ ಸೂರ್ಯನ ಮತ್ತೊಂದು ಶಿಲ್ಪದಲ್ಲಿ ಕೆಳಗಡೆ ನಿಧಿಗಳಿದ್ದಾರೆ. ಸೂರ್ಯನ ಮುಖಭಾಗ ಒಡೆದಿದೆ. ಆತನ ಕೈಗಳಲ್ಲಿ ಎತ್ತಿ ಹಿಡಿದ ಕಮಲದ ಗೊಂಚಲಿದೆ. ಅದರ ಪ್ರತಿಯೊಂದು ದಳವು ವೃತ್ತಾಕಾರದಲ್ಲಿವೆ. ಸೂರ್ಯನು ಸಪ್ತ ಅಶ್ವಗಳ ಮೇಲೆ ನಿಂತಿರುವನು. ವಸ್ತ್ರಾಭರಣ ಧರಿಸಿದ್ದಾನೆ. ಈ ಕಮಲಗಳ ಶೈಲಿಯೂ ಉತ್ತರ ಭಾರತದ ಲಕ್ಷಣವನ್ನು ಪ್ರತಿಬಿಂಬಿಸುತ್ತವೆ.



ಅಲ್ಲಿಯ ಕೋಟೆಯಲ್ಲಿ ಶಿಥಿಲಗೊಂಡ ಒಂದು ಸೂರ್ಯನ ಶಿಲ್ಪವಿದೆ. ಆದರಲ್ಲಿ ಸೂರ್ಯನ ತಲೆ, ದೇಹದ ಭಾಗ ಒಡೆದು ಹೋಗಿವೆ. ಆತನು ಪೀಠದ ಮೇಲೆ ನಿಂತಿದ್ದು, ಬುಡದಲ್ಲಿ ಸಪ್ತ ಕುದುರೆಗಳನ್ನು ಅರುಣನು ಓಡಿಸುತ್ತ ಅವುಗಳ ಮಧ್ಯ ಕುಳಿತಿರುವನು. ಇಲ್ಲಿಯೂ ಕೆಳಗಡೆ ಆತನ ಬದಿಗಳಲ್ಲಿ ದಂಡ ಮತ್ತು ಪಿಂಗಳ ಮಸಿ-ದವತಿ ಹಿಡಿದು ಕುಳಿತಿರುವರು ಮತ್ತು ಉಷಾ-ಪ್ರತ್ಯುಷೆಯರು ಬಿಲ್ಲುಗಳನ್ನು ಹಿಡಿದು ಬಾಣ ಪ್ರಯೋಗಿಸುತ್ತಿರುವರು. ಅಲ್ಲಿಯ ಮತ್ತೊಂದು ಸೂರ್ಯನ ಶಿಲ್ಪದಲ್ಲಿ ಸೂರ್ಯನು ಕಮಲಗಳನ್ನು ಎತ್ತಿ ಹಿಡಿದು ನಿಂತಿದ್ದಾನೆ. ತಲಾ ಒಂದರ ಕಮಲದಲ್ಲಿ ವೃತ್ತದಲ್ಲಿ ಮೂರು ದಳಗಳಿವೆ. ಪೀಠದಲ್ಲಿ ಕದುರೆಗಳಿವೆ. ಕಾಲ ಸು. ಕ್ರಿ.ಶ. ೧೨ನೇ ಶತಮಾನ.




ಪರ್ತಾಪುರದ ಹಾಳು ಸೂರ್ಯ ದೇವಾಲಯದ ಮುಂದೆ ಸೂರ್ಯ ಶಿಲ್ಪವೊಂದಿದ್ದು, ಎರಡು ಅರೆಗಂಬಗಳು ಮತ್ತು ಮಕರ ತೋರಣ ಅಲಂಕಾರದ ಮಧ್ಯ ಸೂರ್ಯ ನಿಂತಿರುವನು. ಈ ಲಕ್ಷಣ ಸು. ಕ್ರಿ.ಶ. ೧೧-೧೨ನೇ ಶತಮಾನದ ಶಿಲ್ಪಗಳನ್ನು ಹೋಲುವದು. ಆದರೆ ಅರೆಗಂಬಗಳಲ್ಲಿ ಅನೇಕ ಅಲಂಕೃತ ಪಟ್ಟಿಕೆಗಳಿವೆ. ಕೆಳಗಡೆ ಬದಿಗಳಲ್ಲಿ ಉಷಾ ಮತ್ತು ಪ್ರತ್ಯುಷಾರು ಬಿಲ್ಲು ಬಾಣಗಳನ್ನು ಹಿಡಿದು ನಿಂತಿರುವರು. ಬಸವಕಲ್ಯಾಣ ತಾಲೂಕಿನ ಮಿರ್ಕಲ್ ಗ್ರಾಮದ ಒಂದು ಸೂರ್ಯ ಶಿಲ್ಪದಲ್ಲಿ ನವಗ್ರಹಗಳನ್ನು ಪ್ರಭಾವಳಿ ಸುತ್ತ ಚಿತ್ರಿಸಲಾಗಿದೆ. ಕಾಲ ಸು. ಕ್ರಿ.ಶ. ೧೨ನೇ ಶತಮಾನ.

ನವಗ್ರಹ ಶಿಲ್ಪ : ಜೈಶಂಕರ ಕಾಲೋನಿಯ ಹತ್ತಿರದ ಒಂದು ಹೊಲದಲ್ಲಿ ಮಾನವ ರೂಪಗಳಿರುವ ನವಗ್ರಹ ಶಿಲ್ಪವಿದೆ. ಎಲ್ಲಾ ಒಂಬತ್ತು ದೇವತೆಗಳನ್ನು ಏಕ ಎತ್ತರದಲ್ಲಿ ಮಾನವರೂಪದಲ್ಲಿ ಚಿತ್ರಿಸಲಾಗಿದೆ. ಈ ರೀತಿಯ ಶಿಲ್ಪ ಹತ್ತಿರದ ಮೂಡಬಿಯ ಗುಡ್ಡದಲ್ಲಿರುವ ಕಿರು ವಾಲ್ಮೀಕಿ ದೇವಾಲಯದ ಲಲಾಟದಲ್ಲಿದೆ. ಕಾಲ ಸು. ಕ್ರಿ.ಶ. ೧೨ನೇ ಶತಮಾನ.

೬. ಶಾಕ್ತ ದೇವಾಲಯ - ಶಿಲ್ಪಗಳು

ಕಲ್ಯಾಣದಲ್ಲಿ ಶಕ್ತಿ ದೇವತೆಯರ ಆರಾಧನೆಯಿತ್ತು. ಆಳರಸರ ರಾಣಿಯರು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ದೇವಿಯ ದೇವಾಲಯಗಳನ್ನು ಈ ಭಾಗದಲ್ಲಿ ಕಟ್ಟಿಸಿ ತಮ್ಮ ಹೆಸರನ್ನು ಕೊಟ್ಟಿರುವ ಸಾಧ್ಯತೆಯಿದೆ. ಅಂತಹ ಉದಾಹರಣೆಗಳನ್ನು ಅಲ್ಲಿಯ ಶಿಲಾಶಾಸನಗಳು ನೀಡುತ್ತವೆ. ಬಸವಕಲ್ಯಾಣದ ಕ್ರಿ.ಶ. ೧೧೧೭ರ ಒಂದು ಶಾಸನದಲ್ಲಿ ಗೂರ್ಜರ ಮಲಯಮತಿ-ಮಹಾದೇವಿಯರ ದೇಗುಲದ ಉಲ್ಲೇಖವಿದೆ. ಈ ಭಾಗದಲ್ಲಿ ಚದುರಿದ ಕೆಲ ದೇವಾಲಯದ ಅವಶೇಷಗಳಲ್ಲಿ ವಿವಿಧ ರೀತಿಯ ದೇವಿಯರ ಶಿಲ್ಪಗಳಿವೆ. ಅವು ಮಹಿಷಮರ್ದಿನಿ, ಲಕ್ಷ್ಮಿ (ಗಜಲಕ್ಷ್ಮಿ), ಮಹಿಷಾಸುರಮರ್ಧಿನಿ, ಚಾಮುಂಡಿ, ಕಾಳಿಕ, ಮಹಾಲಕ್ಷ್ಮೀ, ಸಪ್ತಮಾತೃಕೆಯರ ಶಿಲ್ಪಗಳು ಮುಖ್ಯವಾದ ಶಕ್ತಿ ದೇವತೆಗಳಾಗಿವೆ.

ಮಹಿಷಾಸುರಮರ್ಧಿನಿ : ಆರು, ನಾಲ್ಕು ಕೈಗಳ ಮಹಿಷಾಸುರಮರ್ಧಿನಿಯ ನಿಂತ ಶಿಲ್ಪಗಳಿವೆ. ಕೋಟೆ ಒಳಗೆ ಅಷ್ಟಭುಜಗಳುಳ್ಳ ದೇವಿಯು ತನ್ನ ಬಲಗಾಲನ್ನು ಮಹಿಷದ ಹೊಟ್ಟೆಯ ಮೇಲೆ ಊರಿ ನಿಂತಿದ್ದಾಳೆ. ಕೆಳಗಿನ ಬಲ ಮತ್ತು ಎಡಭಾಗದ ಮೇಲಿನ ಕೈಗಳಲ್ಲಿ ತ್ರಿಶೂಲ ಹಿಡಿದು ಅದನ್ನು ಕೋಣನ ಹೊಟ್ಟೆಯಿಂದ ಹೊರಬಂದ ಅಸುರನ ಹೊಟ್ಟೆಗೆ ಇರಿದಿದ್ದಾಳೆ. ಅಡ್ಡವಾಗಿ ಹಿಡಿದ ಖಡ್ಗವು ಅವಳ ಬಲಗಡೆಯ ಮೇಲಿನ ಕೈಯಲ್ಲಿದೆ. ಎಡಗಡೆಯ ಮಧ್ಯದ ಕೈಯಲ್ಲಿ ಘುರಾಣಿ ಮತ್ತು ಅದರ ಕೆಳಗಿನ ಕೈಯಿಂದ ಮಹಿಷಾಸುರನ ತಲೆಯಕೂದಲನ್ನು ಬಿಗಿಯಾಗಿ ಹಿಡಿದು ಅವನನ್ನು ಮೇಲಕ್ಕೆ ಎತ್ತಿದ್ದಾಳೆ. ದೇವಿಯು ಕೀರಿಟ ಮಕುಟ, ಕರ್ಣ-ಕುಂಡಲ, ಕಂಠಹಾರ, ಸ್ತನಹಾರ, ತೋಳಬಂಧ, ಮೇಖಲ, ಕಟಿಸೂತ್ರ, ಕಡಗ, ಕೈಬಳೆ ಧರಿಸಿದ್ದಾಳೆ. ಮಕರ ಅಥವಾ ಹೂಬಳ್ಳಿಗಳ ತೋರಣವನ್ನು ಈ ಶಿಲ್ಪದಲ್ಲಿ ತೋರಿಸಿಲ್ಲ. ಚಿತ್ರಬದಿಗಳಲ್ಲಿ ಅರ್ಧಗಂಬಗಳಿವೆ. ಇದರಿಂದ ಈ ಶಿಲ್ಪ ದೇವಾಲಯದ ಭಿತ್ತಿ ಭಾಗದ್ದೆಂದು ಹೇಳಬಹುದು.



ಕೋಟೆಯಲ್ಲಿಯ ಮ್ಯೂಜಿಯಂ ಒಳಗಿರುವ ಒಂದು ಮಹಿಷಮರ್ಧಿನಿ ಶಿಲ್ಪದಲ್ಲಿ ದೇವಿಯು ಚತುರ್ಭುಜಗಳಲ್ಲಿ ತ್ರಿಶೂಲವನ್ನು ಕೆಳಗಿನ ಬಲಗೈಯಲ್ಲಿ ಹಿಡಿದು ಕೋಣನ ಶಿರಕ್ಕೆ ಅದರ ತುದಿಯಿಂದ ಚುಚ್ಚಿದ್ದಾಳೆ. ಬಲಗಡೆಯ ಮೇಲಿನ ಕೈಯಲ್ಲಿ ಚಕ್ರವಿದೆ. ಎಡಗಡೆಯ ಮೇಲಿನ ಕೈಯಲ್ಲಿ ಶಂಖ ಮತ್ತು ಕೆಳಗಿನ ಕೈಯಿಂದ ಕೋಣನ ಮುಖವನ್ನು ಒತ್ತಿ ಬಿಗಿಯಾಗಿ ಹಿಡಿದುಕೊಂಡಿದ್ದಾಳೆ. ಎಡಗಾಲನ್ನು ಕೋಣನ ಕೋಡುಗಳ ಮೇಲೆ

ಭಾರಬಿಟ್ಟು ನಿಂತಿದ್ದಾಳೆ. ಬಲಗಾಲನ್ನು ಕೋಣನ ಕುತ್ತಿಗೆ ಬದಿಯಲ್ಲಿಟ್ಟಿರುವಳು. ಕರಂಡಮುಕುಟ, ಕುಂಡಲ, ಕಂಠಹಾರ, ಕಟಿಬಂಧ, ಕಡಗ, ಕೈಬಳೆ, ತೋಳಬಂಧಿಗಳನ್ನು ಧರಿಸಿದ್ದಾಳೆ. ಶಿವಪುರದ ಮಾರುತಿ ಮಂದಿರದ ಮುಂದಿನ ಒಂದು ಶಿಲ್ಪದಲ್ಲಿ ಈ ದೇವಿಯ ವಾಹನ ಸಿಂಹವಿದೆ. ಕೋಣನ ತಲೆಯನ್ನು ಎಡಗಡೆ ತೋರಿಸಿರುವುದು ವಿಶೇಷವಾಗಿದೆ. ಕಾಲ ಕ್ರಿ.ಶ. ಸುಮಾರು ೧೧-೧೨ನೇ ಶತಮಾನ.

ಚಾಮುಂಡಿ : ವಿವಿಧ ಆಕಾರದ ಚಾಮುಂಡಿ ಶಿಲ್ಪಗಳು ಬೆಳಕಿಗೆ ಬಂದಿದ್ದು, ಕೆಲವುಗಳ ಮೇಲ್ಭಾಗ ಅರ್ಧ ವೃತ್ತಾಕಾರದಲ್ಲಿ ಮತ್ತು ಕೆಲವು ಗೋಡೆ ಫಲಕಗಳಾಗಿವೆ. ಕೇವಲ ರಕ್ತ-ಮಾಂಸವಿಲ್ಲದ ಅಸ್ಥಿ ಅವಶೇಷದ ಭಾಗ, ಸುರನ ಮೇಲೆ ನಿಂತು ರುಂಡಮಾಲೆ ಧರಿಸಿಕೊಂಡು ನೃತ್ಯಮಾಡುವ ಚಿತ್ರ ಸಾಮಾನ್ಯ, ನಾಲ್ಕು ಮತ್ತು ಆರು ಕೈಗಳುಳ್ಳ ದೇವತೆಯ ಶಿಲ್ಪಗಳಿವೆ.

ಬಸವಕಲ್ಯಾಣ ಕೋಟೆ ಒಳಗಿನ ಒಡೆದ ಚಾಮುಂಡಿ ಶಿಲ್ಪದಲ್ಲಿ ಮೇಲ್ಭಾಗ ಒಡೆದುಹೋಗಿದೆ. ಉಳಿದ ಭಾಗದಲ್ಲಿ ತೊಡೆಯಿಂದ ಕೆಳಗಿನವರೆಗೆ ಬಲಗಾಲು ಮುರಿದು ಹೋಗಿದೆ. ಕೆಳಗಡೆ ಇಳಿಬಿಟ್ಟ ಎಡಗೈಯಲ್ಲಿ ಕಠಾರಿಯಿದೆ. ಕಾಲಿನ ಮೇಲೆ ರುಂಡಮಾಲೆಯ ಭಾಗವಿದೆ. ತೊಡೆಗಳನ್ನು ನಾಗಸರ್ಪದಿಂದ ಬಿಗಿಯಾಗಿ ಕಟ್ಟಲಾಗಿದೆ. ಸೊಂಟಕ್ಕೆ ಅಗಲಪಟ್ಟಿಯನ್ನು ಕಟ್ಟಲಾಗಿದೆ. ರುಂಡಮಾಲೆ ಧರಿಸಿಕೊಂಡು ಅಸುರನ ಮೇಲೆ ನೃತ್ಯ ಮಾಡುವ ಈ ದೇವತೆಯ ದೇಹ ಮತ್ತು ಕಾಲುಗಳಿಗೆ ಕೇವಲ ಮೂಳೆಗಳಿವೆ.

ದೇವಿಯು ಮಲಗಿದ ಅಸುರನ ಮೇಲೆ ತನ್ನ ಎಡಗಾಲನ್ನು ಊರಿದ್ದಾಳೆ. ಸುರ ಕಿರೀಟಧಾರಿಯಾಗಿದ್ದಾನೆ. ಆತನ ಕಾಲನ್ನು ಬಿಗಿಯಾಗಿ ಎತ್ತಿ ಹಿಡಿದುಕೊಂಡು ಒಬ್ಬ ವ್ಯಕ್ತಿ ನಿಂತಿದ್ದಾನೆ. ಬಹುಶಃ ಅವನು ಬೇತಾಳನಿರಬೇಕು. ಈ ಬೇತಾಳ (?)ವು ನೆಲಕ್ಕೆ ಮಂಡೆಗಳನ್ನು ಊರಿ ದೇಹವನ್ನು ಮೇಲಕ್ಕೆತ್ತಿ ಅಸುರನ ಕಾಲನ್ನು ಹಿಡಿದಿರುವನು. ಕೆಳಗಡೆ ತಾಳ, ಡಮರು, ಮದ್ದಳೆ, ಕೊಳಲು (?)ಗಳನ್ನು ಹಿಡಿದ ವಾದ್ಯ ಮೇಳದ ನಾಲ್ವರು, ನೃತ್ಯ ಮಾಡುವನೊಬ್ಬ ಮತ್ತು ಮೂವರು ವಿವಿಧ ಭಂಗಿಯಲ್ಲಿ ನಿಂತ ಮತ್ತು ಕುಳಿತವರ ಸಮೂಹವಿದೆ. ಅಸುರನ ಮುಖದ ಬಲಗಡೆ ನಿಂತ ಸೇವಕ-ಸೇವಕಿಯರು ಮತ್ತು ಚಾಮುಂಡಿಯ ಎಡಗಾಲಿನ ಬದಿಗೆ ಚೌರಿ ಹಿಡಿದ ಸೇವಕಿ ಮತ್ತು ಚಾಮುಂಡಿಯ ತೊಡೆಗೆ ಸುತ್ತುವರಿದ ನಾಗದ ಬಾಲವನ್ನು ಹಿಡಿದು ನಿಂತ ಸೇವಕಿಯರಿದ್ದಾರೆ. ಕೆಳಗಡೆ ಕೈಮುಗಿದು ಕುಳಿತ ಭಕ್ತ ದಂಪತಿಗಳಿದ್ದಾರೆ. ಬಲಗಡೆ ನಿಂತ ಸೇವಕಿ ಅವಳ ಮೇಲ್ಭಾಗದಲ್ಲಿ ನಿಂತ ಝುವ ಸೇವಕ ಆತನ ಮೇಲೆ ಮತ್ತೊಬ್ಬ ಮನುಷ್ಯನ ಚಿತ್ರವಿದೆ. ಧರಿಸಿದ ಕೆಲ ಆಭರಣಗಳಿಗೆ ದುಂಡಾದ ಮಣಿಗಳನ್ನು ಕೂಡಿಸಲಾಗಿದೆ. ಶಿವಪುರದ ಶಿಲ್ಪದಲ್ಲಿ

ದೇವಿಯು ಪ್ರೇತದ ಮೇಲೆ ನಿಂತು ನೃತ್ಯ ಮಾಡುತ್ತಿರುವಳು. ಸೊಂಟಕ್ಕೆ ಗೆಜ್ಜೆಪಟ್ಟಿ ಕಟ್ಟಿರುವಳು. ಕುಚಗಳನ್ನು ನಾಗದಿಂದ ಬಿಗಿದಿದ್ದಾಳೆ. ಆರು ಕೈಗಳು ಅದರಲ್ಲಿ ಕಠಾರಿ, ತ್ರಿಶೂಲ, ಡಮರು, ಕಟ್ವಾಂಗ, ಕಪಾಲಗಳಿವೆ. ಈಕೆಯ ದೇಹದ ಮೇಲೆ ಚೇಳಿದೆ. ಬದಿಯ ಸಸ್ತಾಪುರದ ಶಕ್ತಿ ದೇವಾಲಯದಲ್ಲಿರುವ ಈಕೆಯ ಶಿಲ್ಪದಲ್ಲಿ ದೇವಿಯು ತನ್ನ ಬಲಗಾಲನ್ನು ಕೋಣದ ಮೇಲಿಟ್ಟಿರುವಳು. ಮೇಲ್ಗಡೆ ಬಲಕ್ಕೆ ಸೂರ್ಯ ಮತ್ತು ಎಡಕ್ಕೆ ಚಂದ್ರರಿದ್ದಾರೆ. ಸವ್ಯಲಲಿತಾಸನದಲ್ಲಿ ಕುಳಿತ ಈ ದೇವಿಯ ಶಿಲ್ಪಗಳು ಧರಮ ಪ್ರಕಾಶಗಲ್ಲಿ ಮತ್ತು ರಜಪೂತ ಗಲ್ಲಿಯಲ್ಲಿವೆ.

ದುರ್ಗಾಪರಮೇಶ್ವರಿ ದೇಗುಲ : ಶಾಸನವುಳ್ಳ ದುರ್ಗಾಪರಮೇಶ್ವರಿ ಫಲಕ ನಾರಾಯಣ ಪುರದ ಕೆರ ಏರಿಯಲ್ಲಿ ಸಿಕ್ಕಿದೆ. ಕ್ರಿ.ಶ. ೧೧೦೭ರ ಶಾಸನವುಳ್ಳ ಈ ಫಲಕದಲ್ಲಿ ಚಾಮುಂಡಿಯು ನೃತ್ಯ ಮಾಡುತ್ತಿರುವಳು. ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲಗಳಿವೆ. ಬದಿಯಲ್ಲಿ ಸೂರ್ಯ, ಚಂದ್ರ, ಹಸು-ಕರು. ಶಾಸನದಲ್ಲಿ ದುರ್ಗಾಪರಮೇಶ್ವರಿ ದೇವಿಯ ಪೂಜೆಗೆ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಚಾಮುಣ್ಡೆ ಕೊಟವಿಗೊರವ ಮತ್ತು ಅಂಬಯ ಶ್ರೀಬಲ್ಲಹ ದೇವ ಹೂದೋಟವನ್ನು ದತ್ತಿಯಾಗಿ ನೀಡಿದರೆಂದು ಉಲ್ಲೇಖವಿದೆ. ಶಾಸನಸ್ಥ ಗೊರವ ಆತನ ಹೆಸರೇ ಸೂಚಿಸುವಂತೆ ಚಣ್ಡಾಪುರದವನೆಂದು ಹೇಳಬಹುದು.

ಗೂರ್ಜರ ಮಲಯಮತಿ ಮಹಾದೇವಿಯ ದೇಗುಲ : ನಗರದ ಕ್ರಿ.ಶ. ೧೧೧೭ರ ಶಾಸನದಲ್ಲಿ ಹೇಳಿದ ಗೂರ್ಜ್ಜರ ಮಲಯಮತಿ ಮಹಾದೇವಿಯರ ದೇವಾಲಯವನ್ನು ಹುಡುಕಬೇಕಾಗಿದೆ. ಮಲಯಮತಿಯು ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಪಟ್ಟದ ರಾಣಿ. ಈಕೆಯು ಕ್ರಿ.ಶ. ೧೦೯೪-೯೫ರಲ್ಲಿ ಚಿಕ್ಕೇರೂರು ಶಾಸನದಲ್ಲಿ ಮೊದಲು ಕಾಣುವಳು. ಕ್ರಿ.ಶ. ೧೧೦೭ರ ಗುಲಬರ್ಗಾ ಶಾಸನದಲ್ಲಿ ಕ್ರಿ.ಶ. ೧೧೧೧ರ ಅಲಂಪುರ ಶಾಸನದಲ್ಲಿ, ಕ್ರಿ.ಶ. ೧೧೧೬ರ ಧಾರವಾಡ ಶಾಸನದಲ್ಲಿ ಕಾಣುವಳು. ಈಕೆಯ ಮಗಳನ್ನೇ ಗೋವೆಯ ಕದಂಬ ಇಮ್ಮಡಿ ಜಯಕೇಶಿಗೆ ಕೊಟ್ಟು ವಿವಾಹ ಮಾಡಲಾಯಿತು. ಜಯಕೇಶಿ ಸೌರಾಷ್ಟ್ರದ ಸೋಮೇಶ್ವರನಿಗೆ ದತ್ತಿ ನೀಡಿದನೆಂದಿರುವುದರಿಂದ ತನ್ನ ಅತ್ತೆಯ ದೇಶದ ದೇವರಿಗೆ ಆತ ದತ್ತಿ ನೀಡದನೆನ್ನಬಹುದು. ಆದರೆ ಮಗಳ ಮದುವೆಯ ಸಂದರ್ಭದಲ್ಲಿ ರಾಣಿ ಮಲಯಮತಿ ಇಲ್ಲದಿರುವುದನ್ನು ಗಮನಿಸಿದರೆ ಆಕೆಯು ಕ್ರಿ.ಶ. ೧೧೧೭ರಷ್ಟೊತ್ತಿಗೆ ಮರಣ ಹೊಂದಿರಬಹುದೆಂದು ಹೇಳಬಹುದು.

ಕಾಳಿಕ : ನಗರದಲ್ಲಿರುವ ಕಾಳಿಕಾದೇವಿಯ ಎರಡು ಶಿಲ್ಪಗಳಲ್ಲಿ ದೇವಿಯು ಸವ್ಯ ಲಲಿತಾನಸನದಲ್ಲಿ ಅಥವಾ ಪದ್ಮಾಸನದಲ್ಲಿ ಕುಳಿತಿರುವಳು. ಆಕೆಯ ಚತುರ್ಭುಜಗಳಲ್ಲಿ

ಖಡ್ಗ, ಡಮರು, ತ್ರಿಶೂಲ ಮತ್ತು ಫಲಕಗಳಿವೆ. ಕಿರೀಟಮುಕುಟ, ಕರ್ಣಕುಂಡಲ, ಕಂಠಹಾರ, ಕಟಿಸೂತ್ರ, ಹಾರ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳು ಸಾಮಾನ್ಯ. ಧರಮ್ ಪ್ರಕಾಶಗಗಲ್ಲಿಯ ದುರಗಮ್ಮ ಮಂದಿರದ ಕಾಳಿಕಾ ಶಿಲ್ಪದಲ್ಲಿ ಆಕೆಯ ಕೈಗಳಲ್ಲಿ ಅಭಯ, ಖಡ್ಗ, ಡಮರು ಮತ್ತು ಕಪಾಲಗಳಿವೆ. ಶಿಲ್ಪಗಳ ಕಾಲ ಕ್ರಿ.ಶ. ಸುಮಾರು ೧೧-೧೨ನೇ ಶತಮಾನ.

ಸಪ್ತಮಾತೃಕೆ : ಸಾಮಾನ್ಯವಾಗಿ ವೈದಿಕ ಪರಂಪರೆಯ ಶೈವದೇವಾಲಯಗಳ ಹೊರಗಿನ ಗೋಡೆಯ ಗೂಡುಗಳಲ್ಲಿ ಸಪ್ತಮಾತೃಕೆಯರ ಶಿಲ್ಪಗಳನ್ನು ನಿಲ್ಲಿಸುತ್ತಿದ್ದರು. ಈ ಫಲಕಗಳಲ್ಲಿ ಗಣೇಶ ಮತ್ತು ವೀರಭದ್ರರ ಮಧ್ಯ ಏಳು ಮಾತೃ ದೇವತೆಯರಾದ ಬ್ರಾಹ್ಮಿ, ವರಾಹಿ, ವೈಷ್ಣವಿ, ಮಹೇಶ್ವರಿ, ಚಾಮುಂಡಿ, ಇಂದ್ರಾಣಿ ಮತ್ತು ಕೌಮಾರಿಯರ ಶಿಲ್ಪಗಳಿರುತ್ತವೆ. ಅಂಥ ಕೆಲ ಫಲಕಗಳು ಈ ಭಾಗದಲ್ಲಿವೆ. ನಾರಾಯಣಪುರದ ಶಿವ ದೇವಾಲಯದಲ್ಲಿರುವ ಶಿಲ್ಪ ಅಪರೂಪದ್ದಾಗಿದೆ ಮತ್ತು ಈ ದೇವಾಲಯದ ಮುಂದಿನ ಒಂದು ಶಿಲ್ಪ ಫಲಕದಲ್ಲಿ ಈ ದೇವತೆಯರನ್ನು ಅನೇಕ ಸೂರ್ಯರನ್ನು ಚಿತ್ರಿಸಲಾಗಿದೆ.

ಸ್ತಂಭ ತೋರಣದಲ್ಲಿ ಲಕ್ಷ್ಮಿ : ನಗರದ ಮಾರುತಿ ದೇವಾಲಯ ಹಿಂಬದಿಯಲ್ಲಿ ಒಂದು ಹಾಳುಮನೆಯ ಗೋಡೆಯಲ್ಲಿ ದೇವಿಯ ದೇವಾಲಯದ ಸ್ತಂಭ ತೋರಣ ಫಲಕವಿದೆ. ಈ ಶಿಲ್ಪದ ಮೇಲಿನ ಭಾಗ ತ್ರಿಕೋನಾಕಾರದಲ್ಲಿದೆ. ಈ ಶಿಲ್ಪದ ಎರಡು ಅಂಚುಗಳಲ್ಲಿ



ಶಿಖರವುಳ್ಳ ಎರಡು ವಿಮಾನ ಮಾದರಿಗಳಿವೆ. ಅವುಗಳ ಹೊರ ಬದಿಗಳಲ್ಲಿ ದುಂಡಾಕಾರದ ಎರಡು ಅರೆಗಂಬಗಳು, ಅವುಗಳ ಮೇಲೆ ಲತಾಸುರಳಿಗಳುಳ್ಳ ತೋರಣವಿದೆ. ಈ ಅರೆಗಂಬ ಮತ್ತು ವಿಮಾನ ಮಾದರಿ ಮಧ್ಯದಲ್ಲಿ, ಬುಡದಲ್ಲಿ ತಲೆ ಎತ್ತಿದ ಮಕರಗಳಿವೆ. ಅವುಗಳ ಬಾಯಿಯಲ್ಲಿ ತೋರಣದ ಲತಾಸುರಳಿ ಜೋಡಣೆಯಾಗಿದೆ. ಈ ಅರೆಗಂಬಗಳ ಮೇಲೆ ಹಾರವಿಡಿದು ಹಾರುತ್ತಿರುವ ಇಬ್ಬರು ಗಂಧರ್ವರಿದ್ದಾರೆ. ಈ ಅರೆಗಂಬಗಳ ಮಧ್ಯ ಅಂಚಿಗೆ

ಹೊಂದಿಕೊಂಡು ಲತಾಸುರಳಿ ತೋರಣವಿದೆ. ಮಧ್ಯದಲ್ಲಿ ಎತ್ತರ ಪೀಠದ ಮೇಲೆ ಲಕ್ಷ್ಮಿಯು ಕಮಲಗಳನ್ನು ಹಿಡಿದು ಪದ್ಮಾಸನದಲ್ಲಿ ಕುಳಿತಿರುವಳು. ಬದಿಗಳಲ್ಲಿ ಸೇವಕಿಯರು ನಿಂತಿದ್ದಾರೆ. ಬುಡದಲ್ಲಿ ನೆಲದ ಮೇಲೆ ಕಮಲದ ಎಲೆಗಳು ಹರಡಿವೆ. ವಿಮಾನ ಮಾದರಿಗಳಲ್ಲಿ ದೇವತೆಗಳಿಬ್ಬರು ಕುಳಿತಿರುವರು. ತೋರಣದಲ್ಲಿರುವ ಶಂಖದಂತೆ ಕಾಣುವ ಲತಾ ಸುರುಳಿಗಳ ಒಳಬದಿಗೆ ಹೊಂದಿ ದೇವತೆಗಳು ಕುಳಿತ ಪೀಠಗಳಿವೆ. ಈ ತೋರಣದ ಮಧ್ಯ ಕೀರ್ತಿಮುಖ ವಿದ್ದಿರಬೇಕು. ಅದು ಅಸ್ಪಷ್ಟವಾಗಿದೆ. ಈ ಫಲಕದ ಕಲಾ ಲಕ್ಷಣಗಳು ಸುಮಾರು ಕ್ರಿ.ಶ. ೧೨ನೇ ಶತಮಾನದ ಆದಿಭಾಗಕ್ಕೆ ಸೇರಿವೆ. ಹಾಗೂ ಉತ್ತರ ಭಾರತ ಶೈಲಿಯಲ್ಲಿವೆ ಹಾಗೂ ಇದೊಂದು ಶಾಕ್ತದೇವಾಲಯದ ಸುಕನಾಸಿ ಫಲಕವಾಗಿದೆ. ಕಾಲ ಸು. ಕ್ರಿ.ಶ. ೧೨ನೇ ಶತಮಾನ.

ಉಷಾ : ಕಲ್ಯಾಣದಿಂದ ನಾರಾಯಣಪುರಕ್ಕೆ ಹೋಗುವ ರಸ್ತೆಯ ಬದಿಗಿನ ಹಾಲುನಂದಿ ದೇವಾಲಯದಲ್ಲಿ ಈ ದೇವಿಯ ಶಿಲ್ಪವಿದೆ. ಈ ಶಿಲ್ಪದಲ್ಲಿ ಉಷ ನಿಂತುಕೊಂಡು ತನ್ನೆರಡು ಕೈಗಳಿಂದ ಬಿಲ್ಲಿನಿಂದ ಬಾಣವನ್ನು ಹೊಡೆಯುತ್ತಿರುವಳು. ಈಕೆಯು ಕಿರೀಟಮುಕುಟ ಮತ್ತು ಇನ್ನಿತರ ವಸ್ತ್ರಾಭರಣಗಳನ್ನು ಧರಿಸಿದುವಳು. ಈ ಶಿಲ್ಪ ಬೃಹದಾಕಾರದ ಸೂರ್ಯ ಶಿಲ್ಪದ ಒಂದು ಭಾಗವಿರಬೇಕು. ಕಾಲ ಸು. ಕ್ರಿ.ಶ. ೧೨ನೇ ಶತಮಾನ



ಮಹಾಲಕ್ಷ್ಮಿ: ಈ ಭಾಗದಲ್ಲಿ ಮಹಾಲಕ್ಷ್ಮೀಯ ಶಿಲ್ಪಗಳೂ ಇವೆ. ಅಂತಹದೊಂದು ತ್ರಿಪುರಾಂತಕ ಕೆರೆಯ ದಂಡೆಯಮೇಲಿದೆ. ಕಾಲ ಸು. ಕ್ರಿ.ಶ. ೧೨ನೇ ಶತಮಾನ. ಈ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ವ್ಯಾಪಕತೆಯಿಂದ ಕೊಲ್ಲಾಪುರದ ಮಹಾಲಕ್ಷ್ಮಿಯ ಆರಾಧನೆ ಈ ಪ್ರದೇಶಕ್ಕೂ ವ್ಯಾಪಿಸಿದ್ದು ಕಂಡುಬರುತ್ತದೆ. ಹೀಗಾಗಿ ಈ ದೇವಿಯ ಶಿಲ್ಪಗಳು ಈ ಭಾಗದಲ್ಲೂ ಹರಡಿವೆ. ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದ್ಯನ ಮಗ ಯುವರಾಜ ಮಲ್ಲಿಕಾರ್ಜುನನ ಆರಾಧ್ಯ ಅಧಿದೇವತೆ ಕೊಲ್ಲಾಪುರದ ಮಹಾಲಕ್ಷ್ಮಿ ಎಂಬುದನ್ನು ಇಲ್ಲಿ ಸ್ಮರಿಸಲಾಗಿದೆ. ■

೭. ನಾಗಶಿಲ್ಪಗಳು

ಪಿತೃದೇವತೆಗಳು ಮರದಲ್ಲಿ ವಾಸಿಸುತ್ತಾರೆಂಬ ನಂಬಿಕೆಗೆ ಕಾರಣವಾಗಿ ಯಕ್ಷಪೂಜೆ, ವೃಕ್ಷಪೂಜೆ, ನಾಗಪೂಜೆಗಳು ಬಳಕೆಗೆ ಬಂದವು. ಕದ್ರು ಮತ್ತು ಕಶ್ಯಪನ ಮಕ್ಕಳು ನಾಗಗಳೆಂದು ಮಹಾಭಾರತದಲ್ಲಿ ಹೇಳಿದೆ. ನಾಗದೇವ ಮತ್ತು ನಾಗ ಇವರು ಪಾತಾಳಲೋಕವಾಸಿಗಳು. ಮಹಾಭಾರತ ಮತ್ತು ವರಾಹ ಪುರಾಣಗಳಲ್ಲಿ ನಾಗಗಳ ಈ ಮೂಲವನ್ನು ಉಲ್ಲೇಖಿಸಲಾಗಿದೆ. ನಾಗರು ಪಂಚಮಿ ತಿಥಿ ಶ್ರಾವಣದಂದು ಹುಟ್ಟಿದವರು. ಇದರಿಂದ ನಾಗಪಂಚಮಿಯಂದು ನಾಗಶಿಲ್ಪಗಳಿಗೆ ಹಾಲು ಎರೆಯುವ ಸಂಪ್ರದಾಯ ಹಿಂದೂಗಳಲ್ಲಿದೆ. ಕೆಲವೊಮ್ಮೆ ಮಕ್ಕಳಿಲ್ಲದವರು ನಾಗವಿಗ್ರಹ ನಿಲ್ಲಿಸುವುದಾಗಿ ವಚನ ಕೊಡುವರು. ಇಂತಹ ಹಲವಾರು ಕಾರಣಗಳಿಂದ ನಾಗ ಶಿಲ್ಪಗಳ ಆರಾಧನೆಗೆ ಹೆಚ್ಚು ಪ್ರೋತ್ಸಾಹ ಒದಗಿದೆ ಎನ್ನಬಹುದು. ಹಲವು ಧರ್ಮಗಳ ಬೀಡಾದ ಭಾರತದಲ್ಲಿ ನಾಗಶಿಲ್ಪಗಳ ಆರಾಧನೆಯು ಪ್ರಾಚೀನದ್ದಾಗಿದೆ. ಕರ್ನಾಟಕದಲ್ಲಿ ನಾಗಶಿಲ್ಪಗಳು ಸು.ಕ್ರಿ.ಶ.೨-೩ನೇ ಶತಮಾನದಿಂದ ಕಂಡುಬಂದಿವೆ. ಈ ಕಾಲದ ನಾಗಶಿಲ್ಪಗಳು ಮುಖ್ಯವಾಗಿ ಗುಲಬರ್ಗಾ ಜಿಲ್ಲೆಯ ಸನ್ನತಿ ಮತ್ತು ಉತ್ತರ ಕನ್ನಡ ಜಿಲ್ಲೆ ಬನವಾಸಿಯಲ್ಲಿವೆ. ಮಹಾರಾಷ್ಟ್ರದ ಕನ್ಹೇರಿಯಲ್ಲೂ ಕಾಣಬಹುದು. ಮುಂದೆ ನಾಗಶಿಲ್ಪಗಳ ಆರಾಧನೆಯ ಪ್ರಭಾವ ಸು.ಕ್ರಿ.ಶ ೧೧ನೇ ಶತಮಾನದಲ್ಲಿ ಹೆಚ್ಚು ಪ್ರಬಲವಾಗಿದ್ದಿತೆಂದು ಹೇಳಬಹುದಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬೀದರ ಜಿಲ್ಲೆಯ ಬಸವಕಲ್ಯಾಣ ನಗರವು ಈ ಅರಸರ ರಾಜಧಾನಿಯಾಗಿತ್ತು. ಇದರಿಂದ ಈ ನಗರದ ಸಾಂಸ್ಕೃತಿಕ ಚಟುವಟಿಕೆಗಳು ಉಚ್ಛ್ರಾಯ ಸ್ಥಿತಿಯನ್ನು ತಲುಪಿದವು. ಬೀದರ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ಚಾಲುಕ್ಯರ ಕಾಲದ ನಾಗಶಿಲ್ಪಗಳು ವಿಶಿಷ್ಟ ಸ್ಥಾನ ಪಡೆದಿವೆ. ಈ ಹಿಂದೆ ಬೀದರ ಜಿಲ್ಲೆಯ ಭಾಲ್ಕಿ, ಬೀದರ, ಹುಮನಾಬಾದ ಮತ್ತು ಔರಾದ ತಾಲೂಕಗಳಲ್ಲಿ ಲೇಖಕರಿಗೆ ದೊರೆತ ನಾಗಶಿಲ್ಪಗಳನ್ನು ಅಧ್ಯಯನ ಮಾಡಲಾಗಿತ್ತು. ಈಗ ಇತ್ತೀಚಿನ ಅನ್ವೇಷಣೆಯಲ್ಲಿ ಕಂಡು ಬಂದ ನಾಗಶಿಲ್ಪಗಳನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಂಡು ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. ಲೇಖಕರ ಅನ್ವೇಷಣೆಯಲ್ಲಿ ಬೀದರ ಜಿಲ್ಲೆಯಲ್ಲಿ ವೈವಿಧ್ಯಮಯ ನಾಗಶಿಲ್ಪಗಳು ಬೆಳಕಿಗೆ ಬಂದಿವೆ. ಇಲ್ಲಿ ನಾಗನನ್ನು ಶಿಲ್ಪಗಳಲ್ಲಿ ಎರಡು ರೀತಿಯಿಂದ ತೋರಿಸಿರುವುದು ಕಂಡುಬರುತ್ತದೆ. ಒಂದು ವಿವಿಧ ಧರ್ಮಗಳ ದೇವ ದೇವತೆಯ ಅಂಗಾಂಗಗಳಲ್ಲಿ ನಾಗನನ್ನು ಬಳಸಿದ್ದು. ಇನ್ನೊಂದು ಪ್ರಕಾರದಲ್ಲಿ ಪ್ರತ್ಯೇಕ ಶಿಲ್ಪಗಳಲ್ಲಿ ನಾಗನನ್ನು ವಿವಿಧ ರೀತಿಯಲ್ಲಿ ತೋರಿಸಲಾಗಿದೆ. ಎರಡನೇ ಪ್ರಕಾರದ ಶಿಲ್ಪಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಬೀದರ ಜಿಲ್ಲೆಯ ಬಸವಕಲ್ಯಾಣ ನಗರವು ಕ್ರಿ.ಶ.೧೧-೧೨ನೇ ಶತಮಾನದಲ್ಲಿ ಚಾಲುಕ್ಯರಿಗೆ ಮತ್ತು ಕಳಚುರಿಯರಿಗೆ ರಾಜಧಾನಿಯಾಗಿತ್ತು. ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ರಂಜೋಳದ ಸಿಂಧರು(ಬೀದರ ಜಿಲ್ಲೆ) ನಾಗವಂಶದವರಾಗಿದ್ದ ರೆಂಬುದು ಗಮನಾರ್ಹ. ಪ್ರಸ್ತುತ ಅಧ್ಯಯನಕ್ಕೆ ಅದು ಅರ್ಥಪೂರ್ಣ.

ನಾಗಶಿಲ್ಪಗಳು: ಬೀದರ ಜಿಲ್ಲೆಯಲ್ಲಿ ದೊರೆತ ನಾಗಶಿಲ್ಪಗಳು ಮೂರು ಪ್ರಕಾರದಲ್ಲಿವೆ. ಮೊದಲನೆಯದು ನಾಗನನ್ನು ಸಂಪೂರ್ಣ ಮನುಷ್ಯರೂಪದಲ್ಲಿ ಚಿತ್ರಿಸಿದ ಶಿಲ್ಪಗಳು. ಎರಡನೆಯದು ಅರ್ಧ ಮನುಷ್ಯ ಮತ್ತು ಅರ್ಧ ಹಾವಿನ ರೂಪದ ನಾಗದಪಂತಿಗಳ ಶಿಲ್ಪಗಳು ಅಥವಾ ಇದೇ ಮಾದರಿಯ ಗಂಡುನಾಗ ಅಥವಾ ಹೆಣ್ಣು ನಾಗಿಣಿಯ ಶಿಲ್ಪಗಳು, ಮೂರನೆಯದು ಕೇವಲ ನಾಗಸರ್ಪಗಳ ಶಿಲ್ಪಗಳು. ಇಲ್ಲಿಯವರೆಗೆ ದುಂಡುನಾಗ ಶಿಲ್ಪಗಳು ಬಸವಕಲ್ಯಾಣ ನಗರದಲ್ಲಿ ಬೆಳಕಿಗೆ ಬಂದಿಲ್ಲ. ಆದರೆ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಕಾಸರತೂಗಾವ್ ಗ್ರಾಮದಲ್ಲಿ ಒಂದು ದುಂಡು ನಾಗಶಿಲ್ಪ ಬೆಳಕಿಗೆ ಬಂದಿರುವುದನ್ನು ಇಲ್ಲಿ ನೆನೆಯಬಹುದು. ಆದರೆ ಬಸವಕಲ್ಯಾಣ ತಾಲೂಕಿನ ಹಳ್ಳಿ ಗ್ರಾಮದ ಮಾರುತಿ ಮಂದಿರದ ಫಲಕದ ಶಿಲ್ಪದಲ್ಲಿ ನಾಗಸರ್ಪದ ದೇಹಾಂಗವು ಸಿಂಬಿಯಂತೆ ಸುತ್ತಿರುವುದು ವಿಶೇಷವಾಗಿದೆ. ಇನ್ನೂ ಹಲವಾರು ಶಿಲ್ಪಗಳು ತುಂಡು ತುಂಡಾಗಿವೆ. ಕೆಲವು ಅಲ್ಲಿಯ ಅನೇಕ ಬಾವಿ,ಮನೆ,ಮಸೀದೆ, ಕೋಟೆ ಗೋಡೆಗಳಲ್ಲಿವೆ.

೧. ಪೂರ್ಣ ಮನುಷ್ಯ ರೂಪದಲ್ಲಿ ನಾಗ: ಪೂರ್ಣ ಮನುಷ್ಯನ ರೂಪದಲ್ಲಿರುವ ನಾಗನ ಶಿಲ್ಪ ಪರ್ತಾಪುರ ಮಾರುತಿ ಮಂದಿರದಲ್ಲಿದೆ. ಎರಡೂ ಕೈಗಳಲ್ಲಿ ನಾಗಸರ್ಪಗಳನ್ನು



ಹಿಡಿದು ನಾಗನು ನೃತ್ಯಭಂಗಿಯಲ್ಲಿರುವನು. ಕೀರಿಟವುುಕುಟ. ಕರ್ಣಕುಂಡಲ, ಕಂಠಹಾರ, ಯಜ್ಞೋಪವೀತ, ಸೊಂಟಪಟ್ಟಿ, ಕಡಗ ಇತ್ಯಾದಿ ಆಭರಣಗಳನ್ನು ಧರಿಸಿರುವನು. ಬೆನ್ನ ಹಿಂದೆ ಕಾಲುಗಳ ಹಿಂಭಾಗದವರೆಗೆ ಇಳಿಬಿಟ್ಟ ವಸ್ತ್ರವನ್ನು ಕಟ್ಟಿಕೊಂಡಿರುವನು. ಪ್ರಭಾಮಂಡಲ ದುಂಡಾಗಿದೆ. ಬದಿಗಳಲ್ಲಿ ಕೆಳಗಡೆ ಮನುಷ್ಯರೂಪದ ನಾಗಿಣಿಯರಿರುವರು. ಆ ನಾಗಿಣಿಯರ ತಲೆ ಮೇಲೆ ಹಾವಿನ ಹೆಡೆಗಳಿವೆ. ಇದೊಂದು ಅಪೂರ್ವ ನಾಗ ಶಿಲ್ಪವೇ ಸರಿ.

೨. ಅರ್ಧಮನುಷ್ಯ-ಅರ್ಧ ಸರ್ಪರೂಪ:



ಅ. ನಾಗ ದಂಪತಿಗಳು: ಈ ಬಗೆಯ ಶಿಲ್ಪದಲ್ಲಿ ಅರ್ಧಭಾಗ ಮನುಷ್ಯ ಮತ್ತು ಅರ್ಧಭಾಗ ನಾಗರೂಪವಿದೆ. ಅಂತಹ ಒಟ್ಟು ನಾಲ್ಕು ಶಿಲ್ಪಗಳು ಅಲ್ಲಿವೆ. ತಲೆಯಿಂದ ಹೊಕ್ಕಳದವರೆಗೆ ಮಾನವಾಕರ, ದ್ವಿಭುಜಗಳಿವೆ. ಸಾಮಾನ್ಯವಾಗಿ ನಾಗರಾಜನ ಬಲಗೈಯಲ್ಲಿ ಖಡ್ಗ ಅಥವಾ ಅಭಯಹಸ್ತ ಮತ್ತು ಎಡಗೈ ನಾಗಿಣಿಯ ಹೆಗಲ ಮೇಲೆ ಹಾಕಿ ಅಪ್ಪಿಕೊಂಡಿರುವನು. ನಾಗಿಣಿಯ ಎಡಗೈಯಲ್ಲಿ ಫಲ ಅಥವಾ ಕಮಲ ಮತ್ತು ಬಲಗೈಯನ್ನು ನಾಗರಾಜನ ಹೆಗಲ ಮೇಲೆ ಹಾಕಿ ಅಪ್ಪಿಕೊಂಡಿರುವಳು ಅಥವಾ ಕಮಲಗಳನ್ನು ಎರಡೂ ಕೈಗಳಲ್ಲಿ ಹಿಡಿದು ಕೊಂಡಿರುವುದನ್ನು ಕಾಣಬಹುದು. ಈ ದಂಪತಿಗಳ ಅರ್ಧ ಹಾವಿನ ದೇಹಾಂಗಗಳು ಸುರುಳಿ ಸುರುಳಿಯಲ್ಲಿ ಒಂದರ ಮೇಲೊಂದು ಪದರಿನಂತೆ ಸಮಾನಾಂತರದಲ್ಲಿ ಸುತ್ತಿಕೊಂಡಿವೆ. ಈ ದಂಪತಿಗಳ ತಲೆಯು ನಾಗಗಳ ಹೆಡೆಯಿಂದ ಅಲಂಕೃತವಾಗಿವೆ. ನಾಗರಾಜನು ಕಿರೀಟ, ಕರ್ಣಕುಂಡಲ, ಕೊರಳಹಾರ, ಸೊಂಟ ಪಟ್ಟಿ, ಬಳೆ ಇತ್ಯಾದಿ ವಸ್ತ್ರಾಭರಣಗಳಿಂದ ಅಲಂಕೃತನಾಗಿರುವನು. ನಾಗಿಣಿಗೆ ಈ ರೀತಿಯ ವಸ್ತ್ರಾಭರಣಗಳನ್ನಲ್ಲದೆ ಆಕೆಯ ಕೇಶದ ತುರುಬು ಸಹ ಅಲಂಕೃತ ವಾಗಿರುತ್ತದೆ. ಮನುಷ್ಯ-ಹಾವಿನಹೆಡೆ ಮತ್ತು ವಸ್ತ್ರಾಭರಣಗಳಿಂದ ಕೂಡಿದ ಈ ನಮೂನೆಯ ನಾಗದಂಪತಿಗಳ ಶಿಲ್ಪಗಳು ಬಹು ಆಕರ್ಷಣೀಯವಾಗಿವೆ. ಸಾಮಾನ್ಯವಾಗಿ ನಾಗರಾಜನಿಗೆ ಹೆಡೆಗಳು ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ನಾಗಿಣಿಗೆ ಕಡಿಮೆ ಸಂಖ್ಯೆಯಲ್ಲಿ ಇರುವುದು ಕಂಡುಬರುತ್ತದೆ. ಈ ಮಾದರಿಗೆ ಸೇರಿದ ಅತ್ಯಂತ ಸುಂದರವಾದ ಶಿಲ್ಪ ಬಸವಕಲ್ಯಾಣ ನಗರದ ಕೋಟೆಯ ಒಳಗಡೆಯಿದೆ. ಈ ಶಿಲ್ಪದಲ್ಲಿ ನಾಗರಾಜನ ಬಲಗೈಯಲ್ಲಿ ಖಡ್ಗವಿದೆ. ಎಡಗೈಯನ್ನು ನಾಗಿಣಿ ಭುಜದ ಮೇಲೆ ಹಾಕಿರುವನು. ನಾಗಿಣಿ ತನ್ನ ಎಡಗೈಯಲ್ಲಿ ಫಲ, ಬಲಗೈಯನ್ನು ನಾಗರಾಜನ ಭುಜದ ಮೇಲೆ ಹಾಕಿರುವಳು. ಸೊಂಟದಿಂದ ಕೆಳಗಿನ ಭಾಗ ಇವರಿಗೆ ಹಾವಿನ ದೇಹಾಂಗವಿದ್ದು ಅವುಗಳು ಒಂದೇ ದೇಹದಂತೆ ಕೂಡಿಕೊಂಡು ಮೂರು-ನಾಲ್ಕು ಪದರುಗಳಲ್ಲಿ ಸಮಾನಾಂತರವಾಗಿ ಸುತ್ತಿಕೊಂಡಿವೆ. ಬಾಲದ ತುದಿಯ ಕೆಳಗಿನ ಭಾಗ ಒಡೆದಿದೆ. ನಾಗರಾಜನು ಕಿರೀಟ ಮುಕುಟ, ಕರ್ಣಕುಂಡಲ, ಮಣಿ, ಗೆಜ್ಜೆಗಳಿಂದ ಕೂಡಿದ ಕಂಠಹಾರ, ಬಳೆ, ಯಜ್ಞೋಪವೀತ, ವಸ್ತ್ರದ ಸೊಂಟಪಟ್ಟಿಗಳನ್ನು ಧರಿಸಿರುವನು. ಈತನ ತಲೆಯ ಮೇಲೆ ಸರ್ಪದ ಏಳು ಹೆಡೆಗಳಿವೆ. ನಾಗಿಣಿಯ ತಲೆಯು

ಹಿಂದೆ ಐದು ಹೆಡೆಗಳಿವೆ. ತಲೆಯ ಕೂದಲನ್ನು ಹಿಂದಕ್ಕೆ ಎಳೆದು ಬಾಚಿಕೊಂಡಿದ್ದು ಅದರ ತುರುಬನ್ನು ದುಂಡಾಗಿ ಸುತ್ತಿಕೊಂಡಿರುವಳು. ಮುಂಭಾಗದಲ್ಲಿ ಮಣಿಹಾರಗಳಿಂದ ಕೇಶವನ್ನು ಅಲಂಕೃತವಮಾಡಿಕೊಂಡಿರುವಳು. ಕರ್ಣಕುಂಡಲ. ಮಣಿಗಳ ಕಂಠಹಾರ,ಕುಚಹಾರ, ವಸ್ತ್ರದ ಸೊಂಟಪಟ್ಟಿಗಳನ್ನು ಉಟ್ಟಿರುವಳು. ಶೈಲಿಯ ದೃಷ್ಟಿಯಿಂದ ಈ ಶಿಲ್ಪವು ಸು. ಕ್ರಿ.೧೧ನೇ ಶತಮಾನದ ಅಂತ್ಯಭಾಗಕ್ಕೆ ಸೇರಿದ್ದೆಂದು ಹೇಳಬಹುದು. ಬೇರೆಕಡೆಯಿಂದ ಈ ಶಿಲ್ಪವನ್ನು ಬಸವಕಲ್ಯಾಣಕ್ಕೆ ತರಲಾಗಿದೆ.

ಸದಾನಂದಮಠದ ಹತ್ತಿರವಿರುವ ಬಾವಿಯ ಗೋಡೆಯಲ್ಲಿರುವ ಈ ಮಾದರಿಯ ಒಂದು ನಾಗದಂಪತಿಗಳ ಶಿಲ್ಪದಲ್ಲಿ ಈ ಮೇಲೆ ಹೇಳಿದ ಲಕ್ಷಣಗಳಿದ್ದು ಆಯುಧ ಉಪಕರಣಗಳು ಕೈಯಲ್ಲಿವೆ ಆದರೆ ಇಲ್ಲಿ ನಾಗಿಣಿಯು ಕಿರೀಟಧಾರಿಯಾಗಿದ್ದಾಳೆ. ಇವರ ಆಭರಣಗಳು ಬೇರೆ ರೀತಿಯಲ್ಲಿವೆ. ಸೊಂಟದ ಕೆಳಗಿನ ಹಾವಿನ ಆಕಾರದ ದೇಹಾಂಗಗಳು ಎಡ ಬಲ ಕಡೆಗಳಿಂದ ಮೊದಲ ಎರಡು ಪಟ್ಟಿಕೆಗಳಲ್ಲಿ ಸುತ್ತಿಕೊಂಡಿದ್ದು ಕೆಳಗಡೆ ಅವುಗಳ ಬಾಲಗಳು ಒಂದಕ್ಕೊಂದು ಗಂಟುಹಾಕಿಕೊಂಡಿವೆ. ತ್ರಿಪುರಾಂತಕ ಮಾರುತಿ ಮಂದಿರದ ಶಿಲ್ಪದಲ್ಲಿ ನಾಗದಂಪತಿಗಳ ದೇಹಾಂಗಗಳು ಹಾವಿನ ರೂಪದಲ್ಲಿವೆ. ಅದರ ಸಮಾನಾಂತರವಾಗಿ ಚಿತ್ರಿಸಲಾಗಿದೆ. ನಾಗರಾಜನ ಬಲಗೈಯಲ್ಲಿ ಕಮಲ. ಎಡಗೈಯನ್ನು



ನಾಗಿಣಿಯ ಎಡಭುಜದ ಮೇಲೆ ಹಾಕಿ ಅಪ್ಪಿಕೊಂಡಿರುವನು. ನಾಗಿಣಿಯು ಬಲಗೈಯಿಂದ ಇದೇ ರೀತಿ ನಾಗರಾಜನನ್ನು ಅಪ್ಪಿಕೊಂಡಿರುವಳು. ಆಕೆಯ ಎಡಗೈಯಲ್ಲಿ ಫಲವಿದೆ. ಈ ದಂಪತಿಗಳಿಬ್ಬರು. ಕಿರೀಟಗಳನ್ನು, ಮಣಿಗಳಿಂದ ಕೂಡಿದ ವಸ್ತ್ರಪಟ್ಟಿಗಳನ್ನು, ಕಂಠಹಾರ, ಕರ್ಣಕುಂಡಲಗಳನ್ನು ಧರಿಸಿರುವರು. ತಲಾ ಒಬ್ಬರ ಹಾವಿನ ದೇಹಾಂಗಗಳು ಒಂದಕ್ಕೊಂದು ಎಡಬಲಕ್ಕೆ ಸುತ್ತಿಕೊಂಡಿವೆ. ಈ ಎರಡರ ಬಾಲದ ತುದಿಗಳು ಕೆಳಗಡೆ ಇಳಿಬಿದ್ದಿವೆ. ಈ ಶಿಲ್ಪದಲ್ಲೂ ನಾಗನಿಗೆ ಏಳು ಹೆಡೆಗಳು ಮತ್ತು ನಾಗಿಣಿಗೆ ಮೂರು ಹೆಡೆಗಳಿವೆ. ಈ ನಮೂನೆಯ ನಾಗಶಿಲ್ಪಗಳ ಲಕ್ಷಣಗಳು ಶಿಲ್ಪರತ್ನ ವಿವರಗಳನ್ನು ಹೋಲುತ್ತವೆ. ಸದಾನಂದಮಠದ ಹತ್ತಿರವಿರುವ ಬಾವಿಯ ಗೋಡೆಯಲ್ಲಿ ಈ ನಮೂನೆಯ ನಾಗದಂಪತಿಗಳ ಶಿಲ್ಪದಲ್ಲಿ ನಾಗನ ಬಲಹಸ್ತ ಅಭಯದಲ್ಲಿದ್ದರೆ, ಎಡಗೈಯನ್ನು ನಾಗಿಣಿಯ ಹೆಗಲ ಮೇಲೆ ಹಾಕಿರುವನು. ನಾಗಿಣಿ ಬಲಗೈಯನ್ನು ನಾಗನ ಹೆಗಲಮೇಲೆ ಹಾಕಿರುವಳು. ಎಡಗೈಯಲ್ಲಿ

ಕಮಲಹಿಡಿದಿರುವಳು. ಈ ಮೊದಲೇ ಈ ನಮೂನೆಯ ನಾಗದಂಪತಿಗಳ ಶಿಲ್ಪಗಳು ಪ್ರಸ್ತುತ ಲೇಖಕರಿಗೆ ಈ ಜಿಲ್ಲೆಯಲ್ಲಿ ಕಂಡುಬಂದಿವೆ. ಅವುಗಳಲ್ಲಿ ಖಣಿರಂಜೋಳ ಮತ್ತು ಸಂಗಾವಿ (ಬೀದರ ತಾ.) ಗಳ ಶಿಲ್ಪಗಳು ಮಹತ್ವದ್ದಾಗಿವೆ. ಸಂಗಾವಿಯ ಮಾರುತಿ ಮಂದಿರದಲ್ಲಿ ಇದೇ ನಮೂನೆಯ ನಾಗದಂಪತಿಗಳ ಶಿಲ್ಪವಿದೆ. ಅಲ್ಲಿ ನಾಗದಂಪತಿಗಳು ಹಿಡಿದ ಆಯುಧಗಳು ಒಡೆದಿವೆ. ಅವರು ಕಿರೀಟ ಮುಕುಟ, ಕಿವಿಯೋಲೆ, ಕಂಠಹಾರ, ಸೊಂಟಕ್ಕೆ ವಸ್ತ್ರ ಧರಿಸಿರುವರು. ಅವರ ಹಾವಿನ ರೂಪದ ದೇಹವು ಒಂದಕ್ಕೊಂದು ಸರಳವಾಗಿ ಹೆಣೆದುಕೊಂಡಿವೆ. ಆದರೆ ಖಣಿರಂಜೋಳ ಗ್ರಾಮದಲ್ಲಿರುವ ಇದೇ ನಮೂನೆಯ ನಾಗ ದಂಪತಿಗಳ ಶಿಲ್ಪದಲ್ಲಿ ಕೆಲವು ಹೊಸ ಲಕ್ಷಣಗಳಿವೆ. ಅಲ್ಲಿ ನಾಗರಾಜನ ಕೈಗಳಲ್ಲಿ ಖಡ್ಗ ಮತ್ತು ಗುರಾಣಿಗಳಿವೆ. ನಾಗಿಣಿಯ ಕೈಗಳಲ್ಲಿ ಕಮಲಗಳಿವೆ. ಹಿಡಿದಿರುವರು. ಇಬ್ಬರೂ ಕಿರೀಟಧಾರಿಗಳು ಕಿವಿಗಳಲ್ಲಿ ಓಲೆ, ಕೊರಳಲ್ಲಿ ಸರಗಳನ್ನು ಧರಿಸಿರುವರು. ನಾಗರಾಜನು ಸೊಂಟಕ್ಕೆ ಅಗಲವಾದ ವಸ್ತ್ರವನ್ನು ಬಿಗಿದಿರುವನು. ನಾಗಿಣಿಯು ಸೊಂಟಕ್ಕೆ ಕಟ್ಟಿದ ವಸ್ತ್ರದಲ್ಲಿ ಸಮಾನಾಂತರ ಪಟ್ಟಿಕೆಗಳಿವೆ. ಅವರ ಹಾವಿನ ದೇಹಾಂಗಗಳು ಎಡ ಬಲಗಡೆಗೆ ಸುರುಳಿಯಾಗಿ ಸುತ್ತಿದಂತೆ ಹಾಗು ಹೆಣೆದುಕೊಂಡಂತೆ ಚಿತ್ರಿಸಿರುವುದನ್ನು ಕಾಣಬಹುದು. ನೀಳವಾಗಿ ಕೆಳಗಿನಿಂದ ಹರಿವ ಸರಳ ನಾಗರಹಾವಿನ ಒಂದೊಂದು ಚಿತ್ರವನ್ನು ಈ ದಂಪತಿಗಳ ಬದಿಯಲ್ಲಿವೆ.

ಆ. ನಾಗಗಳು : ಅರ್ಧ ಮನುಷ್ಯ-ಅರ್ಧ ಸರ್ಪ ಮಾದರಿಯ ನಾಗರಾಜನ ಶಿಲ್ಪಗಳು ಈಗ ಇಲ್ಲಿ ಹನ್ನೊಂದು ದೊರೆತಿವೆ. ನಾಗರಾಜನ ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳಿವೆ. ಮೈಮೇಲಿನ ಅಭರಣಗಳು ಬಹು ಆಕರ್ಷಣೀಯವಾಗಿವೆ. ಈ ನಮೂನೆಯಲ್ಲಿ ಆರು ನಾಗರಾಜನ ಶಿಲ್ಪಗಳಿವೆ. ಬೀದರ ಜಿಲ್ಲೆಯ ಕೆಲವು ಕಡೆಗಳಲ್ಲಿ ಈ ಮಾದರಿಯ ನಾಗಗಳ ಕೈಗಳು ಯೋಗಮುದ್ರೆಯಲ್ಲಿರುವುದು ಗಮನೀಯ. ಉದಾ: ಬಸವಕಲ್ಯಾಣ ನಗರ ದಕ್ಷಿಣಕ್ಕೆ ಸುಮಾರು ೬ ಕಿ.ಮಿ. ದೂರದ ಸಸ್ತಾಪುರ ಗ್ರಾಮದ ಮಾರುತಿ ಮಂದಿರದ ನಾಗಶಿಲ್ಪದಲ್ಲಿ ನಾಗನು ಯಾವ ಅಭರಣಗಳನ್ನೂ ಧರಿಸಿಲ್ಲ. ಶಿರದ ಸುತ್ತಲೂ ನಾಗರ ಹೆಡೆಗಳ ಅಲಂಕಾರವಿದೆ. ಅವುಗಳ ಮೇಲೆ ಮಧ್ಯದಲ್ಲಿ ಛತ್ರಿಯೂ ಇದೆ. ಹಾವಿನ ರೂಪದ ದೇಹವು ಸರಳವಾಗಿ ನೀಳವಾಗಿ ಕೆಳಿಗಿಂದ ಮೇಲಿನ ವರೆಗೆ ಸುತ್ತಿಕೊಂಡಿದೆ. ಕೈಗಳು ಯೋಗಮುದ್ರೆಯಲ್ಲಿವೆ. ಈ ಲಕ್ಷಣವುಳ್ಳ ನಾಗಶಿಲ್ಪ ಅಪರೂಪದ್ದಾಗಿದೆ. ಕಲ್ಯಾಣದ ರಜಪೂತರಗಲ್ಲಿ. ಸದಾನಂದಮಠ ಬಾವಿ ಗೋಡೆ (೨) ಮತ್ತು ಗೌಂಡಿಗಲ್ಲಿ (೨)ಗಳ ಶಿಲ್ಪಗಳಲ್ಲಿ ನಾಗಗಳ ಕೈಗಳಲ್ಲಿ ಕಮಲ ಆಥವಾ ಖಡ್ಗ ಮತ್ತು ಗುರಾಣಿಗಳಿವೆ. ಹಾಗೂ ಮುಂದೆ ಚಾಚಿದ ನಾಗಹೆಡೆಗಳು ಅಲಂಕಾರವನ್ನು ಹೊಂದಿವೆ. ಕೆಲವೊಮ್ಮೆ ಹೆಡೆಯ

ಮೇಲೆ ಛತ್ರಿಯನ್ನು ತೋರಿಸಿರುವುದು ವಿಶೇಷ. ಸದಾನಂದಮಠದ ಹತ್ತಿರ ಬಾವಿಯ ಗೋಡೆಯ ಶಿಲ್ಪ ಬಹು ಸುಂದರವಾಗಿದೆ. ಇಲ್ಲಿ ನಾಗರಾಜನ ಬದಿಯಿರುವ ನಾಗಿಣಿಯರೂ ಸಹ ಅರ್ಧ ಮನುಷ್ಯ ಮತ್ತು ಅರ್ಧ ಸರ್ಪ ರೂಪದಲ್ಲಿರುವರು. ಈ ರೀತಿಯ ಮತ್ತೊಂದು ಶಿಲ್ಪದಲ್ಲಿ ನಾಗಿಣಿಗೆ ಕಿರೀಟ, ಕರ್ಣಕುಂಡಲ, ಕೊರಳಹಾರ, ಸೊಂಟಪಟ್ಟಿ, ಬಳೆ, ವಸ್ತ್ರಾಭರಣಗಳಿವೆ ಮತ್ತು ಹೆಡೆಗಳಿವೆ. ಮಧ್ಯದಲ್ಲಿರುವ ನಾಗರಾಜನಿಗಲ್ಲದೆ ಬದಿಗಿರುವ ಸೇವಕರಿಗೂ ಈ ವಸ್ತ್ರಾಭರಣಗಳಿವೆ. ಈ ಮಾದರಿಯ ಶಿಲ್ಪ ಅಂಬಿಗರ ಚೌಡಯ್ಯನ ಮಂದಿರದ ಹತ್ತಿರವಿರುವ ಹಿರೋಡೆ ಕಟ್ಟೆಯ ಮೇಲಿದೆ.

ಸರ್ಪರೂಪದ ನಾಗಗಳು : ಇನ್ನೊಂದು ಪ್ರಕಾರದಲ್ಲಿ ಸೇರಿದ ಕೇವಲ ನಾಗಸರ್ಪವುಳ್ಳ ಶಿಲ್ಪಗಳಲ್ಲಿ ವೈವಿಧ್ಯಮಯವಾಗಿವೆ. ಈ ನಾಗಗಳಿಗೆ ಒಂಬತ್ತು, ಏಳು ಮತ್ತು ಐದು ಹೆಡೆಗಳಿವೆ. ಈ ರೂಪದ ದಂಪತಿ ಶಿಲ್ಪಗಳಿವೆ. ಅಲ್ಲಿ ನಾಗನಿಗೆ ಹೆಚ್ಚು ಹೆಡೆಗಳನ್ನು ಮತ್ತು ನಾಗಿಣಿಗೆ ಕಡಿಮೆ ಹೆಡೆಗಳಿರುವುದನ್ನು ಹಾಗೂ ಸರಿಸಮಸಂಖ್ಯೆಯ ಹೆಡೆಗಳಿರುವ ನಾಗ ದಂಪತಿ ಶಿಲ್ಪಗಳನ್ನು ಕಾಣಬಹುದು. ಈ ದಂಪತಿಗಳ ಶಿಲ್ಪದಲ್ಲಿ ಕೆಲವೊಮ್ಮೆ ಗಂಡುನಾಗನ ಚಿತ್ರಕ್ಕೆ ಪ್ರಾಧ್ಯಾನ್ಯತೆಯನ್ನು ಕೊಟ್ಟಂತೆ ಕಾಣುತ್ತದೆ. ಇದರಿಂದ ಹೆಚ್ಚು ಸಂಖ್ಯೆ ಹೆಡೆಗಳಿರುವ ನಾಗವು ಗಂಡೆಂದು ಗುರುತಿಸಬಹುದು. ಕೆಲವೊಮ್ಮೆ ಈ ನಮೂನೆಯ ನಾಗ ಸರ್ಪಗಳ ಕೆಳಗೆ ಅಥವಾ ಬದಿಗಳಲ್ಲಿ ಮಾತ್ರ ನಾಗನ ಭಕ್ತರನ್ನು ತೋರಿಸಲಾಗಿದೆ. ಪೇಟೆಯ ಮುಖ್ಯ ರಸ್ತೆ ಬದಿಯಲ್ಲಿರುವ ಮಹದೇವ ಮಂದಿರದ ಮುಂದೆ ಈ ನಮೂನೆಯ ಒಂದು ನಾಗಶಿಲ್ಪವಿದೆ. ಅದಕ್ಕೆ ಐದು ಹೆಡೆಗಳಿವೆ. ಈ ನಾಗಸರ್ಪದ ದೇಹಾಂಗವು ಮೇಲಿಂದ ಕೆಳಗಿನವರೆಗೆ ಮೂರು ಸಮಾಂತರ ಸುತ್ತುಗಳಿವೆ. ತಲಾ ಒಂದಕ್ಕೆ ಎರಡು ಅಡ್ಡಗಂಟುಗಳಿವೆ. ಸುರುಳಿಗಳ ಮಧ್ಯ ಸರಳ ಹೂವಿನ ಚಿಹ್ನೆಗಳಿವೆ. ಬಾಲತುದಿಗೆ ಪೀಠದ ಬದಿಗಳಲ್ಲಿ ಭಕ್ತರು ಕೈಮುಗಿದು ಕುಳಿತಿರುವರು. ಈ ಭಕ್ತರು ಬಹುಶಃ ಈ ನಾಗಶಿಲ್ಪವನ್ನು ನಿರ್ಮಿಸಲು ಕಾರಣವಾಗಿರಬೇಕು. ಮಹದೇವಗುಡಿ ಒಳಗಿನ ಶಿಲ್ಪದಲ್ಲಿ ನಾಗ ಸರ್ಪದ ಬದಿಗಳಲ್ಲಿ ನಾಗಿಣಿಯರಿದ್ದಾರೆ. ಇಲ್ಲಿಯ ಪರ್ತಾಪುರದ ಮಾರುತಿ ಮಂದಿರದ ಮುಂದಿನ ಅರಳಿಗಿಡದ ಕೆಳಗಡೆಯಿರುವ ಶಿಲ್ಪದಲ್ಲಿ ಬಹಳ ಉದ್ದವಾದ ಸುರುಳಿಯಾಗಿ ದೇಹ ಸುತ್ತಿಕೊಂಡ ನಾಗಸರ್ಪವಿದೆ. ಹಾವಿನ ದೇಹಾಂಗವು ನಾಲ್ಕು ಸಮಾನಾಂತರ ಸುರುಳಿಗಳಿಂದ ಆಕರ್ಷಣೀಯವಾಗಿ ಹೆಣೆದುಕೊಂಡಿದೆ. ಈ



ನಾಗಶಿಲ್ಪ ಇಲ್ಲಿಯ ಸದಾನಂದಮಠದ ಹತ್ತಿರದ ಬಾವಿಯ ಗೋಡೆಯಲ್ಲಿದೆ. ಐದು ಹಡೆಗಳಲ್ಲಿ ಅಲ್ಪಭಾಗ ಒಡೆದ ಈ ನಾಗನ ದೇಹಾಂಗವು ಆರು ಗಂಟುಗಳ ಮಂಡಳವು ರಂಗೋಲಿಯಂತಿದೆ. ಆರು ಸಮಾನಾಂತರ ಸ್ತರವುಳ್ಳ ನಾಗಸರ್ಪವಿದೆ. ಅದರ ದೇಹಾಂಗ ಬಹು ಆಕರ್ಷಣೀಯವಾಗಿದೆ. ಅದು ಅಲ್ಲಿನ ಅಲ್ಲಾ ನಗರ ಸಮೀಪದ ಆವರಣದಲ್ಲಿದೆ. ಅಲ್ಲಿಯ ಸೋಮವಾರ ಪೇಟೆ ಅಂಚಿನಲ್ಲಿ ಒಂದು ನಾಗಸರ್ಪವಿದೆ. ಆದರ ದೇಹಾಂಗವು ದುಂಡಾಗಿದೆ. ನಾಲ್ಕು ಸ್ತರಗಳಲ್ಲಿ ಗಂಟುಗಳು ಸುತ್ತಿಕೊಂಡಿವೆ. ಒಂದೊಂದು ಸ್ತರಕ್ಕೆ ಎರಡು ಅಡ್ಡ ಸುತ್ತುಗಳಿದ್ದು ಅವುಗಳು ಸಮಾನಾಂತರದಲ್ಲಿವೆ. ಇದಕ್ಕೆ ಪ್ರತ್ಯೇಕ ಪೀಠವಿದೆ. ಪೀಠದ ಬಲಕ್ಕೆ ಒಂದು ಪೂರ್ಣಕುಂಭವಿದೆ. ಅದನ್ನು ಮುಚ್ಚಳದಿಂದ ಮುಚ್ಚಲಾಗಿದೆ. ಅದು ಹಾಲಿನ ಕುಂಭ. ನಾಗರಾಜನು ಹಾಲು ಕುಡಿಯಲೆಂದು ಅಲ್ಲಿ ಹಾಲಿನ ಕೊಡವನ್ನು ತೋರಿಸಿರಬೇಕು. ಈ ಲಕ್ಷಣವುಳ್ಳ ನಾಗಶಿಲ್ಪವು ಅಪರೂಪದ್ದೆನಿಸಿವೆ. ಅಲ್ಲಿಯ ವಿಠಲಮಂದಿರ ಮುಂದಿನ ಶಿಲ್ಪದಲ್ಲಿ ನಾಗಸರ್ಪದ ದೇಹಾಂಗದ ಮೇಲೆ ಅಡ್ಡ ಪಟ್ಟಿಗಳಿವೆ.



ಶಿವಪುರದ ಶಿವಮಂದಿರದ ಮುಂದಿರುವ ಶಿಲ್ಪದಲ್ಲಿ ನಾಗಸರ್ಪ ದಂಪತಿಗಳನ್ನು ಆಕರ್ಷಣೀಯವಾಗಿ ಚಿತ್ರಿಸಲಾಗಿದೆ. ಒಂದರ (ಎಡಗಡೆಯ) ಹಡೆಗಳು ಒಡೆದಿವೆ. ಬಾಲಗಳ ಕೆಳಗೆ ಇಲ್ಲಿಯೂ ಪೀಠವಿದೆ . ಒಟ್ಟಾರೆ ಕಲ್ಯಾಣದಲ್ಲಿ ಸುಮಾರು ಇಪ್ಪತ್ತೇಳಕ್ಕಿಂತ ಹೆಚ್ಚು ನಾಗ, ನಾಗದಂಪತಿಗಳನ್ನು ಸರ್ಪರೂಪದಲ್ಲಿ ತೋರಿಸಿದ ಶಿಲ್ಪಗಳು ಅಲ್ಲಲ್ಲಿವೆ.

ಮನುಷ್ಯ-ಪ್ರಾಣಿ(ಹಾವು ಸರ್ಪ) ಗುಂಪಿಗೆ ಸೇರಿದ ನಾಗದಂಪತಿಗಳ ಅಥವಾ ಕೇವಲ ಸರ್ಪರೂಪದ ನಾಗರಾಜನ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಕಲ್ಯಾಣ ಚಾಲುಕ್ಯರ ಕಾಲದವೆಂದು (ಸು.ಕ್ರಿ.ಶ೧೧-೧೨ನೇ ಶತಮಾನ) ತರ್ಕಿಸಬಹುದು. ಇದೇ ಕಾಲದ ಕೇವಲ ಹಾವಿನ ರೂಪಲ್ಲಿರುವ ನಾಗದಂಪತಿಗಳ ಹಲವಾರು ಶಿಲ್ಪಗಳಿವೆ ಮತ್ತು ಕೆಲವು ನಾಗ (ಒಂದೇ) ಸರ್ಪಗಳ ಶಿಲ್ಪಗಳಿವೆ.

ಕಲ್ಯಾಣ ಚಾಲುಕ್ಯರ ಹಲವಾರು ಸಾಮಂತರಲ್ಲಿ ರಂಜೋಳದ ಸಿಂಧರು ಒಬ್ಬರಾಗಿದ್ದರು. ಈ ಕಾಲದಲ್ಲಿ ಈಗಿನ ಬಸವಕಲ್ಯಾಣ ಪ್ರದೇಶದ ಪೂರ್ವ ಭಾಗಕ್ಕೆ ಹೊಂದಿ ಮತ್ತು ಭಾಲ್ಕಿ ಪ್ರದೇಶ (ಭಾಲ್ಕುಂಕೆ -೮೪ ನಾಡು) ದಕ್ಷಿಣಕ್ಕೆ ಹೊಂದಿ ಅತ್ತಳೆನಾಡು ಇದ್ದಿತು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅತ್ತಳೆನಾಡೂ ಉಚ್ಛ್ರಾಯ

ಸ್ಥಿತಿಯನ್ನು ತಲುಪಿತ್ತು. ಅತ್ತಳೆ ನಾಡಿನ ರಾಜಧಾನಿ ರಂಜೇರು ಅಥವಾ ರಂಜೋಳ (ಬೀದರ ತಾಲೂಕ) ಅಲ್ಲಿನ ಸಿಂಧರ ಒಂದು ಶಾಸನದಲ್ಲಿ ಅವರ ಪೂರ್ವಜರ ಸ್ವಾರಸ್ಯಕರ ಕಥೆಯನ್ನು ಈ ರೀತಿ ಬಣ್ಣಿಸಲಾಗಿದೆ.

ದಂತ ಕಥೆ: ಕುಂತಳನಾಡಿನ ಹಲವಾರು ನಾಡುಗಳಲ್ಲಿ ಅತ್ತಳೆನಾಡು ಪ್ರಮುಖವಾಗಿತ್ತು ಮತ್ತು ಅದು ಕುಂತಳ ನಾಡಿನ ತಿಲಕವಾಗಿತ್ತು. ಅದರ ಮುಖ್ಯ ಪಟ್ಟಣ ರಂಜೇರು. ಆ ನಾಡಿನ ಜನರು ಪ್ರಸಿದ್ಧರಾಗಿದ್ದರು. ಈ ನಾಡನ್ನು ಸಿಂಧರೆಂಬ ನಾಗವಂಶಜರು ಆಳುತ್ತಿದ್ದರು. ಭೋಗಾವತಿಪುರ ಅವರ ರಾಜಧಾನಿಯಾಗಿತ್ತು. (ಕಲ್ಯಾಣ ಚಾಲುಕ್ಯರ ಹಲವಾರು ಸಾಮಂತರೂ ಭೋಗಾವತಿ ಪುರವರಾಧೀಶರೆಂದು ಹೇಳಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು). ಶಾಸನದ ಪ್ರಕಾರ ಶಿವನ ನೆಚ್ಚಿನ ಭಕ್ತ ಧರಣೇಂದ್ರ ಆತನ ಹೆಂಡತಿ ಪದ್ಮಾವತಿ ನಾಗವಂಶದ ಈ ದಂಪತಿಗಳು ಭೂಮಿಯ ಮೇಲಿನ ಸಿಂಧೂ ನದಿಯಲ್ಲಿ ಒಮ್ಮೆ ಸ್ನಾನ ಮಾಡಲು ಬಂದರು. ಸ್ನಾನದ ನಂತರ ಪದ್ಮಾವತಿಯು ಸೂರ್ಯ ದೇವನಿಗೆ ಅರ್ಘ್ಯವನ್ನು ಅರ್ಪಿಸಿ ಅವರಿಗಿಂತ ಪ್ರಕಾಶಮಾನವಾದ ಒಬ್ಬ ಮಗನನ್ನು ಕೊಡಲು ಬೇಡಿಕೊಂಡಳು. ಬೇಡಿಕೆ ಫಲಿಸಿ, ಅವಳು ಮಗುವಿಗೆ ಜನ್ಮವಿತ್ತಳು.

ಮಗುವು ಭೂಮಿಯಲ್ಲಿ ಹುಟ್ಟಿದ್ದೆಂದು ಆ ದಂಪತಿಗಳು ಆ ಮಗುವನ್ನು ಭೂಮಿಯಲ್ಲಿಯೇ ಬಿಟ್ಟು ಹೋಗಲು ನಿರ್ಧರಿಸಿದರು. ಇದರಿಂದ ಮುಂದೆ ಅವನು ರಾಜನಾಗಿ ಆಳಲೆಂದು ಬಗೆದರು. ಒಂದು ಹುಲಿಗೆ ಆ ಮಗುವನ್ನು ಕೊಟ್ಟು ಅವರು ಅಲ್ಲಿಂದ ಮರಳಿ ಹೋದರು. ಮಗುವು ಹುಲಿಯ ಹಾಲನ್ನು ಕುಡಿದು ಜೊತೆಯಲ್ಲಿ ಆಟವಾಡುತ್ತಾ ಬೆಳೆಯತೊಡಗಿತು. ಆ ಸ್ಥಳದ ಒಬ್ಬ 'ತರಲ' ವೀರೋತ್ತಮನು ಆ ಮಗು ಹುಲಿ ಮರಿಗಳ ಸಂಗಡ ಆಟವಾಡುವದನ್ನು ಅಹಿಚ್ಛತ್ರದ ಬ್ರಾಹ್ಮಣರಿಗೆ ವರದಿ ಮಾಡಿದನು. ಇದರಿಂದ ಬ್ರಾಹ್ಮಣರು ಆ ಸ್ಥಳಕ್ಕೆ ಹೋದರು ಮತ್ತು ಆ ಮಗುವಿನ ಕೊರಳಲ್ಲಿದ್ದ ತಾಯತದ ಚಿಹ್ನೆಯನ್ನು ನೋಡಿ ಆವನು ಧರಣೇಂದ್ರನ ಮಗನೆಂದು ತಿಳಿದರು. ಒಂದು ದಿವ್ಯಶಕ್ತಿಯ ಕೃಪೆಯಿಂದ ಆ ಮಗು ಹುಟ್ಟಿದುದರಿಂದ ಅವನಿಗೆ ಸಿಂಧುವೆಂದು ಕರೆದರು. ಅವರು ಮಗುವನ್ನು ವಾದ್ಯಮೇಳದಿಂದ ಮಂತ್ರೋಪದೇಶವನ್ನು ಪಠಿಸುತ್ತ ಸಂತೋಷ ಸಡಗರದಿಂದ ತಮ್ಮಲ್ಲಿಗೆ ಕರೆದುಕೊಂಡು ಬಂದರು. ಎಲ್ಲಾ ಶಾಸ್ತ್ರಗಳನ್ನು ಮತ್ತು ಯುದ್ಧ ಕಲೆಯನ್ನು ಅವನಿಗೆ ಕಲಿಸಿದರು. ಅವನು ಅಹಿಚ್ಛತ್ರವನ್ನು ಶಾಂತಿ ಸಮೃದ್ಧಿಯಿಂದ ಆಳಿದನು. ಆ ಬ್ರಾಹ್ಮಣರು ಅವನಿಗೆ ಪರಿಪೂರ್ಣ ತಿಳುವಳಿಕೆ ಬಂದ ತಕ್ಷಣ ಮದುವೆ ಮಾಡಲು ನಿರ್ಧರಿಸಿದರು.

ಕದಂಬ ರಾಜವಂಶದ ಮುಕ್ಕಣ್ಣನು ಆ ವಂಶದ ಮೂಲಪುರುಷ. ಮುಕ್ಕಣ್ಣನಾದ ಮಯೂರಶರ್ಮನು ಆ ಸಮಯದಲ್ಲಿ ಬನವಾಸಿಯಿಂದ ಆಳುತ್ತಿದ್ದನು. ಅವನಿಗೆ

ಲಕ್ಷ್ಮಿಮತಿ ಎಂಬ ಒಬ್ಬ ಮಗಳಿದ್ದಳು. ಆ ಬ್ರಾಹ್ಮಣರು ಬನವಾಸಿಗೆ ಹೋಗಿ ಆ ರಾಜನ ಮಗಳನ್ನು ಸಿಂಧುಗೆ ಮದುವೆ ಮಾಡಿಕೊಡಲು ವಿನಂತಿಸಿಕೊಂಡರು. ಮಯೂರಶರ್ಮನಿಗೆ ಒಮ್ಮೆಲೆ ಸಿಟ್ಟು ಬಂದಿತು. ಆದರೆ ಸಿಂಧುವು ಮುಂದೆ ಬಂದು ಕದಂಬ ರಾಜನ ಮೂರನೇ ಕಣ್ಣನ್ನು ತನ್ನ ಉದ್ದವಾದ ಕೈಯಿಂದ ಮುಚ್ಚಿಸಿ ಅವನ ಸಿಟ್ಟನ್ನು ಶಾಂತಗೊಳಿಸಿದನು. ಅಲ್ಲಿಂದ ಆ ಸಿಂಧುವಿಗೆ ನಿಡುದೋಳ್ ಸಿಂಧು ಅಥವಾ ಉದ್ದ ತೋಳಿನ ಸಿಂಧನೆಂದು ಹೆಸರು ಬಂದಿತು. ಮಯೂರಶರ್ಮನಿಗೆ ಅವನ ಶಕ್ತಿಯ ಬಗ್ಗೆ ಅರಿವಾಯಿತು. ಮುಂದೆ ತನ್ನ ಮಗಳನ್ನು ಅವನಿಗೆ ಕೊಟ್ಟು ಮದುವೆಯನ್ನು ಮಾಡಿದನು. ಆ ರಾಜನು ಅಭಿನವ ವ್ಯಾಸನೆಂಬ ಬ್ರಾಹ್ಮಣನಿಂದ ಸಿಂಧುವಂಶದ ಮೂಲವನ್ನು ತಿಳಿದನು. ಸಿಂಧುಗೆ ಹಲವಾರು ಬಿರುದುಗಳಿದ್ದವು. ಪದ್ಮಾವತಿಲಬ್ಧವರ ಪ್ರಸಾದ' ಭೋಗಾವತಿಪುರವರಾಧೀಶ್ವರ' ಅಹಿಚ್ಛತ್ರಪುರವರ ಮಾನರಕ್ಷದಕ್ಷ ವ್ಯಾಘ್ರಲಾಂಚನ' 'ಪಣೇಂದ್ರ ಕೇತನ' ಇತ್ಯಾದಿ (ಕಲ್ಯಾಣ ಚಾಲುಕ್ಯರ ಹಲವಾರು ಸಾಮಂತರಿಗೆ ಈ ರೀತಿಯ ಬಿರುದಾವಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ). ನಿಡುದೋಳ್ ಸಿಂಧುಗೆ ತನ್ನ ಹೆಂಡತಿ ಲಕ್ಷ್ಮಿಮತಿಯಿಂದ ಸತ್ಯಾಶ್ರಯ. ಪ್ರಭುಸೇವ್ಯ, ಬುಧಸೇವ್ಯ ಮತ್ತು ಜಗತ್ಸೇವ್ಯರೆಂಬ ನಾಲ್ಕು ಜನ ಮಕ್ಕಳಿದ್ದರು. ಅವರು ಕ್ರಮವಾಗಿ ಮಹಾರಾಷ್ಟ್ರದ ಫಲಿಯದ ನಾಡಿನಿಂದ ಸತ್ಯಾಶ್ರಯ, ಕರ್ನಾಟಕದ ಬಾಗಡೆಗೆ (ಬಾಗಲಕೋಟೆ) ಯಿಂದ ಪ್ರಭುಸೇವ್ಯ, ಬಲ್ಲಾರ (ಬಳ್ಳಾರಿ) ದಿಂದ ಬುಧಸೇವ್ಯ, ಬೀದರ ಜಿಲ್ಲೆಯ ರಂಜೇರಿನಿಂದ ಜಗತ್ಸೇವ್ಯ ಆಳುತ್ತಿದ್ದರು.

ಅತ್ತಳೆನಾಡಿನ ಮುಖ್ಯಪಟ್ಟಣ (ರಾಜಧಾನಿ)ವಾಗಿದ್ದ ರಂಜೋಳದ ಒಂದೆರಡು ನಾಗಶಿಲ್ಪಗಳು ಚಾಲುಕ್ಯರ ಕಾಲಕ್ಕೆ ಸೇರಿದವುಗಳಾಗಿವೆ. ಅಲ್ಲಿಯ ಒಂದು ನಾಗದಂಪತಿಗಳ ಶಿಲ್ಪದಲ್ಲಿ ಅರ್ಧ ಮನುಷ್ಯ ಮತ್ತು ಅರ್ಧ ಹಾವಿನ ರೂಪವನ್ನು ಕಾಣಬಹುದು. ಈ ನಾಗನ ಬದಿಯಲ್ಲಿ ಅದೇ ನಮೂನೆಯ ಸೇವಕರಿರುವರು. ಇದು ಬಸವಕಲ್ಯಾಣದ ಈ ಮಾದರಿಯ ಶಿಲ್ಪಗಳನ್ನು ಹೋಲುತ್ತದೆ.

ಮೇಲಿನ ಶಾಸನದ ಕಥೆಯಿಂದ ರಂಜೋಳದ ಸಿಂಧರು ನಾಗವಂಶಕ್ಕೆ ಸೇರಿದವರೆಂದು ತಿಳಿದುಬರುತ್ತದೆ. ಈ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಮುಖ್ಯವಾಗಿ ಸಂಗಾವಿ (ಬೀದರ ತಾ.) ಭಾಲ್ಕಿ, ಮೈಲಾರ, ಕಾಸರತೂಗಾವ್ (ಭಾಲ್ಕಿ ತಾ.) ಸಸ್ತಾಪುರ (ಬಸವಕಲ್ಯಾಣ ತಾ.) ಶಿಲ್ಪಗಳು ವಿವಿಧ ರೀತಿಯಲ್ಲಿವೆ. ಪ್ರಸ್ತುತ ಅಧ್ಯಯನದಿಂದ ರಾಜಧಾನಿ ಪಟ್ಟಣದ ನಾಗಶಿಲ್ಪಗಳ ಆರಾಧನೆಗೆ ಕಲ್ಯಾಣ ಮುಖ್ಯಕೇಂದ್ರವಾಗಿದ್ದಿತೆಂದು ಹೇಳಬಹುದು.

ನಾಗಶಿಲ್ಪಗಳ ಪಟ್ಟಿ

ಅ) ಮನುಷ್ಯ ಮತ್ತು ಹಾವಿನ ರೂಪದ ನಾಗ :

೧. ಅಂಬಿಗರ ಚೌಡಯ್ಯನ ಮಂದಿರ ಹತ್ತಿರ - ೧ (ಸೇವಕಿಯರು),

೨. ಮಡಿವಾಳ ಮಾಚಿದೇವರ ಮಂದಿರ - ೧

೩. ರಸ್ತೆ ಬದಿಯ ಅಂಬಾಭವಾನಿ ಮಂದಿರ ಗೋಡೆ - ೧

೪. ತ್ರಿಪುರಾಂತಕ ಕೆರೆಯ ದಂಡೆಯ ಮಾರುತಿ ಮಂದಿರ - ೧

೫. ರಜಪೂತರ ಗಲ್ಲಿಯಲ್ಲಿ - ೧

೬. ತ್ರಿಪುರಾಂತದ ಶರಣಪ್ಪ ಮಾಳಿ ಮನೆ ಮುಂದೆ -೧

೭. ಗೌಂಡಿಗಲ್ಲಿಯ ಗಣಪತಿ ಚೌಕ ಹತ್ತಿರದ ಒಂದು ಮನೆ ಮುಂದೆ-೧

೮. ಗೌಂಡಿಗಲ್ಲಿಯ ಮಾರುತಿ ಮಂದಿರ-೧

೯. ಸದಾನಂದಮಠದ ಹತ್ತಿರದ ಆಲದ ಗಿಡದ ಕೆಳಗೆ-೧

೧೦. ಅಲ್ಲಾನಗರದ ಮಡೆಪ್ಪನ ಮನೆ ಹೊರಗೆ-೧

೧೧. ಸದಾನಂದ ಮಠದ ಹತ್ತಿರದ ಭಾವಿ ಗೋಡೆ-೧

೧೨. ಶರಣಪ್ಪ ಮಾಳೆ ಮನೆಯ ಹತ್ತಿರದ ಭಾವಿ ಮುಂದೆ -೧

ಆ) ಮನುಷ್ಯ ಮತ್ತು ಸರ್ಪ ಪ್ರಾಣಿರೂಪದ ಪ್ರತ್ಯೇಕ ನಾಗಶಿಲ್ಪಗಳು :

೧. ಸದಾನಂದ ಮಠದ ಬಾವಿಯ ಗೋಡೆಯಲ್ಲಿ -೧

೨. ಸದಾನಂದ ಮಠದ ಒಳಗೆ-೧

೩. ತ್ರಿಪುರಾಂತಕ ಕೆರೆಯ ಮುಂದಿನ ಮಾರುತಿ ಮಂದಿರ-೧

೪. ನೂಲಿಯ ಚಂದಯ್ಯನ ಮಠದಲ್ಲಿ -೧

ಇ) ಕೇವಲ ನಾಗಸರ್ಪಗಳ ಶಿಲ್ಪಗಳು :


ಹೆಚ್ಚು ಸಂಖ್ಯೆಯಲ್ಲಿವೆ (೨೭) ಈ ನಮೂನೆಯ ನಾಗಸರ್ಪಗಳು ಬಸವಕಲ್ಯಾಣ ನಗರದಲ್ಲಿ ಕಂಡುಬಂದಿವೆ

ಕೆಲವು ನಾಗಶಿಲ್ಪಗಳು ಶಿವಪುರ, ಪರ್ತಾಪುರ ಮತ್ತು ನಾರಾಯಣಪುರಗಳಲ್ಲಿವೆ. ಕೆಲವು ಮನುಷ್ಯ-ಪ್ರಾಣಿ ರೂಪದವು. ಇನ್ನು ಕೆಲವು ಸರ್ಪರೂಪದಲ್ಲಿವೆ.

೮. ಶಿವಶರಣರ ತಾಣಗಳು

ಕಳಚೂರಿ ಇಮ್ಮಡಿ ಬಿಜ್ಜಳನ ಆಳ್ವಿಕೆಯ ಕಾಲದಲ್ಲಿ ಕಲ್ಯಾಣ ಶಿವಶರಣರ ಕಾರ್ಯಕ್ಷೇತ್ರವಾಯಿತು. ವಿಭಿನ್ನ ಕುಲಗೋತ್ರಗಳಿಗೆ ಸೇರಿದ್ದ ಅವರ ನೇತಾರ ಬಿಜ್ಜಳನ ಭಂಡಾರಿ ಬಸವಣ್ಣ. ದೇಶದೇಶಗಳಿಂದ ಅನೇಕರು ಕಲ್ಯಾಣಕ್ಕೆ ಆಗಮಿಸಿ ಬಸವಣ್ಣನ ಅನುಯಾಯಿ ಗಳಾದರು. ಅವರು ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಕ್ಕಮಹಾದೇವಿ, ಅಕ್ಕನಾಗಮ್ಮ, ಕಾಶ್ಮೀರದ ಮೋಳಿಗೆಯ ಮಾರಯ್ಯ, ದಕ್ಷಿಣದ ಸಕಲೇಶ ಮಾದರಸ, ಗುಜರಾತಿನ ಆದಯ್ಯ, ಕಳಿಂಗದ ಮರುಳ ಶಂಕರ, ಆಂಧ್ರದ ಮೈದುನಮರಯ್ಯ, ಮೇದರ ಕೇತಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ನೂಲಿಯ ಚಂದಯ್ಯ, ನೀಲಾಂಬಿಕೆ, ಮುಕ್ತಾಯಕ್ಕ, ಮಹಾದೇವಿ, ಮುಂತಾದವರು. ಅವರು ಒಂದೆಡೆ ಸೇರಿ ಸಮಾಜದ ಕುರುಡು ನಂಬಿಕೆ ಪರಂಪರೆಗಳ ವಿರುದ್ಧ ಚರ್ಚಿಸುವ ವೇದಿಕೆಯನ್ನು ನಿರ್ಮಿಸಿಕೊಂಡರು. ಅದೇ ಅನುಭವ ಮಂಟಪವಾಯಿತು. ತಮ್ಮ ಅನುಭವದ ಚಿಂತನ ಮಂಥನದ ವಿಚಾರಗಳನ್ನು ತಮ್ಮ ವಚನಗಳ ಮೂಲಕ ಪ್ರಚುರಪಡಿಸಿದರು. ಅವರ ವಚನಗಳು ಇಂದು ವಿಶ್ವಮಾನವ ಧರ್ಮದ ನಿರ್ಮಾಣಕ್ಕೆ ಪ್ರೇರಣಾಶಕ್ತಿಯಾಗಿವೆ. ಕಲ್ಯಾಣ ಪ್ರದೇಶದ ತ್ರಿಪುರಾಂತಕ ಕೆರೆ ಪರಿಸರದಲ್ಲಿ ಇಂದಿಗೂ ಆ ಶಿವಶರಣರ ಹೆಚ್ಚಿನ ತಾಣಗಳಿವೆ. ಅವು ಗುಹೆಗಳು. ಮಠ, ಕಟ್ಟೆ, ಗದ್ದುಗೆ, ಓಣಿ ಇತ್ಯಾದಿ ಹೆಸರುಗಳಲ್ಲಿವೆ. ಅವುಗಳು ನೂಲಿಯ ಚಂದಯ್ಯ, ಅಕ್ಕನಾಗಮ್ಮ, ಅರಿವಿನ ಮನೆ, ಪರುಷ ಕಟ್ಟೆ, ಬಂದವರ ಓಣಿ, ಕಂಬಳಿಮಠ ಇತ್ಯಾದಿಯಾಗಿ ಗುರುತಿಸಲ್ಪಟ್ಟಿದೆ.

ಆಗಿನ ರಾಜಧಾನಿ ಪಟ್ಟಣ ಕಲ್ಯಾಣವನ್ನು ''ಕೈಲಾಸಮಪ್ಪ ಕಲ್ಯಾಣಧಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ದೇವಾಲಯಗಳಿದ್ದವು. ಅವುಗಳಲ್ಲಿ ತ್ರಿಪುರಾಂತಕ ದೇವಾಲಯ ಮುಖ್ಯವಾದುದು. ದೇವಾಲಯದ ಮುಂದೆ ಅನುಭವ ಮಂಟಪವಿದ್ದಿತು. ಅದರಲ್ಲಿ ಅಲ್ಲಮಪ್ರಭು, ಸಿದ್ಧರಾಮ, ಮೋಳಿಗೆಯ ಮಾರಯ್ಯ, ಮುಸುಟಯ ಚೌಡಯ್ಯ, ಮಡಿವಾಳ ಮಾಚಯ್ಯ, ಚೆನ್ನಬಸವಣ್ಣ, ೭೭೦ ಅಮರಗಣಂಗಳು ಎಲ್ಲ ಅಸಂಖ್ಯಾತ ಗಣಂಗಳು ಕೂಡಿದ್ದರು'' ಇತ್ಯಾದಿ ವಿಷಯಗಳು ಕಾಲಜ್ಞಾನದಲ್ಲಿವೆ. ಅಲ್ಲಿ ರೇವಣಸಿದ್ಧೇಶ್ವರ ದೇವರು ಕಟ್ಟಿಸಿದ ಚೆಂಗಣಿಗಲ ಮಂಟಪವಿತ್ತು. ೧ ಲಕ್ಷ ೯೬ ಸಾವಿರ ಜಂಗಮರಿಗೆ ಕಲ್ಯಾಣ ಪಟ್ಟಣದಲ್ಲಿ ಬಸವಣ್ಣ ದಾಸೋಹವನ್ನು ಮಾಡಿ ನಿತ್ಯವು ಪವಾಡ ನಡೆಸುತ್ತಿದ್ದನೆಂಬ ವಿಷಯ ಜೋಡಿದಾಸೇನ ಹಳ್ಳಿಯ ಶಾಸನವೊಂದು ಹೇಳಿದೆ. ಹೀಗಾಗಿ ಈ ಜಂಗಮರ ಮಂಟಪವೊಂದು ಅಲ್ಲಿದ್ದಿತ್ತೆನ್ನುವರು. ಅನೇಕ ಶಿವಶರಣರ ಮಂಟಪ ಗಳು ಅಲ್ಲಿದ್ದವೆಂದು ತಿಳಿಯುವುದು.



ಬಸವೇಶ್ವರದೇವಾಲಯ :ನಗರದಲ್ಲಿ ಬಸವೇಶ್ವರರ ದೇವಾಲಯ ಪ್ರಸಿದ್ಧಿಯನ್ನು ಪಡೆದಿದೆ. ಆ ಸ್ಥಳ ಮೂಲತಃ ಹಿರೇಮಠ. ಆ ಸ್ಥಳದಲ್ಲಿ ಮೊದಲು ಹಿರೇಮಠವಿತ್ತು. ಅಲ್ಲಿ ಒಂದು ನಂದಿಕೋಲನ್ನು ಊರ ಪ್ರಮುಖರು ನೆಟ್ಟರು. ನಂತರ ಪಂಚರ ಸಮಿತಿಯನ್ನು ಮಾಡಲಾಯಿತು. ಅಲ್ಲಿ ವಾಸ ಮಾಡುತ್ತಿದ್ದ ಹಿರೇಮಠದ ಕುಟುಂಬದವರಿಗೆ ಬೇರೊಂದು ಮನೆಯನ್ನು ಕಟ್ಟಿಕೊಟ್ಟು ಬಸವೇಶ್ವರ ದೇವಾಲಯವನ್ನು ಕಟ್ಟಲಾಯಿತೆಂದು ತಿಳಿಯಲಾಗಿದೆ. ಆಧುನಿವಾಗಿ ಕಟ್ಟಿದ ಈ ದೇವಾಲಯವು ವಿಶಾಲವಾಗಿದೆ. ಒಳಗಡೆ ಶಿವಲಿಂಗ, ನಂದಿ, ಬಸವಣ್ಣನ ಮುಖವಾಡ ಮುಂತಾದ ವಿಗ್ರಹಗಳಿವೆ. ಹಿಂದಿನ ಗರ್ಭಗೃಹದ ಮುಂದೆ ಇತ್ತೀಚಿನ ಪ್ರತ್ಯೇಕ ಗರ್ಭಗುಡಿಯಿದೆ. ಶಿಖರ ಭವ್ಯವಾಗಿದೆ. ಮುಂದೆ ವಿಶಾಲವಾದ ತೆರೆದ ಆವರಣ. ಈ ದೇವರ ಜಾತ್ರೆ ಪ್ರತಿವರ್ಷ ವೈಶಾಖದಂದು ನಡೆಯುವುದು. ಅಲ್ಲಿ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳು ನಿರಂತರವಾಗಿ ಜರುಗುತ್ತಿವೆ.

ಕಳಚುರಿ ಮನೆತನದಲ್ಲಿ ಉಚಿತ (ಕ್ರಿ.ಶ. ೯೨೫) ನಿಂದ ಪೆರ್ಮಾಡಿವರೆಗೆ ಎಂಟು ಮಂದಿ ಕಲ್ಯಾಣ ಚಾಲುಕ್ಯರಿಗೆ ಸಾಮಂತರಾಗಿದ್ದರು. ಚಾಲುಕ್ಯ ಆರನೇ ವಿಕ್ರಮಾದಿತ್ಯ ತನ್ನ ಮಗಳನ್ನು ಪೆರ್ಮಾಡಿಗೆ ಕೊಟ್ಟು ಲಗ್ನ ಮಾಡಿದ. ಅವರ ಮಗನೇ ಬಿಜ್ಜಳ. ಆತನು ಸಾಮಂತ ಅರಸನಾಗಿ ಆಳುವಾಗ ಆತನ ಆಸ್ಥಾನದಲ್ಲಿ ಬಸವಣ್ಣನು ಸೇವೆ ಸಲ್ಲಿಸಿದನು.

ಬಸವಣ್ಣ ಬಾಗೇವಾಡಿಯ ಬ್ರಾಹ್ಮಣ ಕುಟುಂಬದ ಮಂಡಗೆಯ ಮಾದಿರಾಜ (ಮಾದರಸ) ಮತ್ತು ಮಾದಲಾಂಬಿಕೆಯರ ಮಗನಾಗಿ ಕ್ರಿ.ಶ. ೧೧೩೧ರಲ್ಲಿ ವೈಶಾಖಶುದ್ಧ ಅಕ್ಷಯ ತೃತೀಯ ರೋಹಿಣಿ ನಕ್ಷತ್ರದಲ್ಲಿ ಹುಟ್ಟಿದರು. ತಂದೆ ಮಾದಿರಾಜ ಐನೂರು ಮಹಾಜನರುಳ್ಳ ಅಗ್ರಹಾರ ಬಾಗೇವಾಡಿ ನಗರದ ಮುಖ್ಯಸ್ಥನಾಗಿದ್ದ. ಈತನನ್ನು ಗ್ರಾಮಿಣಿ ಮಣಿಪುರವರಾಧೀಶ್ವರನೆಂದು ಕರೆಯುತ್ತಿದ್ದರು. ತಾಯಿ ಮಾದಲಾಂಬಿಕೆ ಇಂಗಳೇಶ್ವರದವಳು. ಅಲ್ಲಿ ಪ್ರಸಿದ್ಧ ರೇವಣಸಿದ್ಧ ಯತಿಯ ಭಕ್ತಿಮಾರ್ಗದ ಪ್ರವಚನದ ಪ್ರಭಾವ ನೆಲೆಸಿತ್ತು. ರೇವಣಸಿದ್ಧರ ಪ್ರಭಾವ ಬಸವಣ್ಣ ಹುಟ್ಟುವ ಮೊದಲೇ ಆತನ ತಾಯಿ ಮನೆಗೂ ಬೀರಿತ್ತು. ಬಸವಣ್ಣ ತನ್ನ ಎಂಟನೆಯ ವಯಸ್ಸಿನಲ್ಲಿ ಉಪನಯನ ಮಾಡಿಕೊಂಡನೆನ್ನುವರು. ನಂತರ ತನ್ನ ೧೬ನೇ ವಯಸ್ಸಿನಲ್ಲಿ ತಾನು ಕಟ್ಟಿದ

ಯಜ್ಞೋಪವೀತವನ್ನು ಹರಿದುಹಾಕಿ ಮನೆಬಿಟ್ಟು ಹೊರನಡೆದನೆನ್ನುವರು. ಅಲ್ಲಿಂದ ಕೂಡಲಸಂಗಮೇಶ್ವರಕ್ಕೆ ಬಂದು ಅಲ್ಲಿ ೧೦ ವರ್ಷ ನೆಲೆಸಿ ಸಕಲ ಶಾಸ್ತ್ರಗಳನ್ನು ಅಧ್ಯಯನ ಮಾಡಿದ. ಜಾತವೇದ ಮುನಿ ಆತನಿಗೆ ದೀಕ್ಷಾ ಗುರು. ಸ್ಥಾನಪತಿ ಈಶಾನ್ಯ ಯೋಗಿ ಶಿಕ್ಷಾ ಗುರುವಾಗಿದ್ದರು. ಆತನ ಹಿರಿಯ ಸಹೋದರಿ ಅಕ್ಕನಾಗಮ್ಮ ಮತ್ತು ಅವಳ ಗಂಡ ಶಿವಸ್ವಾಮಿಯವರು ಬಸವಣ್ಣನಿಗೆ ಪೋಷಕರಾಗಿ ಆತನ ಬೆಳವಣಿಗೆಗೆ ಸಹಾಯಕರಾದರು. ಈ ದಂಪತಿಗಳ ಮಗ ಚನ್ನಬಸವಣ್ಣ ಕ್ರಿ.ಶ. ೧೧೪೪ರಲ್ಲಿ ಜನಿಸಿದ.

ಬಸವಣ್ಣ ಸಮಕಾಲೀನವಾಗಿ ಪರಂಪರೆಯ ಸೋಗಿನಲ್ಲಿ ಹದಗೆಟ್ಟು ಹೋಗಿದ್ದ ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಕುರಿತು ಆಸಕ್ತರೊಂದಿಗೆ ಚಿಂತನ-ಮಂಥನ ನಡೆಸುತ್ತಿದ್ದ. ಅಲ್ಲಿ ಬೇರುಬಿಟ್ಟ ಅಸಮಾನತೆ, ಮೂಢನಂಬಿಕೆ, ಯಜ್ಞ ಯಾಗಗಳ ಹೆಸರಿನಲ್ಲಿ ನಡೆಯುತ್ತಿದ್ದ ಸಾಮಾನ್ಯ ಜನರ ಶೋಷಣೆಯ ವಿರುದ್ಧ ದನಿಯೆತ್ತಿ ಆ ಕುರಿತು ಜನರನ್ನು ಪ್ರಜ್ಞಾವಂತರನ್ನಾಗಿ ಮಾಡುವ ಮತ್ತು ತಮ್ಮ ಹಕ್ಕು ಹಾಗೂ ಸ್ವಾತಂತ್ರ್ಯಗಳನ್ನು ಅನುಭವಿಸುವಂತೆ ಮಾಡುವ ಪ್ರಯತ್ನಕ್ಕೆ ಕೈಹಾಕಿದ. ಕಳಚುರಿ ಅರಸ ಬಿಜ್ಜಳನ ಮಹಾಮಂತ್ರಿಯಾಗಿದ್ದ ಬಲದೇವ ಅವನ ಸೋದರ ಮಾವನಾಗಿದ್ದ ಮತ್ತು ತನ್ನ ಮಗಳು ಗಂಗಾಂಬಿಕೆಯನ್ನು ಬಸವಣ್ಣನಿಗೆ ಕೊಟ್ಟು ಮದುವೆ ಮಾಡಿದ. ಇದು ಬಸವಣ್ಣನ ಜನಸಂಘಟನೆ ಪ್ರಕ್ರಿಯೆಗೆ ರಾಜಕೀಯ ಬಲ ತಂದುಕೊಟ್ಟಿತೆಂದು ಭಾವಿಸಬಹುದು. ಸು.ಕ್ರಿ.ಶ. ೧೧೫೦-೫೧ರಲ್ಲಿ ಬಸವಣ್ಣ ಕೂಡಲಸಂಗಮದಿಂದ ಕಳಚೂರಿಯರ ರಾಜಧಾನಿ ಮಂಗಳವೇಡೆಗೆ ಹೋದ. ಆತನ ಕಿರಿಯ ಮಾವ ಸಿದ್ಧರಾಜ ಬಿಜ್ಜಳನ ಭಂಡಾರಿಯಾಗಿದ್ದನು. ಹೀಗಾಗಿ ಬಸವಣ್ಣನಿಗೆ ತನ್ನ ವ್ಯಕ್ತಿತ್ವವನ್ನು ಕ್ರಮೇಣ ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ತನ್ನ ಸಾಮಾಜಿಕ, ಧಾರ್ಮಿಕ ಸುಧಾರಣಾ ವಿಷಯಗಳನ್ನು ಪ್ರಚಾರಕ್ಕೆ ತರಲು ಆರಂಭಿಸಿದ.

ಸಿದ್ಧರಸನ ಹೆಂಡತಿ ಪದ್ಮಗಂಧಿ. ಬಿಜ್ಜಳನ ಸಹೋದರ ಕರ್ಣನು ಚಿಕ್ಕ ವಯಸ್ಸಿನಲ್ಲಿ ತಾಯಿ ಕಳೆದುಕೊಂಡು ತಬ್ಬಲಿಯಾಗಿದ್ದ. ಆಕೆಯು ಆತನನ್ನು ಜೋಪಾನ ಮಾಡಿ ಬೆಳೆಸಿದ್ದಳು. ಜೊತೆಯಲ್ಲಿ ತನ್ನ ಮಗಳಾದ ನೀಲಾಂಬಿಕೆಯನ್ನು ಬೆಳೆಸಿದಳು. ಸಿದ್ಧರಸ ಮರಣ ಹೊಂದಿದ ತರುವಾಯ ಬಸವೇಶ್ವರನನ್ನು ಬಿಜ್ಜಳ ತನ್ನ ಮಂತ್ರಿಯನ್ನಾಗಿ ನೇಮಿಸಿದ. ಬಿಜ್ಜಳ ಬಸವಣ್ಣನಿಗೆ ತನ್ನ ಸಾಕು ತಂಗಿ ನೀಲಾಂಬಿಕೆಯನ್ನು ಕೊಟ್ಟು ಲಗ್ನ ಮಾಡಿದ. ಕ್ರಿ.ಶ. ೧೧೫೪ ರಲ್ಲಿ ಬಸವಣ್ಣನು ಕಲ್ಯಾಣಕ್ಕೆ ಬಂದು ಅಲ್ಲಿ ಬಲದೇವ ತೀರಿಕೊಂಡ ಬಳಿಕ ರಾಜ್ಯದ ಮುಖ್ಯಮಂತ್ರಿ ಮತ್ತು ಮುಖ್ಯ ಭಂಡಾರದ ಮಂತ್ರಿಯಾಗಿ

ನೇಮಕಗೊಂಡ. ಈ ಕಾಲದಲ್ಲಿ ಬಿಜ್ಜಳ ಬಲಾಢ್ಯ ಅರಸನಾಗಿದ್ದ. ಕ್ರಿ.ಶ. ೧೧೬೨ ರಲ್ಲಿ ಕಲ್ಯಾಣ ಚಾಲುಕ್ಯರನ್ನು ಸೋಲಿಸಿ ಕಲ್ಯಾಣದಿಂದ ಆಳತೊಡಗಿದ.


ಕಲ್ಯಾಣದಲ್ಲಿ ಬಸವಣ್ಣನ ಮನೆ ಮಹಾಮನೆ ಆಯಿತು. ಆತನ ಸಾಮಾಜಿಕ, ಧಾರ್ಮಿಕ ಸುಧಾರಣಾ ಕ್ರಮಗಳು ಜನಪ್ರಿಯವಾದವು. ಅನೇಕ ದೇಶದ ಜನರು ಕಲ್ಯಾಣಕ್ಕೆ ಬಂದು ಆತನ ಅನುಯಾಯಿಗಳಾದರು. (ಕಾಶ್ಮೀರ, ಬಂಗಾಲ, ಓರಿಸ್ಸಾ, ಗುಜರಾತ್, ಕೇರಳ ಇತ್ಯಾದಿ)

ಸಾಮಾಜಿಕ ಧಾರ್ಮಿಕ ವಿಷಯಗಳನ್ನು ಕುರಿತು ಚಿಂತನೆ ನಡೆಸುವ ವೇದಿಕೆಗಾಗಿ ಅನುಭವಮಂಟಪವನ್ನು ಸ್ಥಾಪಿಸಿದ. ಅದರ ಅಧ್ಯಕ್ಷರಾಗಿ ಅಲ್ಲಮಪ್ರಭು ಹಾಗೂ ಉಪಾಧ್ಯಕ್ಷರಾಗಿ ಚನ್ನಬಸವಣ್ಣ ನೇಮಕವಾದರು. ಆತನ ಪರಿವಾರದಲ್ಲಿ ಸೊನ್ನಲಿಗೆಯ ಸಿದ್ಧರಾಮ, ಅಕ್ಕಮಹಾದೇವಿ, ಮಡಿವಾಳ ಮಾಚಯ್ಯ, ಮೋಳಿಗೆ ಮಾರಯ್ಯ, ನೂಲಿಯ ಚಂದಯ್ಯ, ಮುಕ್ತಾಯಕ್ಕ, ಘಟ್ಟಿವಾಳಯ್ಯ ಮುಂತಾದವರು ಒಳಗೊಂಡಿದ್ದರು. ಆರ್ಥಿಕ ಸಮಾನತೆಯ ಹಿನ್ನೆಲೆಯಲ್ಲಿ ಕಾಯಕವೇ ಕೈಲಾಸವೆಂದು ಸಾರಿದರು. ಪ್ರಚಾರ ಮಾಧ್ಯಮಕ್ಕೆ ವಚನಗಳೆಂಬ ವಿಶಿಷ್ಟ ಪ್ರಕಾರ ಸೃಷ್ಟಿಯಾಯಿತು. ಈ ವಚನಗಳು ಕನ್ನಡ ಉಪನಿಷತ್ತುಗಳೆಂದು ಮಾನ್ಯತೆ ಪಡೆದಿವೆ.

ಜಾತಿರಹಿತ ಸಮಾಜ ರಚನೆಯ ಹಿನ್ನೆಲೆಯಲ್ಲಿ ಕ್ರಾಂತಿಕಾರಕ ಹೆಜ್ಜೆಯನ್ನಿರಿಸಿದ ಬಸವಣ್ಣ ಅಂತರ್ಜಾತಿ ವಿವಾಹ ಮಾಡಿಸಿದ. ಬ್ರಾಹ್ಮಣ ಮಧುವರಸನ ಮಗಳನ್ನು ಹೊಲೆಯ ಹರಳಯ್ಯನ ಮಗನಿಗೆ ಕೊಡಿಸಿ ಲಗ್ನ ಮಾಡಿದ. ಇದರಿಂದ ವರ್ಣಸಂಕರವಾಗುತ್ತದೆಂದು ಮೂಲಭೂತವಾದಿಗಳು ಎಬ್ಬಿಸಿದ ಗುಲ್ಲಿನಿಂದ ಅರಸ ಬಿಜ್ಜಳ ತಪ್ಪು ನಿರ್ಣಯಕ್ಕೆ ಬರುವಂತಾಯಿತು. ಬಿಜ್ಜಳ ಮಧುವರಸ ಮತ್ತು ಹರಳಯ್ಯರನ್ನು ಕೊಲ್ಲಿಸಿದನು. ಇದರಿಂದ ರಾಜ್ಯದಲ್ಲಿ ಕ್ರಾಂತಿ ಎದ್ದಿತು. ಆಗ ಬಸವಣ್ಣ ಕೂಡಲಸಂಗಮಕ್ಕೆ ಹೋಗಿ, ಕ್ರಿ.ಶ. ೧೧೬೭ ರಲ್ಲಿ ಲಿಂಗೈಕ್ಯನಾದನೆಂದು ಹೇಳಲಾಗುತ್ತದೆ. ತದನಂತರ ಬಿಜ್ಜಳನನ್ನು ಬಸವಣ್ಣನವರು ಐಕ್ಯರಾಗಿ ಮೂರು ತಿಂಗಳು ಕಳೆದ ಬಳಿಕ ಮಲ್ಲಯ್ಯ, ಬ್ರಹ್ಮಯ್ಯ ಮತ್ತು ಆತನ ಮಂತ್ರಿ ಜಗದೇವ ಸೇರಿ ಕೊಲೆಮಾಡಿದರು.

ಪರುಷಕಟ್ಟೆ :ಬಸವೇಶ್ವರ ದೇವಾಲಯದ ಹತ್ತಿರ ಪರುಷ ಕಟ್ಟೆ ಇದೆ. ಆ ಕಟ್ಟೆಯ ಮೇಲೆ ಬಸವಣ್ಣನವರು ಕುಳಿತು ತಮ್ಮ ಅನುಯಾಯಿಗಳಿಗೆ ಬೋಧಿಸುತ್ತಿದ್ದರಂತೆ. ಪರುಷವೆಂದರೆ ತತ್ವಜ್ಞಾನಿಗಳ ಕಲ್ಲು ಎಂದು ಅರ್ಥೈಸುವರು. ಆ ಕಟ್ಟೆಯ ಮೇಲೆ ಬಸವಣ್ಣನವರು ಕುಳಿತು ಜನರ ಕಷ್ಟ-ಸುಖಗಳನ್ನು ಆಲಿಸಿ ಅವರ ಹೆಚ್ಚಿನ ಸಮಸ್ಯೆಗಳಿಗೆ

ಪರಿಹಾರ ನೀಡುತ್ತಿದ್ದರೆನ್ನುವರು. ಹೀಗಾಗಿ ಆ ಸ್ಥಳವನ್ನು ಪರುಷಕಟ್ಟೆ ಎಂದು ಕರೆಯುವರು.



ವಾಸ್ತು ವಿನ್ಯಾಸದಲ್ಲಿ ಪರುಷಕಟ್ಟೆಯು ಒಂದು ತೆರೆದ ನಂದಿ ಮಂಟಪ. ಅದಕ್ಕೆ ಒಂದು ಎತ್ತರ ಕಟ್ಟೆಯಿದೆ. ಮೇಲೆ ನಂದಿಯನ್ನು ಪೂರ್ವಕ್ಕೆ ಮುಖಮಾಡಿ ಕೂಡಿಸಲಾಗಿದೆ. ನಂದಿ ಪೀಠಕ್ಕೆ ಸು. ಕ್ರಿ.ಶ. ೧೨ನೇ ಶತಮಾನದ ದೇವಾಲಯದ ಫಲಕವಿದೆ. ಅದಕ್ಕೆ ಆಸರೆಯಾಗಿ ಹಿಂದೆ ಒಂದು ಶಿಲಾ ಹಲಗೆಯಿದೆ. ಅದರಲ್ಲಿ ಎರಡು ನಮೂನೆಯ ಶಿಖರಗಳು ಬದಿಯಲ್ಲಿ ವಜ್ರಾಕೃತಿಗಳು, ಮುಂದೆ ಪೂರ್ವಮುಖದಲ್ಲಿ ಎರಡು ಮತ್ತು ಉತ್ತರ ಮುಖದಲ್ಲಿ ಒಂದು ಆನೆಗಳ ಮುಖಗಳಿವೆ. ಕುತೂಹಲವೆಂದರೆ ಅದರ ದಕ್ಷಿಣ ಮುಖದಲ್ಲಿ ಒಂದು ಕಪ್ಪೆಯಿದೆ. ಬಸವಣ್ಣನವರ ವಚನದಲ್ಲಿ ಕಪ್ಪೆಯ ಹೆಸರು ಬಂದಿರುವುದನ್ನು ಇಲ್ಲಿ ನೆನೆಯಬಹುದು. ಈ ನಮೂನೆಯ ಪೀಠ ಫಲಕ ಅಲ್ಲಿಯ ಮಡಿವಾಳ ಮಾಚಯ್ಯನ ಮಂದಿರದ ಮುಂದಿದೆ. ಕಟ್ಟೆಯ ಹತ್ತಿರ ಸಮಕಾಲೀನ ಎರಡು ಶಿವಲಿಂಗಗಳಿವೆ. ಒಂದು ಶಿವಲಿಂಗಕ್ಕೆ ಹೊಂದಿ ಪಂಚಮುಖಗಳಿವೆ. ಅವು ಪರಶಿವನ ಐದು ಮುಖಗಳನ್ನು ಸೂಚಿಸುತ್ತವೆ.

ಅಂಬಿಗರ ಚೌಡಯ್ಯನ ಮಠ-ಗವಿ :



ಅಂಬಿಗರ ಚೌಡಯ್ಯ ಒಬ್ಬ ಶಿವಶರಣ. ವೃತ್ತಿಯಲ್ಲಿ ಅಂಬಿಗ. ಅಂದರೆ ಡೋಣಿ ನಡೆಸುವವನು. ಈತನ ಹೆಸರಿನ ಆಧುನಿಕ ಮಠವು ಬಸವೇಶ್ವರ ದೇವಾಲಯದ ಉತ್ತರಕ್ಕಿದೆ. ಅಲ್ಲಿ ಪ್ರಾಚೀನ ಶಿಲ್ಪಗಳಿವೆ. ಶಿಲ್ಪಗಳಲ್ಲಿ ಚತುರ್ಭುಜ ಶಿವ, ಮಹಿಷಾಸುರ ಮರ್ಧಿನಿ (ತೃಟಿತ), ಎರಡು ರುಂಡ ಭಾಗಗಳು, ಒಂದು ತೀರ್ಥಂಕರನ ರುಂಡ ಭಾಗಗಳಿದ್ದರೆ, ಉಳಿದವು ಆನೆ ಸಾಲುಳ್ಳ ದೇವಾಲಯದ

ಫಲಕಗಳಿವೆ. ಮಠದ ಒಳಗಡೆ ಶಿವಲಿಂಗ ಮತ್ತು ಪಾದಮುದ್ರೆ ಕಲ್ಲುಗಳಿವೆ.

ಆತನ ಹೆಸರಿನ ಗವಿಯೊಂದು ಈ ನಗರದಿಂದ ಸುಮಾರು ಎರಡು ಕಿ.ಮೀ. ಅಂತರದಲ್ಲಿದೆ. ಈ ಸ್ಮಾರಕ ಎತ್ತರ ಪ್ರದೇಶದ ಬುಡಭಾಗ ದಲ್ಲಿದೆ. ಗುಹೆಗೆ ಹೊಂದಿ ಕಟ್ಟಡವನ್ನು ಕಟ್ಟಲಾಗಿದೆ. ತಳಪಾಯದಲ್ಲಿ ಕಿರುಗವಿಯ ಭಾಗ. ಅದೇ ಗರ್ಭಗೃಹ ಮುಂದಿನ ಕಟ್ಟಡ ಭಾಗದಲ್ಲಿ ಮಂಟಪವಿದೆ. ಗರ್ಭಗೃಹದಲ್ಲಿ ಶಿವಲಿಂಗದ ಪೀಠ ಮತ್ತು ಪಿಂಡಗಳಿವೆ. ಗರ್ಭಗೃಹದ ಛತ್ತಿನ ಮೇಲೆ ಚೌಕಾದ ಎತ್ತರದ ಗುಮ್ಮಟವಿದೆ! ಮಂಟಪದ ದಕ್ಷಿಣ ಭಾಗದಲ್ಲಿ ಸಾಲಾಗಿ ಮೂರು ಕಮಾನುಗಳು, ಪೂರ್ವಕ್ಕೆ ಪ್ರವೇಶದ್ವಾರ ಶಿವಲಿಂಗ ಪೀಠ ಮತ್ತು ನಂದಿ ವಿಗ್ರಹಗಳಿವೆ. ಕಾಲ ಸು. ಕ್ರಿ.ಶ. ೧೨ನೇ ಶತಮಾನ. ಮಂಟಪ' ಮತ್ತು ಶಿಖರ ಭಾಗ ಇತ್ತೀಚಿನವು.




ಡೋಹರ ಕಕ್ಕಯ್ಯನ ಮಠ : ಡೋಹರ ಕಕ್ಕಯ್ಯನ ವೃತ್ತಿ ಚರ್ಮದ ವ್ಯವಹಾರ. ಆತನು ಮಾಳವ ಪ್ರಾಂತದಿಂದ ಕಲ್ಯಾಣಕ್ಕೆ ಬಂದು ಶಿವಶರಣರ ಸಮೂಹದಲ್ಲಿ ಸೇರಿದನು. ಆತನ ಇತ್ತೀಚಿನ ಮಠ ಬಸವೇಶ್ವರ ದೇವಾಲಯದ ಉತ್ತರಕ್ಕಿದೆ. ಅಲ್ಲಿ ತೊಗಲನ್ನು ಹದ ಗೊಳಿಸುವ ಒಂದು ತೊಟ್ಟಿಯಿದೆ . ಬದಿಗೆ ಚಾಲುಕ್ಯರ ಕಾಲದ ದೇವಾಲಯದ ಪ್ರಣಾಳವಿದೆ.

ಉರಿಲಿಂಗ ಪೆದ್ದಿ ಮಠ : ಉರಿಲಿಂಗ ಪೆದ್ದಿ ಒಬ್ಬ ಶಿವಶರಣ. ಮಹಾರಾಷ್ಟ್ರದ ನಾಂದೇಡ ಜಿಲ್ಲೆಯು ಈತನ ಪೂರ್ವಾಶ್ರಮ. ಈತನೊಬ್ಬ ಶ್ರಮಜೀವಿ, ಆತನ ಹೆಸರಿನ ಮಠಗಳು ಬೀದರ ಜಿಲ್ಲೆಯ ಕಟಕ್‌ಚಿಂಚೊಳ್ಳಿ, ಭಾಲ್ಕಿ ಮತ್ತು ಬಸವಕಲ್ಯಾಣಗಳಲ್ಲಿವೆ. ನಗರದ ಶ್ರೀ ಭೀಮಾ ನಗರದ ಪಶ್ಚಿಮಕ್ಕೆ ಈ ಮಠವು ಸ್ವಲ್ಪ ದಿನ್ನೆಯ ಮೇಲಿದೆ. ಹಾಳು ಬಿದ್ದಿರುವ ಈ ಮಠವು ವಿಸ್ತಾರವಾಗಿದೆ. ಪೂರ್ವಕ್ಕೆ ಮುಖಮಾಡಿದೆ. ಮಠದ ಮುಂದೆ ಕಲ್ಯಾಣ ಚಾಲುಕ್ಯರ ಕಾಲದ ಅನೇಕ ಶಿಲ್ಪಗಳಿವೆ. ಒಳಗಡೆ ಆತನ ಸಮಾಧಿಯಿದೆ ಎನ್ನುವರು.

ಕಂಬಾಳೆ ಮಠ : ನಗರದಲ್ಲಿ ಶರಣ ಕಂಬಳಿ ನಾಗದೇವನ ಮಠವಿದೆ. ಅಲ್ಲಿ ಆತನು ಕಂಬಳಿಯನ್ನು ಹಾಸಿಕೊಂಡು ಧ್ಯಾನ ಮಾಡುತ್ತಿದ್ದನಂತೆ.


ಪ್ರಭುದೇವರ ಗದ್ದುಗೆ : ನಗರದ ಅರಿವಿನ ಮನೆ ಹತ್ತಿರ ಭವ್ಯವಾದ ಪ್ರಭುದೇವರ ಗದ್ದುಗೆಯಿದೆ. ಪ್ರಭುದೇವರ ಮತ್ತೊಂದು ಹೆಸರು ಅಲ್ಲಮಪ್ರಭು. ಕಾಲಜ್ಞಾನ



ವಚನಗಳಲ್ಲಿ ಪ್ರಭುದೇವರ ಪರಮಾನಂದ ವಿಶಾಲಮಂಟಪ, ಪ್ರಭುದೇವರ ಪರಮಾನಂದ ಪ್ರಕಾಶ ಮಂಟಪಗಳ ವಿವರಗಳಿವೆ. ಈತನ ಹುಟ್ಟೂರು ಇಂದಿನ ಶಿವಮೊಗ್ಗ ಜಿಲ್ಲೆಯ ಶಿಖಾರಿಪುರ ತಾಲೂಕಿನ ಬಳ್ಳಿಗಾವೆ. ಈತನ ತಂದೆ-ತಾಯಿ ನಿರಹಂಕಾರಿ ಮತ್ತು ಸುಜ್ಞಾನಿಯರು, ಅನಿಮಿಷಯ್ಯನೆಂಬ ಶಿವಯೋಗಿ ಈತನ ಗುರು. ಈತನು ಕಲ್ಯಾಣಕ್ಕೆ ಬರುವ ಮೊದಲು ದಾರಿಯಲ್ಲಿ ಸಹೋದರ ಅಜಗಣ್ಣನನ್ನು ಕಳೆದುಕೊಂಡು ದುಃಖಿಸ್ಥಳಾಗಿದ್ದ ಮುಕ್ತಾಯಕ್ಕನನ್ನು ಭೆಟ್ಟಿಯಾದ. ಸೊನ್ನಲಾಪುರಕ್ಕೆ (ಸೊಲ್ಲಾಪುರ) ಹೋಗಿ ಸಿದ್ಧರಾಮನನ್ನು ಪರಿವರ್ತಿಸಿಕೊಂಡು ಆತನ ಜೊತೆಯಲ್ಲಿ ಕಲ್ಯಾಣಕ್ಕೆ ಬಂದನು. ಅವನು ಬಸವಣ್ಣನವರ ಗುಂಪಿನಲ್ಲಿ ಸೇರಿ ಶಿವಶರಣರ ಅನುಭವ ಮಂಟಪದಲ್ಲಿ ಮಿಂಚಿದನು. ಆತನ ವಚನಗಳು ಖ್ಯಾತಿಯನ್ನು ಪಡೆದಿವೆ.

ಪ್ರಭುದೇವರ ಗದ್ದುಗೆಯ ಕಟ್ಟಡವು ವಿಶಾಲವಾಗಿದೆ. ಅದರ ಒಳ ಆವರಣದಲ್ಲಿ ಎರಡು ಕಟ್ಟಡ ಭಾಗಗಳಿವೆ. ಒಂದು ಪ್ರಭುದೇವರ ಗದ್ದುಗೆ, ಇನ್ನೊಂದು ಎದುರಿನ ತೆರೆದ ನಂದಿ ಮಂಟಪ. ಆತನ ಗದ್ದುಗೆಯು ಅರೆಗಂಬಗಳಿಂದ ಆವೃತ್ತಗೊಂಡಿದೆ. ಗದ್ದುಗೆಯ ಮೇಲೆ ಆತನ ಕಟ್ಟಿಗೆಯ ಜೋಡು ಆವಿಗೆಗಳಿವೆ. ಇಟ್ಟಿಗೆ ಮತ್ತು ಗಾರೆಯ ಗದ್ದುಗೆ ಅಲ್ಲಿದೆ. ಅರೆಗಂಬಗಳ ಶೈಲಿಯು ಮೈಸೂರು ಅರಸರ ವಾಸ್ತು ಲಕ್ಷಣವನ್ನು ಹೋಲುತ್ತವೆ. ಆವರಣದ ಇನ್ನೊಂದು ಕಡೆ ಕೆಲವು ಶಿಲ್ಪಗಳಿವೆ. ಅವುಗಳು ಸೂರ್ಯ, ಗಣೇಶ, ವೀರಗಲ್ಲು ಇತ್ಯಾದಿ. ವೀರಗಲ್ಲಿನಲ್ಲಿ ಮೂರು ದೃಶ್ಯಗಳಿವೆ. ಮೊದಲನೇ ದೃಶ್ಯದಲ್ಲಿ ವೀರನೊಬ್ಬ ಆನೆ ಮೇಲೆ ಕುಳಿತಿರುವನು. ಎರಡನೆಯ ದೃಶ್ಯದಲ್ಲಿ ಮಡಿದ ವೀರನನ್ನು ಅಪ್ಸರೆಯರು ಹೊತ್ತು ಒಯ್ಯುತ್ತಿರುವರು. ಕೊನೆಯದರಲ್ಲಿ ಶಿವಲಿಂಗದ ಸಾನಿಧ್ಯದಲ್ಲಿ ಮಡಿದ ವೀರನು ಕೈಮುಗಿದು ನಿಂತಿರುವನು. ಆನೆ ಸವಾರಿ ಮಾಡುವ ಅಮ್ಮಿನಬಾವಿಯ ವೀರಗಲ್ಲೊಂದನ್ನು ಮಡಿವಾಳ ಮಾಚಯ್ಯನ ದೆಂದು ಕರೆದಿರುವುದನ್ನು ಇಲ್ಲಿ ಸ್ಮರಿಸಬಹುದು.

ಅಕ್ಕ ನಾಗಮ್ಮನ ಗವಿ : ತ್ರಿಪುರಾಂತಕ ಕೆರೆಯ ಹತ್ತಿರ ಬಸವಣ್ಣನವರ ಸಹೋದರಿ ಅಕ್ಕನಾಗಮ್ಮನ ಗವಿ ಇದ್ದು, ಅಕ್ಕನಾಗಮ್ಮ, ಶಿವಶರಣರ ಆಂದೋಲನ ದಲ್ಲಿ ಭಾಗವಹಿಸಿದ್ದಳು. ಆಕೆಯ ಮಗ ಚೆನ್ನಬಸವಣ್ಣ. ಕಾಲಜ್ಞಾನ ವಚನಗಳಲ್ಲಿ



ನೆಲಮಾಳಿಗೆಯಲ್ಲಿ ಅಕ್ಕ ನಾಗಮ್ಮನ ಪ್ರಸನ್ನ ಮಂಟಪವಿದ್ದಿತೆಂದು ಹೇಳಲಾಗಿದೆ.

ಅಕ್ಕ ನಾಗಮ್ಮನ ಗುಹೆಯ ತಳಪಾಯವು ಇಂಗ್ಲಿಷ್ ''ಎಲ್'' ಆಕಾರದಲ್ಲಿದೆ. ನೆಲಮಾಳಿಗೆಯ ಪಶ್ಚಿಮ ಮುಖದಲ್ಲಿ ಪ್ರವೇಶ ದ್ವಾರವಿದೆ. ಅದಕ್ಕೆ ಹೊಂದಿ ಉತ್ತರ ದಕ್ಷಿಣಕ್ಕೆ ಒಂದು ಕಿರುದಾರಿಯಿದೆ. ಬಲಬದಿಗೆ ಮೂರು ಕೋಣೆಗಳು, ಅವು ಒಂದೇ ಸಾಲಿನಲ್ಲಿ ಪೂರ್ವ-ಪಶ್ಚಿಮವಾಗಿವೆ. ಮುಂಭಾಗದ ಗೋಡೆಯಲ್ಲಿ ಎರಡು ಗುಹೆಗಳ ವಿರುದ್ಧ ಗೋಡೆಯಲ್ಲಿ ಸ್ವಲ್ಪ ಎತ್ತರದ ಗೋಡೆಯಲ್ಲಿ ಕಿರುದ್ವಾರಗಳಿವೆ. ಕೋಣೆಗಳಿಗೆ ಪಶ್ಚಿಮ ಮುಖದ ದ್ವಾರದಿಂದ ಪ್ರವೇಶಿಸಿ ದಕ್ಷಿಣ ಕಡೆ ತಿರುಗಿ ಅಲ್ಲಿಯ ಒಂದು ಅಂಕಣವನ್ನು ದಾಟ ಒಳಗಡೆ ಬರಬೇಕು. ಪ್ರವೇಶ ದ್ವಾರ ಚೌಕಟ್ಟನಲ್ಲಿ ವೈಷ್ಣವ ದ್ವಾರಪಾಲಕರ ತಲಾ ಒಂದರ ಕೋಣೆಗಳು ಆಯತಾಕಾರ ದಲ್ಲಿ ಮತ್ತು ಭಿನ್ನ ಅಳತೆಯಲ್ಲಿವೆ. ಮೊದಲ ಕೋಣೆಗೆ ಗರ್ಭಗೃಹ ಮತ್ತು ಅಂತರಾಳಗಳಿವೆ. ಗರ್ಭಗೃಹದಲ್ಲಿ ಅಕ್ಕನಾಗಮ್ಮ ಮತ್ತು ನಂದಿಯ ವಿಗ್ರಹಗಳು ಅಂತರಾಳದ ಉತ್ತರ ಗೋಡೆಯಲ್ಲಿ ಕಿರುಬಾಗಿಲು, ಅದು ನೆಲದಿಂದ ಸ್ವಲ್ಪ ಎತ್ತರದಲ್ಲಿದೆ. ಉತ್ತರಕ್ಕೆ ಮುಖ ಮಾಡಿದೆ. ಬದಿಗಿನ ಎರಡನೆಯ ಕೋಣೆಯ ಹಿಂಬದಿಯಲ್ಲಿ ಕಟ್ಟೆ ಅದರ ಮೇಲೆ ಉಮಾ-ಮಹೇಶ್ವರ, ಚೌರಿ ಹಿಡಿದು ನಿಂತ ಸೇವಕಿಯರ ಶಿಲ್ಪಗಳಿವೆ (ಸು.ಕ್ರಿ.ಶ. ೧೨ನೇ ಶತಮಾನ). ಆ ಕಟ್ಟೆಯೇ ಚೆನ್ನಬಸವಣ್ಣನವರಿಗೆ ತೊಟ್ಟಿಲಾಗಿತ್ತೆಂದು ಹೇಳುವರು. ಬದಿಗೆ ಕಿರು ಕೋಣೆ, ಅಲ್ಲಿ ನೀಲಾಂಬಿಕೆಯ ವಿಗ್ರಹ, ಗುಹೆಯ ಮುಂದೆ ವಿಶಾಲವಾದ



ಅಂಕಣ, ಅಲ್ಲಿ ಅಳಿದುಳಿದ ತೊಲೆಗಳನ್ನು ಹೊತ್ತು ನಿಂತ ಕಂಬಗಳ ಮಂಟಪ ಅದರ ಗೋಡೆ ಮತ್ತು ಛತ್ತು ಇತ್ಯಾದಿ ಇತ್ತೀಚಿನ ಕಾಲದಲ್ಲಿ ಕಟ್ಟಲಾಗಿದೆ.

ಒಂದು ಐತಿಹ್ಯದಲ್ಲಿ ಚಾಲುಕ್ಯ ಅರಸ ಇಮ್ಮಡಿ ಅಯ್ಯಣ ಮತ್ತು ಆತನ ಗುರು ಆನಂದ (ಶಂಭು) ಅವರ ಮೃತ ದೇಹಗಳನ್ನು ಈ ಗುಹೆಯಲ್ಲಿ ಹೂಳಲಾಗಿತ್ತೆನ್ನುವರು. ಗುಹಾಲಯದ ಬಾಗಿಲ ಚೌಕಟ್ಟು, ಕಂಬಗಳು ಮತ್ತು ಶಿಲ್ಪಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿವೆ. ಆದರೆ, ಈ ಗುಹೆಯ ವಿನ್ಯಾಸವು ಸ್ವಲ್ಪಮಟ್ಟಿಗೆ ವಿಹಾರ ಮಾದರಿಯನ್ನು ನೆನಪಿಸುತ್ತದೆ. ಆರಂಭಿಕವಾಗಿ ಇದೊಂದು ಕಲ್ಯಾಣ ಚಾಲುಕ್ಯರ ವೈಷ್ಣವ ತಾಣ, ನಂತರ ಶಿವಶರಣರ ನೆಲೆ.



ಇಷ್ಟಲಿಂಗಧಾರಿ ದಂಪತಿಗಳು : ಅಕ್ಕನಾಗಮ್ಮನ ಗುಹೆಯ ಹತ್ತಿರ ವೀರಶೈವ ದಂಪತಿಗಳ ಶಿಲ್ಪವಿದೆ. ದೇಹದ ಮೇಲೆ ಚೌಕಗಳನ್ನು ಧರಿಸಿದ್ದಾರೆ. ಅವರು ಇಷ್ಟಲಿಂಗಧಾರಿಗಳು. ಪತಿಯ ಬಲಗೈ ಅಭಯ ಮುದ್ರೆಯಲ್ಲಿದೆ. ಕುಳಿತ ಭಂಗಿಯಲ್ಲಿದ್ದಾರೆ. ಕಾಲ ಸು.ಕ್ರಿ.ಶ. ೧೩ನೇ ಶತಮಾನ. ಈ ಶಿಲ್ಪದ ಕೆತ್ತನೆಯು ಅಪೂರ್ಣಗೊಂಡಿದೆ

ಅರುಹಿನ ಮನೆ : ಅಕ್ಕ ನಾಗಮ್ಮನ ಗುಹೆ ಹತ್ತಿರ ಉತ್ತರದಲ್ಲಿ ಎರಡು ಗುಹೆಗಳು, ಅರುಹಿನ ಮನೆ ಮತ್ತು ಚೆನ್ನಬಸವಣ್ಣ, ಅರುಹಿನ ಮನೆಯನ್ನು ಬಸವಣ್ಣನ ಮಹಾಮನೆ ಎನ್ನುವರು. ಮಹಾಮನೆ ಎಂದರೆ, ದೊಡ್ಡಮನೆ, ಜ್ಞಾನ ದೇಗುಲವೆನ್ನುವರು. ಕಾಲಜ್ಞಾನ




ವಚನಗಳಲ್ಲಿ ಬಸವಣ್ಣನ ನೆಲ ಮಾಳಿಗೆಯಲ್ಲಿ ಜ್ಞಾನಪ್ರಕಾಶ ಮಂಟಪವಿದ್ದಿತೆನ್ನುವರು. ಅದು ಬಸವಣ್ಣನ ವಾಸದ ತಾಣ. ತತ್ವಜ್ಞಾನದ ಚರ್ಚೆಗಾಗಿ ಈ ಮನೆಗೆ ಶಿವಶರಣರು ಆಗಮಿಸಿ ಬಸವಣ್ಣನವರಿಂದ ಶುಭಾಶೀರ್ವಾದ ಪಡೆಯುತ್ತಿದ್ದರು! ಅಲ್ಲಿ ಭಕ್ತರಿಗೆ ಪುಕ್ಕಟೆಯಾಗಿ ಅನ್ನ ದಾಸೋಹ ನಡೆಯುತ್ತಿತ್ತು ಎನ್ನುವರು. ಗುಹೆಯ ತಳಪಾಯವನ್ನು ಇಂಗ್ಲಿಷ್

'ಎಲ್' ಆಕಾರದಲ್ಲಿ ಕೊರೆಯಲಾಗಿದೆ. ಪ್ರವೇಶದ ದಾರಿಯ ಅಗಲ-ಕಿರಿದು. ಉತ್ತರಕ್ಕೆ ಈ ದಾರಿ ಪೂರ್ವದ ಕಡೆಗೆ ನೇರವಾಗಿ ತಿರುಗಿದೆ. ಅಲ್ಲಿ ಉದ್ದವಾದ ಆಯತಾಕಾರದ ಕೋಣೆ ಅದರ ಅಗಲವು ಪ್ರವೇಶದ್ವಾರಕ್ಕಿಂತ ದೊಡ್ಡದು. ಕೋಣೆಯ ಪೂರ್ವ ಅಂಚಿನ ಗೋಡೆಗೆ ಹೊಂದಿ ಎರಡು ಗೂಡುಗಳು, ಎದುರಿನ ಒಂದು ಗೂಡಿನಲ್ಲಿ ನಂದಿ ವಿಗ್ರಹ ಅಲ್ಲೊಂದು ಕಿರಿದಾದ ಸುರಂಗ ಅದು ಹತ್ತಿರದ ಒಂದು ಬಾವಿಗೆ ಹೋಗುವುದಂತೆ. ಬಾವಿಯಲ್ಲಿ ಶರಣರು ಸ್ನಾನ ಮಾಡುತ್ತಿದ್ದರೆನ್ನುವರು. ಗೂಡುಗಳ ಮಧ್ಯ ಬಸವಣ್ಣನ ವಿಗ್ರಹವಿದೆ. ಈ ಗುಹೆಯ ಒಳಾವರಣ ತಂಪಾಗಿದೆ. ಮುಂಭಾಗದಲ್ಲಿ ವಿಶಾಲವಾದ ಆವರಣ, ಹೊರಗಡೆ ಚಾಲುಕ್ಯರ ಕಾಲದ ಆನೆ ಸಾಲಿನ ಫಲಕ, ಕಂಬ ಇತ್ಯಾದಿ ಮುಂದೆ ಆಧುನಿಕ ಕಂಬಗಳುಳ್ಳ ಕಟ್ಟಡ ಅದಕ್ಕೆ ಸಿಮೆಂಟ್ ಲೇಪನೆಯ ಗೋಡೆ.

ಚೆನ್ನಬಸವಣ್ಣನ ಗುಹೆ : ಅರುಹಿನ ಮನೆ ಎಡಗಡೆಗೆ ಚೆನ್ನಬಸವಣ್ಣನ ಗುಹೆ. ಗುಹೆಯು ಉದ್ದವಾಗಿ ಮತ್ತು ಕಿರು ಅಗಲವಾಗಿದೆ. ಒಳಗಡೆ ಒಂದು ಶಿವಲಿಂಗ.


ಮಡಿವಾಳ ಮಾಚಯ್ಯನ ಮಂದಿರ : ಮಡಿವಾಳ ಮಾಚಯ್ಯನು ವೃತ್ತಿಯಲ್ಲಿ ಅಗಸ. ಬಸವಣ್ಣನ ಉಗ್ರ ಭಕ್ತ. ಶಿವಶರಣರ ಬಟ್ಟೆಗಳನ್ನು ಮಾತ್ರ ತೊಳೆಯುತ್ತಿದ್ದ. ಕಲ್ಯಾಣದಲ್ಲಿ



ಕ್ರಾಂತಿ ಉಂಟಾದಾಗ ಶಿವಶರಣರನ್ನು ರಕ್ಷಿಸಿ ಅವರ ನೆಲೆಗಳಿಗೆ ತಲುಪಿಸಿದ ಕೀರ್ತಿ ಈತನದ್ದಾಗಿತ್ತು. ಹುಟ್ಟೂರು ವಿಜಾಪುರ ಜಿಲ್ಲೆಯ ಹಿಪ್ಪರಗಿ. ತಂದೆ ಪರ್ವತಯ್ಯ. ಆರಾಧ್ಯ ದೇವತೆ ತನ್ನ ಹುಟ್ಟೂರಿನ ಕಲ್ಲಿನಾಥ. ಮಲ್ಲಿಕಾರ್ಜುನ ದೀಕ್ಷೆಯನ್ನು ನೀಡಿದ. ಕಲ್ಯಾಣದಲ್ಲಿ ಕ್ರಾಂತಿ ಜರುಗಿದಾಗ ತೊರಗಲ್ಲು ಸೀಮೆಯನ್ನು ತಲುಪುವವರೆಗೆ ಕಳಚೂರಿ ಅರಸ ರಾಯಮುರಾರಿ ಸೈನ್ಯದ ಸಂಗಡ ಹೋರಾಡುತ್ತ ಶಿವಶರಣರನ್ನು ರಕ್ಷಿಸಿ ಅವರನ್ನು ಉಳವಿಗೆ ಮುಟ್ಟಿಸಿದ. ಅಲ್ಲಿಂದ ತನ್ನ ಹುಟ್ಟೂರಾದ ಹಿಪ್ಪರಿಗೆಗೆ ಮರಳಿದ. ಅಲ್ಲಿಯ ಕಲ್ಲಿನಾಥ ದೇವರಲ್ಲಿ ತನ್ನ ಕೊನೆಯ ಉಸಿರನ್ನು ಎಳೆದನು.

ಕಲ್ಯಾಣದ ಕೆರೆಯ ಉತ್ತರಕ್ಕೆ ಮಡಿವಾಳ ಮಾಚಯ್ಯನ ದೇವಾಲಯ, ಎದುರಿಗೆ ಒಂದು ನಂದಿ ಮಂಟಪ ಕಂಬಗಳುಳ್ಳ ಮಂಟಪಕ್ಕೆ ನಾಲ್ಕು ಕಮಾನುಗಳು ಅಲ್ಲಿ ನಂದಿಯ ವಿಗ್ರಹ ನಂದಿಯ ಪೀಠ ಲಕ್ಷಣವು ಹೆಚ್ಚಾಗಿ ಪರುಷಕಟ್ಟೆಯಲ್ಲಿರುವ ನಂದಿ ಪೀಠವನ್ನು

ಹೋಲುವುದು. ನಂದಿಯ ಎದುರಿಗೆ ಶಿವಲಿಂಗ ಪೀಠ, ದುಂಡಾಗಿದೆ. ಉಳಿದವುಗಳು ಪಾದಮುದ್ರೆ, ಕಲ್ಲು, ಒಡೆದ ನಂದಿ ವಿಗ್ರಹ, ಶಿವಲಿಂಗದ ಪಿಂಡಭಾಗ ಮತ್ತು ಬೃಹದಾಕಾರದ ಒಂದು ಶೈವ ದ್ವಾರ ಫಲಕ.



ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ತೆರೆದ ಮುಖ ಮಂಟಪ ಉಳಿದಿವೆ. ಅದಕ್ಕೆ ಮೂಲ ಅಧಿಷ್ಠಾನದ ಅಲ್ಪಭಾಗವು ಅಲ್ಲಲ್ಲಿ ತೆರೆದಿದೆ. ಗರ್ಭಗೃಹ ದಲ್ಲಿ ಒಂದು ಶಿವಲಿಂಗ ಪೀಠದಲ್ಲಿ ಎರಡು ಲಿಂಗಗಳಿವೆ. ಜೊತೆಯಲ್ಲಿ ನಾಗ,



ವೀರಗಲ್ಲು ಮತ್ತು ಕಂಬಗಳಿವೆ. ಶಿಲ್ಪದಲ್ಲಿ ನಾಗನು ಅರ್ಧ ಪ್ರಾಣಿ-ಅರ್ಧ ಮನುಷ್ಯ ರೂಪದಲ್ಲಿರುವನು. ಅಲ್ಲೊಂದು ಕಿರಿದಾದ ಗುಂಡ-ಬ್ರಹ್ಮಯ್ಯರ ವಿಗ್ರಹ, ಅದರಲ್ಲಿ ಒಬ್ಬನು ಮಾತ್ರ ಖಡ್ಗದ ಮೇಲೆ ಕುಳಿತಿರುವನು. ಇನ್ನೊಬ್ಬನು ಮುಖ ತಿರುಗಿಸಿ ಕುಳಿತಿರುವನು . ತ್ರಿಪುರಾಂತಕ ಕೆರೆಯ ದಂಡೆಯ ಮೇಲಿನ ಒಂದು ಶಿಲಾಶಾಸನದಲ್ಲಿ ತ್ರೈಲೋಕ್ಯಮಲ್ಲ ದೇವನು ಮಡಿವಾಳ ಬಸವ ಮತ್ತು ತ್ರಿಪುರಾಂತಕ ದೇವರ ಮಡಿವಾಳ ಮಾಕಯರಿಗೆ ದತ್ತಿ ನೀಡಿರಬಹುದಾದ ಉಲ್ಲೇಖವಿದೆ. ತ್ರೈಲೋಕ್ಯಮಲ್ಲನು ಕಲ್ಯಾಣ ಚಾಲುಕ್ಯ ಅರಸ ಮುಮ್ಮಡಿ ತೈಲಪ. ಆತನ ಅಗಸ ಮಡಿವಾಳ ಬಸವ ಮತ್ತು ತ್ರಿಪುರಾಂತಕ ದೇವರ ಅಗಸ ಮಡಿವಾಳ ಮಾಕಯ್ಯ. ಮಡಿವಾಳ ಮಾಕಯ್ಯನು ಮಡಿವಾಳ ಮಾಚಯ್ಯನಿರಬೇಕು. ವಚನ ಸಾಹಿತ್ಯದಲ್ಲಿ ಮಡಿವಾಳ ಮಾಚಯ್ಯನ ಪಾತ್ರ ವಿಶಿಷ್ಟ ಸ್ಥಾನದಲ್ಲಿದೆ.

ನೂಲಿಯ (ನೂಲಿ) ಚಂದಯ್ಯನ ಗವಿ-ಮಠ : ನೂಲಿ ಚಂದಯ್ಯ ಒಬ್ಬ ಶಿವಶರಣ. ವೃತ್ತಿಯಲ್ಲಿ ನೂಲಿಯಿಂದ ಹಗ್ಗ ಮಾಡುವ ಕಾಯಕ. ಈತನ ಪೂರ್ವಾಶ್ರಮ ವಿಜಾಪುರ ಜಿಲ್ಲೆಯ ಶಿವಣಗಿ. ನೂಲಿನ ಕಣ್ಣಿಗಳನ್ನು ಆತ ತಯಾರಿಸುತ್ತಿದ್ದ.

ಗುಹೆ : ತ್ರಿಪುರಾಂತಕ ಕೆರೆಯ ಪೂರ್ವದಡದಲ್ಲಿ ಮತ್ತು ಬದಿಯ ರಸ್ತೆಯ ಇಳಿಜಾರಿನ ತಿರುವಿನಲ್ಲಿ ನೂಲಿ ಚಂದಯ್ಯನ ಗುಹೆ ಇದೆ. ಈಗ ಅದಕ್ಕೆ ಹೊಸ ಕೋಣೆಯನ್ನು ಕಟ್ಟಲಾಗಿದೆ. ಪಶ್ಚಿಮಕ್ಕೆ ಮುಖಮಾಡಿದ ಗುಹೆಯ ಒಳಗಡೆ ಒಂದು ಶಿವಲಿಂಗ ಹಾಗೂ ಶೈವ ಉಪಾಸಕ ಮತ್ತು ಉಪಾಸಕಿಯರ ಶಿಲ್ಪಗಳಿವೆ. ಹೊರಗಡೆ ಗಣೇಶ, ವೀರಗಲ್ಲು ಮತ್ತು ಶೈವ ಉಪಾಸಕರ ಶಿಲ್ಪಗಳಿವೆ. ಗವಿಯ ಹತ್ತಿರ ಒಂದು ಬಾವಿ ಮತ್ತು ಆಧುನಿಕ ಸಮಾಧಿಯಿದೆ. ಒಳಗಿನ ಶಿಲ್ಪಗಳು ಹೀಗಿವೆ :



ಉಪಾಸಕಿ : ಉಪಾಸಕಿ ಸವ್ಯಲಲಿತಾಸನದಲ್ಲಿ ಕುಳಿತಿರುವಳು. ತಲೆಯ ಮೇಲ್ಭಾಗ ಒಡೆದಿದೆ. ಎದ್ದು ಕಾಣುವ ಕುಚಗಳಿವೆ. ಕೈ ಮತ್ತು ತೋಳುಗಳಲ್ಲಿ ರುದ್ರಾಕ್ಷಿ ಸರಗಳು ತುರುಬನ್ನು ತಲೆಯ ಹಿಂಬದಿಯಲ್ಲಿ ಸಿಂಬೆಯಂತೆ ಸುತ್ತಿ ದಪ್ಪನಾಗಿ ಕಟ್ಟಿರುವಳು. ಕಿವಿಗಳಲ್ಲಿ ಕುಂಡಲಗಳು ಕೈಗಳಲ್ಲಿ ಬಟ್ಟಲುಗಳನ್ನು ಹಿಡಿದಿರುವಳು.



ಉಪಾಸಕ : ಉಪಾಸಕನು ಸವ್ಯಲಲಿತಾಸನದಲ್ಲಿ ಕುಳಿತಿರುವನು. ಎಡಗೈಯಲ್ಲಿ ಒಂದು ಬಟ್ಟಲಿದೆ. ಬಲ ಕೈಯಲ್ಲಿ ಚಾಟಿಯಿದ್ದು, ಅದು ತೊಡೆಯ ಮೇಲಿದೆ. ಕೆಳಗಡೆ ಎರಡು ಕುದುರೆಗಳಿವೆ. ಕೂದಲನ್ನು ಹಗ್ಗದಂತೆ ಮಾಡಿ ಅದನ್ನು ರುಮಾಲಿನಾಕಾರದಲ್ಲಿ ತಲೆಗೆ ಸುತ್ತಿರುವನು. ರುದ್ರಾಕ್ಷಿ ಸರಗಳನ್ನು ಧರಿಸಿದ್ದಾನೆ. ಗವಿಯ ಹೊರಗಡೆಯೂ ಉಪಾಸಕರ ಶಿಲ್ಪಗಳಿವೆ.



ಉಪಾಸಕ : ಉಪಾಸಕ ತನ್ನ ಪ್ರಾಣ ಹತ್ಯೆ ಮಾಡಿಕೊಳ್ಳುತ್ತಿರುವನು. ಆತ ತನ್ನ ಬಲಗೈಯಲ್ಲಿ ಕಠಾರಿ ಹಿಡಿದು ಹೊಟ್ಟೆಗೆ ತಿವಿದುಕೊಳ್ಳುತ್ತಿರುವನು. ಅದಕ್ಕಾಗಿ ಎಡಗೈಯಿಂದ ಹೊಟ್ಟೆಯನ್ನು ಎಳೆದುಕೊಳ್ಳುತ್ತಿರುವನು. ಕಿವಿಗಳಲ್ಲಿ ಓಲೆಗಳಿವೆ. ಕೊರಳು ಮತ್ತು ತೋಳುಗಳಲ್ಲಿ ರುದ್ರಾಕ್ಷಿ ಸರಗಳಿವೆ. ಸೊಂಟಕ್ಕೆ ವಸ್ತ್ರವನ್ನು ಧರಿಸಿರುವನು. ತಲೆಯ ಬಲಗಡೆ ತುರುಬನ್ನು ಕಟ್ಟಿದ್ದಾನೆ. ಶಿಲ್ಪದ ಮೇಲಿನ ಭಾಗ ಅರ್ಧ ವೃತ್ತಾಕಾರದಲ್ಲಿದೆ.


ಉಪಾಸಕ : ಉಪಾಸಕ ಗಡ್ಡಧಾರಿ ಪದ್ಮಾಸನದಲ್ಲಿ ಕುಳಿತಿರುವನು. ಕೈಗಳು ಪ್ರಸನ್ನ ಮುದ್ರೆಯಲ್ಲಿವೆ. ಕೈಗಳಲ್ಲಿ ರುದ್ರಾಕ್ಷಿ ಸರಗಳು, ಕೂದಲನ್ನು ರುಮಾಲಿನಂತೆ ಕಟ್ಟಿದ್ದಾನೆ. ದಪ್ಪನಾದ ವಸ್ತ್ರ ಯಜ್ಞೋಪವೀತದಂತಿದೆ. ಕೈಯಲ್ಲಿ ಇಷ್ಟಲಿಂಗವೇನಾದರೂ ಇದೆಯೇ ಎಂಬುದು ಗೋಚರಿಸುವುದಿಲ್ಲ.



ಉಪಾಸಕ : ಮಧ್ಯಭಾಗದಲ್ಲಿ ಈ ಶಿಲ್ಪ ಹೋಳಾಗಿದೆ. ಶಿಲ್ಪದಲ್ಲಿ ಉಪಾಸಕ ತನ್ನ ಪ್ರಾಣವನ್ನು ಹತ್ಯೆ ಮಾಡಿಕೊಳ್ಳುತ್ತಿರುವನು. ಬಲಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ತನ್ನ ಹೊಟ್ಟೆಗೆ ಇರಿದುಕೊಳ್ಳುತ್ತಾ ನಿಂತಿದ್ದಾನೆ. ಎಡಗೈಯಿಂದ ಹೊಟ್ಟೆ ಹಿಡಿದು ಎಳೆಯುತ್ತಿರುವನು. ತಲೆಗೆ ವಸ್ತ್ರವನ್ನು ಕಟ್ಟಿರುವನು. ಕಿವಿಯಲ್ಲಿ ಓಲೆ, ಕೊರಳಲ್ಲಿ ಮತ್ತು ಕೈಗಳಲ್ಲಿ ರುದ್ರಾಕ್ಷಿ ಸರಗಳು, ಸೊಂಟಕ್ಕೆ ವಸ್ತ್ರವನ್ನೂ ಕಟ್ಟಿದ್ದಾನೆ. ಮುಖದ ಬದಿಗಳಲ್ಲಿ ಸೇವಕಿಯರು ಚೌರಿ ಬೀಸುತ್ತ ನಿಂತಿರುವರು.

ವೀರಗಲ್ಲೊಂದನ್ನು ಬಿಟ್ಟು ಈ ಎಲ್ಲಾ ಶಿಲ್ಪಗಳ ಕಾಲ ಸು. ಕ್ರಿ.ಶ. ೧೧-೧೨ನೇ ಶತಮಾನ. ಅವು ಶೈವ ಸಂಪ್ರದಾಯದ ಉಪಾಸಕ ಮತ್ತು ಉಪಾಸಕಿಯರ ಶಿಲ್ಪಗಳು. ಒಂದರಲ್ಲಿರುವ ರುಮಾಲುಧಾರಿ ವ್ಯಕ್ತಿಯೊಬ್ಬ ಕೈಗಳಲ್ಲಿ ಬಟ್ಟಲು ಮತ್ತು ಚಾಟಿಗಳನ್ನಿಡಿದು ಕುಳಿತಿದ್ದಾನೆ. ಕೆಳಗಡೆ ಕುದುರೆಗಳಿವೆ. ಹೀಗಾಗಿ ಈತನೊಬ್ಬ ವರ್ತಕ/ ಅಧಿಕಾರಿ ಇರಬೇಕು. ಬದಿಗಿನ ಶಿಲ್ಪದಲ್ಲಿ ಉಪಾಸಕಿಯಿದ್ದಾಳೆ. ತನ್ನ ಕೈಗಳಲ್ಲಿ ಬಟ್ಟಲನ್ನು ಹಿಡಿದು ಕುಳಿತಿರುವಳು. ಇದರಿಂದ ಈಕೆಯು ಉಪಾಸಕನ ಪತ್ನಿ ಇರಬೇಕು. ಎರಡು ಶಿಲ್ಪ ಲಕ್ಷಣಗಳು ಒಂದೇ ಇರುವುದರಿಂದ ಇವುಗಳು ಏಕಕಾಲದ್ದಾಗಿವೆ. ಉಳಿದ ಎರಡು ಶಿಲ್ಪಗಳಲ್ಲಿ ಪ್ರಾಣ ಹತ್ಯೆ ಮಾಡಿಕೊಳ್ಳುವ ಶೈವ ಉಪಾಸಕರಿದ್ದಾರೆ. ಪ್ರಸ್ತುತ ಸ್ಥಳ ನೂಲಿಚಂದಯ್ಯನ ಗುಹೆ ಎನ್ನುವುದರಿಂದ ಇವರು ನೂಲಿಚಂದಯ್ಯ ದಂಪತಿಗಳಾಗಿ ರಬಹುದೇ? ಕ್ರಿ.ಶ. ೧೧೪೩ರ ಅಲ್ಲಿಯ ಶಾಸನದಲ್ಲಿ ಚಂದಿಮಯ್ಯನಾಯಕ ಎಂಬವನು ಕಾಣುವನು. ಆತ ಕಲ್ಯಾಣ ಚಾಲುಕ್ಯ ದೊರೆ ಇಮ್ಮಡಿ ಜಗದೇಕಮಲ್ಲನ ಒಬ್ಬ ಅಧಿಕಾರಿ. ಈ ಚಂದಿಮಯ್ಯನೇ ಚಂದಯ್ಯನಾಗಿರಬಹುದೇ (ಚಂದಿಮರಸ)? ಎಂಬ ಪ್ರಶ್ನೆಗಳಿವೆ.

ವೀರಗಲ್ಲು : ವೀರಗಲ್ಲಿನಲ್ಲಿ ವೀರನೊಬ್ಬ ಕೈಗಳಲ್ಲಿ ಭರ್ಚಿಯನ್ನಿಡಿದು ಕುದುರೆ ಸವಾರಿ ಮಾಡುವ ದೃಶ್ಯವಿದೆ.



ನೂಲಿ ಚಂದಯ್ಯನ ಮಠ : ನಗರದಲ್ಲಿ ಬಸವೇಶ್ವರ ದೇವಾಲಯದ ಹತ್ತಿರ ನೂಲಿ ಚಂದಯ್ಯನ ಮಠವಿದೆ. ಅಲ್ಲಿ ಕೆಲವು ಶಿಲ್ಪಗಳು, ಒಳಗಡೆ ಶಿವಲಿಂಗ ಪೀಠ ಮತ್ತು ದೇವಾಲಯದ ಗೋಡೆ ಫಲಕಗಳಿವೆ. ಹೊರಗೋಡೆಯಲ್ಲಿ ದೇವಾಲಯದ ಅವಶೇಷಗಳು, ನಾಗ-ನಾಗಿಣಿ (ಮನುಷ್ಯ-ಪ್ರಾಣಿರೂಪ), ಗಣೇಶ, ವಿಷ್ಣುವಿನ ಮುಖ, ನಟರಾಜ ಇತ್ಯಾದಿ ಶಿಲ್ಪಗಳಿವೆ. ಶಿಲ್ಪ ಫಲಕಗಳ ಕಾಲ ಸು ಕ್ರಿ.ಶ. ೧೨-೧೩ನೇ ಶತಮಾನ.

ಘನಲಿಂಗ ರುದ್ರಮುನಿ ಶಿವಾಚಾರ್ಯರ ಗುಹೆ : ಅದೊಂದು ತ್ರಿಪುರಾಂತಕ ಕೆರೆಯ ದಕ್ಷಿಣ ದಂಡೆಯ ಮೇಲಿರುವ ನೂತನ ಕಟ್ಟಡ. ಅದರ ಬದಿಗೆ ಆಧುನಿಕ ಅನುಭವ ಮಂಟಪವಿದೆ. ಬದಿಗೆ ಬಿಲ್ವಪತ್ರ ಗಿಡಗಳು ಮತ್ತು ಐದು ಗುಹೆಗಳಿವೆ. ಅಲ್ಲಿನ ರುದ್ರಮುನಿ ಶಿವಾಚಾರ್ಯರ ಗುಹೆ ದೊಡ್ಡದು. ಗುಹೆಯ ಮುಂದೆ ವಿಶಾಲ ಆವರಣ, ಮುಂಭಾಗದ ಸ್ವಲ್ಪ ಭಾಗದಲ್ಲಿ ಆಧುನಿಕವಾದ ಕಟ್ಟಡ



ಕಟ್ಟಲಾಗಿದೆ. ಈ ಗುಹೆಯ ತಳಪಾಯದಲ್ಲಿ ಎರಡು ಅಂಕಣಗಳುಳ್ಳ ಆಯ ತಾಕಾರದ ಮಂಟಪವಿದೆ. ಬದಿಗಿನ ಗೋಡೆಗಳ ಮಧ್ಯ ತಲಾ ಒಂದು ಕಡೆ ಗೂಡುಗಳು, ಪಕ್ಕದಲ್ಲಿ ಕಿರು ಗಾತ್ರದ ಕೋಣೆಗಳು, ಒಳಗಿನ ಕೋಣೆಯ ಹಿಂಬದಿ ಗೋಡೆಗೆ ಹೊಂದಿ ಎತ್ತರ ಕಟ್ಟೆಯಿದ್ದು ಅಲ್ಲಿ ಶಿವಲಿಂಗ, ಘನಲಿಂಗ ಮುನಿ ಶಿವಾಚಾರ್ಯರ ಮುಖವಾಡ, ಕಿರಿದಾದ ಪ್ರವೇಶ ದ್ವಾರಗಳಿವೆ. ಈ ಗವಿಯ ಮುಂಭಾಗದಲ್ಲಿ ಕಮಾನುಳ್ಳ ಪ್ರವೇಶ, ತೆರೆದ ಸಭಾಮಂಟಪವಿದ್ದು, ಈ ಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಕೆಲವು ಕಂಬಗಳು, ಬದಿಗಳಲ್ಲಿ ಒಂದೊಂದು ಕೋಣೆಗಳು, ಗೋಡೆಗೆ ಸಿಮೆಂಟ್ ಮತ್ತು ಸುಣ್ಣ ಲೇಪನೆಯಿದೆ.


ಹತ್ತಿರದಲ್ಲೇ ಇರುವ ನಾಲ್ಕು ಗುಹೆಗಳಲ್ಲಿ ಮೂರರ ಹೆಸರುಗಳು ಮಾತ್ರ ತಿಳಿದಿವೆ. ಅವುಗಳು ಹರಳಯ್ಯನ ಗುಹೆ, ಪಂಚಸೂತ್ರ ಗುಹೆ ಮತ್ತು ವಿಜ್ಞಾನೇಶ್ವರ ಗುಹೆ.

ಹರಳಯ್ಯನ ಗುಹೆ : ಹರಳಯ್ಯನ ಪೂರ್ವಾಶ್ರಮ ಸುರಪುರ. ವೃತ್ತಿಯಿಂದ ಈತ ಮಚ್ಚಿಗ. ಕಲ್ಯಾಣದಲ್ಲಿ ಶಿವಶರಣರ ಪಾದರಕ್ಷೆಗಳನ್ನು ತಯಾರಿಸುತ್ತಿದ್ದನು. ಹರಳಯ್ಯನ ಗುಹೆಗೆ ನೆಲಮಾಳಿಗೆಯುಳ್ಳ ವಿಶಾಲ ಕೋಣೆ ಇದೆ. ಬದಿಗೆ ಎತ್ತರ ಕಟ್ಟೆಗಳು, ಹಿಂಬದಿಯ ಗೋಡೆ ಮಧ್ಯ ಕಿರುದಾದ ಕೋಣೆ, ಹಿಂದಿನ ಗೂಡಿನಲ್ಲಿ ಶಿವಲಿಂಗವಿದ್ದು, ಕಿರು ಪ್ರವೇಶವಿದೆ.

ವಿಜ್ಞಾನೇಶ್ವರ ಗುಹೆ : ಹರಳಯ್ಯನ ಗುಹೆಯ ಬದಿಯಲ್ಲಿ ಏಕ ಕೋಣೆಯುಳ್ಳ ಗುಹೆಯನ್ನು ವಿಜ್ಞಾನೇಶ್ವರ ಗುಹೆ ಎಂದು ಹೇಳುವರು.

ಪಂಚಸೂತ್ರ ಗುಹೆ : ಪಂಚಸೂತ್ರ ಗುಹೆಯು ಹರಳಯ್ಯನ ಗುಹೆ ಹತ್ತಿರವಿದೆ. ಅಲ್ಲಿ ಅದು ಕೊನೆಯ ಗುಹೆ. ಅದರ ತಳಪಾಯವು ಹರಳಯ್ಯನ ಗುಹೆಯನ್ನು ಹೋಲುವುದು. ಹಿಂಬದಿಯಲ್ಲಿ ಆಯತಾಕಾರದ ಕೋಣೆಯಲ್ಲಿ ಐದು ಶಿವಲಿಂಗಗಳು. ಎದುರಿಗೆ ನಂದಿ ವಿಗ್ರಹ, ಆ ಗುಹೆಯಲ್ಲಿ ವಾಸಿಸಿದ ಶಿವಶರಣರ ಹೆಸರು ತಿಳಿದಿಲ್ಲ.

ಬಂದವರ ಓಣಿ : ಬಸವಕಲ್ಯಾಣದ ದಕ್ಷಿಣಕ್ಕಿರುವ ಸಸ್ತಾಪುರ ಗ್ರಾಮದ ಹತ್ತಿರದಲ್ಲಿ ಮುರಾರ್ಜಿ ಶಿಕ್ಷಣ ಸಂಸ್ಥೆಯಿದೆ. ಸ್ವಲ್ಪ ದೂರದಲ್ಲಿರುವ ಇಳಕಲು ಪ್ರದೇಶವನ್ನು ಬಂದವರ (ಬಾಂಧವರ) ಓಣಿ ಎನ್ನುವರು. ಕಲ್ಯಾಣಕ್ಕೆ ಬಂದಿಳಿದ ಶರಣರು ಅಲ್ಲಿಯ ಮನೆಗಳಲ್ಲಿ ಉಳಿದು ವಿಶ್ರಾಂತಿ ಪಡೆಯುತ್ತಿದ್ದರಂತೆ. ಉಡುತಡಿಯಿಂದ ಅಕ್ಕಮಹಾದೇವಿ ಕಲ್ಯಾಣಕ್ಕೆ ಬಂದು ಇಲ್ಲಿ ಇದ್ದಳಂತೆ. ಕಿನ್ನರ ಬಮ್ಮಯ್ಯನು ಅಕ್ಕನನ್ನು ಪರೀಕ್ಷಿಸಿದ ಸ್ಥಳ ಇದೆಂದು ಹೇಳುವರು.



ಅಲ್ಲಿಯ ಭೌಗೋಳಿಕ ಪರಿಸರ ಆಕರ್ಷಣೀಯ. ಚದುರಿದ ಎರಡು ದಿನ್ನೆಗಳ ಒಂದು ಮೂಲೆಯಲ್ಲಿ ಕಿರು ಆಳ ಸಂದಿ, ಮುಂದಿನ ಎಡ ಬದಿ ಇಳಿಜಾರು, ಮುಂದೆ ಇಳಿಜಾರು ವಿಸ್ತಾರಗೊಂಡಿದೆ. ಅನೇಕ ಗಿಡಮರಗಳಿಂದ ಆ ಸ್ಥಳ ಪ್ರಶಾಂತವಾಗಿದೆ. ಮೂಲೆಯ ತಳದಲ್ಲಿ ಹುಟ್ಟಿದ ಹಳ್ಳವು ಉತ್ತರಕ್ಕೆ ಹರಿದಿದೆ. ಹಳ್ಳ ಉಗಮದ ಸ್ಥಳದಲ್ಲಿ ಒಂದು ಕಿರು ಹೊಂಡವಿದೆ. ಅಲ್ಲಿ ಸದಾ ನೀರು ಇರುತ್ತದೆ. ಅದನ್ನು ಚೆನ್ನಬಸವ ತೀರ್ಥವೆಂದು ಕರೆಯುವರು. ಅದರ ಪಕ್ಕದಲ್ಲೊಂದು ಗುಹೆಯಿದೆ. ಅದರ ಕಟ್ಟೆಯ ಮೇಲೆ ಶಿವಲಿಂಗ, ಬ್ರಹ್ಮ, ವಿಷ್ಣು, ಒಬ್ಬ

ಭಕ್ತನ ವಿಗ್ರಹಗಳಿವೆ. ಅದರ ಹೆಸರು ರಾಮಲಿಂಗ ಗುಹೆ. ಅದರ ಬದಿಗೆ ಇನ್ನೆರಡು ಗುಹೆಗಳಿವೆ.

ಸ್ವಲ್ಪ ದೂರದಲ್ಲಿ ಎಡಭಾಗದ ಇಳಿಜಾರಿನಲ್ಲಿ ಒಂದು ಗುಹೆ. ಅದಕ್ಕೆ ಎರಡು ಪ್ರವೇಶಗಳು ತಲಾ ಒಂದಕ್ಕೆ ಹೊಂದಿ ಮೇಲಿನಿಂದ ಕೆಳಕ್ಕೆ ಇಳಿಜಾರು ಪ್ರವೇಶ-ಕೆಳಗಡೆ ಕೋಣೆಗಳಿವೆ. ಮಧ್ಯದ ಗೋಡೆಯಲ್ಲಿ ಅಂಡಾಕಾರದ ಪ್ರವೇಶ, ಬಲ ಕೋಣೆಯ ನೆಲ ಎಡ ಕೋಣೆಯ ನೆಲಕ್ಕಿಂತ ಸ್ವಲ್ಪ ಎತ್ತರ. ಎಡಕೋಣೆಯ ಹಿಂದಿನ ಒಂದು ಗೋಡೆಗೆ ಹೊಂದಿ ಗೂಡು. ಅಲ್ಲಿ ದೇವರ ಫೋಟೋಗಳಿವೆ. ಗುಹೆಯ ವಿನ್ಯಾಸ ಬಸವ ಕಲ್ಯಾಣದಲ್ಲಿರುವ ಗುಹೆಗಳಿಗಿಂತ ಭಿನ್ನವಾಗಿದೆ. ಹೊರಗಿನಿಂದ ಬಂದ ಶಿವಶರಣರು ಅಲ್ಲಿರುವ ತೀರ್ಥದಲ್ಲಿ ಸ್ನಾನ ಮಾಡುತ್ತಿದ್ದರೆಂದು ನಂತರ ಗುಹೆಗಳಲ್ಲಿ ವಿಶ್ರಾಂತಿ ಪಡೆಯಲು ತಂಗುತ್ತಿದ್ದರೆಂದು ಹೇಳುವರು. ಹೀಗಾಗಿ ಈ ಸ್ಥಳಕ್ಕೆ 'ಬಂದವರ ಓಣಿ' ಎಂಬ ಹೆಸರು ಬಂದಿತೆನ್ನುವರು.

ಬಾಚಯ್ಯ-ಮಧುವರಸ : ಕಲ್ಯಾಣದ ಜೈಶಂಕರ ಓಣಿಯಲ್ಲಿ ಚಾಲುಕ್ಯ ಆರನೇ ವಿಕ್ರಮಾದಿತ್ಯನ ಒಂದು ಶಾಸನವಿದೆ. ಅದರಲ್ಲಿ ಬಚ್ಚಯ್ಯ ದಂಡನಾಯಕನೆಂಬುವನು ಕಾಣುವನು. ಆತ ಶಿವಶರಣ ಬಾಚಯ್ಯನಿರಬಹುದೆ ? ನಗರದ ಕ್ರಿ.ಶ. ೧೩೨೬ರ ಒಂದುಶಾಸನದಲ್ಲಿ ಶಿವದೇವಾಲಯವೊಂದು ಮುಸ್ಲಿಂರಿಂದ ಹಾಳಾಗಿ ಅವರಿಂದಲೇ ಅದು ಜೀರ್ಣೋದ್ಧಾರಗೊಂಡು ಪುನಃ ಪೂಜೆ ಆರಂಭಿಸಿದ ವಿಷಯವಿದೆ. ಆ ದೇವಾಲಯದ ಹೆಸರು ಮಧುಕೇಶ್ವರ. ಈ ಹೆಸರು ಶಿವಶರಣ ಮಧುವರಸನದಿರ ಬಹುದೇ? ಈ ಕಾಲಮಾನದ ದೇವಾಲಯದ ಅನೇಕ ಕಂಬಗಳು ಪೀರಭಾಷಾ ಬಂಗಲೆಯಲ್ಲಿವೆ. ಅವು ಈ ದೇವಾಲಯಕ್ಕೆ ಸೇರಿದ ಕಂಬಗಳಾಗಿರಬಹುದೇ?

ಇನ್ನಿತರ ಶಿಲ್ಪಗಳು : ನಗರದಲ್ಲಿ ಇಬ್ಬರು ಯತಿಗಳು, ಒಬ್ಬ ಭಕ್ತ ಮತ್ತು ಇಬ್ಬರು ರಾಜಕುಮಾರರ ಶಿಲ್ಪಗಳಿವೆ. ಭಕ್ತ ಕೈಮುಗಿದು ಕುಳಿತಿದ್ದರೆ, ಯತಿಗಳು ಲೋಟ ಅಥವಾ ಇಷ್ಟಲಿಂಗ(?) ಹಿಡಿದು ಕುಳಿತಿದ್ದಾರೆ. ಇವರು ಗಡ್ಡಧಾರಿಗಳು. ಒಂದು ಶಿಲ್ಪದಲ್ಲಿ ರಾಜನ ತಲೆ ಮುರಿದಿದೆ. ಪೀಠದಲ್ಲಿ ವಾದ್ಯ ಮೇಳ. ಯೋಗಾಸನದಲ್ಲಿರುವ ಈತನ ಕೈಗಳಲ್ಲಿ ಇಷ್ಟಲಿಂಗ (?) ಇನ್ನೊಬ್ಬ ಕೈಮುಗಿದು ನಿಂತಿರುವನು. ಶಿಲ್ಪಗಳ ಕಾಲ ಸು. ಕ್ರಿ.ಶ. ೧೨ನೇ ಶತಮಾನ.

ನಾರಾಯಣಪುರ : ಬಸವಕಲ್ಯಾಣ ಹತ್ತಿರದ ನಾರಾಯಣಪುರದಲ್ಲಿ ಕೆಲವು ಶಿವಶರಣರ ತಾಣಗಳಿವೆ. ಅವುಗಳ ವಿವರಗಳು ಹೀಗಿವೆ :

ಬೋರಯ್ಯನ ಮಠ : ಶಿವಶರಣ ಬೋರಯ್ಯನ ಮಠಕ್ಕೆ ಕೇವಲ ಒಂದು ಕೋಣೆಯಿದೆ. ಅದರ ಒಳ ಆವರಣದ ಮಧ್ಯ ಒಂದು ಸಮಾಧಿ ಇದ್ದು ಅದನ್ನು ಬೋರಯ್ಯನ ಸಮಾಧಿ ಎನ್ನುವರು. ಮಠದ ಪ್ರವೇಶ ದ್ವಾರಕ್ಕೆ ೧೭ನೇ ಶತಮಾನದ ಬಾಗಿಲು ಚೌಕಟ್ಟದೆ. ಅದರಲ್ಲಿ ವೈಷ್ಣವ ದ್ವಾರ ಪಾಲಕರಿದ್ದಾರೆ.

ಮೃತ್ಯುಂಜಯ ಶರಣರ ಸ್ಮಾರಕ : ನಾರಾಯಣಪುರದ ಕೆರೆಯ ಹತ್ತಿರ ಮೃತ್ಯುಂಜಯ ಶರಣರ ಸ್ಮಾರಕವಿದೆ. ಈತ ಶರಣ ವೃತ್ತಿಯಲ್ಲಿ ಮೊದಲಿಗ. ಆತನ ಸ್ಮಾರಕವು ಒಂದು ಚೌಕಾದ ಕೋಣೆ. ಅದಕ್ಕೆ ಎತ್ತರದ ಅಧಿಷ್ಠಾನ, ದಕ್ಷಿಣಕ್ಕೆ ಮುಖಮಾಡಿದೆ. ಕೋಣೆಗೆ ಅರ್ಧ ವೃತ್ತಾಕಾರದ ಗುಮ್ಮಟ ಒಳ ಆವರಣದಲ್ಲಿ ಒಂದು ಸಮಾಧಿಯಿದೆ. ಮೃತ್ಯುಂಜಯ ಶರಣರದೆಂದು ಹೇಳುವರು. ಹಾಗೂ ಮುಸ್ಲಿಂರು ಈ ಸಮಾಧಿಯನ್ನು ಮೃತ್ಯುಂಜಯ ಖಾದ್ರಿ ಎಂದು ಆರಾಧಿಸುವರಂತೆ. ಈ ಸಮಾಧಿಯ ಒಂದು ಮುಖದಲ್ಲಿ



ಹಿಂದುಗಳು ಇನ್ನೊಂದು ಮುಖದಲ್ಲಿ ಮುಸ್ಲಿಂರು ಆರಾಧಿಸುವರಂತೆ. ಬೀದರ್ ಬಾದಷಾಗೆ ಮೃತ್ಯುಂಜಯ ಖಾದ್ರಿ ಎನ್ನುತ್ತಿದ್ದರಂತೆ. ಅಲ್ಲಿ ಹಿಂದುಗಳು ಕೆಂಪು ಧ್ವಜವನ್ನು, ಮುಸ್ಲಿಂರು ಹಸಿರು ಧ್ವಜವನ್ನು ಏರಿಸುವರು. ಒಂದು ಹೇಳಿಕೆಯ ಪ್ರಕಾರ ಅಲ್ಲಿ ಮುದ್ದಯ್ಯ, ಬೋರಯ್ಯ ಮತ್ತು ಮೃತ್ಯುಂಜಯ ಶರಣರು ಇದ್ದರೆನ್ನುವರು. ಅದರ ಹೊರಗಡೆ ಒಂದು ದೀಪಸ್ತಂಭವಿದೆ.

ಮುದ್ದಯ್ಯನ ಮಠ : ನಿಜಾಮನ ಆಳ್ವಿಕೆಯ ಕಾಲದಲ್ಲಿ ಕಟ್ಟಿದ ಮತ್ತೊಂದು ಸ್ಮಾರಕ ಮುದ್ದಯ್ಯ ಸ್ವಾಮಿಯದು. ಅದು ಮೃತ್ಯುಂಜಯ ಸ್ಮಾರಕದ ಬದಿಗಿದೆ. ಪೂರ್ವಕ್ಕೆ ಮುಖ ಮಾಡಿದ ಈ ಮಂದಿರದ ಕೋಣೆಯ ಒಳಗಡೆ ಒಂದು ಸಮಾಧಿ ಇದೆ.

ಕೋಣೆಯ ಒಳಗಡೆ ನಾಲ್ಕು ಮುಖಗಳಲ್ಲಿ ಕಮಾನುಗಳು. ಮುಂದೆ ತೆರೆದ ಮಂಟಪ. ಅಲ್ಲಿ ಗಣೇಶ, ವಿಷ್ಣು, ಶಿವ-ಪಾರ್ವತಿ(?) ಇತ್ಯಾದಿ ಶಿಲ್ಪಗಳಿವೆ. ಸ್ಮಾರಕವನ್ನು ನಿಜಾಮರ ಕಾಲದಲ್ಲಿ ಹಿಂದು-ಮುಸ್ಲಿಮರ ಭಿನ್ನಾಭಿಪ್ರಾಯಗಳನ್ನು ಅಳಿಸಲು ಕಟ್ಟಲಾಯಿತೆನ್ನುವರು. ಮಂದಿರದಲ್ಲಿರುವ ಒಂದು ಗವಿಯು ದಾರಿಯು ಬಸವಕಲ್ಯಾಣದಲ್ಲಿರುವ ಸದಾನಂದ ಸ್ವಾಮಿಯ ಮಠಕ್ಕೆ ಹೋಗುವದೆನ್ನುವರು. ಮಂದಿರದ ಪೂಜಾರಿ ಮಹಾರಾಷ್ಟ್ರದ ಬಾರ್ಗ್ಗ್ ಯವರು. ಅಲ್ಲಿ ಮೊದಲು ನಗರೇಶ್ವರ ದೇವಾಲಯವಿತ್ತೆಂದು ಹೇಳುವರು.

ಸಕಲೇಶ-ಮಾದರಸ ಮಂದಿರ : ಇದು ನಾರಾಯಣಪುರದ ಕೆರೆಯ ಪಶ್ಚಿಮ ದಂಡೆಯ ಮೇಲಿದೆ. ತೆರೆದ ಮಂಟಪವಿರುವ ಇದು ಪೂರ್ವಕ್ಕೆ ಮುಖಮಾಡಿದೆ. ಅಲ್ಲಿ ಎರಡು ಸಾಲುಗಳುಳ್ಳ ಕಂಬಗಳಿವೆ. ಆಂಧ್ರದ ಸಕಲೇಶ ಮಾದರಸರು ಬಸವಣ್ಣನ ದಾಸೋಹ ಮನೆಯಲ್ಲಿ ಮುಖ್ಯಸ್ಥರು. ಮಂಟಪದ ಮುಂದೆ ಬಲಬದಿಗೆ ನಾಲ್ಕು ಮುಸ್ಲಿಮರ ಸಮಾಧಿಗಳುಳ್ಳ ಕೋಣೆ. ಸಕಲೇಶ ಮಂಟಪವನ್ನು ಸಕಲೇಶ ಪೀರನೆನ್ನುವರು. ಮುಸ್ಲಿಮರು ಅಲ್ಲಿ ಹಬ್ಬ ಆಚರಿಸುವರಂತೆ! ಈತನ ಹೆಸರಿನಲ್ಲಿ ಹಿಂದೂಗಳು ಹಬ್ಬ ಆಚರಿಸುವರಂತೆ.

ಮುಗ್ಧ ಸಂಗಯ್ಯನ ಸಮಾಧಿ : ಊರಿನ 'ಚಿಕ್ಕಮಠ' ಒಳಗಡೆಯಿರುವ ಸಮಾಧಿಯು ಮುಗ್ಧ ಸಂಗಯ್ಯನದು. ಸ್ವಾಮಿಯ ವಂಶಸ್ಥರು ಈ ಮಠದಲ್ಲಿದ್ದಾರೆ. ಅಲ್ಲಿರುವ ಈಗಿನ ಸ್ವಾಮಿಗಳ ಹೆಸರು ಸಿದ್ರಾಮಯ್ಯ, ಸಂಸಾರಸ್ಥ. ಈ ಮಠದಲ್ಲಿ ಮುಗ್ಧ ಸಂಗಯ್ಯ ಸ್ವಾಮಿಯವರು ಬಳಸಿದ ಬೆತ್ತ ಮತ್ತು ವಿಭೂತಿಗಳಿವೆ. ಅವುಗಳ ಕಾಲ ಸುಮಾರು ಎಂಟು ನೂರುವರ್ಷಗಳ ಪ್ರಾಚೀನವೆನ್ನುವರು.

ಘಟ್ಟಿವಾಳಯ್ಯನ ದೇವಾಲಯ : ಈ ಗ್ರಾಮದ ಶ್ರೀಪಾಂಡುರಂಗ ಅವರ ಮನೆ ಒಳ ಆವರಣದಲ್ಲಿ ಕಿರಿದಾದ ಘಟ್ಟಿವಾಳಯ್ಯನ ದೇವಾಲಯವಿದೆ. ಘಟ್ಟಿವಾಳಯ್ಯನೊಬ್ಬ ಶಿವಶರಣ ಇವನು ವೃತ್ತಿಯಲ್ಲಿ ಮದ್ದಲಿಗ. ದೇವಾಲಯ ತಳಪಾಯದಲ್ಲಿ ಏಕಗರ್ಭಗೃಹ, ಅದರ ಭಿತ್ತಿ ಮತ್ತು ಶಿಖರ ಶಿಥಿಲಗೊಂಡಿವೆ. ನಾಲ್ಕು ಸ್ತರಗಳು ಅಧಿಷ್ಠಾನಕ್ಕಿವೆ. ಮೂರು ಸ್ತರಗಳು ಭಿತ್ತಿಗಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ಬಾಗಿಲು



ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರಿರುವರು. ಬದಿಗಳಲ್ಲಿ ಸೇವಕ ಮತ್ತು ಸೇವಕಿಯರು, ದ್ವಾರಪಾಲಕರ ಕೈಗಳಲ್ಲಿ ಡಮರು, ನಾಗ (ಅಭಯ), ತ್ರಿಶೂಲ ಮತ್ತು ಗದೆಗಳು, ಲಲಾಟ ಪಟ್ಟಿಕೆಯ ಮೂರು ಶಾಖೆಗಳಲ್ಲಿ ಮಧ್ಯ ಕುಳಿತ ಗಣೇಶ, ಉತ್ತರಾಂಗದಲ್ಲಿ ಮೂರು ಶಿಖರ ನಮೂನೆಗಳ ಸಾಲು ಬದಿಗಳಲ್ಲಿ ಸಿಂಹವ್ಯಾಳಗಳು ಇವೆ. ಶಿವಲಿಂಗದ ಎದುರಿಗೆ ಹೊರಗಡೆ ಕುಳಿತ ನಂದಿ ಇದ್ದು, ಕಾಲ ಸು.ಕ್ರಿ.ಶ. ೧೨ನೇ ಶತಮಾನ.

ಸಂಗಯ್ಯನ ಗುಹೆ (ಶಿವಪುರ) : ಬಸವಕಲ್ಯಾಣ ಬಳಿಯ ಶಿವಪುರದ ಹತ್ತಿರ ಒಂದು ಗುಹೆ ಇತ್ತು. ಅದರಲ್ಲಿಯೂ ಮುಗ್ಧ ಸಂಗಯ್ಯ ಶರಣರಿರುತ್ತಿದ್ದರಂತೆ. ಗುಹೆಯು ಬಿದ್ದು ಹೋಗಿದ್ದರಿಂದ ಅಲ್ಲಿ ಅವರ ನೆನಪಿನ ಮಂದಿರ ನಿರ್ಮಾಣ ಹಂತದಲ್ಲಿದೆ. ಬದಿಯ

ನಾರಾಯಣಪುರದ ಚಿಕ್ಕಮಠದಲ್ಲಿ ಈತನ ಸಮಾಧಿಯಿರುವುದನ್ನು ಈ ಮೇಲೆ ಹೇಳಿದೆ.


ಕೊಂಡಗುಳಿ ಕೇಶಿಮಯ್ಯ/ ಕೇಶಿರಾಜ : ಕಲ್ಯಾಣಚಾಲುಕ್ಯರ ಕಾಲದಲ್ಲೇ ಮಹತ್ವದ ಸ್ಥಾನಗಳು ಕೊಂಡಗುಳಿ ಕೇಶಿರಾಜನಿಗೆ ದೊರೆತಿದ್ದವು. ಬಸವಕಲ್ಯಾಣದ ಕ್ರಿ.ಶ. ೧೧೪೩ರ ಶಾಸನದಲ್ಲಿ ಕೇಶಿಮಯ್ಯ ದಂಡನಾಯಕ, ಕೇಶಿಮಯ್ಯ ನಾಯಕ ಎಂಬ ಎರಡು ಹೆಸರುಗಳಿವೆ. ಈ ಹೆಸರುಗಳು ಒಬ್ಬನವೇ ಅಥವಾ ಭಿನ್ನವೆ ? ಇದರಲ್ಲಿ ಯಾರು ಕೊಂಡಗುಳಿ ಕೇಶಿಮಯ್ಯ ಎಂಬುದು ತಿಳಿಯದು. ಶಿವಪುರ ಹತ್ತಿರ ಕೆರೆಯ ಮೇಲೆ ಶಿವ ಅಥವಾ ಸಿದ್ದೇಶ್ವರ ದೇವಾಲಯವಿದೆ. ಈ ದೇವಾಲಯವನ್ನು ಸಿದ್ಧರಾಮನ ನೆನಪಿಗಾಗಿ ಕಟ್ಟಲಾಗಿದೆ ಎಂದು ಹೇಳುವರು. ಹರಿಹರನು ಈ ದೇವರನ್ನು ಕೇಶಿರಾಜ ದಂಡನಾಯಕ ಪೂಜಿಸುತ್ತಿದ್ದನೆಂದು ಹೇಳಿದ್ದಾನೆ.

ಉಲ್ಲಾಳ : ಬಸವಕಲ್ಯಾಣದ ಉತ್ತರದಲ್ಲಿರುವ ಒಂದು ಕಿರುಗ್ರಾಮ ಉಲ್ಲಾಳ. ಈ ಗ್ರಾಮದ ಬೊಮ್ಮಯ್ಯ ಒಬ್ಬ ಶಿವಶರಣ. ಆತನ ವಚನಗಳನ್ನು ಸ್ಥಳಿಕರು ಇಂದಿಗೂ ಹೇಳುವರು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ತ್ರಿಪುರಾಂತಕ ಕೆರೆಯ ನಿರ್ಮಾಣವಾಯಿತು. ಐತಿಹ್ಯದಲ್ಲಿ ಈ ಕೆರೆಯು ಒಡ್ಡು ಪದೇ ಪದೇ ವಿನಾಕಾರಣ ಒಡೆಯುತ್ತಿತ್ತು. ಅದನ್ನು ತಡೆಗಟ್ಟುವುದು ದೊಡ್ಡ ಸಮಸ್ಯೆಯೇ ಆಗಿದ್ದಿತು. ಕೊನೆಗೆ ಉಲ್ಲಾಳ ಬೊಮ್ಮಯ್ಯ ಅಲ್ಲಿಗೆ ಹೋಗಿ ಮೂರು ದಿವಸಗಳವರೆಗೆ ಸೂರ್ಯನನ್ನು ಹುಟ್ಟದಂತೆ ತಡೆಯೊಡ್ಡಿ ಒಡೆದ ಕೆರೆಯನ್ನು ಕಟ್ಟಿದನೆನ್ನುವರು.

ಶರಣನ ದೇವಾಲಯ ಈ ಗ್ರಾಮದಲ್ಲಿದೆ. ಈತನು ಕೈಗಳಲ್ಲಿ ಉದ್ದವಾದ ಕೋಲನ್ನು (ಈಟಿ) ದಿಟ್ಟತನದಿಂದ ಹಿಡಿದು ನಿಂತಿರುವನು. ಈತನ ಶಿಲಾ ವಿಗ್ರಹವೊಂದು ಈ ಗ್ರಾಮದ ಉತ್ತರದಲ್ಲಿ ಸುಮಾರು ೨ ಕಿ.ಮೀ ದೂರದಲ್ಲಿದೆ. ಈತನ ಹೆಸರಿನ ದತ್ತಿ ಭೂಮಿಯೂ ಅಲ್ಲಿದೆ.

ಬೇಲೂರು: ಶರಣರ ತಾಣ : ಬೇಲೂರು ಬಸವಕಲ್ಯಾಣದ ಉತ್ತರಕ್ಕೆ ಸುಮಾರು ೨ ಕಿ.ಮೀ ಅಂತರದಲ್ಲಿದೆ. ಪಶ್ಚಿಮಕ್ಕೆ ಒಂದು ಗುಹೆ ಇದ್ದು ಅದೊಂದು ಶಿವಶರಣರ ನೆಲೆ. ಸ್ಥಳೀಯ ಐತಿಹ್ಯದ ಪ್ರಕಾರ ಈ ಸ್ಥಳವು ಬಸವಣ್ಣನವರಿಗೆ ಶಾಂತಿ ಧಾಮವಾಗಿತ್ತು. ಅಲ್ಲಿ ಸಾವಿರಾರು ಜಂಗಮರಿಗೆ ಬಸವಣ್ಣ ದಾಸೋಹ ನಡೆಸುತ್ತಿದ್ದರು. ದಾಸೋಹ ಮುಗಿದ ಬಳಿಕ ಊಟ ಮಾಡಿದ ಮಣ್ಣಿನ ತಾಟುಗಳನ್ನು ಬದಿಯಲ್ಲೇ ಎಸೆಯುತ್ತಿದ್ದರು. ಹೀಗಾಗಿ ಅಲ್ಲಿಯ ಹೊಲದಲ್ಲಿ ಮಣ್ಣಿನ ಪಾತ್ರೆಗಳು ಹೇರಳವಾಗಿ ಬಿದ್ದಿವೆ ಅವುಗಳು ಮಧ್ಯಕಾಲೀನದ ಜನವಸತಿಯ ಗಡಿಗೆಗಳಾಗಿವೆ (ಸು.ಕ್ರಿ.ಶ.೧೧-೧೬ನೇ ಶತಮಾನ).

ಮೋಳ್ಕೆರದ ಮೋಳಿಗೆ ಮಾರಯ್ಯನ ಗುಹೆ : ಮೋಳಿಗೆ ಮಾರಯ್ಯ ಒಬ್ಬ ಶಿವಶರಣ. ಈತನು ಕಾಶ್ಮೀರದ ಸಫಾದ ಲಕ್ಷದ ದೊರೆ. ಆತನು ರಾಜಧಾನಿಯಾಗಿದ್ದ ಮಾಂಡವ್ಯಪುರದ ಮಹಾದೇವ ಭೂಪಾಲ. ಈತ ಅಡವಿಯಲ್ಲಿ ಕಟ್ಟಿಗೆಯನ್ನು ಕೂಡಿಸಿ ಮಾರುತ್ತಿದ್ದ. ಈತನ ಪತ್ನಿ ಗಂಗಮ್ಮ. ಪತಿಯ ಕಾಯಕದಲ್ಲಿ ಸಹಭಾಗಿನಿ. ಜಂಗಮ





ದಾಸೋಹಿ. ಈತನ ಜಾತ್ರೆ ಪ್ರತಿವರ್ಷ ಈ ಗ್ರಾಮದಲ್ಲಿ ವಿಜೃಂಭಣೆಯಿಂದ ನಡೆಯುವುದು. ಬಸವಕಲ್ಯಾಣ ತಾಲೂಕಿನ ಪೂರ್ವ ಅಂಚಿನಲ್ಲಿ ಮತ್ತು ಹುಮನಾಬಾದ್ ತಾಲೂಕಿನ ಪಶ್ಚಿಮದ ಅಂಚಿನಲ್ಲಿರುವ ಕಿರುಗ್ರಾಮವೇ ಮೋಳ್ಕೆರ. ಗ್ರಾಮದ ಪಶ್ಚಿಮಕ್ಕೆ ಒಂದು ಭವ್ಯವಾದ ಆಲದ ಮರದ ಹತ್ತಿರ ನೆಲಮಟ್ಟದಿಂದ ಕೆಳಗಡೆ ಒಂದು ವಿಸ್ತಾರವಾದ ಗುಹೆಯನ್ನು ಕೊರೆಯಲಾಗಿದೆ. ಅಲ್ಲಿಯ ಗುಹಾಲಯಗಳಲ್ಲೇ ಇದು ನೂತನವಾಗಿದೆ.

ತಳಪಾಯದಲ್ಲಿ ಒಂದು ಗರ್ಭಗೃಹ (೨.೧೦ x ೨.೦೦ ಮೀ). ಅದಕ್ಕೊಂದು ಪ್ರವೇಶ ದ್ವಾರ (ಮುಕ್ಕಾಲು ಮೀಟರ್). ತೆರೆದ ಅರ್ಧಮಂಟಪ ಮತ್ತು ವಿಶಾಲ ಆಯತಾಕಾರದ ಸಭಾಮಂಟಪ. ಸ್ತಂಭಗಳುಳ್ಳ ಈ ಮಂಟಪದ ಮುಂಭಾಗದ ಅಂಕಣದ ಛತ್ತು ತೆರೆದಿದೆ. ಗವಿಯ ಒಳ ಆವರಣದ ಎತ್ತರ ಸುಮಾರು ಎರಡು ಮೀಟರ್. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಮುಖದಲ್ಲಿ ಬ್ರಹ್ಮಸೂತ್ರ. ಅರ್ಧಮಂಟಪದ ಮುಂದಿನ ಅಂಚಿನಲ್ಲಿ ಅರೆಗಂಬಗಳಿವೆ. ಮುಂದೆ ವಿಶಾಲ ಮಂಟಪದ ಪೂರ್ವ-ಪಶ್ಚಿಮಾಭಿಮುಖವಾಗಿ ಎರಡು ಸಾಲಿನಲ್ಲಿ ಎಂಟು ಕಂಬಗಳಿವೆ. ಕಂಬಗಳು ಚೌಕಾಕಾರವಾಗಿವೆ. ತಲಾ ಒಂದಕ್ಕೆ ಪೀಠಗಳಿವೆ. ತಲಾ ಒಂದು ಸಾಲಿನಲ್ಲಿ ನಾಲ್ಕು ಕಂಬಗಳಿವೆ. ಆ ಸ್ತಂಭ ಮಂಟಪದ ಮಧ್ಯ ಗರ್ಭಗುಡಿಗೆ ಎದುರಾಗಿ ನಂದಿ ಪೀಠವಿದೆ. ಈ ಮಂಟಪದ ಸ್ತಂಭಗಳಿಗೆ ಸಮಾಂತರವಾಗಿ ಬದಿಗಿನ ಗೋಡೆಗಳಲ್ಲಿ ಸಾಲಾಗಿ ಅರೆಗಂಬಗಳಿವೆ. ಅವುಗಳು ಅರ್ಧ ಮಂಟಪ ಮತ್ತು ಸ್ತಂಭಮಂಟಪಗಳ ಮುಂದೆಯೂ


ಇವೆ. ಗೋಡೆಗಳಲ್ಲೂ ಅರೆಗಂಬಗಳ ಬದಿ ಹಿಂಚಾಚುಗಳಿವೆ. ಕಂಬ- ಅರೆಗಂಬಗಳು ಈ ಮಂಟಪದ ಛತ್ತನ್ನು ಹೊತ್ತು ಹಿಡಿಯಲು ಸಹಾಯಕವಾಗಿವೆ. ಈ ಮಂಟಪಕ್ಕೆ ಪ್ರವೇಶವು ಪೂರ್ವ ಗೋಡೆಯ ಮಧ್ಯ ಭಾಗದಲ್ಲಿ ಮೇಲಿಂದ ಕೆಳಗಿಳಿಯಲು ಹತ್ತು ಮೆಟ್ಟಿಲುಗಳನ್ನು ಕೊರೆಯಲಾಗಿದೆ. ಆದರೆ ನಂದಿ ಮಂಟಪದ ದಕ್ಷಿಣ ಗೋಡೆಯಲ್ಲಿ ಒಂದು ಕಿರಿದಾದ ಪ್ರವೇಶವನ್ನು ಕೊರೆಯಲಾಗಿದೆ. ಈ ಪ್ರವೇಶದ ಅಗಲ ೧.೭೫ಮೀ. ಬಲಗೋಡೆಯಲ್ಲಿ ಒಂದು ಗೂಡಿದೆ. ಎಡಗೋಡೆಗೆ ಹೊಂದಿ ಒಂದು ಕೋಣೆಯುಳ್ಳ ಗವಿಯನ್ನು ಕೊರೆಯಲಾಗಿದೆ. ಆ ಗುಹೆಯ ಅಗಲ ಸುಮಾರು ಎರಡು ಮೀಟರ್. ಅದು ಅಲ್ಲಿಯ ನೆಲಮಟ್ಟದಿಂದ ಕೆಳಗಡೆಯಿದೆ. ಮುಂದೆ ದಕ್ಷಿಣಕ್ಕೆ ದಾರಿ ಬದಿಗಿನ ಗೋಡೆಗಳಿಗೆ ಹೊಂದಿ ಅರೆಗಂಬಗಳಿವೆ. ದಾರಿಯ ಛತ್ತು ತೆರೆದಿದೆ. ಅಲ್ಲಿಯ ಬಲಗೋಡೆಯಲ್ಲಿ ಎರಡು ತೆರೆದ ಕಮಾನುಳ್ಳ ಕೋಣೆಗಳು ಒಂದೇ ಸಾಲಿನಲ್ಲಿವೆ. ತಲಾ ಒಂದರ ಹಿಂದಿನ ಗೋಡೆಯಲ್ಲಿ ದೀಪದ ಗೂಡುಗಳಿವೆ. ಮೊದಲ ಕೋಣೆಯನ್ನು ಅನುಷ್ಠಾನ ಗೃಹವೆನ್ನುವರು. ಇನ್ನೊಂದು ಕೋಣೆಯನ್ನು ಅಡುಗೆ ಮನೆ ಎನ್ನುವರು. ಈ ಎರಡರ ಮಧ್ಯ ಗೋಡೆಯಲ್ಲಿ ಒಂದು ಕಿರಿದಾದ ಗೂಡಿದೆ. ಅದರಲ್ಲಿ ನಾಗ ವಿಗ್ರಹವಿದೆ. ಅದರ ಒಂದು ಭಾಗದಲ್ಲಿ ಬಚ್ಚಲಿದೆ. ಪ್ರವೇಶದ ದಕ್ಷಿಣದ ಗೋಡೆಯ ಗೂಡಿನಲ್ಲಿ ಮಾರುತಿ ವಿಗ್ರಹವಿದೆ. ಎಡಗೋಡೆಯಲ್ಲಿ ಆಯತಾಕಾರದ ತೆರೆದ ಮಂಟಪವಿದೆ. ಈ ಗೋಡೆಯ ಅಂಚಿನಲ್ಲಿ ಚೌಕಾಕಾರದ ಕಟ್ಟೆಯಿದೆ. ಕೋಣೆಯ ಎಡಗೋಡೆಯ ಪಕ್ಕದಲ್ಲಿ ಒಂದು ಬಾವಿ, ಅದಕ್ಕೆ ಛತ್ತಿಲ್ಲ. ಗುಹೆಯಲ್ಲಿ ಅಡುಗೆ ಮನೆ, ಬಚ್ಚಲು, ಬಾವಿ ಮತ್ತು ಅನುಷ್ಠಾನಕ್ಕಾಗಿ ಕೋಣೆಗಳಿರುವುದು ಗಮನೀಯ. ಅದು ಸುಮಾರು ಐದುನೂರು ವರ್ಷ ಪ್ರಾಚೀನದ್ದಾಗಿದೆ. (ಕ್ರಿ.ಶ. ೧೫-೧೬ನೇ ಶತಮಾನ) ಆಧುನಿಕ ದೇವಾಲಯ ಆ ಗವಿಯ ಮೇಲಿದೆ.

ತೆಲಗು ಜೊಮ್ಮಯ್ಯನ ಪವಾಡ : ಶಿವಭಕ್ತ ತೆಲಗು ಜೊಮ್ಮಯ್ಯನು ಕಲ್ಯಾಣ ಚಾಲುಕ್ಯ ಪೆರ್ಮಾಡಿರಾಯನಲ್ಲಿ ಒಬ್ಬ ಸಾಮಂತ. ಪೆರ್ಮಾಡಿರಾಯನ ರಾಣಿ ಲಕುಮಾದೇವಿ ಆತನ ಪರಮಶಿವಭಕ್ತೆ. ಶಿವಪೂಜೆಗಾಗಿ ತೆಲುಗುಜೊಮ್ಮಣ್ಣನಿಗೆ ಪ್ರತಿದಿನ ವಸ್ತ್ರ, ಧೂಪ, ಕಸ್ತೂರಿ, ಹೂವು ಮುಂತಾದ ಪೂಜಾ ವಸ್ತುಗಳನ್ನು ಕಳಿಸುತ್ತಿದ್ದಳು. ಒಮ್ಮೆ ಜೊಮ್ಮಣ್ಣ ಅರಮನೆಗೆ ಬಂದಾಗ ಅಲ್ಲಿ ಅರಸ ವಿಷ್ಣು ಪೂಜೆಯಲ್ಲಿ ತಲ್ಲೀನನಾಗಿದ್ದ, ಮತ್ತೊಂದೆಡೆಗೆ ಬ್ರಾಹ್ಮಣನೊಬ್ಬ ವಿಷ್ಣು ಪುರಾಣ ಓದುತ್ತ ಶಿವನಿಂದೆ ಮಾಡುತ್ತಿದ್ದ. ಶಿವನಿಂದೆಯನ್ನು ಕೇಳಿ ಜೊಮ್ಮಯ್ಯ ಕೋಪಗೊಂಡು ಆ ಬ್ರಾಹ್ಮಣನನ್ನು ಕೊಂದನು. ಆಗ ಪೆರ್ಮಾಡಿ ಪೂಜಿಸುತ್ತಿದ್ದ ವಿಷ್ಣು ವಿಗ್ರಹ ಕಣ್ಣೀರಿಟ್ಟಿತು. ಅರಸ ಜೊಮ್ಮಯ್ಯನನ್ನು ಆಸ್ಥಾನಕ್ಕೆ ಕರೆಸಿದ. ಈ ವಿಷಯ ತಿಳಿದ ಅರಸನ ರಾಣಿ ಲಕುಮಾದೇವಿ ಕಳವಳಗೊಂಡಳು. ಆಸ್ಥಾನಕ್ಕೆ ಬಂದ

ಜೊಮ್ಮಯ್ಯ ಭವಿಯಾದ ಚಕ್ರವರ್ತಿಗೆ ನಮಸ್ಕಾರ ಹೇಳದಿದ್ದರೆ ರಾಜನ ಸಿಟ್ಟಿಗೆ ಅವನು ಬಲಿಯಾಗಬಹುದೆಂದು ಅರಿತಳು. ಅದಕ್ಕೆ ಆಕೆಯು ತನ್ನ ಇಷ್ಟಲಿಂಗವನ್ನು ಸಿಂಗರಿಸಿಕೊಂಡು ಅರಸನಿಗೆ ತಿಳಿಯದಂತೆ ಆಕೆ ಅವನ ಸಿಂಹಾಸನದ ಹಿಂದೆ ಅದನ್ನು ಹಿಡಿದಳು. ಆಗ ಜೊಮ್ಮಯ್ಯ ಆಸ್ಥಾನದ ಒಳಗಡೆ ಪ್ರವೇಶಿಸಿದ. ರಾಜನ ಹಿಂದೆ ಇದ್ದ ಇಷ್ಟಲಿಂಗವು ಅವನಿಗೆ ಕಾಣಿಸಿತು. ಅದಕ್ಕೆ ನಮಸ್ಕರಿಸಿದ. ರಾಜನು ಭವಿ ಎಂದು ಇಷ್ಟಲಿಂಗಕ್ಕೆ ಮಗ್ಗಲಿಗೆ ಸರಿಯಬೇಕೆಂದು ಇಷ್ಟಲಿಂಗಕ್ಕೆ ಸೂಚಿಸಿದ. ಇಷ್ಟಲಿಂಗ ಬದಿಗೆ ಸರಿಯುವುದನ್ನು ಅರಸ ನೋಡಿ ಆಶ್ಚರ್ಯಪಟ್ಟ. ನಂತರ ಪುರಾಣಭಟ್ಟನನ್ನು ಕೊಲ್ಲಲು ಕಾರಣವೇನೆಂದು ಜೊಮ್ಮಯ್ಯನನ್ನು ವಿಚಾರಿಸಿದ. ಜೊಮ್ಮಯ್ಯನು, ಪುರಾಣ ಭಟ್ಟ ಸುಳ್ಳು ಹೇಳಿ ಶಿವನಿಂದೆ ಮಾಡಿದ ಅದಕ್ಕೆ ಅವನನ್ನು ಕೊಲ್ಲಬೇಕಾಯಿತೆಂದು ಉತ್ತರಿಸಿದ. ಅಲ್ಲಿದ್ದ ಆ ಭಟ್ಟನ ಹೆಣಕ್ಕೆ ಹೊಚ್ಚಿದ್ದ ಮುಸುಕನ್ನು ಜೊಮ್ಮಯ್ಯನು ತೆಗೆದಾಗ ಅಲ್ಲಿ ಹುಳದ ರಾಶಿ ಕಾಣಿಸಿತು. ಇದನ್ನು ಗಮನಿಸಿದ ರಾಜ ಪೆರ್ಮಾಡಿ ಜೊಮ್ಮಯ್ಯನಿಗೆ ನಮಸ್ಕರಿಸಿದ. ತದನಂತರ ಜೊಮ್ಮಯ್ಯನನ್ನು ಪದ್ಮಾಸನದಲ್ಲಿ ಕೂಡಿಸಿ ಇಚ್ಛಾಸಿರ ಹೊನ್ನುಗಳನ್ನು ಆದನಿಗೆ ಪಾದಕಾಣಿಕೆಯಾಗಿ ನೀಡಿ ಗೌರವಿಸಿದ. ನಂತರ ರಾಣಿ ಲಕುಮಾದೇವಿಯು ನೀಡಿ ವಸ್ತ್ರಾಭರಣಗಳನ್ನು ಧರಿಸಿಕೊಂಡು ಬಂದು ಅರಸನ ತಾನು ಮಾಡಿದ ತಪ್ಪನ್ನು ಕ್ಷಮಿಸಬೇಕೆಂದು ಕೋರಿ. ಮುಂದೆ ಕಲ್ಯಾಣ ಹತ್ತಿರದಲ್ಲಿ ಶಿವಪುರವನ್ನು ಮಾಡಿಸಿಕೊಟ್ಟನು. ತದನಂತರದಲ್ಲಿ ಕೊಂಡಗುಳಿ ಕೇಶಿರಾಜನು ಬಂದಾಗ ಜೊಮ್ಮಯ್ಯ ಆತನ ಎದುರು ಕೆಲವು ಪವಾಡಗಳನ್ನು ತೋರಿಸದನೆನ್ನಲಾಗಿದೆ.

ವೀರಶೈವ ಮಠಗಳು : ಈ ಪ್ರದೇಶದ ಪ್ರತಿಯೊಂದು ಗ್ರಾಮಗಳಲ್ಲಿ ಒಂದಕ್ಕಿಂತ ಹೆಚ್ಚು ವೀರಶೈವರ ಮಠಗಳಿವೆ. ಕಲ್ಯಾಣದಲ್ಲೇ ೧೦೧ ಮಠಗಳಿದ್ದವೆನ್ನುವರು. ಆದರೆ ಈಗ ಮಾತ್ರ ಹದಿನೈದು ಮಠಗಳು ಉಳಿದಿವೆ. ಅವುಗಳು ಹೆಚ್ಚಾಗಿ ಸಂಸಾರಿಕ ಮಠಗಳಾಗಿವೆ. ನಗರದ ವೀರಶೈವ ಮಠಗಳ ಬಗ್ಗೆಯೇ ಪ್ರತ್ಯೇಕ ಅಧ್ಯಯನ ನಡೆಯಬೇಕಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಕಟ್ಟಿಗಿಮಠ, ಗಚ್ಚಿನಮಠ, ಹುಲುಕುಂಟಿ ಮಠ, ಗುಂಡಯ್ಯನ ಮಠ, ಚೌಕಿಮಠ, ರಾಚಯ್ಯನ ಮಠ ಇತ್ಯಾದಿ ಕಾಣುತ್ತವೆ. ಅಲ್ಲಿಯ ಅನೇಕ ವೀರಶೈವ ಮಠಗಳು ಪಂಚಾಚಾರ್ಯರ ಪೀಠಗಳಿಗೆ ಸೇರಿವೆ.

ಬಸವಕಲ್ಯಾಣ ನಗರದ ಶಿವ-ಶರಣರ ಇತ್ಯಾದಿ ತಾಣಗಳ ನಕ್ಷೆ



೧. ಕೋಟೆ
೨. ಪರುಷಕಟ್ಟೆ
೩. ಬಸವೇಶ್ವರ ದೇವಾಲಯ
೪. ಪೀರಸಾಹೇಬ ದರ್ಗಾ
೫. ಪ್ರವಾಸಿ ಮಂದಿರ
೬. ರಾಜಬಾಗ್ ಸವರ್ ದರ್ಗಾ
೭. ನಿರೀಕ್ಷಣಾ ಗೃಹ
೮. ಕಂಬಳಿ ಮಠ
೯. ಬಸವ ಭವನ
೧೦. ಸದಾನಂದ ಮಠ
೧೧. ಎಸ್. ಎಸ್. ಕೆ. ಬಿ. ಮಹಾವಿದ್ಯಾಲಯ
೧೨. ಬಸವ ವನ
೧೩. ಜಾತ್ರಾ ಮೈದಾನ
೧೪. ಪ್ರಭುದೇವ ಗದ್ದುಗೆ
೧೫. ಮಡಿವಾಳ ಮಾಚಯ್ಯ ಮಂದಿರ
೧೬. ಶಿವಪುರ
೧೭. ನಾರಾಯಣಪುರ
೧೮. ಅಕ್ಕನಾಗಮ್ಮನ ಗವಿ
೧೯. ಅರಿವಿನ ಮನೆ
೨೦. ತ್ರಿಪುರಾಂತಕೇಶ್ವರ ದೇವಾಲಯ
೨೧. ಧರ್ಮಶಾಲಾ
೨೨. ತ್ರಿಪ್ಪಾಂತ
೨೩. ತ್ರಿಪ್ಪಾಂತ ಕೆರೆ
೨೪. ರುದ್ರಮುನಿ ಮತ್ತು ವಿಜ್ಞಾನೇಶ್ವರ ಗವಿಗಳು
೨೫. ನೂತನ ಅನುಭವ ಮಂಟಪ
೨೬. ಪಂಚಸೂತ್ರ ಗವಿ
೨೭. ನೂಲಿ ಚಂದಯ್ಯನ ಗವಿ
೨೮. ಬಂದವರ ಓಣಿ

೯. ಜೈನ ಬಸದಿ-ಶಿಲ್ಪಗಳು

ಜೈನ ಧರ್ಮ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹೆಚ್ಚು ಖ್ಯಾತಿಯನ್ನು ಗಳಿಸಿತ್ತು. ಆ ಅರಸುಮನೆತನದ ಹಲವಾರು ಅರಸರು, ರಾಣಿಯರು, ಅಧಿಕಾರಿಗಳು ಈ ಧರ್ಮದ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆ. ಅವರ ಹಲವಾರು ಶಾಸನಗಳಲ್ಲಿ ಚಾಲುಕ್ಯರು ಜೀರ್ಣೋದ್ಧಾರಗೊಳಿಸಿದ ಬಸದಿ ಮತ್ತು ನಿಲ್ಲಿಸಿದ ಜಿನ ವಿಗ್ರಹ. ಮಾನಸ್ಥಂಭ, ನಿಷಧಿ ಇತ್ಯಾದಿ ಉಲ್ಲೇಖಗಳಿವೆ. ಕ್ರಿ.ಶ. ೧೨ನೇ ಶತಮಾನದ ಮಧ್ಯದವರೆಗೆ ಈ ಧರ್ಮವು ಬಸವಕಲ್ಯಾಣದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತು.

ಸು.ಕ್ರಿ.ಶ. ೨ನೇ ಶತಮಾನದಲ್ಲಿ ಕಲ್ಯಾಣದಲ್ಲಿ ಜೈನ ಯಾಪನೀಯ ಸಂಘವಿದ್ದಿತ್ತು. ಬಸವಕಲ್ಯಾಣದಲ್ಲಿ ಒಂದು ಚಂದ್ರಪ್ರಭ ಬಸದಿ ಇದ್ದಿತು. ಇದನ್ನು ಚಂದ್ರ ಪ್ರಭೇಂದ್ರಾಲಯ ಎಂದೂ ಕರೆಯಲಾಗಿದೆ. ಈ ಬಸದಿಯನ್ನು ಮೊದಲು ದಾನ ಚಿನ್ತಾಮಣಿ (ಲಕ್ಕುಂಡಿಯ) ಅತ್ತಿಮಬ್ಬೆ ಅದನ್ನು ಜೀರ್ಣೋದ್ಧಾರ ಮಾಡಿದಳು. ನಂತರ ಚಾಲುಕ್ಯ ದೊರೆ ೬ನೇ ವಿಕ್ರಮಾದಿತ್ಯ ಕ್ರಿ.ಶ. ೧೧೦೭ರಲ್ಲಿ ಜೀರ್ಣೋದ್ಧಾರ ಮಾಡಿದ. ಈ ಕಾರ್ಯಕ್ಕೆ ರವಿಯಣ, ಈಶ್ವರ ಸೆಟ್ಟಿ, ರಚ್ಚಮಲ್ಲ ಪೆರ್ಮಾಡಿ, ರವಿಯಣರು ನೆರವಾದರು. ಬಸದಿಯ ಮುಂದೆ ಮಾನಸ್ಥಂಭವನ್ನು ಈಶ್ವರ ಸೆಟ್ಟಿ ನೆಡಿಸಿದನು. ಜಕ್ಕಣಬ್ಬೆ ಎಂಬ ಮಹಿಳೆಯು ಅಲ್ಲಿ ಅನ್ನದಾನ ಏರ್ಪಾಡು ಮಾಡಿಸಿದಳು. ಹೀರಪ ಮತ್ತು ವೈಜಪರೆಂಬುವರು ಸಹಸ್ರ ಕೂಟ ಮಾಡಿಸಿದರೆಂದು ಆ ಶಾಸನ ತಿಳಿಸುತ್ತದೆ. ಆದರೆ, ಈ ಚಂದ್ರಪ್ರಭ ಬಸದಿ ಬಸವಕಲ್ಯಾಣ ನಗರದಲ್ಲಿ ಎಲ್ಲಿದ್ದಿತು ಎಂಬುದನ್ನು ಹುಡುಕಬೇಕಾಗಿದೆ.

ಚಾಲುಕ್ಯ ದೊರೆ ೬ನೇ ವಿಕ್ರಮಾದಿತ್ಯನ ೨೫ ರಾಣಿಯರಲ್ಲಿ ಒಬ್ಬಳಾದ ಜಾಕಲದೇವಿಗೆ ಒಬ್ಬ ಒಡ್ಡ ವ್ಯವಹಾರಿ ತಂದ ಮಾಣಿಕ್ಯದಂತಹ ಜಿನ ವಿಗ್ರಹವನ್ನು ಕಲ್ಯಾಣದಲ್ಲಿ ಖರೀದಿಸಿದಳು. ಅದನ್ನು ಆಕೆಯು ಆಳುತ್ತಿದ್ದ ಅರಳ- ೩೦೦ರ ಇಂಗಳಗಿಯಲ್ಲಿ ಕ್ರಿ.ಶ. ೧೦೯೪ರಲ್ಲಿ ಒಂದು ಜಿನ ಗೃಹವನ್ನು ನಿರ್ಮಿಸಿ ಅಲ್ಲಿ ಪ್ರತಿಷ್ಠಾಪಿಸಿದಳೆಂದು ಅಲ್ಲಿಯ ಶಾಸನ ಉಲ್ಲೇಖಿಸುತ್ತದೆ.

ಬೀದರ ಜಿಲ್ಲೆಯಲ್ಲಿ ಗೋರಟ, ಮಿರಕಲ್. ಬಸವಕಲ್ಯಾಣ, (ಬಸವಕಲ್ಯಾಣ ತಾಲೂಕ); ಬರೂರ (ಬೀದರ ತಾ.); ಭಾಲ್ಕಿ (ತಾ) ಗ್ರಾಮಗಳು ಜೈನಧರ್ಮದ ಮುಖ್ಯ ಕೇಂದ್ರಗಳಾಗಿದ್ದವು. ಕ್ರಿ.ಶ. ೧೧ನೇ ಶತಮಾನದಲ್ಲಿ ಭಾಲ್ಕಿಯಲ್ಲಿ ಒಂದು ಬ್ರಹ್ಮ ಜಿನಾಲಯವಿದ್ದಿತು. ಬ್ರಹ್ಮ ಜಿನಾಲಯಗಳು ವಿರಳ. ಅವು ನೆರೆಯ ಗುಲಬರ್ಗಾ

ಜಿಲ್ಲೆಯ ಸೇಡಂನಲ್ಲಿ ಮತ್ತು ಧಾರವಾಡ ಜಿಲ್ಲೆಯ ಲಕ್ಕುಂಡಿಯಲ್ಲಿದ್ದವು. ಲಕ್ಕುಂಡಿಯ ಒಂದು ಶಾಸನದಲ್ಲಿ ಅತ್ತಿಮಬ್ಬೆಯು ಹದಿನೈದು ನೂರು ಜೈನ ಬಸದಿಗಳನ್ನು ಕಟ್ಟಿಸಿದಳೆನ್ನಲಾಗಿದೆ. ಅವುಗಳಲ್ಲಿ ಬಸವಕಲ್ಯಾಣದ ಚಂದ್ರಪ್ರಭ ಬಸದಿ ಒಂದು ಎನ್ನಲಾಗಿದೆ. ಆದರೆ ಈ ಬಸದಿಯನ್ನು ಈಕೆಯು ಜೀರ್ಣೋದ್ಧಾರ ಗೊಳಿಸಿದಳೆಂದು ಹೇಳಿರುವುದರಿಂದ ಈ ಬಸದಿಯು ಅವಳ ಕಾಲ ಪೂರ್ವದ್ದೆಂದು ತಿಳಿಯುವುದು. ಕೆಲವು ಜೈನ ಶಿಲ್ಪಗಳು ಅಲ್ಲಿಯ ಜೈಶಂಕರ ಕಾಲೋನಿಯಲ್ಲಿ ಭೂಮಿಯನ್ನು ಅಗೆಯುವಾಗ ಬೆಳಕಿಗೆ ಬಂದಿವೆ. ಇನ್ನು ಕೆಲವು ಸ್ಥಳಗಳಲ್ಲಿ ಜೈನ ಶಿಲ್ಪಗಳು ಮಾತ್ರ ಹರಡಿರುವುದು ಗಮನೀಯ.

ಜೈನ ಬಸದಿಯ ಸ್ತಂಭತೋರಣ ಫಲಕ : ಜೈನ ಬಸದಿಯ ಸ್ತಂಭತೋರಣ ಫಲಕವೊಂದು ನಗರದ ಕೋಟೆಯಲ್ಲಿದೆ. ಇದರಲ್ಲಿ ಚಿಕಣಿ ಆಕಾರದ ಹನ್ನೆರಡು ಜಿನ ವಿಗ್ರಹಗಳು, ಮಕರಗಳು, ಕೀರ್ತಿ ಮುಖಗಳು, ಹೂಬಳ್ಳಿ ಅಲಂಕಾರಗಳು ಮತ್ತು ವಿಮಾನ



ಮಾದರಿಗಳು ಇವೆ. ಈ ಫಲಕ ತ್ರಿಕೋನಾಕೃತಿಯಲ್ಲಿದೆ. ಫಲಕದಲ್ಲಿ ಮೇಲಿನ ಮೂರು ಮೂಲೆ ಗಳಲ್ಲಿ ವಿಮಾನ ಮಾದರಿ ಗಳು ಅರೆಗಂಬಗಳ ಮೇಲಿವೆ. ಕೆಳಗಿನ ಮೂಲೆಗಳಲ್ಲಿ ವಿಮಾನ ಹಾಗೂ ಪದ್ಮಾಸನ-ಯೋಗ ಮುದ್ರೆಯಲ್ಲಿರುವ ಪಾರ್ಶ್ವನಾಥ ಕುಳಿತಿದ್ದಾನೆ. ಅವನಿಗೆ ಏಳು ಹೆಡೆಗಳುಳ್ಳ ನಾಗ ಸರ್ಪ ತಲೆಗೆ ನೆರಳು ಮಾಡಿದೆ. ಆದರೆ, ಮೇಲಿನ ಮೂಲೆಯ ಭಾಗದಲ್ಲಿ ವಿಮಾನ ಮಾದರಿಯಲ್ಲಿ ತೀರ್ಥಂಕರರು ಪದ್ಮಾಸನ ಯೋಗ ಮುದ್ರೆಯಲ್ಲಿ ಕುಳಿತಿರುವನು. ಕೆಳಗಿನ ವಿಮಾನಗಳ ಬದಿಗಳಲ್ಲಿ ಮಕರಗಳಿವೆ. ಆ ಎರಡರ ಮಧ್ಯ ಸಾಲಾಗಿ ಪದ್ಮ ಪೀಠಗಳ ಮೇಲೆ ಮೂವರು ತೀರ್ಥಂಕರರು ಪದ್ಮಾಸನ ಮತ್ತು ಯೋಗಮುದ್ರೆಯಲ್ಲಿ ಕುಳಿತಿರುವರು. ಆ ಸಾಲಿನ ಕೆಳಗೆ ಮೂರು ಶಿಖರ ನಮೂನೆಗಳಿವೆ. ಮತ್ತು ಮೂಲೆಗಳಲ್ಲಿರುವ ವಿಮಾನಗಳ ಬದಿಗಳಲ್ಲಿ ಮಕರದ ಮುಂದೆ ಪದ್ಮ ನಿಧಿ ಮತ್ತು ಶಂಖ ನಿಧಿಗಳಿದ್ದಾರೆ. ಆ ಸಾಲಿನ ಮೇಲೆ ಮೂವರು ತೀರ್ಥಂಕರರು ಸಾಲಾಗಿ ಕುಳಿತಿರುವರು. ಬದಿಗಳಲ್ಲಿ ಮತ್ತು ಮೇಲ್ಗಡೆ ಮೂರು ಕೀರ್ತಿ ಮುಖಗಳಿವೆ. ಒಂದೇ ಸಾಲಿನಲ್ಲಿರುವ ಎರಡು ಕೀರ್ತಿ ಮುಖಗಳ ಬದಿಗೆ ಪದ್ಮಾಸನ ಮತ್ತು ಯೋಗ ಮುದ್ರೆಯಲ್ಲಿ ಕುಳಿತ ತೀರ್ಥಂಕರರಿದ್ದಾರೆ. ಅವರ ಮೇಲೆ ಕೀರ್ತಿ ಮುಖಗಳಿವೆ. ಕೆಳಗಡೆಯ ಮೂಲೆಗಳಲ್ಲಿರುವ ಮಕರಗಳ ಬಾಯಿಂದ ಹೂಬಳ್ಳಿ ಮೇಲ್ಗಡೆಗೆ

ಹೊರಬಂದಿರುವ ಅಲಂಕಾರವಿದೆ. ಅವುಗಳ ತುದಿಗಳು ದುಂಡಾಗಿವೆ. ಆ ಎರಡು ದುಂಡಾಕೃತಿಯಲ್ಲಿ ತೀರ್ಥಂಕರ ಚಿತ್ರಗಳಿವೆ. ಮೇಲಿನ ಭಾಗದಲ್ಲಿ ವಿಮಾನಗಳಿವೆ. ಬದಿಯಲ್ಲಿ ಮಕರಗಳಿವೆ. ಅವುಗಳ ಬಾಯಿಂದ ಬಳ್ಳಿ ಹೊರಬಂದಿದ್ದು ಅದನ್ನು ಅರ್ಧವೃತ್ತಾಕಾರದಲ್ಲಿ ವಿಮಾನದ ಸುತ್ತಲೂ ತೋರಿಸಲಾಗಿದೆ. ಅವುಗಳ ಬದಿಗೆ ಹೂಬಳ್ಳಿ ಅಲಂಕಾರದ ಎರಡು ವೃತ್ತಗಳಿವೆ. ಆ ವೃತ್ತಗಳಲ್ಲಿ ಹೂಗಳಿವೆ. ಇದರಿಂದಾಗಿ ಈ ಫಲಕದಲ್ಲಿ ಒಟ್ಟು ಹದಿಮೂರು ತೀರ್ಥಂಕರರು ಹಾಗೂ ಎರಡು ಪಾರ್ಶ್ವನಾಥರ ಚಿತ್ರಗಳಿವೆ. ಎರಡನೇ ಸಾಲಿನ ಮಧ್ಯವಿರುವ ತೀರ್ಥಂಕರರಿಗೆ ಚಿಕ್ಕ ಗೂಡನ್ನು ತೋರಿಸಿರುವುದು ವಿಶೇಷವಾಗಿದೆ. ಮಧ್ಯದಲ್ಲಿ ಎಲ್ಲಾ ಕೀರ್ತಿ ಮುಖಗಳನ್ನು ಪದ್ಮ ಪೀಠದ ಮೇಲೆ ತೋರಿಸಿರುವುದು ಮಹತ್ವದ್ದಾಗಿದೆ. ಹೂಬಳ್ಳಿ ಅಲಂಕಾರಗಳ ಬದಿಗಳಲ್ಲಿ ತೀರ್ಥಂಕರ ಕೆಳಗಿನ ವಿಮಾನಗಳಲ್ಲಿರುವ ತೀರ್ಥಂಕರರ ಚಿಕಣಿಯಾಕಾರದ ಚಿತ್ರಗಳು ಬಹು ಆಕರ್ಷಣೀಯವಾಗಿವೆ. ಶೈಲಿಯ ದೃಷ್ಟಿಯಿಂದ ಈ ಶಿಲ್ಪದ ಕಾಲ ಸು. ಕ್ರಿ. ಶ. ೧೧ನೇ ಶತಮಾನ. ಬಹುಶಃ ಇದು ಚಂದ್ರಪ್ರಭಾ ಬಸದಿಯ ಮುಂದೆ ನಿಲ್ಲಿಸಿದ ಸ್ತಂಭತೋರಣ ಫಲಕವಿರಬಹುದು.

ಗಜ-ತೀರ್ಥಂಕರ : ಈ ಬಸದಿಯ ಗಜ-ತೀರ್ಥಂಕರನ ರೇಖಾಚಿತ್ರ ನಗರದ ಸದಾನಂದ ಮಠದ ಹತ್ತಿರ ಬಾವಿ ಗೋಡೆಯಲ್ಲಿದೆ. ಪದ್ಮಾಸನದಲ್ಲಿ ತೀರ್ಥಂಕರ ಕುಳಿತಿದ್ದು ಆತನ ಬದಿಗಳಲ್ಲಿ ಆನೆಗಳಿವೆ. ಅವು ಜಿನನಿಗೆ ಶುಭವನ್ನು ಸೂಚಿಸುತ್ತವೆ. ಅದು ಗಜಲಕ್ಷ್ಮಿ ತೋರಣ ಫಲಕದಂತಿದೆ. ಈ ಫಲಕದ ಮೇಲೆ ಅವುಗಳ ರೇಖಾ ಚಿತ್ರಗಳಿವೆ. ಆದುದರಿಂದ ಈ ಶಿಲ್ಪವನ್ನು ಗಜ-ತೀರ್ಥಂಕರ ಶಿಲ್ಪವೆನ್ನಲಾಗಿದೆ.

ಶಿಲ್ಪಗಳು

ಧರ್ಮ ಚಕ್ರಪೀಠ : ಇತ್ತೀಚೆಗೆ ಜೈಶಂಕರ ಕಾಲೋನಿಯಲ್ಲಿ ಮನೆಗಳನ್ನು ಕಟ್ಟಲು ಪಾಯ ಅಗೆಯುವ ಸಂದರ್ಭದಲ್ಲಿ ಒಂದು ಚಕ್ರಪೀಠ ಹಾಗೂ ಪದ್ಮಾಸನದಲ್ಲಿರುವ ಪಾರ್ಶ್ವನಾಥನ ಶಿಲ್ಪಗಳು ದೊರೆತಿವೆ. ಈ ಬಗೆಯ ಇನ್ನೊಂದು ಶಿಲ್ಪವು ಅಲ್ಲಿಯ ಮೂರುಲಿಂಗೇಶ್ವರ ದೇವಾಲಯದಲ್ಲಿದ್ದು, ಅದರ ಕುರಿತು ಈ ಮೇಲೆ ವಿವರಿಸಲಾಗಿದೆ.

ಬಸವಕಲ್ಯಾಣ ಹತ್ತಿರದ ಸಸ್ತಾಪುರ ಗ್ರಾಮದ ಮಾರುತಿ ಮಂದಿರದ ಮುಂದಿರುವ ಶಿಲ್ಪ ಬಸವಕಲ್ಯಾಣದ ಜೈಶಂಕರ ಕಾಲೋನಿಯಿಂದ ತಂದಂತೆ ಕಾಣುತ್ತದೆ. ಈ ಪೀಠದ ಮುಂಭಾಗದಲ್ಲಿ ಸಾಲಾಗಿ ಒಟ್ಟು ಅರೆಗಂಬಗಳನ್ನು ಹೊಂದಿದ ಐದು ಗೂಡುಗಳಿವೆ. ಮಧ್ಯ ಗೂಡಿನಲ್ಲಿ ಧರ್ಮಚಕ್ರವನ್ನು ಬಳ್ಳಿಗಳಿಂದ ಕಟ್ಟಿ ನಿಲ್ಲಿಸಲಾಗಿದೆ. ಬದಿಗಳಲ್ಲಿ ಮೊದಲು



ಆನೆಗಳನ್ನು ನಂತರ ಸಿಂಹಗಳನ್ನು ಕಂಡರಿಸಲಾಗಿದೆ. ಕಾಲಮಾನ ಸು. ಕ್ರಿ.ಶ. ೧೧-೧೨ನೇ ಶತಮಾನ. ಈ ರೀತಿಯ ಧರ್ಮಚಕ್ರವುಳ್ಳ ಜಿನಪೀಠಗಳು ಉತ್ತರ ಕರ್ನಾಟಕದಲ್ಲೆ ವಿರಳ.

ಧರ್ಮ ಚಕ್ರವುಳ್ಳ ಶಿಲ್ಪಫಲಕ ಅಲ್ಲಿಯ ಮೂರಲಿಂಗೇಶ್ವರ ಮಂದಿರ ಗೋಡೆಯಲ್ಲಿದೆ. ಮಧ್ಯ ಧರ್ಮಚಕ್ರವನ್ನು ಹೂ-ಬಳ್ಳಿಗಳಿಂದ ಕಟ್ಟಿ ನಿಲ್ಲಿಸಲಾಗಿದೆ. ಕೆಳಗೆ ಎರಡು ಕಿರು ಅರ್ಧಗಂಬಗಳ ಮಧ್ಯ ಒಬ್ಬ ವ್ಯಕ್ತಿ ಸವ್ಯಲಲಿತಾಸನದಲ್ಲಿ ಕುಳಿತಿರುವನು. ಅವನಿಗೆ ಎರಡು ಕೈಗಳು. ಅವನ ತಲೆ ಬದಿಗಳಲ್ಲಿ ನಾಗಗಳಿವೆ. ದಪ್ಪವಾಗಿ ಸುಣ್ಣ ಬಣ್ಣವನ್ನು ಹಚ್ಚಿರುವುದರಿಂದ ಸ್ಪಷ್ಟ ಚಿತ್ರಕಾಣುವುದಿಲ್ಲ.



ಚೌವೀಸ್ ತೀರ್ಥಂಕರ : ಅಲ್ಲಿ ಎರಡು ಚೌವೀಸ್ ತೀರ್ಥಂಕರರ ಶಿಲ್ಪಗಳಿವೆ. ಅವು ವೃಷಭನಾಥ ಅಥವಾ ಆದಿನಾಥನ್ನದ್ದಾಗಿದೆ. ಒಂದು ಬಸವ ಕಲ್ಯಾಣ ಕೋಟೆ ಒಳಗಿದೆ. ಮುಖ, ಕೈಗಳು ಶಿಲ್ಪದ ಎಡಭಾಗದ ತೋರಣ ಮತ್ತು ಕೆಳಭಾಗ ಒಡೆದಿದೆ. ಆದಿನಾಥ ಬತ್ತಲೆಯಲ್ಲಿ ಸಮಭಂಗಿಯಲ್ಲಿ ನಿಂತಿದ್ದಾನೆ. ಎತ್ತರದ ಚಿಕ್ಕ ಪೀಠದ ಮೇಲೆ ಆದಿನಾಥನು ಪಾದಗಳನ್ನಿಟ್ಟು ನಿಂತಿದ್ದಾನೆ. ಆತನ ಬದಿಗಳಲ್ಲಿ ಅರ್ಧಗಂಭಗಳು ಮತ್ತು ಮೇಲ ಮಕರ ತೋರಣ ಮಧ್ಯೆ ಆದಿನಾಥನಿದ್ದಾನೆ. ಅರ್ಧಗಂಭಗಳ ಮೇಲೆ ತೀರ್ಥಂಕರರಿದ್ದಾರೆ. ಕೆಳಗಡೆ ಸಮಭಂಗಿಯಲ್ಲಿ ನಿಂತ ಒಬ್ಬ ತೀರ್ಥಂಕರ ಆತನ ತಲೆಯ ಮೇಲೆ ಸಾಲಾಗಿ ಒಬ್ಬರ ಕೆಳಗೆ ಮತ್ತೊಬ್ಬರಂತೆ ಮೂವರು ಕುಳಿತ ಜಿನರನ್ನು ಚಿತ್ರಿಸಲಾಗಿದೆ. ಕುಳಿತ ಮತ್ತು ನಿಂತ ಒಟ್ಟು ನಾಲ್ವರು ಜಿನರನ್ನು ತಲಾ ಒಂದು ಅರ್ಧಗಂಭದ ಮೇಲೆ ಚಿತ್ರಿಸಲಾಗಿದೆ. ಎರಡೂ ಅರ್ಧಗಂಬಗಳ ಮೇಲೆ ಒಟ್ಟು ಎಂಟು ಜಿನರಿದ್ದಾರೆ. ಇದಲ್ಲದೆ ಅರ್ಧಗಂಬದ ಮೇಲೆ ಸಮಭಂಗಿಯಲ್ಲಿ ತೀರ್ಥಂಕರರಿದ್ದಾರೆ. ಪಾರ್ಶ್ವನಾಥನ ಕಾಲುಗಳ ಬದಿಗೆ ಸೇವಕರು ನಿಂತು ಚೌರಿ ಬೀಸುತ್ತಿರುವರು. ಅವರು ತ್ರಿಭಂಗಿಯಲ್ಲಿ ನಿಂತು ಚೌರಿಯನ್ನು ಮೇಲಕ್ಕೆತ್ತಿ ಹಿಡಿದಿರುವರು. ಕಿರೀಟ, ಕರ್ಣಕುಂಡಲ, ಸೊಂಟಪಟ್ಟಿ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವರು. ಅವರು

ಹಿಂಬದಿಯಲ್ಲಿ ಮೇಲಿನಿಂದ ಮಂಡೆ ಕೆಳಗಿನವರೆಗೆ ಉದ್ದವಾದ ವಸ್ತ್ರವನ್ನು ಇಳಿಬಿಟ್ಟು ಕಟ್ಟಿಕೊಂಡಿರುವರು. ಆದಿನಾಥನಿಗೆ ಪ್ರಭಾಮಂಡಲವಿದೆ. ಮುಕ್ಕೊಡೆಯ ಮೇಲೆ ಒಬ್ಬ ವ್ಯಕ್ತಿಯು ತನ್ನ ಕೈಗಳಿಂದ ಮೃದಂಗವನ್ನು ಬಾರಿಸುತ್ತಿರುವನು. ಈ ಭಾಗದ ಅನೇಕ ಶಿಲ್ಪಗಳಲ್ಲಿ ಈ ರೀತಿಯಲ್ಲಿ ವ್ಯಕ್ತಿಯನ್ನು ತೋರಿಸಲಾಗಿದೆ. ಆತನ ಮುಖದ ಎಡಗಡೆಗೆ ಎರಡು ಮತ್ತು ಬಲಗಡೆಗೆ ಎರಡು ಒಟ್ಟು ನಾಲ್ಕು ಕುಳಿತ ಜಿನರ ಚಿತ್ರಗಳಿವೆ. ಅರ್ಧಗಂಭಗಳ ಅಂಚಿನಲ್ಲಿ ಸಾಲಾಗಿ ಮೇಲಿಂದ ಕೆಳಗೆ ಪದ್ಮಾಸನದಲ್ಲಿ ಕುಳಿತ ಜಿನರನ್ನು ಚಿತ್ರಿಸಲಾಗಿದೆ. ಒಂದೊಂದು ಕಡೆ ಐದರಂತೆಒಟ್ಟು ಹತ್ತು ಜಿನರು ಅಲ್ಲಿದ್ದಾರೆ. ಎಡಗಡೆ ಅಂಚಿನಲ್ಲಿ ಪ್ರಾಣಿಗಳ ಚಿತ್ರಭಾಗ ಒಡೆದಿದೆ. ಆದಿನಾಥನ ತಲೆಯ ಮೇಲೆ ಮೂರು ಛತ್ರಿಗಳಿವೆ (ತ್ರಿರತ್ನ). ಛತ್ರಿಯ ಬದಿಗಳಲ್ಲಿ ಒಂದೊಂದು ಆನೆಗಳಿವೆ. ಸೊಂಡಿಲನ್ನು ಮೇಲಕ್ಕೆ ಎತ್ತಿ ಶುಭಕೋರುತ್ತಿವೆ. ಗಂಧರ್ವರು ಹಾರ ಹಿಡಿದುಕೊಂಡು ಹಾರುತ್ತಿರುವರು. ಅರ್ಧಗಂಭಗಳ ಮೇಲೆ ಮತ್ತು ಆದಿನಾಥನ ಮುಖದ ಬದಿಗೆ ಕುಳಿತ ಮಕರಗಳಿವೆ. ಅವುಗಳಿಂದ ಹೊರ ಬಂದ ದಪ್ಪ ಅಲಂಕಾರ ಬಳ್ಳಿಗಳು ಮೇಲ್ಗಡೆ ಸುರುಳಿ ಯಾಕಾರದಲ್ಲಿವೆ. ಕಳಸ ಜಿನ ಬಿಂಬದ ಮೇಲೆ ಆ ಬಳ್ಳಿಗಳೆರಡು ಕೂಡುವ ಜಾಗದಲ್ಲಿ ಬಾಯಿ ತೆರೆದ ಸಿಂಹ (ಕೀರ್ತಿಮುಖ) ಮುಖವಿದೆ. ಈ ಆದಿನಾಥನ ಶಿಲ್ಪದಲ್ಲಿ ಒಟ್ಟು ಚೌವೀಸ್ (೨೪) ತೀರ್ಥಂಕರರಿದ್ದಾರೆ. ಚೌರಿ ಬೀಸುವ ಸೇವಕರು, ಆನೆ, ಸಿಂಹ, ಮಕರ, ಗಂಧರ್ವ ಮುಂತಾದವರು ವಿವಿಧ ರೀತಿಯಲ್ಲಿ ಆದಿನಾಥನ ಸೇವೆ ಮಾಡುತ್ತಿರುವುದು ವಿಶೇಷ ಲಕ್ಷಣವಾಗಿದೆ. ಮೇಲಿನಭಾಗ ಅರ್ಧ ವೃತ್ತಾಕಾರದಲ್ಲಿದೆ. ಈ ಶಿಲ್ಪದ ಕಾಲ ಶೈಲಿಯಿಂದ ಸು.ಕ್ರಿ.ಶ. ೧೦ನೇ ಶತಮಾನದ ಅಂತ್ಯಭಾಗ.

ಕೋಟೆಯಲ್ಲಿ ಇನ್ನೊಂದು ಚೌವೀಸ್ (ಇಪ್ಪತ್ನಾಲ್ಕು) ತೀರ್ಥಂಕರನ ಶಿಲ್ಪವಿದೆ. ಆ ಶಿಲ್ಪದಲ್ಲಿ ಪಾರ್ಶ್ವನಾಥನ ತಲೆ ಮತ್ತು ಮೇಲಿನ ಶಿಲ್ಪದ ಭಾಗ, ಎಡಗೈ, ಪಾದಗಳ ಭಾಗಗಳು ಮತ್ತು ಅದರ ಕೆಳಗಿನ ಶಿಲ್ಪದ ಭಾಗ ಮುರಿದುಹೋಗಿದೆ. ಕೈಗಳು ಒಡೆದಿವೆ. ಪಾರ್ಶ್ವನಾಥ ಬತ್ತಲೆಯಲ್ಲಿ ಸಮಭಂಗಿಯಲ್ಲಿ ನಿಂತಿದ್ದಾನೆ. ಆತನ ಹಿಂದೆ ಆರು ಸುರುಳಿ



ನಾಗಸರ್ಪದ ದೇಹಭಾಗ ಆತನ ಕಾಲುಗಳ ಬದಿಗೆ ಸೇವಕರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಬಲಗಡೆಗೆಯ ಸೇವಕನಿಗೆ ಎಡಭಾಗದ ಸೇವಕನಿಗಿಂತ ವಸ್ತ್ರಾಭರಣಗಳು ಹೆಚ್ಚಿವೆ. ಎಡಗಡೆಯ ಸೇವಕನಿಗೆ ಮಾತ್ರ ಕಿರೀಟವಿರುವುದು. ಪಾರ್ಶ್ವನಾಥನ ಪಾದದಬದಿಗೆ ಇಬ್ಬರು ದಂಪತಿಗಳು ಅಂಜಲಿ ಮುದ್ರೆಯಲ್ಲಿ ಕುಳಿತಿದ್ದಾರೆ. ಅವರಿಗೆ ಮಿತವಾದ

ವಸ್ತ್ರಾಭರಣಗಳಿವೆ. ಬದಿಗೆ ಒಂದೇ ಸಾಲಿನಲ್ಲಿ ಬಲಗಡೆಗೆ ಮೇಲಿಂದ ಕೆಳಗಿನವರೆಗೆ ಏಳು ಮತ್ತು ಅದೇ ರೀತಿ ಎಡಗಡೆಗೆ ಎಂಟು ಚಿಕಣಿಯಾಕಾರದ ಜಿನರನ್ನು ತೋರಿಸಲಾಗಿದೆ. ಪದ್ಮಾಸನ ಮತ್ತು ಯೋಗಮುದ್ರೆಯಲ್ಲಿ ಅವರಿದ್ದಾರೆ. ಚತುರಸ್ರಾಕಾರದ ಪಟ್ಟಿಕೆಗಳ ಮೇಲೆ ಅವರು ಕುಳಿತಿದ್ದಾರೆ. ಆದರೆ, ಎಡಬದಿಯ ಜಿನ ವಿಗ್ರಹಗಳ ಸಾಲಿನ ಕೆಳಗಿನ ಜಿನನಿಗೆ ಮಾತ್ರ ಐದು ಹೆಡೆ ಸರ್ಪವಿದೆ. ಸೇವಕರು ಮತ್ತು ಭಕ್ತ ದಂಪತಿಗಳು ಹಾಗೂ ಚಿಕಣಿಯಾಕಾರದ ಜಿನ ಚಿತ್ರಗಳ ಪ್ರತ್ಯೇಕ ಪಟ್ಟಿಕೆಗಳನ್ನು ಮೇಲೆ ತೋರಿಸಿರುವುದು ಮಹತ್ವದ್ದಾಗಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. ೧೧ನೇ ಶತಮಾನ.

ಕೋಟೆ ಒಳಗಿನ ಒಂದು ಶಿಲ್ಪದಲ್ಲಿ ನಾಲ್ವರು ತೀರ್ಥಂಕರರು ಒಂದೇ ಸಾಲಿನಲ್ಲಿ ಸಮಾಂತರವಾಗಿ ಸಮಭಂಗದಲ್ಲಿ ನಿಂತಿರುವುದನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಅಂಚಿನಲ್ಲಿ



ತೀರ್ಥಂಕರ ಮುಖ ಮತ್ತು ಅದರ ಮೇಲಿನ ಭಾಗ ಅವರ ಮತ್ತು ಇನ್ನಿತರ ಇಬ್ಬರ ದೇಹದ ಅಂಗಾಂಗ ಮುಖ, ಕೈ, ಕಾಲು, ಭಾಗಗಳು ಹೆಚ್ಚು ಶಿಥಿಲವಾಗಿವೆ. ಪಾದಪೀಠ ಭಾಗಗಳು ಮಾತ್ರ ಮುಂದೆ ಚಾಚಿವೆ. ದುಂಡಾದ ಪ್ರಭಾಮಂಡಲ ತೀರ್ಥಂಕರರಿಗಿವೆ. ಮಧ್ಯದಲ್ಲಿರುವ ಇಬ್ಬರ ತಲೆಗಳ ಮೇಲಿನ ಛತ್ರಿಗಳು ಶಿಥಿಲವಾಗಿವೆ. ಈ ಶಿಲ್ಪವು ಜೈನ ಬಸದಿ ಗೋಡೆ ಫಲಕವಾಗಿದೆ. ಈ ಶಿಲ್ಪವು ಇಪ್ಪತ್ತನಾಲ್ಕು ತೀರ್ಥಂಕರರನ್ನು ತೋರಿಸಿದ ಒಂದು ಭಾಗವಾಗಿರಬೇಕು. ಈ ಶಿಲ್ಪದ ಕಾಲ ಕ್ರಿ.ಶ. ೧೧ನೇ ಶತಮಾನ.

ತೀರ್ಥಂಕರರು : ತ್ರಿಪುರಾಂತಕದ ವಿಠ್ಠಲಮಂದಿರದ ಮುಂದೆ ಬಿಳಿ ಅಮೃತಶಿಲೆಯ ಬಹು ಸುಂದರ ತೀರ್ಥಂಕರನ ವಿಗ್ರಹವಿದೆ. ಕಾಲ ಸು. ಕ್ರಿ.ಶ.೧೩ನೇ ಶತಮಾನ. ನಗರದ ಅಂಬಿಗರ ಚೌಡಯ್ಯನ ಮಂದಿರದಲ್ಲಿ ಒಡೆದ ತೀರ್ಥಂಕರನ ಶಿಲ್ಪವಿದೆ. ಅದರಲ್ಲಿ ತಲೆ ಮಾತ್ರ ಉಳಿದಿದೆ. ಅದು ಸು. ಕ್ರಿ.ಶ. ೧೧ನೇ ಶತಮಾನ. ಇದೇ ಕಾಲದ ತಲೆಯಿಂದ ಎದೆವರೆಗಿನ ತೀರ್ಥಂಕರ ಶಿಲ್ಪ ನಗರದ ಮರಿಗೆಮ್ಮನ ಗುಡಿ ಮುಂದಿದೆ. ಅದರಲ್ಲಿ ಆತನ ಭುಜಗಳು ವಿಶಾಲವಾಗಿವೆ.

ಪಾರ್ಶ್ವನಾಥ : ಕೋಟೆಯ ಒಳಗೆ ಪಾರ್ಶ್ವನಾಥನ ಶಿಲ್ಪವಿದೆ. ಆತನ ರುಂಡದಿಂದ ಮೇಲ್ಭಾಗದಲ್ಲಿ ವೈವಿಧ್ಯಮಯ ಚಿತ್ರಗಳಿವೆ. ಈ ಶಿಲ್ಪದ ಕೆಳಗಿನ ಭಾಗ ಮುರಿದಿದೆ ಮತ್ತು ಕಳೆದು ಹೋಗಿದೆ. ಮೇಲೆ ಏಳು ಹೆಡೆ ಸರ್ಪ ಶಿಲ್ಪವಿದೆ. ತಲೆಯ ಕೂದಲುಗಳು ಉಂಗುರಾಕೃತಿಯಲ್ಲಿವೆ. ಹಣೆಯ ಮೇಲೆ ಕೂದಲನ್ನು ತಿದ್ದಿ ತುಂಬ ಸೊಗಸಾಗಿ ಅಲಂಕರಿಸಲಾಗಿದೆ. ಪಾರ್ಶ್ವನಾಥನ ಮುಖವು ಸೌಮ್ಯವಾಗಿದೆ. ಎಡಗಣ್ಣು, ಮೂಗು

ಮತ್ತು ತುಟಿಗಳು ಒಡೆದಿವೆ. ಚೌರಿ ಹಿಡಿದ ಸೇವಕರು ಮುಖದ ಬದಿಗಳಲ್ಲಿ ನಿಂತಿದ್ದಾರೆ. ಕಿರೀಟಮಕುಟ, ಕರ್ಣಕುಂಡಲ, ಸರ, ಗೆಜ್ಜೆಹಾರ, ಸೊಂಟಕ್ಕೆ ಗೆಜ್ಜೆಪಟ್ಟ, ಕೈಗಳಲ್ಲಿ ಬಳೆಗಳನ್ನು ಆ ಸೇವಕರು ಧರಿಸಿರುವರು. ಸರ್ಪದ ಹೆಡೆಯ ಮೇಲೆ ಮೂರು ಛತ್ರಿಗಳಿವೆ. ಅದಕ್ಕೆ ಕಳಸವಿದೆ. ಬದಿಗಳಲ್ಲಿ ಇಳಿಬಿದ್ದ ಹೂಗೊಂಚಲುಗಳಿವೆ. ಆಕಾಶದಲ್ಲಿ ಹಾರುವ ಗಂಧರ್ವರು ಎರಡೂ ಕೈಗಳಲ್ಲಿ ಮೊಗ್ಗಿನ ಹಾರವನ್ನು ಹಿಡಿದಿರುವರು. ಛತ್ರಿ ಬದಿಗಳಲ್ಲಿ ಆ ಗಂಧರ್ವರು ಹಾರ ಹಿಡಿದು ಶುಭ ಕೋರುತ್ತಿರುವರು. ಕಾಲುಗಳನ್ನು ಹಿಂದಕ್ಕೆ ಸರಿಸಿ ಒಬ್ಬ ಗಂಧರ್ವ ತನ್ನ ಕೈಗಳಿಂದ ಮೃದಂಗವನ್ನು ಬಾರಿಸುತ್ತಿರುವನು. ಛತ್ರಿಗಳ ಪಟ್ಟಿಯ ಮೇಲೆ ಸರಗಳ ಮಾಲೆಗಳಿವೆ. ಬೊಗಸೆಯಾಕಾರದಲ್ಲಿ ಸರ್ಪದ ಹೆಡೆಗಳು ಮುಂದೆ ಚಾಚಿವೆ. ಶಿಲ್ಪದ ಮೇಲ್ಭಾಗ ತ್ರಿಕೋನಾಕೃತಿಯಲ್ಲಿದೆ. ಈ ಶಿಲ್ಪದ ಕಾಲವು ಸು. ಕ್ರಿ.ಶ. ೧೧ನೇ ಶತಮಾನ.



ಜೈ ಶಂಕರ ಕಾಲೋನಿಯ ಮಾರುತಿ ಮಂದಿರ ಮುಂದೆ ನಿಲ್ಲಿಸಿದ ಪಾರ್ಶ್ವನಾಥನ ಮೂರ್ತಿ ಬಹುಸುಂದರ. ಅದು ಸಿಸ್ಟ ಕಲ್ಲಿನದು. ಈ ಕಲ್ಲಿನ ಜಿನ ಶಿಲ್ಪ ಬಸವಕಲ್ಯಾಣದಲ್ಲಿ ಇದೊಂದೇ ಆಗಿದೆ. ಈ ವಿಗ್ರಹದಲ್ಲಿ ಪಾರ್ಶ್ವನಾಥನ ಬಲಗಾಲು ಸೊಂಟದವರೆಗೆ, ಎಡಗಾಲು ಮಂಡಿಯವರೆಗೆ, ತಲೆಯ ಹಿಂದಿನ ಏಳು ಹೆಡೆಗಳು ಆತನ ಬಲಬದಿಯ ಅರ್ಧಗಂಭ, ಕೈಗಳ ಭಾಗಗಳು ಮುರಿದಿದ್ದರೂ ಅದು ಬಹು ಆಕರ್ಷಣೀಯವಾಗಿದೆ. ಆತನ ಕಿವಿಗಳು ಉದ್ದವಾಗಿದ್ದು ತಲೆಯಲ್ಲಿ ಗುಂಗುರು ಕೂದಲುಗಳಿವೆ. ಕಿವಿಯಲ್ಲಿ ಓಲೆಗಳಿವೆ. ಸಮಭಂಗ ಬತ್ತಲೆಯಲ್ಲಿ ನಿಂತ ಈತನ ಬದಿಗಳಲ್ಲಿ ಚೌರಿ ಹಿಡಿದ ಸೇವಕರಿದ್ದಾರೆ. ಅರ್ಧಗಂಭಗಳು ಆತನ ಬದಿಗಳಲ್ಲಿವೆ. ಅದು ಸು. ಕ್ರಿ.ಶ. ೧೧ನೇ ಶತಮಾನ, ಈ ಶಿಲ್ಪದಲ್ಲಿ ಪಾರ್ಶ್ವನಾಥನ ಬದಿಗೆ ಅರ್ಧಗಂಭಗಳು ಮತ್ತು ಅವುಗಳ ಪಟ್ಟಿಕೆಗಳ ಮಾದರಿ ಬಸವಕಲ್ಯಾಣ ಭಾಗದಲ್ಲಿ ಅಪರೂಪ. ಅವು ಹೆಚ್ಚಾಗಿ ಬಳ್ಳಾರಿ, ಧಾರವಾಡ ಜಿಲ್ಲೆಯ ಕ್ರಿ.ಶ. ೧೧ನೇ ಶತಮಾನದ ಮಾದರಿಯಲ್ಲಿರುವುದನ್ನು ಗಮನಿಸಬೇಕು.

ಗೌಂಡಿಗಲ್ಲಿಯ ಮಾರುತಿ ಮಂದಿರ ಮುಂದೆ ಪದ್ಮಾಸನ ಯೋಗ ಮುದ್ರೆಯಲ್ಲಿರುವ ಒಂದು ತೀರ್ಥಂಕರನ ವಿಗ್ರಹವಿದೆ. ಬದಿಯಲ್ಲಿ ಚಿಕಣಿಯಾಕಾರದ ಜಿನಶಿಲ್ಪಗಳಿವೆ. ಕೋಟೆ ಒಳಗಿನ ಮ್ಯೂಜಿಯಂನಲ್ಲಿ ಒಂದು ಪಾರ್ಶ್ವನಾಥನ ಶಿಲ್ಪವಿದೆ. ಆತನು ಸಮಭಂಗಿಯಲ್ಲಿದ್ದಾನೆ. ಕಾಲಿನ ಭಾಗಗಳು ಮುರಿದಿವೆ. ಎದೆ ಮೇಲೆ ಸ್ವಸ್ತಿಕ

ಚಿನ್ಹೆಯಿರುವುದು ವಿಶೇಷ. ಇಂತಹ ಚಿನ್ಹೆಯಿರುವ ಪಾರ್ಶ್ವನಾಥನ ವಿಗ್ರಹಗಳು ಬಾಲ್ಕಿ ಭಾಗದಲ್ಲೂ ಕಂಡುಬಂದಿವೆ.

ಪದ್ಮಾಸನದಲ್ಲಿ ಕುಳಿತ ಪಾರ್ಶ್ವನಾಥನ ಶಿಲ್ಪಗಳು ಇನ್ನೂ ಹಲವಿದೆ. ರುಂಡ, ಮುಂಡ, ದೇಹದ ಅಂಗಾಂಗಳು ಶಿಥಿಲಗೊಂಡು ತುಂಡು ತುಂಡಾಗಿವೆ. ಯೋಗಮುದ್ರೆಯಲ್ಲಿ ಕುಳಿತ ಒಂದೆರಡು ಶಿಲ್ಪಗಳು ಸದಾನಂದ ಮಠದ ಹತ್ತಿರ ಬಾವಿ ಗೋಡೆಯಲ್ಲಿ ಸೇರಿವೆ.

ಬಸವೇಶ್ವರ ಶಿಶುವಿಹಾರದ ಮುಂದೆ ಒಡೆದ ತೀರ್ಥಂಕರನ ವಿಗ್ರಹವಿದೆ. ಮೇಲಿಂದ ಕುತ್ತಿಗೆಯವರೆಗಿರುವ ಈ ಶಿಲ್ಪದಲ್ಲಿ ಮುಖದ ಮೇಲ್ಗಡೆ ಛತ್ರಿ ಬಲಗಡೆ ಮೂರು ಮತ್ತು ಎಡಗಡೆ ಮೂರು ಜಿನ ವಿಗ್ರಹಗಳಿವೆ.



ಸುಪಾರ್ಶ್ವನಾಥ : ಸದಾನಂದ ಮಠದ ಹತ್ತಿರ ಬಾವಿಗೋಡೆಯಲ್ಲಿ ಕೆಲವು ಜೈನ ಮೂರ್ತಿಗಳಿವೆ. ಒಂದು ಸುಪಾರ್ಶ್ವನಾಥನ ಒಡೆದ ಶಿಲ್ಪ ಎದ್ದುಕಾಣುತ್ತಿದೆ. ಮೇಲಿಂದ ಎದೆವರೆಗಿರುವ ಈ ಶಿಲ್ಪದಲ್ಲಿ ತಲೆ ಹಿಂದಿನ ಐದು ನಾಗ ಸರ್ಪಗಳ ಹೆಡೆಗಳು ಮುರಿದಿವೆ. ಆತನ ಮುಖ ಬದಿಗಳಲ್ಲಿ ಹಾರ ಮತ್ತು ಚೌರಿ ಹಿಡಿದು ಹಾರುವ ಗಂಧರ್ವರಿದ್ದಾರೆ. ಸೇವಕರಿದ್ದಾರೆ. ಆತನ ತಲೆಯ ಮೇಲೆ ಮುಕ್ಕೊಡೆ ಇದ್ದು, ಅದರ ಬದಿಗೆ ಆನೆಗಳಿವೆ. ಮೇಲೆ ಸವಾರರಿದ್ದಾರೆ. ಮುಕ್ಕೊಡೆಯ ಮೇಲೆ ಗಂಧರ್ವನೊಬ್ಬನು ತನ್ನ ಕೈಗಳಿಂದ ಮೃದಂಗವನ್ನು ಬಾರಿಸುತ್ತಿರುವನು. ಕಾಲುಗಳನ್ನು ಬದಿಗಳಲ್ಲಿ ಸರಿಸಿರುವನು. ಈ ರೀತಿ ಜಿನನನ್ನು ಈ ಭಾಗದ ಹಲವಾರು ತೀರ್ಥಂಕರರ ವಿಗ್ರಹಗಳಲ್ಲಿ ಕಾಣಬಹುದು. ಆತನ ತಲೆಯಲ್ಲಿ ಸುಂದರ ಗುಂಗುರು ಕೂದಲುಗಳಿವೆ. ಸೌಮ್ಯ ಮುಖವಿದ್ದು, ಕಣ್ಣು, ಹುಬ್ಬು ಮತ್ತು ಉದ್ದ ಕಿವಿಗಳು ಆಕರ್ಷಣೀಯವಾಗಿವೆ. ಈ ಶಿಲ್ಪದ ಮೇಲ್ಭಾಗ ತ್ರಿಕೋನಾಕಾರದಲ್ಲಿದೆ. ಕಾಲ ಸು. ಕ್ರಿ.ಶ. ೧೦ನೇ ಶತಮಾನದ ಅಂತ್ಯಭಾಗ.

ವಿಮಾನದಲ್ಲಿ ತೀರ್ಥಂಕರ : ಸದಾನಂದ ಮಠದ ಹತ್ತಿರದ ಬಾವಿ ಗೋಡೆಯಲ್ಲಿ ಒಂದು ತೀರ್ಥಂಕರ ಶಿಲ್ಪವಿದೆ. ತೀರ್ಥಂಕರನ ಬದಿಗಳಲ್ಲಿ ಎರಡು ಅರೆಗಂಬಗಳಿದ್ದು ಮೇಲೆ ವಿಮಾನ ಮಾದರಿಗಳಿವೆ. ಒಳಗಡೆ ತೀರ್ಥಂಕರ ಪದ್ಮಾಸನದಲ್ಲಿ ಕುಳಿತಿದ್ದಾನೆ. ಇದೊಂದು ಬಸದಿಯ ಗೋಡೆಯ ಫಲಕವಿರಬೇಕು.

ಅಂಬಿಕಾ (ಯಕ್ಷಿ) : ಕೋಟೆಯಲ್ಲಿ ಅಂಬಿಕಾ ಯಕ್ಷಿಯ ಶಿಲ್ಪವಿದೆ. ಆಕೆಯು ತ್ರಿಭಂಗಿಯಲ್ಲಿ ನಿಂತಿದ್ದಾಳೆ. ಬಲಗೈಯಲ್ಲಿ ಮಾವಿನ ಗೊಂಚಲನ್ನು ಎತ್ತಿ ಹಿಡಿದಿದ್ದಾಳೆ.



ಎಡಗೈ ಇಳಿಬಿಟ್ಟಿದ್ದಾಳೆ. ಕೆಳಗಡೆ ಮಗುವೊಂದು ಕೈ ಎತ್ತಿ ನಿಂತಿದೆ. ಬಲಕ್ಕೆ ಇಬ್ಬರು ಭಕ್ತರಿದ್ದಾರೆ. ಮಾವಿನ ಹರಿಯನ್ನು ಆಕೆಯ ತಲೆಯ ಮೇಲೆ ಚಿತ್ರಿಸಲಾಗಿದೆ. ಕೇಶಕ್ಕೆ ತುರುಬುಗಳನ್ನು, ಕೊರಳಲ್ಲಿ ಹಾರ, ಕೈಗಳಲ್ಲಿ ಬಳೆ, ಸೊಂಟಕ್ಕೆ ಪಟ್ಟಿ, ವಸ್ತ್ರಗಳನ್ನು ಧರಿಸಿರುವಳು. ಕಾಲ ಸು.ಕ್ರಿ.ಶ. ೧೨ನೇ ಶತಮಾನ. ಭಾಲ್ಕಿಯಲ್ಲಿ ಕುಳಿತ ಅಂಬಿಕೆಯ ಮತ್ತೊಂದು ಶಿಲ್ಪವಿದ್ದು ಆದರ ಕಾಲ ಸು. ಕ್ರಿ.ಶ. ೧೦ನೇ ಶತಮಾನ.



ನಿಷಧಿಗಲ್ಲು : ಶ್ರೀ ಭದ್ರಸೇನ ಸಿದ್ಧಾನ್ತ ದೇವರ ಹೆಸರಿನ ಒಂದು ನಿಷಧಿಯು ಬಸವ ಕಲ್ಯಾಣದ ಕೋಟೆ ಒಳಗಿದೆ. ಅದಕ್ಕೆ ನಾಲ್ಕು ಮುಖಗಳಿವೆ. ಒಂದು ಮುಖದ ಮೇಲೆ ಭದ್ರಸೇನ ಸಿದ್ಧಾನ್ತ ದೇವರ ಹೆಸರಿನ ಕೆಳಗೆ ಮೂವರ ಚಿತ್ರಗಳಿವೆ. ಪ್ರಾಯಶಃ ಭದ್ರಸೇನ ಜಿನನಲ್ಲಿ ಐಕ್ಯನಾಗಿರಬೇಕು. ಅದನ್ನು ಅವನ ರೂಪದಲ್ಲಿ ಶಾಸನದ ಕೆಳಗೆ ತೋರಿಸಲಾಗಿದೆ. ಪದ್ಮಪೀಠ ಮತ್ತು ಪದ್ಮಾಸನದಲ್ಲಿ ಆತನು ಕುಳಿತಿರುವನು. ಅವನ ಕೆಳಗೆ ಒಂದೇ ಸಾಲಿನಲ್ಲಿ ಬಿಡಿ ಬಿಡಿಯ ಎರಡು ಗೂಡುಗಳಿವೆ. ಅದರಲ್ಲಿ ಇಬ್ಬರು ಜಿನ ಭಕ್ತರು ಪದ್ಮಾಸನದಲ್ಲಿ ಕೈಮುಗಿದು ಕುಳಿತಿರುವರು. ಕೊರಳಲ್ಲಿ ಮಣಿಸರದ ಹಾರ, ಕೈಯಲ್ಲಿ ಬಳೆಗಳನ್ನು ಧರಿಸಿರುವರು. ಅವರು ಕಟ್ಟಿಕೊಂಡ ವಸ್ತ್ರದ ಅಂಚುಗಳನ್ನು ಕಿವಿಬದಿಯಲ್ಲಿ ತೋರಿಸಲಾಗಿದೆ. ಚಿತ್ರಗಳ ಎಡ ಬದಿಯ ಮುಖಗಳಲ್ಲಿ ಶಾಸನವಿದ್ದು ಕೆಳಗಡೆ ಒಬ್ಬ ಭಕ್ತಳಿದ್ದಾಳೆ. ಗೂಡಿನಲ್ಲಿ ಆಕೆಯು ಕುಳಿತಂತೆ ತೋರಿಸಲಾಗಿದೆ. ಯೋಗ ಮುದ್ರೆ ಮತ್ತು ಪದ್ಮಾಸನದಲ್ಲಿ ಅವಳು ಕುಳಿತಿರುವಳು. ಮೊದಲ ಫಲಕದ ಬಲಬದಿಯ ಮುಖದಲ್ಲಿ ಕೇವಲ ಶಾಸನವಿದೆ. ಮತ್ತು ಹಿಂಬದಿಯ ಮುಖ ಖಾಲಿ ಇದೆ. ಮೇಲೆ ಗೂಡುಗಳು ತ್ರಿಕೋಣಾಕೃತಿಯಲ್ಲಿವೆ. ಈ ನಿಸಿದಿ ಶಿಲ್ಪವು ಅದರ ಗೂಡಿನಲ್ಲಿ ತೋರಿಸಿದ ಭದ್ರಸೇನಸಿದ್ಧಾಂತ ದೇವರ ಶಿಷ್ಯರದ್ದಾಗಿದೆ. ನಿಸಿಧಿಯ ಕಾಲ ಸು.ಕ್ರಿ.ಶ. ೧೧ನೇ ಶತಮಾನ. ಇದನ್ನು ಈ ತಾಲೂಕಿನ ಗೋರಟ ಗ್ರಾಮದಿಂದ ಸಂಗ್ರಹಿಸಲಾಗಿದೆಯೆಂದು ತಿಳಿಯಲಾಗಿದೆ. ಶಿವಪುರದ ಮಾರುತಿ ಮಂದಿರದ ಬದಿಗೆ ಒಂದು ನಿಸಿಧಿ ಇದೆ. ಅದರ ನಾಲ್ಕು ಮುಖಗಳಲ್ಲಿ ಮಹಾವೀರನನ್ನು ತೋರಿಸಲಾಗಿದೆ.

ಅತ್ತಿಮಬ್ಬೆಯಿಂದ ಜೀರ್ಣೋದ್ಧಾರಗೊಂಡ ಚಂದ್ರಪ್ರಭ ಬಸದಿ ಬಸವಕಲ್ಯಾಣ ನಗರದಲ್ಲಿ ಎಲ್ಲಿದ್ದಿತು? ಎಂಬುದು ಇನ್ನೂ ತಿಳಿದು ಬಂದಿಲ್ಲ. ಸಧ್ಯಕ್ಕೆ ಲಭ್ಯವಾಗಿರುವ ಜೈನ ಶಿಲ್ಪಗಳ ಸ್ಥಳಗಳನ್ನು ಅವಲೋಕಿಸಲಾಗಿದೆ. ವಿವರವಾದ ಅಧ್ಯಯನ ಇನ್ನೂ ನಡೇಯಬೇಕಾಗಿದೆ.

ಜೈನ ಶಿಲ್ಪಗಳ ಯಾದಿ

ಅ. ತೀರ್ಥಂಕರ

ಆ. ತೀರ್ಥಂಕರ

೧. ಸದಾನಂದ ಮಠ ಹತ್ತಿರ ಬಾವಿ ಗೋಡೆ --೧

೨. ತ್ರಿಪುರಾಂತಕ ವಿಠಲ ಮಂದಿರ-೧

೩. ಅಂಬಿಗರ ಚೌಡಯ್ಯನ ಮಂದಿರ-೧

೪. ಅಂಬಿಗರ ಚೌಡಯ್ಯನ ಮಂದಿರ-೧

ಇ. ಚಕ್ರ

೧. ಜೈ ಶಂಕರ ಕಾಲೋನಿ -೨

ಈ . ಪಾರ್ಶ್ವನಾಥ

೧. ಸದಾನಂದ ಮಠ ಹತ್ತಿರ ಬಾವಿ ಗೋಡೆ --೧

೨. ಕೋಟೆ ಒಳಗಡೆ - ೧

೩. ಜೈ ಶಂಕರ ಕಾಲೋನಿ -೧

ಉ. ಚೌವೀಸ್ ತೀರ್ಥಂಕರ

೧. ಬಸವಕಲ್ಯಾಣದ ಕೋಟೆ ಒಳಗೆ - ೧

೨. ಅದೇ -೧

ಊ. ತೀರ್ಥಂಕರರು

೧. ಬಸವಕಲ್ಯಾಣದ ಗೌಂಡಿಗಲ್ಲಿಯ ಮಾರುತಿ ಮಂದಿರ ಮುಂದೆ ಕುಳಿತ (ಒಡೆದಿದೆ) -೧

೨. ಬಸವಕಲ್ಯಾಣ ಮ್ಯೂಜಿಯಂ ಒಳಗೆ ನಿಂತ (ಒಡೆದ) -೧

ಋ. ಗೋಡೆ ಫಲಕದಲ್ಲಿ ತೀರ್ಥಂಕರರು

೧. ಕೋಟೆ ಒಳಗೆ - ೧

ೠ. ಸುಪಾರ್ಶ್ವನಾಥ


೧. ಕೋಟೆ ಒಳಗೆ -೧

೨. ಸದಾನಂದ ಮಠ ಹತ್ತಿರದ ಬಾಪಿ ಗೋಡೆ - ೧

೧೦. ಮುಸ್ಲಿಂ ಸ್ಮಾರಕಗಳು


ಕ್ರಿ.ಶ. ೧೪ನೇ ಶತಮಾನದಿಂದ ಸು. ಕ್ರಿ.ಶ. ೨೦ನೇ ಶತಮಾನದವರೆಗಿನ ಅನೇಕ ಮುಸ್ಲಿಂ ಸ್ಮಾರಕಗಳು, ಈ ನಗರದಲ್ಲಿದ್ದು, ಅವನ್ನಿಲ್ಲಿ ಸಮೀಕ್ಷಿಸಲಾಗಿದೆ.

ಫೀರ್ ಭಾಷಾ ಬಂಗಲೆ : ಇದನ್ನು ರಾಣಿ ಮಸೀದಿ ಎಂದೂ ಕರೆಯುವರು. ಇಲ್ಲಿ ಕಲ್ಯಾಣದ ನವಾಬನ ಸಮಾಧಿ, ಒಳಗೆ ಫೀರ್ ಬಾಷಾ ಮತ್ತು ಇನ್ನಿತರರ ಸಮಾಧಿಗಳಿವೆ. ಪ್ರಾಂಗಣದಲ್ಲಿ ಹಿಂದೂ ದೇವಾಲಯಕ್ಕೆ ಸೇರಿದ ನಲವತ್ನಾಲ್ಕು ಕಂಬಗಳುಳ್ಳ ತೆರೆದ



ಮಂಟಪದಲ್ಲಿ ಗೋರಿಗಳಿವೆ. ಈ ಕಂಬಗಳು ಸುಮಾರು ಕ್ರಿ.ಶ. ೧೨-೧೩ನೇ ಶತಮಾನದವು. ಪಕ್ಕದಲ್ಲಿ ಒಂದು ಕಟ್ಟಡವಿದೆ. ಅದಕ್ಕೆ ಎತ್ತರದ ಐದು ಕಮಾನುಗಳಿದ್ದು, ಒಂದೇ ಸಾಲಿನಲ್ಲಿವೆ. ಒಳಮುಖಗಳನ್ನು ಬಂಗಾರವರ್ಣದ (ತೈಲ) ಲೇಪನ ಮಾಡಿ ಅದರ ಮೆರಗನ್ನು ಹೆಚ್ಚಿಸಲಾಗಿದೆ. ಅದರಲ್ಲೂ ಕುರಾನಿನ ಶ್ಲೋಕಗಳಿವೆ. ಈ ಅಲಂಕರಣವು ಉತ್ತರ ಮತ್ತು ದಕ್ಷಿಣದ ಕಮಾನುಗಳಿಗೆ ತಳದಿಂದ ಬುಡದವರೆಗೆ ಇದೆ. ಒಳಗಿನ ಮಂಟಪಗಳಲ್ಲಿ ನವಾಬನ ಸಂಬಂಧಿಕರ ಗೋರಿಗಳಿವೆ. ಎಡಗಡೆಗೆ ನಾಲ್ಕು ಕಂಬಗಳುಳ್ಳ ಒಂದು ಮಂಟಪವಿದೆ. ಅದು ಅಮೃತಶಿಲೆಯಿಂದ ಆವೃತಗೊಂಡಿದೆ. ಅಲ್ಲಿ ಮೂರು ಗೋರಿಗಳಿವೆ. ಮುಂದೆ ಉತ್ತರ ದಕ್ಷಿಣಾಭಿಮುಖವಾಗಿ ಎರಡು ಸಾಲುಗಳಲ್ಲಿ ಕ್ರಮವಾಗಿ ಎಂಟು ಮತ್ತು ಒಂಬತ್ತು ಗೋರಿಗಳಿವೆ. ಇನ್ನೊಂದು ಕಡೆ ಕ್ವಾಜೀಸ್ ಮಸೀದಿಯಿದೆ. ಅದಕ್ಕೆ ಐದು ಕಮಾನುಗಳು ಒಂದೇ ಸಾಲಿನಲ್ಲಿವೆ. ಈ ಪ್ರಾರ್ಥನಾ ಮಂದಿರಕ್ಕೆ ಹೊಂದಿ

ನವಾಬ್ ಮನೆತನದವರ ನಿವಾಸವಿದೆ. ಅಲ್ಲಿ ಒಂದು ತೆರೆದ ಸ್ತಂಭ ಮಂಟಪ, ಗೋರಿ ಮತ್ತು ಮಧ್ಯದಲ್ಲಿ ಮಸೀದಿ ಇದೆ. ಈ ಬಂಗಲೆಯ ಒಳಗಿನ ಇಕ್ಕೆಲಗಳಲ್ಲಿ ನವಾಬನ ಸಂಬಂಧಿಕರ ಮತ್ತು ಸೈನಿಕರ ಗೋರಿಗಳಿವೆ. ಅಲ್ಲಿರುವ ಮಸೀದಿ (ಪ್ರಾರ್ಥನಾ ಮಂದಿರ)ಯ ಮೇಲ್ಮಹಡಿಗೆ ಹೋಗಲು ದಕ್ಷಿಣ ಗೋಡೆಗೆ ಹೊಂದಿ ಮೆಟ್ಟಿಲುಗಳಿವೆ. ಎಡ ತುದಿಯ ಅಂಚಿನಲ್ಲಿ ಚೌಕಾದ ತೆರೆದ ಒಂದು ಕೋಣೆಯಿದೆ. ಅಲ್ಲಿ ಕುರಾನಿನ ಶ್ಲೋಕಗಳಿವೆ. ಮಸೀದಿ ಕಟ್ಟಡಕ್ಕೆ ಹದಿನೈದು ಮಿನಿರೆಟ್‌ಗಳಿವೆ. ಪಶ್ಚಿಮ, ಉತ್ತರ ಮತ್ತು ದಕ್ಷಿಣ ಗೋಡೆಗಳಲ್ಲಿ ಮೂರು ಪ್ರವೇಶದ್ವಾರಗಳಿವೆ. ಈ ಭವ್ಯವಾದ ಬಂಗಲೆಯನ್ನು ನವಾಬನು ಕಟ್ಟಿಸಿದ್ದು, ಆದರಲ್ಲಿ ಆತನ ಸೈನಿಕರ, ಬಂಧು ಬಳಗದವರ ಗೋರಿಗಳಲ್ಲದೆ ಮಸೀದಿ ಮತ್ತು ವಾಸದ ನಿಲಯುಗಳು ಒಳಗೊಂಡಿವೆ. ಸುಮಾರು ಎರಡು



ಶತಮಾನಗಳಷ್ಟು ಹಳೆಯದಾದ ಈ ಬಂಗಲೆಯು ಹಿಂಬದಿಯಲ್ಲಿ ಒಂದು ಬಾವಿಯಿದೆ. ಅದರ ಗೋಡೆಗಳ ಮೇಲೆ ಚಾಲುಕ್ಯರ ಕಾಲದ ದೇವಾಲಯದ ಫಲಕಗಳು, ಶಿಲ್ಪಗಳು ಇವೆ.

ಶೇರ್ ಸವಾರ್ ಅಥವಾ ಬಾಘ್ ಸವಾಯ ದರ್ಗಾ : ನಗರದ ಪಶ್ಚಿಮದ ಅಂಚಿನಲ್ಲಿ ಪರ್ತಾಪುರ ರಸ್ತೆ ಹತ್ತಿರ ಒಂದು ಪ್ರಸಿದ್ಧ ಶೇರ್ ಸವಾರ್ ಅಥವಾ ಬಾಘ್ ಸವಾರ್ ದರ್ಗಾವಿದೆ. ಶೇರ್ ಸವಾರನ ಹುಟ್ಟೂರು ಇರಾನಿನ ಖೋರಸ ನಗರ. ಕ್ರಿ.ಶ. ೧೩೮೭ರಲ್ಲಿ ಗುಲ್ಬರ್ಗಾದಿಂದ ಬಹಮನಿ ಅರಸ ಇಮ್ಮಡಿ ಮಹಮದ್ ಷಾನು ಆಳುವಾಗ ಈತನು ಕಲ್ಯಾಣಕ್ಕೆ ಆಗಮಿಸಿದನು. ದಂತಕಥೆಯ ಪ್ರಕಾರ ಕಲ್ಯಾಣದಲ್ಲಿ ಈತನು ಸಿಂಹ ಸವಾರಿ ಮಾಡುತ್ತಿದ್ದನೆಂದೂ ಹಾವುಗಳನ್ನು ಬಳಸಿ ಸಿಂಹಗಳನ್ನು ಸಾಧುವನ್ನಾಗಿ ಪರಿವರ್ತಿಸುತ್ತಿದ್ದನೆಂದೂ ಈ ಕಾರಣದಿಂದ ಈತನಿಗೆ ಶೇರ್ ಸವಾರ್ ಅಥವಾ ಬಾಘು ಸವಾರ್ ಎಂಬ ಹೆಸರು ಬಂದಿತೆಂದು ಹೇಳಲಾಗುತ್ತದೆ. ಆತನ ಸ್ಮಾರಕವನ್ನು ಬಹಮನಿ ಅರಸ ಕಟ್ಟಿಸಿದನೆಂದು ಹೇಳುವರು.

ಮಸೀದಿ : ಇಲ್ಲಿಯ ಶಾಸನವೊಂದರಲ್ಲಿ ಮೊಹಮ್ಮದ್ ಬಿನ್ ತುಘಲಕ್ ಷಾಹನ ಆಳ್ವಿಕೆಯಲ್ಲಿ ಕ್ರಿ.ಶ. ೧೩೨೬, ಜನವರಿ ೭ರಂದು ಅಲಿಜುಬ್ಬೇರಿಯ ಮಗ ಅಹಮದನು ಮಸೀದಿಯನ್ನು ಕಟ್ಟಿಸಿದನೆನ್ನಲಾಗಿದೆ. ಆ ಸಂದರ್ಭದಲ್ಲಿ ಮಲಿಕುಷ್‌ಷಾರಖ್ ಕಿವಾಮುದ್ ದೌಲತ್‌ನು ಇಕ್ತನಾಗಿದ್ದನು ಹಾಗೂ ದೇವಗಿರಿ ನಾಡಿನ ಅಧಿಕಾರಿ (ಇಕ್ಲಿಮ್) ವರ್‌ದೀನ್ ತಜೀರ ಆಗಿದ್ದನು.

ಕೋಟೆ ಒಳಗಿನ ಮಸೀದಿ : ಅಖಂಡ ಮಹಾದ್ವಾರ ಹತ್ತಿರವಿರುವ ಮಸೀದಿಯನ್ನು ೧೬-೯-೧೩೩೩ರಲ್ಲಿ ಮಹಮದ್ ಬಿನ್ ತುಘಲಕ್ ಷಾಹನ ಆಳ್ವಿಕೆಯ ಕಾಲದಲ್ಲಿ ಸಮಾಸಾಪಿರೀಯನ ಮಗ ಬರ್ಹಾನ್ ಕಟ್ಟಿಸಿದನೆಂದು ಅಲ್ಲಿಯ ಶಾಸನವೊಂದು ತಿಳಿಸುತ್ತದೆ.

ನಗರದ ಷಹಾಪುರಗಲ್ಲಿ ಮಸೀದಿ : ನಗರದ ಷಹಾಪೂರ್ ಪೇಟೆಯಲ್ಲಿರುವ ಈ ಮಸೀದಿಯ ತಳಪಾಯವನ್ನು ಆದಿಲ್ ಷಾಹಿ ಮನೆತನದ ಇಮ್ಮಡಿ ಇಬ್ರಾಹಿಂನ ಆಳ್ವಿಕೆಯ ಕ್ರಿ.ಶ. ೧೫೮೭ರಲ್ಲಿ ಮೂ ಅಮ್ಲ ಕಲ್ಯಾಣದ ಮುಖ್ಯ ಖಸಬಾರ್‌ನು ಹಾಕಿದನು. ಅಮೀರ್ ಇಜಮ್ಲ ವಜೀರ ಮತ್ತು ಮೀನ ಇನಿ ಅವರ್ ಖಾನ ಈ ಸಂದರ್ಭದಲ್ಲಿ ಅಲ್ಲಿ ಅಧಿಕಾರಿಗಳಾಗಿದ್ದರು. ತದನಂತರ ಅಮೀರ್ ಖಾನ ಎಂಬವನು ಒಂದು ಸಾವಿರ ಹೊನ್ನನ್ನು ಖರ್ಚು ಮಾಡಿ ಈ ಮಸೀದಿಯನ್ನು ಕಟ್ಟಿಸಿದನೆನ್ನಲಾಗಿದೆ.

ಜಾಮೀಮಸೀದಿ : ಈ ಮಸೀದಿಯನ್ನು ಕ್ರಿ.ಶ. ೧೩೨೩, ಡಿಸೆಂಬರ್ ೧೦ರಂದು ಕಸಬಾ ಕಲ್ಯಾಣದಲ್ಲಿ ಉಲೂಘ್ ಕುತಿ ಉಫ್ ಮಲಿಕ್ ಇಮುಲುಕಿ ಇಷಷರ್ಕ ವನ್‌ಸಿನ್ ಇಖ್ತಿಯಾರುದ್ ದಿನ್ ಷಾಹಿನ್ ಸುಲ್ತಾನಿಯು ತುಘಲಕ್‌ನ ಘಿಯಾಸುದ್ದೀನ್ ತುಘಲಕ್ ಷಾಹನ ಆಳ್ವಿಕೆಯ ಕಾಲದಲ್ಲಿ ಕಟ್ಟಿಸಿದನೆಂದು ಅಲ್ಲಿಯ ಶಾಸನವೊಂದು ಹೇಳುತ್ತದೆ.

ಸಯ್ಯದ್ ಪೀರ್ ಷಾ ದರ್ಗಾ : ಈ ದರ್ಗಾದ ದಕ್ಷಿಣ ಕಮಾನನ್ನು ಕಲ್ಯಾಣಿ ನವಾಬ ಮೊದಲನೇ ಖೈರುದ್ದೀನ್ ಕ್ರಿ.ಶ. ೧೮೧೩ರಲ್ಲಿ ಕಟ್ಟಿಸಿದನು. ಈತನು ನಿಜವಾದ (ಹಾತಿಜ್-ಇ-ಹಕೀಖೀ) ರಕ್ಷಕನೆನ್ನಲಾಗಿದೆ.

ಮದೀನ ಮಸೀದಿ : ನವಾಬ್ ಗೋರಿಗಳ ಹತ್ತಿರದಲ್ಲಿ ಈ ಮದೀನ ಮಸೀದಿಯಿದೆ. ಅದನ್ನು ಕ್ರಿ.ಶ. ೧೮೫೯ರಲ್ಲಿ (೧೮೪೭) ಕಲ್ಯಾಣಿ ನವಾಬ ಇಮ್ಮಡಿ ಖೈರುದ್ದೀನ್‌ನನು ಕಟ್ಟಿಸಿದನು. ಅದಕ್ಕೆ ಪ್ರವೇಶದ್ವಾರದ ಕಮಾನನ್ನು ಮತ್ತು ಅದರ ಬದಿಯಲ್ಲಿ ಬಾವಿಯನ್ನು ಕಟ್ಟಿಸಿದನು.

ಈದ್ಗಾ ಮೈದಾನ : ಈದ್ಗಾ ಮೈದಾನವನ್ನು ಕ್ರಿ.ಶ. ೧೭೮೭-೮೮ರಲ್ಲಿ ಕಟ್ಟಲಾಯಿತೆಂದು ಅಲ್ಲಿಯ ಶಾಸನವೊಂದು ತಿಳಿಸುತ್ತದೆ.

ಬಾವಿ : ಕ್ರಿ.ಶ. ೧೬-೧೮ನೇ ಶತಮಾನದ ಅನೇಕ ಬಾವಿಗಳಿವೆ. ಒಂದು ಬಾವಿಯನ್ನು ಕ್ರಿ.ಶ. ೧೮೨೩-೨೪ರಲ್ಲಿ ಕಟ್ಟಲಾಯಿತೆಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ.

ಗೋರಿಗಳು : ನವಾಬರ ಅನೇಕ ಗೋರಿಗಳು ಇಲ್ಲಿವೆ. ಹೊಸ ಬಂಗಲೆಯ ಕಾಂಪೌಂಡ್ ಒಳಗಡೆ ನವಾಬನ ಗೋರಿಗಳ ಬದಿಯಲ್ಲಿ ದಕ್ಷಿಣ-ಉತ್ತರವಾಗಿ ಕ್ರಿ.ಶ. ೧೮೨೦ ಜನವರಿ ೧೪ರ ಕಮಾಲುನ್ ನಿಗಾ ಬೇಗಂಳ ಗೋರಿಯೂ ಇದೆ.

ನವಾಬನ ಗೋರಿಯ ಬದಿಗೆ ಇನ್ನೊಂದು ಗೋರಿಯಲ್ಲಿ ಕ್ರಿ.ಶ. ೧೯ನೇ ಶತಮಾನದ ಪರ್ಶಿಯನ್ ಶಾಸನದಲ್ಲಿ ಪ್ರಾರ್ಥನಾ ಶ್ಲೋಕವಿದೆ. ಅಲ್ಲಿಯ ಕ್ರಿ.ಶ. ೧೮೫೨ರ ಇನ್ನೊಂದು ಗೋರಿಯು ಇಮ್ಮಡಿ ಸಾಬ್ ಖೈರುದ್ದೀನನದಾಗಿದೆ. ಅಲ್ಲಿಯ ಇನ್ನೊಂದು ಶಾಸನದಲ್ಲಿ ಈ ಶಾಸನ ರಚಿಸಿದವನು ಪೈದ್ ಎಂದಿದೆ. ನವಾಬನ ಗೋರಿ ಮಧ್ಯದಲ್ಲಿ ಕ್ರಿ.ಶ. ೧೮೨೨ ಜನವರಿ ೨೯ರ ಮೊದಲನೆ ಷಾ ಖೈರುದ್ದೀನ್ ಗೋರಿಯಿದೆ. ಅದರ ಬದಿಗೆ ಪಶ್ಚಿಮಕ್ಕೆ ಮುಖಮಾಡಿದ ಕ್ರಿ.ಶ. ೧೯ನೇ ಶತಮಾನದ ದುರೂದ್‌ನ ಗೋರಿಯಿದೆ. ಅಲ್ಲಿ ಒಬ್ಬ ಹೆಂಗಸಿನ ಗೋರಿಯ ಮೇಲೆ ಕ್ರಿ.ಶ. ೧೮೩೨ ಜನವರಿ ೧ರ ಅರೆಬಿಕ್ ಮತ್ತು ಪರ್ಷಿಯನ್ ಶಾಸನದಲ್ಲಿ ಅಲ್ಲಾನ ಕುಷಿಯುಳ್ಳ ಶ್ಲೋಕವಿದೆ.

ನೂಬ್‌ಗೋರಿ ಉತ್ತರ ಮಹಾದ್ವಾರ : ನವಾಬನ ಗೋರಿಗಳು ಉತ್ತರ ಪ್ರವೇಶದ್ವಾರವನ್ನು ಕ್ರಿ.ಶ. ೧೮೪೭-೪೮ರಲ್ಲಿ ಕಲ್ಯಾಣಿಯ ನವಾಬ ಇಮ್ಮಡಿ ಖೈರುದ್ದೀನ್ ಕಟ್ಟಿಸಿದನು.

ಗೋರಿ ಬದಿಯ ಬಾವಿ : ನವಾಬನ ಗೋರಿಗಳ ಪಶ್ಚಿಮಕ್ಕಿರುವ ಬಾವಿಯನ್ನು ಕಲ್ಯಾಣಿ ನವಾಬ ಇಮ್ಮಡಿ ಖೈರುದ್ದೀನ್ ಕಟ್ಟಿಸಿದನು.

ಬಂದೂಕುಗಳು : ನಗರದ ಕೋಟೆಯಲ್ಲಿ ಅನೇಕ ಬಂದೂಕುಗಳಿವೆ. ಕೋಟೆ ಮೇಲಿನ ರಂಗಮಹಲ್‌ನ ಮುಂದಿರುವ ಬಂದೂಕನ್ನು ಕ್ರಿ.ಶ. ೧೮೧೭-೧೮ರಲ್ಲಿ ಕಲ್ಯಾಣಿ ನವಾಬ ಮೊದಲನೇ ಖೈರುದ್ದೀನ್ ಕಾಲದಲ್ಲಿ ತಯಾರಿಸಲಾಗಿದೆ. ಈ ಬಂದೂಕನ್ನು ದರ್ಬನ್ ಇ ಮಷಕಿ ಕುಷಾ ಎಂದು ಕರೆಯಲಾಗಿದೆ. ಬಸವಕಲ್ಯಾಣದಲ್ಲಿ ಅಳಿದುಳಿದ ಮುಸ್ಲಿಂ ಸ್ಮಾರಕಗಳ ಸಮಗ್ರ ಸಂಶೋಧನೆ ನಡೆದರೆ, ಮಧ್ಯಕಾಲೀನ ಮುಸ್ಲಿಂ ಆಡಳಿತದ ಅನೇಕ ವಿವರಗಳು ಬೆಳಕಿಗೆ ಬರುವ ಸಾಧ್ಯತೆಗಳಿವೆ. ■

೧೧. ಇನ್ನಿತರ ಸ್ಮಾರಕಗಳು


ನಗರದಲ್ಲಿ ಅನೇಕ ಆಧುನಿಕ ದೇವಾಲಯ-ಮಠಗಳಿವೆ. ಅವುಗಳಲ್ಲಿ ಸದಾನಂದಮಠ, ಕಂಬಳಿಮಠ, ಮೂರಲಿಂಗೇಶ್ವರ ದೇವಾಲಯ ಇತ್ಯಾದಿ ಮಹತ್ವವೆನಿಸಿವೆ. ಸು. ಕ್ರಿ.ಶ. ೧೧-೧೨ನೇ ಶತಮಾನದವರೆಗಿನ ಅನೇಕ ಕಂಬಗಳು, ಲಲಾಟ ಪಟ್ಟಿಕೆಗಳು, ಬೋಧುಗೆ, ಗೋಡೆ ಫಲಕಗಳು, ಹೊಸ್ತಿಲಗಳು, ಉತ್ತರಾಂಗ, ಬಾಗಿಲು ಚೌಕಟ್ಟುಗಳು, ಛತ್ತಿನ ಭಾಗಗಳು, ಚಂದ್ರಶಿಲೆಗಳು, ಬ್ಯಾಲಸ್ಟ್ರೇಡ್‌ಗಳು, ಕಥಾನಕ ದೃಶ್ಯ ಫಲಕಗಳು ಚದುರಿಹೋಗಿವೆ. ಕಂಬಗಳಲ್ಲಿ ಕೆಲವುಗಳಿಗೆ ಎರಡು ಚೌಕಗಳಿದ್ದರೆ, ಕೆಲವುಗಳು ಉದ್ದವಾಗಿ ಮತ್ತು ನೀಳವಾಗಿವೆ. ಪದ್ಮತರಗಳಿವೆ. ಕೆಲವು ಬೋಧಿಗೆಗಳಲ್ಲಿ ಕುಬ್ಜರಿದ್ದಾರೆ. ಕೆಲವುಗಳಲ್ಲಿ ಶಿಲಾಬಾಲಕಿಯರನ್ನು ಕೂಡಿಸಿದ ಗುರುತುಗಳಿವೆ. ಸುಕನಾಸಿ ಭಾಗದ ಅಲಂಕರಣಗಳಲ್ಲಿ ಅರೆಗಂಬ, ದ್ವಾರಪಾಲಕಿ, ಹೂಬಳ್ಳಿಗಳ ಅರ್ಧವೃತ್ತಗಳಿವೆ. ಚಂದ್ರಶಿಲೆಯ ಬದಿಗಳಲ್ಲಿ ನಿಂತ ಸಿಂಹಗಳಿವೆ. ಲಕ್ಷ್ಮಿ, ಜಿನ, ಕೇಶವರುಳ್ಳ ಸ್ತಂಭತೋರಣ ಫಲಕಗಳಿವೆ. ದೇವಾಲಯ ಸುಕನಾಸಿ ಭಾಗದಲ್ಲಿ ನಿಲ್ಲಿಸಿದ ನಿಂತ ಸಿಂಹವಿದೆ. ಅದು ಒಂದು ಕಾಲಿನಿಂದ ಆನೆಯನ್ನು ತುಳಿಯುತ್ತಿದೆ. ಈ ಶಿಲ್ಪವು ಹೊಯ್ಸಳರ ಸಿಂಹ ಶಿಲ್ಪವನ್ನು ನೆನಪಿಸುತ್ತದೆ. ಉತ್ತರಾಂಗ ಪಟ್ಟಗಳಲ್ಲಿ ವಿವಿಧ ವಿಮಾನ ಮಾದರಿಗಳಿವೆ. ಕದಗಳಲ್ಲಿ ನಟರಾಜ, ಶಿವಪಾರ್ವತಿಯರ ಚಿತ್ರಗಳಿವೆ. ಲಲಾಟಪಟ್ಟಿಗಳಲ್ಲಿ ಸರಸ್ವತಿ, ಗಣೇಶ ಮುಂತಾದ ಚಿತ್ರಗಳಿವೆ. ದೇವಾಲಯದ ಒಂದು ಪಟ್ಟಿಕೆಯಲ್ಲಿ ಪಂಚತಂತ್ರದ ಒಂದು ದೃಶ್ಯವಿದೆ. ಅಲ್ಲಿ ಮಂಗವು ಸೀಳಿದ ಕೊರಡಿನಲ್ಲಿ ತನ್ನ ಬಾಲವನ್ನು ಸಿಗಿಸಿಕೊಂಡು ಒದ್ದಾಡುತ್ತಿದೆ. ಜೊತೆಯಲ್ಲಿ ಇನ್ನಿತರ ಚಿತ್ರಗಳಿವೆ. ಕಕ್ಷಾಸನ ಹೊರಗೋಡೆಯಲ್ಲಿ ಅಲಂಕರಿಸಿದ ಚಿತ್ರಗಳಿವೆ. ಇವುಗಳಲ್ಲದೇ ಇಂದ್ರ, ಶಿವಲಿಂಗದ ಮುಂದೆ ಇಟ್ಟ ಐದು ದುಂಡಾದ ಕಡುಬುಗಳ ಶಿಲ್ಪ, ವೀರಗಲ್ಲು, ಮಾಸ್ತಿಕಲ್ಲು, ನಿಸಿಧಿ, ಮಗುವನ್ನು ಎತ್ತಿಕೊಂಡು ಕುಳಿತ ತಾಯಿಯನ್ನು ಕೊಲ್ಲುವ ದೃಶ್ಯವುಳ್ಳ ಶಿಲ್ಪ, ರಾಶಿ ಫಲಕ ಮುಂತಾದ





ಶಿಲ್ಪಗಳಿವೆ. ಒಂದೇ ಸಾಲಿನಲ್ಲಿ ಮೂವರ ಮುಖಗಳನ್ನು ತೋರಿಸಿದ ಶಿಲ್ಪವಿದೆ. ಈ ರೀತಿ ಶಿಲ್ಪ ಹಾವೇರಿ ಜಿಲ್ಲೆಯ ದೇವಗಿರಿಯಲ್ಲೂ ಇದೆ. ಈ ನಗರದ ಇನ್ನಿತರ ಸ್ಮಾರಕಗಳು ಹೀಗಿವೆ.

ಗೀರ್ ಮನೆತನದ ಬೃಂದಾವನಗಳು: ನಗರದ ಗೋಸಾಯಿಗಲ್ಲಿಯಲ್ಲಿ ಒಂದು ಭವ್ಯವಾದ ಮಹಂತ ಮಠವಿದೆ. ಅದನ್ನು ಗೋಸಾಯಿ ಮಠವೆನ್ನುವರು. ಅಲ್ಲಿ ಈ



ಮನೆತನದ ಸು. ೨೫ ಮನೆಗಳಿವೆ. ಅವರನ್ನು ಗೀರ್ ಮನೆತನದವರೆಂದು ಮತ್ತು ಅವರನ್ನು ಜಾಗೀರದಾರ್ ಎನ್ನುವರು. ಅವರ ಮೂಲ ವಂಶಸ್ಥ ಮಹಾಂತ ತಾಪಗೀರ್ ರಾಜಸ್ಥಾನದಿಂದ ಕಲ್ಯಾಣಕ್ಕೆ ಆಗಮಿಸಿ ಈ ಗೋಸಾಯಿ ಮಠವನ್ನು ಸ್ಥಾಪಿಸಿದ. ಅವರಿಗೆ ಉಂಬಳಿಯಿಂದ ಬಂದ ಸುಮಾರು ೨೦೦೦ ಎಕರೆ ಭೂಮಿ ಇದ್ದಿತು. ಈ ವಂಶದಲ್ಲಿ ಈಗಿರುವವರು ೧೧ನೇ ವಂಶಜರಾಗಿದ್ದಾರೆ. ಅಲ್ಲಿಯ ಈ ವಂಶಜರ ಒಂದು ಬಾವಿ ಸುಮಾರು ಎರಡು ಎಕರೆ ವಿಸ್ತೀರ್ಣದಲ್ಲಿದೆ . ಅಲ್ಲದೆ ಭಾಲ್ಕಿಯಲ್ಲಿ ಭಲ್ಲೇಶ್ವರ ಮಠ ಮತ್ತು ಇನ್ನೊಂದನ್ನು ಚಿಟುಗುಪ್ಪಾದಲ್ಲಿ ಕಟ್ಟಿರುವರು. ಒಂದೇ ಮನೆಯಲ್ಲಿರುವ ಸಮಾಧಿಗಳಿಗೆ ಬೃಂದಾವನ ಎಂದು ಕರೆಯುವರು. ಅದೊಂದು ಭವ್ಯವಾದ ಮಠ. ಅಲ್ಲಿಯ ತಾಪ್‌ಗಿರ್ ಮಹಾರಾಜರ ಮನೆಯಲ್ಲೂ ಬೃಂದಾವನದಂತಹ ಸಮಾಧಿಗಳಿವೆ. ರುಬ್‌ಗೀರ್ ಮಹಾರಾಜ ವಾಸದ ಮನೆಯು ಒಂದು ವಾಡೆಯಂತಿದೆ. ವಾಡೆಗೆ ಭವ್ಯವಾದ ಕಟ್ಟಡವಿದೆ. ಒಳಗಡೆ ಈ ಮನೆತನದ ಪೂರ್ವಜರ ಎಂಟು ಸಣ್ಣ ಸಮಾಧಿಗಳಿವೆ. ಕೆಲವು ಬೃಂದಾವನ ರೀತಿಯಲ್ಲಿ ಸಂಬಂಧಿಕರ ಮನೆಯಾದ ಮಹಂತ್ ರಾಯ್‌ಗಿರ್, ಕೇಶವಗಿರ್, ಜಾಗೀರದಾರ್ ಮನೆಯ ಒಳಗಡೆ ವಿಸ್ತಾರವಾದ ತೆರೆದ ಆವರ್ಣದಲ್ಲೂ ಅನೇಕ ಬೃಂದಾವನಗಳಿವೆ. ಅವುಗಳ ಶಿಲಾಫಲಕಗಳನ್ನು ಡಾಲ್‌ರೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಅವುಗಳ ಜಗಲಿ ಮತ್ತು ಕಟ್ಟೆಗಳಿಗೂ ಈ ಕಪ್ಪು ಶಿಲೆಯ ಹಲಗೆಗಳಿಂದ ಆವೃತಗೊಳಿಸಲಾಗಿದೆ. ಕಾಲ ಸುಮಾರು ಮೂರು ಶತಮಾನಗಳಷ್ಟು ಪ್ರಾಚೀನ. ವಿಶೇಷವೆಂದರೆ ಈ ಮನೆತನದ ಪೂರ್ವಜರ ಅನುಗ್ರಹದಿಂದ ಕಲ್ಯಾಣ ಚಾಲುಕ್ಯರ ಅರಸನಿಗೆ ಮಕ್ಕಳ ಸಂತಾನ ಪ್ರಾಪ್ತವಾಯಿತೆಂಬ ಐತಿಹ್ಯವಿದೆ. ಅವರು ವೈದಿಕ ಪದ್ಧತಿಯನ್ನು ಅನುಸರಿಸುವರು. ಅಲ್ಲಿರುವ ಎತ್ತರವಾದ

ಆಯತಾಕಾರದ ಶಿಲಾಮಯ ಸಮಾಧಿಯು ತಾಪಗಿರ್ ರಾಜ ಮಹಾರಾಜರದೆಂದು ಹೇಳುವರು. ಈ ಮನೆತನದವರು ಸ್ವಾಮಿಗಳಾಗಿದ್ದವರಿಗೆ ಬೃಂದಾವನದಂತಹ ಕಟ್ಟಡಗಳನ್ನು ಇನ್ನುಳಿದವರಿಗೆ ಕೇವಲ ಸಾಧಾರಣ ಸಮಾಧಿಗಳನ್ನು ಕಟ್ಟುವ ಪರಂಪರೆಯಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನದ ಅವಶ್ಯವಿದೆ.



ಸದಾನಂದ ಮಠ : ನಗರದ ಸದಾನಂದಮಠ ವಿಶಾಲವಾದ ಭವ್ಯ ಕಟ್ಟಡ ಅದು ಆನಂದ ಸಂಸ್ಥೆಯ ಮಠ. ಯತಿ ಸದಾನಂದರು ಅದನ್ನು ಸ್ಥಾಪಿಸಿದರು. ಅದು ದತ್ತಾತ್ರೇಯ ಪರಂಪರೆಗೆ ಸೇರಿದೆ. ಈ ಮಠವನ್ನು ವೀರಶೈವ ಭಕ್ತನೊಬ್ಬ ಕಟ್ಟಿಸಿದನೆನ್ನುವರು. ಸದಾನಂದರ ಜೀವಂತ ಸಮಾಧಿ ಅಲ್ಲಿದೆ. ಸುಮಾರು ಕ್ರಿ.ಶ. ೧೧-೧೨ನೇ ಶತಮಾನದ ಅನೇಕ ಶಿಲ್ಪಗಳೂ ಅಲ್ಲಿವೆ. ಅವುಗಳಲ್ಲಿ ಗಣೇಶ, ಕುಸುರಿಕೆತ್ತನೆಯ ಮಕರತೋರಣದ ಒಂದು ಭಾಗ ವಿಶೇಷ ಗಮನವನ್ನು ಸೆಳೆಯುತ್ತವೆ.

ಬಸವಕಲ್ಯಾಣ ನಗರದ ಉತ್ಪನ್ನವುಳ್ಳ ಧಾರ್ಮಿಕ ಸ್ಮಾರಕಗಳ ಯಾದಿ

೧. ಜಾಮಿ ಮಸೀದಿ
೨. ಮಸೀದಿ (ಕಾಶಿಚವಡಿ)
೩. ಮಸೀದಿ ಸಂಗಸೆಹ
೪. ಮಸೀದಿ (ಷಹಪೂರಗಲ್ಲಿ)
೫. ಮಸೀದಿ (ದೇಶಪಾಂಡೆಗಲ್ಲಿ)
೬. ಮಸೀದಿ (ಬಜಾರ್)
೭. ಮಸೀದಿ ಸರ್ ನವಾಬ್
೮. ದರ್ಗಾ ಹಜರತ್ ಮೌಲಾನಾ ಯಾಕುಬಸಾಬ್
೯. ದರ್ಗಾ ಹಜರತ್ ಸೈಯದ್ ತಾಜುದ್ದೀನ್ ಷೇರ್‌ಸವಾರ್
೧೦. ತಂಕಟ್‌ಬಹರ್ ಅಲ್‌ಷಹ
೧೧. ದತ್ತಾತ್ರೇಯ ದೇವಾಲಯ
೧೨. ವಿಠೋಬ ದೇವಾಲಯ
೧೩. ವಿಠಲೇಶ್ವರ ಮಂದಿರ
೧೪. ಮಾಣಿಕಪ್ರಭು ದೇವಾಲಯ (ಕಾಳಿಗಲ್ಲಿ)
೧೫. ಬಾಲಾಜಿ ಮಂದಿರ
೧೬. ಮಾರುತಿ ಮಂದಿರ
೧೭. ಮಾರುತಿ ಮಂದಿರ (ಕಾಳಿಗಲ್ಲಿ)
೧೮. ಮಹಾದೇವ ದೇವಾಲಯ
೧೯. ಭವಾನಿ ಮಂದಿರ
೨೦. ಕಂಬಾಳಿಮಠ
೨೧. ಶಿವರಾಂ ಮಹಾರಾಜಮಠ
೨೨. ಮಹಂತಮಠ
೨೩. ಶಿವಲಿಂಗ ಗಾಡಿಮಠ
೨೪. ಶಿವಲಿಂಗಯ್ಯಮಠ
೨೫. ಬಸವಣ್ಣೆಪ್ಪ ಮಠ
೨೬. ಗದ್ದಿಮಠ
೨೭. ಶ್ಯಾಮ್‌ಶೈರ್ ಗಿರ್‌ಮಠ
೨೮. ಸಂತೋಷ ಆನಂದಗಿರ್ ಮಠ
೨೯. ಮಾರುತಿಮಠ ಕೇಶವಗಿರ್
೩೦. ಸದಾನಂದಸ್ವಾಮಿ ಮಠ
೩೧. ಶಾನಭೋಗ ಮಠ
೩೨. ಬಸವೇಶ್ವರ ಮಂದಿರ


೧೨. ನಗರದ ಗುಹೆಗಳು

ನಗರದ ಜವಾಹರ್ ಸಿನಿಮಾ ಮಂದಿರ ರಸ್ತೆ ಮತ್ತು ಪೊಲೀಸ್ ಠಾಣೆ ಹತ್ತಿರ ಉತ್ತರಕ್ಕೆ ಉದ್ದವಾದ ಲ್ಯಾಟ್ರಿಯೀಟ್(ಜಮ್ಮಿಟ್ಟಿಗೆ) ದಿನ್ನೆಯಿದೆ. ಈ ದಿನ್ನೆಯ ಪೂರ್ವ ಮುಖದಲ್ಲಿ ಒಂದು ಡಜನ್‌ಗಿಂತ ಹೆಚ್ಚು ಛತ್ತುಳ್ಳ ಮತ್ತು ಛತ್ತು ಇಲ್ಲದ ಗುಹೆಗಳಿವೆ. ಆ ಸ್ಥಳಕ್ಕೆ ಸ್ಥಳಿಕರು ಲೇಣಗಲ್ಲಿ ಎನ್ನುವರು. ಲೇಣಗಳಲ್ಲಿ ಸದಾ ಹಂದಿಗಳಿರುತ್ತವೆ. ಕೆಲವರಿಗೆ ಅವು ವಾಸದ/ಟಾಯ್‌ಲೆಟ್ ಸ್ಥಳವಾಗಿವೆ. ಭವ್ಯವಾದ ಒಂದು ವಿಶಾಲ ಗುಹೆಯು ಕೆಟ್ಟ ವಾಸನೆಯಿಂದ ಕೂಡಿದೆ. ಈ ದಿನ್ನೆಯು ಉತ್ತರ-ದಕ್ಷಿಣಾಭಿಮುಖವಾಗಿ ಹರಡಿದೆ. ಅಲ್ಲಿ ವಿಭಿನ್ನ ಗಾತ್ರ ಮತ್ತು ಎತ್ತರದ ಗುಹೆಗಳನ್ನು ಕೊರೆಯಲಾಗಿದೆ.

ಛತ್ತುಳ್ಳ ಗುಹೆಗಳು :

ನಂ. ೧ : ಮೊದಲನೆಯ ಗುಹೆಯು ೭.೨೫ ಮೀಟರ್ ಉದ್ದವಿದೆ. ಅದರ ಎತ್ತರ ೧.೮೫ ಮೀ. ಬಲಬದಿಗೆ ಅಡ್ಡವಾಗಿ ಗೋಡೆಯಂತಿರುವ ಭಾಗ ೧.೨೫ ಮೀ.ಯಿದೆ. ಅಲ್ಲಿಂದ ಹಿಂದಿನ ಗೋಡೆಯವರೆಗೆ ೧.೭೫ ಮೀ. ಉದ್ದವಾಗಿದೆ. ಎಡಗೋಡೆ ನೇರವಾಗಿ ೨.೦೦ ಮೀ. ಹೀಗಾಗಿ ಈ ಗುಹೆಯು ಆಯತಾಕರದಲ್ಲಿ ೭.೨೫x೧.೭೫ ಮೀ. ವ್ಯಾಪ್ತಿಯಲ್ಲಿರುವುದು ತಿಳಿಯುತ್ತದೆ.

ನಂ. ೨ : ಎರಡನೇ ಗುಹೆಯು ಕೇವಲ ಸ್ವಲ್ಪ ಒಳಭಾಗದಲ್ಲಿ ಕತ್ತರಿಸಲಾಗಿದೆ. ಅದರ ಬಲಭಾಗದ ಗೋಡೆ ೧.೨೫ ಮೀ. ಅದರ ಉದ್ದ ೨.೩೦ ಮೀ. ಎಡಗಡೆಯ ಗೋಡೆಯನ್ನು ಕತ್ತರಿಸಿಲ್ಲ. ಹಿಂದಿನ ಗೋಡೆಯು ಸ್ವಲ್ಪ ಮುಂದಿನ ಅಂಚಿನವರೆಗೆ ವಿಸ್ತರಿಸಿದೆ.



ನಂ. ೩ : ಎರಡನೇ ಗುಹೆಯಿಂದ ಎಡ ಭಾಗದಲ್ಲಿ ೧.೦೦ ಮೀ. ದೂರ, ಮೂರನೇ ಗುಹೆಯನ್ನು ಕೊರೆಯಲಾಗಿದೆ. ಅದೂ ಆಯತಾಕಾರದಲ್ಲಿದೆ. ಅದರ ಮೂರು ಗೋಡೆಗಳು ೨.೪೫ x ೨.೮೫ x ೨.೨೦ ಮೀ ಮತ್ತು ಎತ್ತರ ೨.೧೦ ಮೀ. ಗುಹೆಯ ಪ್ರವೇಶದಲ್ಲಿ ಎರಡು ಕಡೆ ಗೋಡೆಗಳಿವೆ. ಮುಂದಿನ ಅಂಚಿನಲ್ಲಿ ತಲಾ ಒಂದುಕಡೆ ಒಂದೊಂದು ಚೌಕಾಕಾರದ ಕಂಬಗಳಿವೆ. ಅವುಗಳು ಶಿಥಿಲಗೊಂಡಿವೆ.

ನಂ. ೪ : ಮೂರನೆಯ ಗುಹೆಯ ಎಡಕ್ಕೆ ೨.೬೫ ಮೀ. ದೂರದಲ್ಲಿ ಒಂದು ತೆರೆದ ಗುಹೆಯಿದೆ. ಅದರಲ್ಲಿ ಕಿರು ಆಳವುಳ್ಳ ಐದು ಗುಹೆಗಳು ಒಂದೇ ಸಾಲಿನಲ್ಲಿವೆ. ಅದು ನಾಲ್ಕನೆಯ ಗುಹೆ. ಎಡಗೋಡೆ ೦.೮೦ಮೀ. ಹಿಂದೆ ಸ್ವಲ್ಪ ಅರ್ಧ ವೃತ್ತದ ಗೋಡೆ. ೮೦ ಮೀ. ಬದಿಯ ಗೋಡೆ, ೦.೦೬ ಮೀ. ಅಧರ ಬದಿಯ ಕಿರು ಆಳವುಳ್ಳ (ಎರಡನೆಯದು) ಗುಹೆ ೧.೧೦ ಮೀ. ಅದರ ಎಡಗಡೆಯ ಗೋಡೆ ೦.೨೦ ಮೀ. ಬದಿಗೆ ಮೂರನೆಯ ಕಿರು ಆಳವುಳ್ಳ ಗುಹೆ ೧.೪೦ ಮೀ. ಬದಿಯ ಗೋಡೆ .೦೭ ಮೀ. ನಾಲ್ಕನೆಯ ಕಿರು ಗುಹೆ ೧.೦೦ ಮೀ. ಬದಿಯ ಗೋಡೆ ೦.೬೫ ಮೀ ಐದನೆಯ ಕಿರು ಆಳದ ಗುಹೆ ೧.೦೫ ಮೀ. ಬದಿಯ ಗೋಡೆ .೩೦ ಮೀ. ಅದರ ಎಡತುದಿಯಿಂದ ಮುಂದೆ ಚಾಚಿದ ಗೋಡೆ ೩.೪೦ ಮೀ. ಅಧರ ಬದಿಯಗೋಡೆ ೧.೧೦ಮೀ. ಆದರ ಛತ್ತಿನ ಒಂದು ಭಾಗದಲ್ಲಿ ಆಯಾತಾಕಾರದಲ್ಲಿ ಕತ್ತರಿಸಲಾಗಿದೆ. ಕಾರಣ ತಿಳಿದಿಲ್ಲ.

ನಂ. ೫ : ನಾಲ್ಕನೆಯ ಗುಹೆಯ ಬದಿಯ ಐದನೆಯ ಗುಹೆಯು ಅಂಚಿನಿಂದ ೧.೧೦ ಮೀ ದೂರವಿದೆ. ಈ ಗುಹೆಯು ಆಯತಾಕಾರದಲ್ಲಿದೆ. ಮೂರು ಕಡೆಗಳ ಗೋಡೆಯು ಕ್ರಮವಾಗಿ ೩.೬೫ ಮೀ x ೨.೨೫ ಮೀ x ೨.೦೦ ಮೀ ಇದೆ. ಅದರ ಎತ್ತರ ೨.೧೦ ಮೀ ಹೀಗಾಗಿ ಇದೊಂದು ತೆರೆದ ಆಯತಾಕಾರ ಗುಹೆಯಾಗಿದೆ. ಅದರ ಮೂರು ಕಡೆಗಳ ಗೋಡೆಗಳು .೭೦ ಮೀ x ೦.೮೦ ಮೀ x .೪೫ ಮೀ ಅದರ ಎತ್ತರ. ಈ ಗುಹೆಗೆ ಉಪ್ಪರಿಗೆ ಇದ್ದು, ಒಂದು ಕೋಣೆಯನ್ನು ಕೊರೆಯಲಾಗಿದೆ. ಅದರ ಉದ್ದಗಲ ಸು. ೧೮ ಅಡಿ x ೧೦ ಅಡಿ ಮಧ್ಯದಲ್ಲಿ ತೆರೆದ ಬಾಗಿಲಿದೆ. ಅದರ ಮಗ್ಗುಲುಗಳ ಗೋಡೆಯಲ್ಲಿ ತೆರೆದ ಕಿಡಿಕಿಗಳಿವೆ. ಏಕಶಿಲೆಯ ಉಪ್ಪರಿಗೆಯುಳ್ಳ ಈ ಗುಹೆಯು ಅಪರೂಪದ್ದಾಗಿದೆ.

ನಂ. ೬ : ಆರನೆಯ ಗುಹೆಯು ಅತ್ಯಂತ ದೊಡ್ಡದು. ಐದನೆಯ ಗುಹೆಯ ಎಡಗಡೆ ಇದನ್ನು ಆಳವಾಗಿ ಕೊರೆಯಲಾಗಿದೆ. ಆಯತಾಕಾರದಲ್ಲಿರುವ ಈ ಗುಹೆಯಲ್ಲಿ ಒಟ್ಟು ಐದು ಸಾಲು ಕಂಬಗಳಿವೆ. ಮುಂಭಾಗದಲ್ಲಿ ಎರಡು ಸಾಲುಗಳಲ್ಲಿ ನಾಲ್ಕು ಕಂಬಗಳಿವೆ. ಉದ್ದವಾಗಿ ಒಂದು ಕಂಬದಿಂದ ಇನ್ನೊಂದು ಕಂಬದವರೆಗೆ ಅಂತರವು ೩..೨೦ ಮೀ. ಇದೆ. ಅಗಲವಾಗಿ ಮುಂದಿನ ಮತ್ತು ಹಿಂದಿನ ಕಂಬಗಳ ನಡುವಿನ ಅಂತರ ೧.೪೦ ಮೀ. ದಿಂದ ೧.೨೦ ಮೀ. ಈ ನಾಲ್ಕು ಕಂಬಗಳು ಚೌಕಾಗಿವೆ. ಆದರೆ ಅವುಗಳು ಬಿದ್ದು ಹೋಗಿದ್ದು ಕೇವಲ ಕೆಳಗಿನ ಪೀಠಭಾಗ ಉಳಿದಿವೆ. ಅವುಗಳು ಗುಹೆಯ ಮುಂಭಾಗದಲ್ಲಿವೆ. ಇದರಿಂದ ಈ ಭಾಗವನ್ನು ಮುಖಮಂಟಪವನ್ನಾಗಿ ಪರಿಗಣಿಸಿರಬೇಕು.

ಎರಡೂ ಬದಿಯ ಗೋಡೆಗಳ ಮುಂದಿನ ಅಂಚಿನ ಹತ್ತಿರ ಮತ್ತು ಸ್ವಲ್ಪ ಒಳಭಾಗದಲ್ಲಿ ಹೊಂದಿ ತಲಾ ಒಂದು ಕಡೆ ಎರಡೆರಡು ಅರ್ಧ ಗಂಬಗಳಿವೆ. ಅರೆಗಂಬಗಳ ಮೂರು ಮುಖಗಳ ಅಳತೆಯು ೫೦.೦೦ x .೬೦ ಮೀ.

ಗುಹೆಯ ಉದ್ದ ೧೬.೦೦ ಮೀ. ಅಗಲ ೯.೦೦ ಮೀ. ಒಳಗಡೆಯ ಮೂರು ಸಾಲುಗಳಲ್ಲಿ ಒಟ್ಟು ೧೨ ಕಂಬಗಳಿವೆ. ತಲಾ ಒಂದು ಸಾಲಿನಲ್ಲಿ ನಾಲ್ಕು ಕಂಬಗಳಿವೆ. ಮೂರನೇ ಸಾಲಿನ ಎಡಗಡೆಯಲ್ಲಿದ್ದ ಎರಡು ಕಂಬಗಳು ಬಿದ್ದು ಹೋಗಿವೆ. ಈಗ ಕೇವಲ ಪೀಠಭಾಗ ಉಳಿದಿವೆ. ಮುಖಮಂಟಪದ ಎರಡನೆಯ ಸಾಲಿನ ಕಂಬ ಮತ್ತು ಒಳಗಿನ ಮೂರನೇ ಸಾಲಿನ ಕಂಬಗಳ ನಡುವಿನ ಅಂತರ ೩.೫೦ ಮೀ. ದಿಂದ ೩.೪೫ ಮೀ. ಅದೇ ರೀತಿ ಒಳಗಿನ ಮೂರನೇ ಸಾಲು ಮತ್ತು ನಾಲ್ಕನೇ ಸಾಲಿನ ಕಂಬಗಳ ನಡುವಿನ ಅಂತರ ೩.೪೫ ಮೀ. ಐದನೇ ಸಾಲಿನ ಕಂಬದಿಂದ ಹಿಂದಿನ ಗೋಡೆಯ ನಡುವಿನ ಅಂತರ ೨.೨೦ ಮೀ. ಹಿಂದಿನ ಗೋಡೆಯ ಅಗಲ ೧೨.೫೦ ಮೀ. ಆದರೆ ಮುಂಭಾಗದ ಅಗಲ ೯.೦೦ ಮೀ. ಗುಹೆಯ ಎಡ ಗೋಡೆಯು ಹಿಂದಿನ ಗೋಡೆ ಯಿಂದ ಮುಂದಕ್ಕೆ ಸ್ವಲ್ಪ ಒಳಗಡೆ



ಕೊರೆದಿದ್ದು ಅದರ ಉದ್ದ ೬.೦೦ ಮೀ. ಅಲ್ಲಿಂದ ಮುಂದೆ ಚಾಚಿದ ಗೋಡೆ ಯಲ್ಲಿರುವ ಅರ್ಧಗಂಬದ ಅಂತರ ೫.೬೦ ಮೀ. ಅರ್ಧ ಗಂಬದಿಂದ ಮುಂದಿನ ಅರ್ಧಗಂಬದ ವರೆಗಿನ ಅಂತರ ೨.೨೦ ಮೀ ಅರ್ಧಗಂಭದ ಮೂರು ಮುಖಗಳು ೬೦ ಮೀ x ೧.೦೦ ಮೀ, ೫೦ ಮೀ ಆದರೆ ಬಲಗೋಡೆಯನ್ನು ಮಾತ್ರ ನೇರವಾಗಿ ಕತ್ತರಿಸಿಕೊಳ್ಳಲಾಗಿದೆ.

ಹಿಂದಿನ ಮೂರು ಸಾಲುಗಳ ಕಂಬಗಳ ಬಲ ಅಂಚಿನಿಂದ ಎಡಗೋಡೆಯವರೆಗಿನ ಮಧ್ಯದ ಅಂತರ೧.೭೫ ಮೀ. ಎಡ ಅಂಚಿನ ಕಂಬದಿಂದ ಬಲಗೋಡೆಗೆ ಮಧ್ಯದ ಅಂತರ ೨.೬೦ ಮೀ. ಅದೇ ರೀತಿ ಕೊನೆಯ ಹಿಂದಿನ ಸಾಲಿನ ಕಂಬಗಳಿಂದ ಹಿಂದಿನ ಗೋಡೆ ಮಧ್ಯದ ಅಂತರ ೨.೨೦ ಮೀ. ತಲಾ ಒಂದು ಕಂಬದ ಅಗಲ ೧.೨೦ ಮೀ, ಎತ್ತರ ೨.೧೦ ಮೀ. ಈ ಕಂಬಗಳು ಆಯತಾಕಾರದಲ್ಲಿವೆ (.೬೦ x ೧.೨೫ ಮೀ) ಕಂಬಗಳು ನೆಲದಿಂದ ಛತ್ತಿನವರೆಗಿನ ಎತ್ತರ ೨.೨೦ ಮೀ. ಕಂಬಗಳ ಮೇಲ್ಭಾಗದಲ್ಲಿ ಛತ್ತಿಗೆ ಹೊಂದಿ ಉದ್ದ ಪಟ್ಟಿಕೆಯುಳ್ಳ ತೊಲೆಗಳನ್ನು ಕೊರೆಯಲಾಗಿದೆ. ಕಂಬಗಳು ತೊಲೆಯಿಂದ ಛತ್ತನ್ನು ಹೊತ್ತಂತೆ ಕಾಣುತ್ತವೆ. ಹೀಗಾಗಿ ಕಂಬದ ಮೇಲಿನ ತುದಿಯಿಂದ ಛತ್ತಿನ ವರೆಗಿನ ಅಂತರ ೦.೨೦ಮೀ.

ಮುಂದಿನ ಮುಖಮಂಟಪದ ಕಂಬಗಳು ಮತ್ತು ಈ ಗುಹೆಯ ಮಧ್ಯಸಾಲಿನ ಎಡಗಡೆಯ ಎರಡು ಕಂಬಗಳು ಒಂದೇ ರೀತಿಯಲ್ಲಿ ಕೊರೆಯಲಾಗಿದೆ. ಅದರ ಮುಂದೆ ವಿಶಾಲ ಆವರಣವಿದೆ.

ಗುಹೆಯ ಮುಂದಿನ ಮುಖದಲ್ಲಿ ಎಡ ಭಿತ್ತಿನ ಮೇಲೆ ಬೃಹದಾಕಾರದ ನಿಂತ ಆನೆಯ ಎರಡು ಕಾಲುಗಳನ್ನು ಮತ್ತು ದೇಹಾಂಗವನ್ನು ಕಂಡರಿಸಿದ್ದು ಕಾಣುವುದು. ಆನೆಯ ಮುಖ- ದೇಹಾಂಗ ಭಾಗಗಳು ಕಳಚಿ ಬಿದ್ದಿದೆ. ಅದರ ಬಲಭಿತ್ತಿನ ಬದಿಗೆ ವಿಶಾಲ ಚೌಕಾಕಾರ ಪಟ್ಟಿಕೆಯಿದೆ.

ಒಟ್ಟಾರೆ ಗುಹೆಯ ತಳಪಾಯದಲ್ಲಿ ಮುಂದುಗಡೆ ಒಂದು ನಾಲ್ಕು ಕಂಬವುಳ್ಳ ಚೌಕಾದ ಮುಖಮಂಟಪ ಹಾಗೂ ಹಿಂದೆ ೧೨ (ಅದರಲ್ಲಿ ಎರಡು ಕಂಬಗಳು ಬಿದ್ದು ಹೋಗಿವೆ) ಕಂಬಗಳುಳ್ಳ (ಮೂರು ಸಾಲುಗಳ) ಮುಖ ಮಂಟಪ ಇದ್ದಿತು. ಗೋಡೆಗಳು, ಸ್ತಂಭಗಳು, ಛತ್ತು ಮತ್ತು ತೊಲೆಯು ಸರಳವಾಗಿದೆ. ವಿಶೇಷವಾದ ಯಾವ ಲಕ್ಷಣವಿಲ್ಲ. ಅವುಗಳ ಲಕ್ಷಣಗಳಿಂದ ಈ ಗುಹೆಯ ಕಾಲ ಸು. ಕ್ರಿ.ಶ. ೯ನೇ ಶತಮಾನಕ್ಕಿಂತ ಪೂರ್ವದವೆಂದು ಹೇಳಬಹುದು. ಉಳಿದವುಗಳು ಸು. ಕ್ರಿ.ಶ. ೧೧-೧೪ನೇ ಶತಮಾನದ ಪೂರ್ವದವೆಂದು ಹೇಳಬಹುದು.



ಛತ್ತಿಲ್ಲದ ಗುಹೆಗಳು : ಈ ಮೇಲೆ ಹೇಳಿದ ಗುಹೆಗಳ ಉತ್ತರಕ್ಕೆ ಲ್ಯಾಟ್ರಾಯಟ್ ದಿನ್ನೆಯ ಮೇಲೆ ಪೂರ್ವದ ಅಂಚಿನ ಗುಂಟ ಮೇಲೆ ಛತ್ತಿಲ್ಲದ ಗುಹೆಗಳನ್ನು ಸುಮಾರು ೧೦ ಅಡಿ ಆಳದವರೆಗೆ ಸಾಲಾಗಿ ಅರ್ಧಡಜನ್ ಕೊರೆಯಲಾಗಿದೆ. ತಳಪಾಯಗಳನ್ನು ಎರಡು ಭಾಗಗಳನ್ನಾಗಿ ಪ್ರತ್ಯೇಕಿಸಲಾಗಿದೆ. ಕೇವಲ ಹಿಂದಿನ ಭಾಗ ಹೆಚ್ಚು ಉದ್ದವಾಗಿವೆ. ಅವುಗಳೂ ಪೂರ್ವಮುಖಮಾಡಿವೆ. ಮೇಲ್ಭಾಗದಲ್ಲಿ ಕಟ್ಟಿಗೆಯ ತೊಲೆಗಳನ್ನು ಕೂಡಿಸಲು ಅಲ್ಲಲ್ಲಿ ಅಡ್ಡವಾಗಿ ಕಿರು ಕಿರು ತಗ್ಗುಗಳಿವೆ. ಬಹುತೇಕ ಅಲ್ಲಿ ಕಟ್ಟಿಗೆಯ ತೊಲೆಗಳನ್ನು ಕೂಡಿಸಿ ಅದರ ಮೇಲೆ ಚಪ್ಪರವನ್ನು ಹಾಕಿಕೊಂಡು ಅಲ್ಲಿ ಜನರು ವಾಸಮಾಡಿರಬೇಕು.

ಅವುಗಳ ಗೋಡೆಗಳೂ ಸರಳವಾಗಿವೆ. ಒಂದೊಂದು ಮುಖದ ಗೋಡೆಗಳಲ್ಲಿ ಚಿಕ್ಕಪುಟ್ಟ ಕಮಾನು/ಆಯತಾಕಾರ ಗೂಡುಗಳನ್ನು ಕೊರೆಯಲಾಗಿದೆ. ತಲಾ ಒಂದಕ್ಕೆ ಕೆಲವು ಮೇಲಿನ ಕೊರೆದ ಗೋಡೆಗಳಿವೆ. ಪ್ರವೇಶಕ್ಕೆ ಅವುಗಳ ಮಧ್ಯಭಾಗ ತೆರೆದಿವೆ. ಅಲ್ಲಿ ಪ್ರತ್ಯೇಕವಾಗಿ ಬಾಗಿಲುಗಳನ್ನು ಇಟ್ಟ ಕುರುಹುಗಳಿಲ್ಲ. ಇವುಗಳ ಕಾಲ ಸು. ಕ್ರಿ.ಶ. ೧೫-೧೬ನೇ ಶತಮಾನ.

೧೩. ಕೋಟೆ

ಬೀದರ ಜಿಲ್ಲೆಯ ಬಸವಕಲ್ಯಾಣ ನಗರದ ಉತ್ತರಕ್ಕೆ ಬೃಹದಾಕಾರದ ಒಂದು ಪ್ರಾಚೀನ ಕೋಟೆಯಿದೆ. ಕೋಟೆಯ ಸ್ಥೂಲ ಇತಿಹಾಸವನ್ನು ಡಾ. ಎಸ್.ಕೆ.ಜೋಶಿ, ಡಾ.ಶಂಕರ ಡಿ. ಮೂಗಿ ಇವರ ಕೃತಿಗಳು ಮತ್ತು ಬೀದರ ಡಿಸ್ಟ್ರಿಕ್ಟ್ ಗೆಝೆಟಿಯರ್ ಪರಿಚಯಿಸುತ್ತವೆ.

ಸಾಹಿತ್ಯ: ಚಾಲುಕ್ಯ ಅರಸ ಆರನೇ ವಿಕ್ರಮಾದಿತ್ಯನ ಆಸ್ಥಾನ ಕವಿಯಾಗಿದ್ದ ಕಾಶ್ಮೀರದ ಬಿಲ್ಹಣನು ಕಲ್ಯಾಣಪುರದ ಕೋಟೆಯನ್ನು ಪ್ರತಿಯೊಂದು ಗಳಿಗೆಯಲ್ಲೂ ಎಚ್ಚರದಿಂದ ಕಾಯಲಾಗುತ್ತಿತ್ತು ಎಂದಿದ್ದಾನೆ ಬಿಲ್ಹಣನು ತನ್ನ ಕೃತಿಯ ಎರಡನೇ ಸರ್ಗದಲ್ಲಿ ಆಹವಮಲ್ಲನ ಸೋಮೇಶ್ವರನು ತನ್ನ ಉತ್ತರಾಪಥದ ದಿಗ್ವಿಜಯದ ಬಳಿಕ ಕಲ್ಯಾಣಪುರದ ಕೋಟೆಯನ್ನು ಕಟ್ಟಿಸಿದನು. ಆ ಕೋಟೆಯನ್ನು ಶತ್ರುಗಳು ಬೇಧಿಸಲು ಅಸಾಧ್ಯವಾಗಿತ್ತೆಂದು ಹೇಳಿರುವನು. ಇದೇ ರೀತಿ ಈ ಅರಸನ ಇನ್ನೊಬ್ಬ ವಿದ್ವಾಂಸನಾಗಿದ್ದ ವಿಜ್ಞಾನೇಶ್ವರನು ಭೂಮಿಯ ಮೇಲೆ ಕಲ್ಯಾಣದಂಥ ಮತ್ತೊಂದು ರಾಜಧಾನಿ ನಗರ ಹಿಂದೆಯೂ ಇರಲಿಲ್ಲ, ಮುಂದೆಯೂ ಹುಟ್ಟುವುದಿಲ್ಲ. ವಿಕ್ರಮಾದಿತ್ಯನಂಥ ಚಕ್ರವರ್ತಿ ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲ ಎಂದಿದ್ದಾನೆ.

ಚೆನ್ನಬಸವಣ್ಣನ ವಚನವೊಂದು ಕಲ್ಯಾಣದ ವರ್ಣನೆಯಲ್ಲಿ ''ಶ್ರೀ ಮತ್ ಕಲ್ಯಾಣಪುರವು ಹನ್ನೆರಡು ಯೋಜನ ವಿಸ್ತಾರವುಳ್ಳದ್ದು. ಅದಕ್ಕೆ ಮೂನ್ನೂರು (೩೦೦) ಛತ್ತ ಬಾಗಿಲುವಾಡಗಳು, ನೂರಹದಿನೈದು (೧೧೫) ಚೋರಕಿಂಡಿಗಳು, ನೂರಹದಿನೈದು(೧೧೫) ಮೊಳೆಯ ಬಾಗಿಲುಗಳು, ಇಪ್ಪತ್ತು (೨೦) ಬಾಗಿಲುಗಳ ಆಳ್ವೇರಿಯೊಳಗಿರುವುದರಿಂದ ಅವುಗಳಿಗೆ ಬಾಗಿಲುಗಳಿಲ್ಲ. ಈ ಪಟ್ಟಣವನ್ನಾವರಿಸಿರುವ ಕೋಟೆಯ ಉದ್ದ ನಲವತ್ತೆಂಟು (೪೮) ಯೋಜನೆ, ಬಾಹತ್ತರ ನಿಯೋಗಿಗಳ, ಸಾಮಂತರ, ಮಂಡಳಿಕರ ಮನೆಗಳು ಲಕ್ಷ, ದ್ವಾದಶ ಯೋಜನದ ಸೂರ್ಯವೀಧಿಗಳು ನೂರಿಪ್ಪತ್ತು (೧೨೦), ಅಷ್ಟೇ ಸಂಖ್ಯೆಯ (೧೨೦) ಸೋಮವೀಧಿಗಳು, ಅಸಂಖ್ಯಾತವಾದ ಒಳಕೇರಿ, ಹೊರಕೇರಿಗಳು, ಹಲವಾರು ಶಿವಾಲಯಗಳು, ಅನೇಕ ಸರೋವರಗಳು, ''ದಾಸೋಹದ ಮಠಗಳು'' ಇದ್ದುವೆನ್ನಲಾಗಿದೆ.

ಕಲ್ಯಾಣ ಚಾಲುಕ್ಯರ ದೊರೆ ಮುಮ್ಮಡಿ ಸೋಮೇಶ್ವರ ತನ್ನ ಮಾನಸೋಲ್ಲಾಸ ಕೃತಿಯಲ್ಲಿ ಕೋಟೆಯಲ್ಲಿ ಎಷ್ಟು ವಿಧ ಮತ್ತು ಕೋಟೆಯ ಒಳಗೆ ಯಾವ ಯಾವ ವಸ್ತುಗಳು ಸಂಗ್ರಹವಾಗಿರುತ್ತಿದ್ದವು ಎಂಬುದನ್ನು ತಿಳಿಸಿರುವನು. ಕೋಟೆಗಳು ಒಂಬತ್ತು ವಿಧ.

ಅವುಗಳು ಜಲದುರ್ಗ, ಗಿರಿದುರ್ಗ, ಪಾಷಾಣದುರ್ಗ, ಇಷ್ಟಿಕ ದುರ್ಗ, ಮೃತ್ತಿಕ ದುರ್ಗ, ಮರುದುರ್ಗ, ವನದುರ್ಗ, ದರದುರ್ಗ ಮತ್ತು ನರದುರ್ಗಗಳು. ಆರನೇ ವಿಕ್ರಮಾದಿತ್ಯನ ಕಾಲದ ಕಲ್ಕೇರಿಯ ಒಂದು ಶಾಸನದಲ್ಲಿ ಗಿರಿದುರ್ಗ, ಜಲದುರ್ಗ ಮತ್ತು ವನದುರ್ಗಗಳ ಉಲ್ಲೇಖವಿದೆ. ಕೋಟೆಯ ಒಳಗಡೆ ಯುದ್ಧೋಪಕರಣಗಳು, ಆಹಾರ ಧಾನ್ಯಗಳು, ಔಷಧಿ, ಸಂಪತ್ತು, ಕುದುರೆಗಳು, ಆನೆಗಳು, ಕಾಡುಮೃಗಗಳು, ಯಂತ್ರಗಳು, ನೀರು, ಮೇವು ಇವುಗಳು ಸದಾ ಇರಬೇಕು. ಬ್ರಾಹ್ಮಣರ ಮತ್ತು ಕರಕುಶಲಗಾರರ ಸೇವೆ ಸದಾ ದೊರೆಯುವಂತಿರಬೇಕು. ರಾಜ್ಯ ಭಂಡಾರದಲ್ಲಿ ಯಾವಾಗಲೂ ಬಂಗಾರ, ಬೆಳ್ಳಿ (ನಿಷ್ಕ) ಅಥವಾ ಆಭರಣಗಳು ಶೇಖರವಾಗಿರಬೇಕೆಂದು ಮಾನಸೋಲ್ಲಾಸದಲ್ಲಿ ಹೇಳಲಾಗಿದೆ. ಈ ಕೋಟೆಯಲ್ಲೂ ಬಹುಶಃ ಈ ವಸ್ತು ಸಾಮಗ್ರಿಗಳು ಆಗ ಇದ್ದಿರಬಹುದು.

ಶಾಸನಗಳು : ಕಲ್ಯಾಣದ ಕೋಟೆ, ಅಂತಃಪುರ ಮುಂತಾದ ವಿವರಗಳನ್ನು ಅಲ್ಲಿಯ ಕೆಲವು ಶಾಸನಗಳು ತಿಳಿಸುತ್ತವೆ. ಕೋಟೆಯಲ್ಲಿ ಅರಮನೆ, ಆಸ್ಥಾನ, ಅಡಿಗೆ ಮನೆ, ರಾಣಿವಾಸ ಗೃಹ(?), ಭೀಮೇಶ್ವರ ದೇವಾಲಯ ಮುಂತಾದ ಕಟ್ಟಡಗಳಿದ್ದವು. ಈ ಎಲ್ಲ ಕಟ್ಟಡಗಳು ಇಂದಿನ ಬಸವ ಕಲ್ಯಾಣ ಕೋಟೆಯಲ್ಲಿ ಎಲ್ಲಿದ್ದವು, ಹೇಗಿದ್ದವು ಎಂಬುದನ್ನು ಗುರುತಿಸಬೇಕಾಗಿದೆ. ಕಲ್ಯಾಣ ಕೋಟೆ, ಅಂತಃಪುರ, ಅರಮನೆಯ ಅಡಿಗೆ ಮನೆ, ರಾಣಿ ವಾಸಗೃಹ ಮುಂತಾದ ಭಾಗಗಳನ್ನು ನೋಡಿಕೊಳ್ಳಲು ವಿವಿಧ ದರ್ಜೆಯ ಅಧಿಕಾರಿಗಳ ಹುದ್ದೆಗಳಿದ್ದವೆಂಬುದು ಅಲ್ಲಿಯ ಶಾಸನಗಳು ತಿಳಿಸುತ್ತವೆ.

ಕಲ್ಯಾಣಕೋಟೆ-ಅಧಿಕಾರಿಗಳು : ಈ ಭಾಗದ ಕ್ರಿ.ಶ.೧೦೮೦ರ ಒಂದು ಶಾಸನದಿಂದ ಈ ಕೋಟೆಯನ್ನು ರಕ್ಷಣೆ ಮಾಡಿದ ಒಬ್ಬ ಅಧಿಕಾರಿ ಕಾಣುವನು. ಈತನ ಬಿರುದು **''ಕಲ್ಯಾಣ ಕೋಟೆ ರಕ್ಷಪಾಲ ರಣರಂಗ ಕ್ಷೇತ್ರಪಾಲ ತ್ರಿಭುವನಮಲ್ಲದೇವ ಪಾದಕಮಲ ಭೃಂಗ ಚಾವುಂಡನ ಸಿಂಗ ಮಹಾಮಂಡಳೇಶ್ವರ ಎರೆಯಮರಸ''** ಎನ್ನಲಾಗಿದೆ. ಅಂದರೆ ಕ್ರಿ.ಶ.೧೦೮೦ರ ಪೂರ್ವದಲ್ಲೇ ಚಾಲುಕ್ಯರ ಮಹಾಮಂಡಳೇಶ್ವರ ಎರೆಯಮರಸನು ಚೋಳರ ಸಂಗಡ ಯುದ್ಧ ಮಾಡಿ ಕಲ್ಯಾಣ ಕೋಟೆಯನ್ನು ರಕ್ಷಿಸಿ ನಂತರ ಈ ಬಿರುದಾವಳಿಗಳನ್ನು ಪಡೆದಿರಬೇಕು. ಕಲ್ಯಾಣದ ಕೋಟೆ ಮತ್ತು ಅರಮನೆಗಳನ್ನು ಸೋಮಯ್ಯನೆಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದನು. ಈ ವಿಷಯ ಅಲ್ಲಿಯ ಮತ್ತೊಂದು ಶಾಸನ ಹೇಳಿದೆ.

ಚರಿತ್ರೆ : ಕಲ್ಯಾಣ ಚಾಲುಕ್ಯರ ಆಳ್ವಿಕೆ ಸು.ಕ್ರಿ.ಶ.೯೭೩ ರಲ್ಲಿ ಪ್ರಾರಂಭವಾಗಿದ್ದರೂ ಅವರ ರಾಜಧಾನಿಯು ಒಂದು ಸ್ಥಳದಲ್ಲಿ ನೆಲೆಯೂರಿ ಬಹುಕಾಲ ನಿಂತಿರಲಿಲ್ಲ. ಆರಂಭಿಕವಾಗಿ ಮಳಖೇಡವೇ ಚಾಲುಕ್ಯರ ರಾಜಧಾನಿಯಾಗಿ ಕ್ರಿ.ಶ. ೯೭೩ರಿಂದ ಮುಂದುವರೆಯಿತು.

ಚೋಳರ ಕಾಟದಿಂದ ಪದೇ ಪದೇ ತಮ್ಮ ರಾಜಧಾನಿ ಪಟ್ಟಣವನ್ನು ಬದಲಾಯಿಸಲಾಯಿತು. ಮೊದಲನೇ ಸೋಮೇಶ್ವರ ಕ್ರಿ.ಶ. ೧೦೪೮ರ ಸುಮಾರಿಗೆ ಬಸವಕಲ್ಯಾಣಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಿದ. ಆರಂಭದಲ್ಲಿ ಚೋಳರು ಕಲ್ಯಾಣದ ಮೇಲೆ ದಾಳಿಮಾಡಿ ಕೋಟೆಯನ್ನು ಭಸ್ಮಗೊಳಿಸಿದರು. ಅಲ್ಲಿಂದ ಸುಂದರವಾದ ದ್ವಾರಪಾಲಕ ಶಿಲ್ಪವನ್ನು ತೆಗೆದುಕೊಂಡು ತಮ್ಮ ರಾಜ್ಯಕ್ಕೆ ಒಯ್ದರು. ಅಲ್ಲಿಯ ಒಂದು ದೇವಾಲಯದಲ್ಲಿ ಅದನ್ನು ಸ್ಥಾಪಿಸಿದರು. ಹೀಗಾದರೂ ಸಹ ಕಲ್ಯಾಣವು ಸುಮಾರು ಒಂದು ಶಮಾನಗಳವರೆಗೆ ಚಾಲುಕ್ಯರಿಗೆ ರಾಜಧಾನಿಯಾಗಿ ಮೆರೆಯಿತು.

ತದನಂತರ ಈ ಕೋಟೆಯು ಒಂದೆರಡು ದಶಕಗಳವರೆಗೆ ಕಳಚುರಿಯರ ಕೈವಶವಾಯಿತು. ಮುಂದೆ ಕಲ್ಯಾಣದಲ್ಲಿ ರಾಜಕೀಯ ಪರಿಸ್ಥಿತಿಯು ಹದಗೆಟ್ಟಿತು. ತದನಂತರ ಕೆಲಕಾಲ ದೇವಗಿರಿ ಸೇವುಣರ ಮತ್ತು ಕೆಲವು ಕಾಲ ವಾರಂಗಲ್ಲಿನ ಕಾಕತೀಯರ ಕೈವಶವಾಯಿತು. ಆಗಾಗ್ಗೆ ಕಾಕತೀಯರಿಗೂ ಮತ್ತು ದೇವಗಿರಿಯ ಸೇವುಣರಿಗೂ ಯುದ್ಧ ಸಂಭವಿಸುತ್ತಿತ್ತು. ಬಹುಶಃ ಈ ಸಂದರ್ಭದಲ್ಲಿ ಕಲ್ಯಾಣವು ಈ ಇಬ್ಬರಿಗೆ ಒಂದು ಸೇತುವೆ ಆಗಿ ಪರಿಣಮಿಸಿರಬೇಕು. ಇದರಿಂದ ಇಲ್ಲಿಯ ವೈಭವದ ರಾಜಕೀಯ ಮತ್ತು ಸಾಂಸ್ಕೃತಿಕ ಮಹತ್ವ ಕುಂದಿಹೋಯಿತು !

ಮುಂದೆ ತೊಘಲಕ್, ಬಹುಮನಿಗಳ, ಬರೀದ್ ಶಾಹಿಗಳ, ಆದಿಲ್‌ಶಾಹಿಗಳ ವಿಜಯನಗರ, ಪೇಶ್ವೆ, ನಿಜಾಮ, ನವಾಬ ಮತ್ತು ಜಾಗೀರದಾರ ಮುಂತಾದವರ ಆಡಳಿತಕ್ಕೆ ಈ ಕೋಟೆಯು ಒಳಪಟ್ಟಿತ್ತು. ಈಗ ಅದು ಕರ್ನಾಟಕ ಸರಕಾರದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯ ಇಲಾಖೆಯವರ ಮೇಲ್ವಿಚಾರಣೆಯಲ್ಲಿದೆ. 'ಬಸವಕಲ್ಯಾಣದ ಕೋಟೆಯನ್ನು ಒಡೆದರೆ, ಇತಿಹಾಸ ಪ್ರಸಿದ್ಧ ''ರಾಜಧಾನಿ''ಯನ್ನು ಕಟ್ಟಿನಿಲ್ಲಿಸಬಹುದೆಂಬ' ಜನಪ್ರಿಯ ಹೇಳಿಕೆ ಭಾವನಾತ್ಮಕವೆಂದು ಕೆಲವರು ಒಪ್ಪುವುದಿಲ್ಲ.

ಕ್ರಿ.ಶ.೧೩೨೧ರಿಂದ ೧೯೪೮ರವರೆಗೆ ಈ ಕೋಟೆಯು ಮುಸ್ಲಿಮರ ಹಿಡಿತದಲ್ಲಿದ್ದಿತ್ತು. ಕೆಳದಿಯ ಶಿವಪ್ಪನಾಯಕನು ವಿಜಯನಗರ ಅರಸರ ಪರವಾಗಿ ಕ್ರಿ.ಶ.೧೫೫೯-೧೫೬೧ ರ ಕಾಲಾವಧಿಯಲ್ಲಿ ದಂಡೆತ್ತಿ ಬಂದು ಈ ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಈ ಕೋಟೆಯನ್ನು ಆಕ್ರಮಿಸಿದ್ದ ಅಮೀರ್, ಅಲಿಬರೀದ್ ಮತ್ತು ಖಾಸಿಂಬದರ್ ಮುಂತಾದ ಏಳುಮಂದಿ ತುರ್ಕ ಸರ್ದಾರರನ್ನು ಹಿಡಿದು ವಿಜಯನಗರ ಅರಸರಿಗೆ ಒಪ್ಪಿಸಿದ. ಶಿವಪ್ಪನಾಯಕನಿಗೆ **'ಶತ್ರು ಸಪ್ತಾಂಗ ಹರಣ'** ಎಂಬ ಬಿರುದನ್ನು ಕೊಡಲಾಯಿತು. ಕ್ರಿ.ಶ.೧೫೬೨ ರಲ್ಲಿ ಅಹಮದ್‌ನಗರ ನಿಜಾಮ ಷಾಹನು ಕುತುಬಷಾನ ನೆರವಿನಿಂದ ಈ ಕೋಟೆಯನ್ನು ಮರಳಿ ಪಡೆದು ಕೊಂಡನು. ಅನಂತರ

ಶಿವಾಜಿಯು ಆದಿಲ್ ಷಾಹಿಗಳಿಂದ ಕಲ್ಯಾಣದ ನರದುರ್ಗ ಕೋಟೆಗಳನ್ನು ಕಿತ್ತುಕೊಂಡನು.

ಈ ನರದುರ್ಗ ಕೋಟೆಗಳು ಯಾವುವು ಎಂಬುದು ವಿಚಾರಣೀಯ. ಆದರೆ ಕಲ್ಯಾಣದ ಕೋಟೆಯು ಗುಡ್ಡಕ್ಕೆ ಹೊಂದಿ ಕಟ್ಟಿರುವುದರಿಂದ ಇದೊಂದು ಗಿರಿದುರ್ಗವೆಂದು ಹೇಳಬೇಕಾಗುತ್ತದೆ. ಈ ಕೋಟೆಯಲ್ಲಿರುವ ಮಸೀದಿ ಗೋಡೆಯ ಮೇಲಿನ ಪರ್ಶಿಯನ್ ಶಾಸನದಲ್ಲಿ ಕ್ರಿ.ಶ.೧೬೬೯ರಲ್ಲಿ ಮಸೀದಿಯನ್ನು ಕಟ್ಟಿಸಿದ ಮತ್ತು ಕೋಟೆಯನ್ನು ಜೀರ್ಣೋದ್ಧಾರ ಮಾಡಿದ ವಿವರಗಳಿವೆ. ಔರಂಗಜೇಬನು ಬಿಜಾಪೂರ ಆದಿಲ್ ಷಾಹಿಯ ಸರ್ದಾರ ಮುಲ್ಲಾ ಅಹಮದ್‌ನಿಂದ ಬೀದರ ಮತ್ತು ಬಸವಕಲ್ಯಾಣ ಕೋಟೆಗಳನ್ನು ಕೈವಶ ಮಾಡಿಕೊಂಡನು. ಹನ್ನೆರಡು ಲಕ್ಷ ರೂಪಾಯಿ, ೨೩೦ ತೋಪುಗಳನ್ನು, ಮೌಲಿಕ ಖಜಾನೆ ಮತ್ತು ಮದ್ದಿನ ಸಂಗ್ರಹವು ಅವನ ಪಾಲಾಯಿತು.

ಆದಿಲ್‌ಶಾಹಿ ಅರಸನ ಅನೇಕ ಶಾಸನಗಳಲ್ಲಿ ಈ ಕೋಟೆಯ ವಿವಿಧ ಭಾಗಗಳನ್ನು ಕಟ್ಟಿದ ವಿವರಗಳಿವೆ. ಅಲಿ ಆದಿಲ್‌ಶಾಹಿಯ ಕಾಲದಲ್ಲಿ ರುಸ್ತುಮ್ ಖಾನ್, ಸಯ್ಯದ್ ಮಹಮ್ಮದ್, ಮಲಿಕುಷ್ ಸದ್ರುದ್ದೀನ್ ಮತ್ತು ಮಾಲಿಕ್ ಇಸ್ಮಾಯಿಲ್ ಕಲ್ಯಾಣದ ಪ್ರಾಂತಾಡಳಿತಗಾರರಾಗಿದ್ದರು. ಅವರ ಕಾಲದಲ್ಲಿ ಕ್ರಿ.ಶ. ೧೫೬೩, ೧೫೬೭, ೧೫೬೮ ಮತ್ತು ೧೫೭೭ರಲ್ಲಿ ನಾಲ್ಕು ಬುರುಜುಗಳನ್ನು ಕಟ್ಟಲಕಾಯಿತು. ಇಮ್ಮಡಿ ಇಬ್ರಾಹಿಮ್ ಆದಿಲ್ ಶಾಹನ ಕಾಲದಲ್ಲಿ ಕ್ರಿ.ಶ. ೧೫೯೨ರಲ್ಲಿ ರಾಜ ಮಹಲ್‌ನ್ನು ಕಟ್ಟಲಾಯಿತು. ಮಹಮ್ಮದ್ ಆದಿಲ್‌ಶಾಹನ ಸೈನ್ಯಾಧಿಕಾರಿಯಾಗಿದ್ದ ಸೀದಿ ದಿಲಾವಾರನು ಕ್ರಿ.ಶ. ೧೬೪೬ರಲ್ಲಿ ಕೋಟೆಯ ಗೋಡೆಯನ್ನು ಕಡೆಗಾಪಿನ ಮೇಲಿನ ಗೋಪುರಗಳನ್ನು ಕಟ್ಟಿಸಿ ಮೇಲೆ ತೋಪುಗಳನ್ನು ಇಡಿಸಿ ಅರಮನೆಯನ್ನು ಕಟ್ಟಿಸಿದ. ಕ್ರಿ.ಶ.೧೭೦೭ರಲ್ಲಿ ಔರಂಗಜೇಬನು ಮರಣ ಹೊಂದಿದ ನಂತರ ಸರ್ದಾರನಾದ ನಿಜಾ ಉಲ್‌ಮುಲ್ಕ್‌ನು ವಶಕ್ಕೆ ತೆಗೆದುಕೊಂಡನು. ಈ ಯಶ ತಾತ್ಕಾಲಿಕವಾಯಿತು. ದಿಲ್ಲಿಯ ಅಹಮದ್‌ಷಹ ಅಬ್ದಾಲಿ ಮತ್ತು ಮರಾಠರ ನಡುವೆ ಐತಿಹಾಸಿಕವಾದ ಮೂರನೆಯ ಪಾಣಿಪತ್ ಯುದ್ಧ ನಡೆದು ಮರಾಠರಿಂದ ಈ ಕೋಟೆಯನ್ನು ವಶಪಡಿಸಿಕೊಂಡನು.

ಉದಗೀರದ ದೇಶಮುಖಿ ಶಿವಲಿಂಗಪ್ಪ ಎಂಬಾತನು ಕ್ರಿ.ಶ. ೧೮೧೯-೨೦ರಲ್ಲಿ ಈ ಕೋಟೆಯನ್ನು ವಶಪಡಿಸಿಕೊಳ್ಳಲು ಬಹಳ ಪ್ರಯತ್ನಪಟ್ಟನು. ಆದರೆ ಬ್ರಿಟಿಷರು ಆತನನ್ನು ಸದೆಬಡೆದರು. ಸುಬೇದಾರ ಲಿಂಗಪ್ಪನವರ ಹಿರಿತನದಲ್ಲಿ ಕಲ್ಯಾಣ ಮತ್ತು ಬೀದರ ಕೋಟೆಗಳು ಕ್ರಿ.ಶ.೧೮೫೨ರಲ್ಲಿ ಅವನ ವಶವಾದವು.

ಬ್ರಿಟಿಷರು ಈ ಎರಡು ಸ್ಥಳಗಳ ಕೋಟೆಗಳನ್ನು ಲಿಂಗಪ್ಪನಿಂದ ಮರಳಿ ಪಡೆದು ಹೈದರಾಬಾದ್ ನಿಜಾಮನಿಗೆ ಒಪ್ಪಿಸಿದರು. ನಿಜಾಮನು ಬಸವಕಲ್ಯಾಣ ಕೋಟೆ ಮತ್ತು

೬೮ ಹಳ್ಳಿಗಳನ್ನು ಕೂಡಿಸಿ ತನ್ನ ಸಂಬಂಧಿಕರಿಗೆ ಜಹಗೀರು ಹಾಕಿ ಕೊಟ್ಟನು. ಈ ಕೋಟೆಯು ಅಂದಿನಿಂದ ಕ್ರಿ.ಶ.೧೯೪೮ರ ವರೆಗೆ ಅವನ ವಶದಲ್ಲಿತ್ತು.

ಕಲ್ಯಾಣ ಕೋಟೆಯ ದರ್ಶನ: ಕಲ್ಯಾಣ ಕೋಟೆಯನ್ನು ಒಂದು ನೈಸರ್ಗಿಕ ಎತ್ತರದ ಗುಡ್ಡಕ್ಕೆ ಹೊಂದಿಸಿ ಕಟ್ಟಲಾಗಿದೆ. ಸುತ್ತಲಿನ ಬಹುದೂರದ ಪ್ರದೇಶವನ್ನು ಈ ಗುಡ್ಡದ ಮೇಲಿಂದ ನೋಡಬಹುದಾಗಿದೆ. ಕೋಟೆ ಸುತ್ತಲಿನ ಕಂದಕಕ್ಕೆ ಬೇಕಾಗುವ ನೀರು ಬದಿಗೆ ಹರಿವಹಳ್ಳ ಮತ್ತು ಬಾವಿಗಳಿಂದ ದೊರೆತಿರಬೇಕು. ಹೀಗೆ ವಿವಿಧ ಕಾರಣಗಳಿಂದ ಈ ಸ್ಥಳವನ್ನು ಆಯ್ಕೆಮಾಡಿ ಅಲ್ಲಿ ಕೋಟೆಯನ್ನು ಕಟ್ಟಲಾಗಿದೆ.

ವಿಶಾಲವಾದ ಗುಡ್ಡ ಪ್ರದೇಶಕ್ಕೆ ಹೊಂದಿಕೊಂಡು ಇಲ್ಲಿ ಮೂರು ಸುತ್ತುಗಳುಳ್ಳ ವೃತ್ತಾಕಾರದ ಕೋಟೆಯನ್ನು ಕಟ್ಟಲಾಗಿದೆ. ಈ ಕೋಟೆ ಗೋಡೆಗಳು ಬೃಹದಾಕಾರದಲ್ಲಿವೆ. ಮೊದಲ ಸುತ್ತಿನ ಕೋಟೆ ಗೋಡೆಯನ್ನು ಗುಡ್ಡದ ಕಂದಕಕ್ಕೆ ಹೊಂದಿ ಕಟ್ಟಲಾಗಿದೆ. ಗೋಡೆಯನ್ನು ಎತ್ತರಿಸಿ ಕಟ್ಟಲಾಗಿದೆ. ಅದರಲ್ಲಿ ಬಂದೂಕುಗಳನ್ನು ಇಡಲು ರಂಧ್ರಗಳಿವೆ. ಎರಡನೇ ಸುತ್ತಿನ ಕೋಟೆ ಗೋಡೆಯನ್ನು ಗುಡ್ಡದ ಬುಡದಲ್ಲಿ ಕಟ್ಟಲಾಗಿದೆ. ಅದಕ್ಕೆ ಬುರುಜುಗಳಿಲ್ಲ. ಮೂರನೆಯ ಸುತ್ತಿನ ಕೋಟೆಯನ್ನು ಗುಡ್ಡದ ಮೇಲೆ ಕಟ್ಟಲಾಗಿದೆ. ಒಂದೊಂದು ಸುತ್ತಿನ ಕೋಟೆಯ ಒಳಗೆ ವಿವಿಧ ಕಟ್ಟಡಗಳಿವೆ.

ಕಂದಕ: ಮೊದಲ ಸುತ್ತಿನ ಕೋಟೆ ಗೋಡೆಯ ಸುತ್ತ ಹೊರಗೆ ಆಳವಾದ ಕಂದಕವಿದೆ. ಈ ಕಂದಕಕ್ಕೆ ಸುಮಾರು ಅಗಲದ ಭದ್ರವಾದ ಗೋಡೆಯಿದೆ. ಗೋಡೆಯ ಹೊರಗೆ ಉತ್ತರ ಮತ್ತು ದಕ್ಷಿಣಕ್ಕೆ ಈ ಕಂದಕದಲ್ಲಿ ಎರಡು ''ಟಿ'' ಆಕಾರದ ಬಾವಿಗಳುಂಟು. ಈ ನಮೂನೆಯ ಹಲವಾರು ಬಾವಿಗಳು ಬಸವಕಲ್ಯಾಣದಲ್ಲಿವೆ. ಪ್ರಾಚೀನ ಕಟ್ಟಡದ ಶಿಲೆಗಳು ಕಂದಕದ ಗೋಡೆ ಹಾಗೂ ಮೊದಲ ಸುತ್ತಿನ ಕೋಟೆಗೋಡೆಯ ತಳಪಾಯದಲ್ಲಿ ಕಂಡುಬರುತ್ತವೆ. ಇಲ್ಲಿ ಕಂದಕದಲ್ಲಿ ಬಾವಿಗಳನ್ನು ನಿರ್ಮಾಣ ಮಾಡಿರುವುದು ಗಮನೀಯ.

ಕಲ್ಯಾಣ ಚಾಲುಕ್ಯರ ಕಾಲದ ಗುಲ್ಬರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಸೇಡಂನಗರದ ಕೋಟೆಯ ಭವ್ಯತೆಯನ್ನು ಅಲ್ಲಿಯ ಶಾಸನಗಳಲ್ಲಿ ಬಹು ಆಕರ್ಷಣೀಯವಾಗಿ ವರ್ಣಿಸಲಾಗಿದೆ. ಈ ಕೋಟೆಯ ಸುತ್ತಲಿನಲ್ಲಿದ್ದ ಆಳವಾದ ಕಂದಕದಲ್ಲಿ ಸದಾ ನೀರು ಸಮುದ್ರದಂತೆ ಹರಿಯುತ್ತಿತ್ತು. ಅದರ ಆಳ ಪಾತಾಳ ಲೋಕವನ್ನು ಮುಟ್ಟುವಂತಿತ್ತು. ಹೀಗೆ ಇನ್ನೂ ಹೆಚ್ಚಿನ ವರ್ಣನೆಯನ್ನೂ ಅಲ್ಲಿಯ ಶಾಸನನೀಡುತ್ತದೆ. ಇಂತಹ ಅದ್ಭುತ ಕೋಟೆಯನ್ನು ಭೇದಿಸುವುದು ವೈರಿಗಳಿಗೆ ಅಸಾಧ್ಯವಾಗಿತ್ತೆಂದು, ಈ ವರ್ಣನೆಯಿಂದ ವ್ಯಕ್ತವಾಗುತ್ತದೆ. ಈ ಸ್ಥೂಲ ವಿವರಗಳಿಂದ ಚಾಲುಕ್ಯರ ರಾಜಧಾನಿಯಾಗಿ ಮೆರೆದ ಕಲ್ಯಾಣ ನಗರದ ಕೋಟೆಯು ಸೇಡಂನಗರದ ಕೋಟೆಗಿಂತ

ಹೆಚ್ಚು ಅದ್ಭುತವಾಗಿಯೂ ವಿಸ್ತಾರವಾಗಿಯೂ, ವೈವಿಧ್ಯಮಯವಾಗಿಯೂ ಇದ್ದಿರಬೇಕೆಂದು ಊಹಿಸಬಹುದಾಗಿದೆ.

ಕೋಟೆಯ ಸುತ್ತಲಿನ ಕಂದಕದಲ್ಲಿ ಸದಾ ನೀರು ಹರಿಯುವ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ವೈರಿಗಳು ದಾಟಲು ಅಸಾಧ್ಯವಾಗಲೆಂದು ಕಂದಕಗಳಲ್ಲಿ ವಿಷಜಂತುಗಳನ್ನು ಬಿಡುತ್ತಿದ್ದರು. ಹೀಗೆ ನಾನಾ ಕಾರಣಗಳಿಂದ ಕೋಟೆ ಗೋಡೆಯ ಸುತ್ತ ಹೊರಗೆ ಕಂದಕಗಳನ್ನು ನಿರ್ಮಿಸುತ್ತಿದ್ದರು. ಆದರೆ ಇಂದು ಬಸವ ಕಲ್ಯಾಣ ನಗರದ ಕೋಟೆಯ ಸುತ್ತಲಿನ ಆಳವಾದ ಕಂದಕವು ಕೆಲವು ಕಡೆ ಕುಸಿದಿದೆ ಮತ್ತು ಹಾಳುಬಿದ್ದದೆ.

ಫಿರಂಗಿ-ತೋಪುಗಳು: ಈ ಕೋಟೆಯ ಮೇಲೆ ದೊಡ್ಡ ದೊಡ್ಡ ಪಂಚಲೋಹದ ಫಿರಂಗಿ-ತೋಪುಗಳಿವೆ. ಕೆಲವು ಉದ್ದವಾದ ಫಿರಂಗಿಗಳ ಮೇಲೆ ಲತಾ ಬಳ್ಳಿಗಳ ಸುಂದರ ಅಲಂಕರಣವಿದೆ. ಇನ್ನು ಕೆಲವು ಫಿರಂಗಿಗಳಿಗೆ ಹಿಡಿಕೆ ಗಳಿವೆ ಅನೇಕ ಕಡೆಗಳಲ್ಲಿ ಶಿಲೆಯ ಗುಂಡುಗಳು ಚದುರಿಹೋಗಿವೆ.

ಮೊದಲ ಸುತ್ತಿನ ಕೋಟೆ: ಈ ಬೃಹದಾಕಾರದ ವೈವಿಧ್ಯಮಯ ಕೋಟೆಗೆ ಒಂದೇ ಪ್ರವೇಶವಿದೆ. ಈ ಪ್ರವೇಶ ದ್ವಾರಕ್ಕೆ ಆಯತಾಕಾರದ ಆವರಣವಿದೆ. ಅದರ ದಕ್ಷಿಣಕ್ಕೆ ಬಾಗಿಲಿದೆ. ಅದಕ್ಕೆ ಎತ್ತರದ ಕಮಾನು ಮುಂದೆ ಚಾಚಿದ ಎರಡು ಕಿಟಕಿಗಳಿವೆ. ಮೂರು ಕಿರು ಕಮಾನುಗಳಿವೆ. ಜೊತೆಯಲ್ಲಿ ಎರಡು ಮಿನಾರಕಗಳಿವೆ ಮತ್ತು ತೆನೆಗಳಿವೆ. ಅಲ್ಲಿಯ ಶಾಸನದಿಂದ ಇದನ್ನು ಕ್ರಿ.ಶ. ೧೭೬೫ರಲ್ಲಿ ಕಟ್ಟಿದ್ದು ತಿಳಿದುಬರುವುದು. ಒಳಗಡೆ ಕಮಾನುಗಳ ಕೈಸಾಲೆ, ಮಧ್ಯ ಕಾರಂಜಿ, ಇನ್ನೊಂದೆಡೆ ಆನೆಯ ಮೇಲೆ ಹತ್ತಲು ಕೈಸಾಲೆ, ಮತ್ತೊಂದಡೆ ಮರದ ಕಂಬಗಳ ಭವ್ಯ ಕಟ್ಟಡ ಕಾಣುತ್ತದೆ. ಭವ್ಯ ಕಟ್ಟಡದ ಉತ್ತರಕ್ಕೆ ಎರಡನೆಯ ಬಾಗಿಲಿದೆ. ಅದಕ್ಕೆ ಕಬ್ಬಿಣದ ಪಟ್ಟಿಗಳನ್ನು ಜೋಡಿಸಿದ್ದು ಅಲ್ಲಿಂದ ಕಂದಕದ ಸೇತುವೆಯನ್ನು ದಾಟಿದಾಗ ಮೂರನೆಯ ಬಾಗಿಲಿಗೆ ಬರಲಾಗುವುದು. ಈ ಮೊದಲ ಸುತ್ತಿನ ಕೋಟೆಗೋಡೆಗೆ ಹೊಂದಿದ ದ್ವಾರವು ಬೃಹದಾಕಾರದಲ್ಲಿದೆ. ಈ ದ್ವಾರ ಪೂರ್ವಕ್ಕೆ ಮುಖ ಮಾಡಿದೆ. ಈ ದ್ವಾರಕ್ಕೆ ಕಮಾನಿನಾಕಾರದ ಬಾಗಿಲನ್ನು ಜೋಡಿಸಲಾಗಿದೆ. ಈ ಬಾಗಿಲಿಗೆ ದೊಡ್ಡದಾದ ಕದಗಳನ್ನು ಚೂಪಾದ ಮುಳ್ಳಿನ ಮೊನೆಗಳನ್ನು ಕೂಡಿಸಲಾಗಿದೆ. ಈ ಮೊನೆಗಳನ್ನು ಸಮಾಂತರವಾಗಿ ನಾಲ್ಕು ಸಾಲಿನಲ್ಲಿ ಎದುರು ಮುಖ ಮಾಡಿ ಕದಗಳ ಮೇಲೆ ಕೂಡಿಸಲಾಗಿದೆ.

ಈ ಪ್ರದೇಶದ ಬದಿಗಳಲ್ಲಿ ಕಟ್ಟೆಗಳಿವೆ. ಅವುಗಳಿಗೆ ಹೊಂದಿ ಕೊಠಡಿಗಳಿವೆ. ಮತ್ತು ದ್ವಾರವಿದೆ. ಬದಿಗಳಲ್ಲಿ ತೆರೆದ ವಿಶಾಲವಾದ ಅಂಕಣಗಳಿವೆ. ಈ ಅಂಕಣಗಳಲ್ಲಿ ಕಾವಲುಗಾರರು ಇರುತ್ತಿದ್ದರು. ದ್ವಾರದಿಂದ ಒಳಗೆ ಸಾಗಿದರೆ ವಿಶಾಲವಾದ ತೆರೆದ

ಆವರಣವಿದೆ. ಈ ಆವರಣಕ್ಕೆ ಹೊಂದಿ ಪಶ್ಚಿಮಕ್ಕೆ ಮುಖಮಾಡಿದ ಕಾವಲುಗಾರರ ಕೊಠಡಿಗಳು ಹಾಗೂ ಎರಡನೆಯ ಸುತ್ತಿನ ಕೋಟೆ ಗೋಡೆಗೆ ಹೊಂದಿದ ೧೪ ಬುರ್ಜುಗಳಿವೆ. ಅನೇಕ ಬುರುಜುಗಳ ಮೇಲೆ ತೋಪುಗಳನ್ನು ಇಡಲಾಗಿದೆ. ಈ ವಿಶಾಲ ಆವರಣದಲ್ಲಿ ಹಲವಾರು ಪ್ರಾಚೀನ ವಿಗ್ರಹಗಳು, ಶಿಲೆಯ ಗುಂಡುಗಳು ಮತ್ತು ಶಾಸನಗಳಿವೆ. ಈ ಆವರಣದ ಮುಂದೆ ಮತ್ತೊಂದು ದ್ವಾರವಿದೆ. ಈ ದ್ವಾರವು ಈ ಮೇಲೆ ಹೇಳಿದ ಪ್ರವೇಶ ದ್ವಾರದ ಗಾತ್ರದಷ್ಟಿದ್ದು ಬದಿಗಳಲ್ಲಿ ಗಟ್ಟಿಮುಟ್ಟಾದ ಸರಪಳಿಗಳನ್ನು ಬಾಗಿಲ ಅಂಚಿನಲ್ಲಿ ಬಿಗಿಯಾಗಿ ಕಟ್ಟಲಾಗಿದೆ. ಈ ದ್ವಾರವು ಉತ್ತರಕ್ಕೆ ಮುಖಮಾಡಿದೆ. ಈ ದ್ವಾರದಿಂದ ಮುಂದೆ ಸಾಗಿದರೆ ಅದರ ದಾರಿ ಬಲಕ್ಕೆ ಸಾಗುತ್ತದೆ. ಸುಮಾರು ಉದ್ದದ ಈ ದಾರಿಯ ಎಡಬದಿಗೆ ಕಟ್ಟೆಗಳಿವೆ.ತೆರೆದ ಈ ಕಟ್ಟೆಗಳಲ್ಲಿ ಅಲ್ಲಲ್ಲಿ ಶಿಲ್ಪಗಳನ್ನು ಕೂಡಿಸಲಾಗಿದೆ. ಈ ದ್ವಾರಕ್ಕೆ ಎರಡನೆಯ ಸುತ್ತಿನ ಕೋಟೆ ಗೋಡೆಯ ಹೊರಮೈಯಲ್ಲಿ ಹಲವಾರು ಪ್ರಾಚೀನ ಶಿಲ್ಪಗಳನ್ನು ಕೂಡಿಸಲಾಗಿದೆ. ಅವುಗಳಲ್ಲಿ ರಾವಣನ ರಥಸವಾರಿಯ ಶಿಲ್ಪ ಮುಖ್ಯವಾದುದು.

ಅಲ್ಲಿಯ ದ್ವಾರದಿಂದ ಹಾಗೆ ಮುಂದೆ ಸಾಗಿದರೆ ಮತ್ತೊಂದು ಚಿಕ್ಕ ದ್ವಾರ ಬರುತ್ತದೆ. ಐದನೆಯ ಬಾಗಿಲ ಮುಂದೆ ಮೆಟ್ಟಿಲುಗಳು ಅದರ ಮುಂದೆ ಚಿಕ್ಕ ಆವರಣ, ಅಲ್ಲಿಯೂ ಕಾವಲುಗಾರರ ಕೊಠಡಿಗಳಿವೆ. ದೊಡ್ಡ ಬಾಗಿಲನ ಹತ್ತಿರದ ಬುರುಜಿನ ಒಳಭಾಗದಲ್ಲಿ ಬರೂಕ್‌ಖಾನ್ ಮತ್ತು ಝೀಲ್‌ಖಾನ್ ಗಳು ಮುಖ್ಯವೆನಿಸಿವೆ. ಬರೂಕ್ ಖಾನ್‌ನಲ್ಲಿ ಮದ್ದುಗಳನ್ನು ಸಂಗ್ರಹಿಸಿ ಇಡಲಾಗುತ್ತಿತ್ತು. ಅಲ್ಲಿ ಒರಳುಕಲ್ಲುಗಳಿವೆ. ಮತ್ತು ಮದ್ದನ್ನು ಅಲ್ಲಿ ತಯಾರಿಸುತ್ತಿದ್ದರು.

ಬರೂಖ್‌ಖಾನ್ ಕಟ್ಟಡದ ಮುಂದೆ ಮತ್ತು ಎರಡನೇ ಸುತ್ತಿನ ಕೋಟೆಗೋಡೆಯ ಹೊರಗಡೆ ಸುತ್ತಲೂ ವಿಶಾಲ ಆವರಣವಿದೆ. ಎರಡನೇ ಸುತ್ತಿನ ಮತ್ತು ಮೂರನೆಯ ಸುತ್ತಿನ ಕೋಟೆ ಗೋಡೆಯ ಮಧ್ಯ ದಾರಿಯ ಬದಿಗೆ ಒಂದು ಗೋಡೆಯಿದೆ. ಈ ಗೋಡೆ ಆರನೆಯ ದ್ವಾರಕ್ಕೆ ಕೂಡಿದೆ. ಕೋಟೆಯ ದ್ವಾರಕ್ಕೆ ಹೋಗುವ ದಾರಿಯಲ್ಲಿ ಒಂದು ಎತ್ತರದ ದ್ವಾರ ಮಾತ್ರ ಉಳಿದಿದೆ. ಈ ದ್ವಾರದ ಪಶ್ಚಿಮಕ್ಕೆ ಅಲ್ಲಲ್ಲಿ ಹಾಳಾದ ಕಟ್ಟಡಗಳನ್ನು ಕಾಣಬಹುದು. ಬಹುಶಃ ಅವುಗಳು ವಿವಿಧ ಅಧಿಕಾರಿಗಳ ಹಾಗೂ ಸೈನ್ಯದಳಗಳ ವಾಸಸ್ಥಳಗಳಾಗಿರಬೇಕು. ಇಲ್ಲಿಂದ ಸ್ವಲ್ಪ ಮುಂದೆ ಹೋದರೆ (ಪಶ್ಚಿಮಕ್ಕೆ) ಕೊನೆಯ ಸುತ್ತಿನ ಕೋಟೆ ಗೋಡೆಗೆ ಹೊಂದಿ ನೀರು ಸರಬರಾಜು ವ್ಯವಸ್ಥೆಯಿದೆ. ಅಲ್ಲಿ ಕೋಟೆ ಹೊರಗಡೆ ಕಂದಕದಲ್ಲಿರುವ 'ಟಿ' ಆಕಾರದ ಬಾವಿಯಿಂದ ನೀರನ್ನು ಮೇಲಕ್ಕೆ ಎಳೆಯಲು ಚರಕ ಮೋಟ ವ್ಯವಸ್ಥೆಯಿದೆ. ಅದರ ಒಂದು ಬದಿಗೆ ಇದಕ್ಕೆ ಹೊಂದಿ ಎತ್ತರ

ಇಳಿಜಾರಿನಲ್ಲಿ ಉದ್ದವಾಗಿ ಕಟ್ಟಿದ ಕಟ್ಟಡ. ಅದರ ಇಕ್ಕೆಲ್ಲಗಳಲ್ಲಿ ಎರಡು ಸಾಲುಗಳ ಕಂಬಗಳಿವೆ. ಈ ಆವರಣದ ಮುಂದೆ ಒಂದು ಸುಂದರವಾದ ದೊಡ್ಡ ತೊಟ್ಟಿಯಿದೆ.

ಎರಡನೆಯ ಸುತ್ತಿನ ಕೋಟೆಗೋಡೆಯ ಉತ್ತರ ಮತ್ತು ಪೂರ್ವದ ಹೊರಮೈಯಲ್ಲಿ ನೂರಾರು ಪ್ರಾಚೀನ ಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ದೇವಾಲಯಗಳ ಬಾಗಿಲು ಫಲಕ, ಚಂದ್ರಶಿಲೆ, ಕಂಬಗಳು, ಗೋಡೆ ಫಲಕಗಳಲ್ಲಿ ಮದನಿಕೆ, ಆನೆ, ಸಿಂಹ ಮುಂತಾದ ಶಿಲ್ಪಗಳು ಹೆಚ್ಚಿನ ಗಮನವನ್ನು ಸೆಳೆಯುತ್ತವೆ. ಈ ಕೋಟೆಯ ತಳಪಾಯದಲ್ಲಿ ಅಲ್ಲಲ್ಲಿ ಮೂಲ ಕಟ್ಟಡದ ಕುರುಹುಗಳನ್ನು ವೀಕ್ಷಿಸಬಹುದು. ಈ ಮೂಲ ಕಟ್ಟಡದ ಕುರುಹುಗಳು ಕಂದಕದ ಬುಡ ಹೊಂದಿಕೊಂಡಿವೆ.

ಮೂರನೆಯ ಸುತ್ತಿನ ಕೋಟೆ : ಈ ಮೇಲೆ ಹೇಳಿದ ಬರೂಖ್ ಖಾನ್ ಕಟ್ಟಡದ ಸಮೀಪದಲ್ಲಿ ಮೂರನೆಯ ಸುತ್ತಿನ ಕೋಟೆ ಪ್ರವೇಶಕ್ಕೆ ದ್ವಾರವಿದೆ. ಆ ದ್ವಾರ ಹೆಚ್ಚು ದೊಡ್ಡದಿಲ್ಲ, ಎತ್ತರವಿಲ್ಲ ಮತ್ತು ದಪ್ಪವಿರುವುದಿಲ್ಲ. ಆದರೆ, ಅದರ ದಾರಿ ಮಾತ್ರ ಇಕ್ಕಟ್ಟಾಗಿದೆ. ಈ ದಾರಿಯ ಎದುರಿಗಿನ ಗೋಡೆಗೆ ಹೊಂದಿ ಭವ್ಯ ಕಟ್ಟಡವಿದೆ. ಈ ಕಟ್ಟಡದಗೋಡೆಯಲ್ಲಿ ಜಾಲಾಂಧ್ರಗಳಿವೆ. ಈ ದಾರಿಯು ಉತ್ತರದ ಕಡೆ ಸಾಗಿದೆ. ಅಲ್ಲೊಂದು ಚಿಕ್ಕ ದ್ವಾರ. ಅಲ್ಲಿಂದ ಮುಂದೆ ಹೋದರೆ ಬಲಗಡೆಗೆ ವಿಶಾಲ ಕಟ್ಟಡವಿದೆ. ಆ ಕಟ್ಟಡವೇ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ವಿಭಾಗ ಮ್ಯೂಜಿಯಂ. ಅದನ್ನು ಬಿಜ್ಜಳನ ಅರಮನೆ ಎಂದು ಕರೆಯುವರು.

ಈ ಮೂರನೆಯ ಸುತ್ತಿನ ಕೋಟೆಯಲ್ಲಿ ಅರಸರಿಗೆ ಸಂಬಂಧಿಸಿದ ವೈವಿಧ್ಯಮಯ ಕಟ್ಟಡಗಳು ಬಿಜ್ಜಳನ ಅರಮನೆ, ಪ್ರಾಚೀನ ಹಿಂಧೂ ದೇವಾಲಯ, ರಾಜ್‌ಮಹಲ್, ನೃತ್ಯ ಮಹಲ್, ರಂಗೀನ ಮಹಲ್, ಹೈದರ್ ಮಹಲ್, ಚಿಲುಮೆಯುಳ್ಳ ಅಲಂಕೃತ ತೊಟ್ಟಿಗಳು, ಫಿರಂಗಿ ಸಿಡಿಮದ್ದು, ಮಸೀದಿ, ಗರಡಿಮನೆ ತೋಪುಗಳು ಮುಖ್ಯವಾಗಿವೆ. ಮೂರನೆಯ ಸುತ್ತಿನ ಗೋಡೆಯಲ್ಲಿ ಹನ್ನೊಂದು ಬುರುಜುಗಳಿವೆ. ಅವುಗಳ ಮೇಲೆ ತೋಪುಗಳಿವೆ.

ಅರಮನೆ ಆವರಣ : ಆ ಅರಮನೆಯ ಹಿಂಬದಿಯಲ್ಲಿ ನಿಂತು ದಕ್ಷಿಣ ದಿಕ್ಕಿನ ಕಡೆ ದೃಷ್ಟಿಯನ್ನು ಹಾಯಿಸಿದರೆ ಈಗಿನ ಬಸವಕಲ್ಯಾಣ ನಗರದ ಸಂಪೂರ್ಣ ಜನವಸತಿಯ ಪ್ರದೇಶ ಅದು ಸುಮಾರು ಮೂರು ಕಿ.ಮೀ ಅಂತರದಲ್ಲಿರುವ ಶಿವಪುರ ಮತ್ತು ನಾರಾಯಣಪುರ ಗ್ರಾಮಗಳ ಹತ್ತಿರದ ವಿಶಾಲ ಪ್ರದೇಶವು ಗೋಚರಿಸುವುದು.

ಗೋಡೆಯ ಕಟ್ಟಡದ ಒಂದು ಭಾಗದಲ್ಲಿ ಮದ್ದು ಗುಂಡುಗಳ ಸಂಗ್ರಹದ ಕೋಣೆಯಿದೆ.

ಮಸೀದಿ : ಪಕ್ಷಿಗಳ ಕೊಠಡಿಯ ಪೂರ್ವ ಬದಿಯಲ್ಲಿ ಮಸೀದಿಯಿದೆ.

ನೃತ್ಯ ಮಹಲ್ : ಅರಮನೆಯ ಎದುರಿಗೆ ಮತ್ತು ಮಸೀದಿಯ ಬದಿಗೆ ಒಂದು ಸುಂದರ ಭವ್ಯವಾದ ತೆರೆದ ಕಟ್ಟಡವಿದೆ. ಈ ಕಟ್ಟಡಕ್ಕೆ 'ನೃತ್ಯ ಮಹಲ್' ಎಂದು ಹೆಸರು. ಈ ಆವರಣ ಮಧ್ಯದಲ್ಲಿ ಅಲಂಕಾರಗೊಂಡ ಅಷ್ಟಾಕೃತಿಯ ಸುಂದರವಾದ ತೊಟ್ಟಿಯಿದೆ. ಅದರ ಸುತ್ತಲೂ ಆಯತಾಕಾರದಲ್ಲಿ ಚಿಕ್ಕ ಚಿಕ್ಕ ಖಾನೆಗಳಿವೆ. ಈ ಖಾನೆಗಳಲ್ಲಿ ಬಹುಶಃ ವಿವಿಧ ಗಿಡಬಳ್ಳಿಗಳನ್ನು ನೆಟ್ಟು ಬೆಳಸುತ್ತಿದ್ದಿರಬೇಕು. ಆ ತೊಟ್ಟಿಯ ಇಕ್ಕೆಲಗಳ ಗೋಡೆಗಳ ಮಧ್ಯ ಬಹು ಸುಂದರವಾದ ಆಸನಗಳಿವೆ. ಈ ಆಸನಗಳನ್ನು ಅಲಂಕರಿಸಲಾಗಿದೆ. ಅಲ್ಲಿಯ ತೊಟ್ಟಿ (ಎದುರಿಗೆ) ಯ ಪೂರ್ವಕ್ಕೆ ಒಂದು ಮಂಟಪವಿದೆ. ಆ ಮಂಟಪದ ಕಂಬಗಳ ಮೇಲೆ ವಿವಿಧ ರೀತಿಯ ಸುಂದರ ರೇಖಾ ಚಿತ್ರಗಳಿವೆ. ಇದರಿಂದಾಗಿ ಈ ನೃತ್ಯ ಮಹಲ್ ತುಂಬಾ ಮನಮುಟ್ಟುವ ಹಾಗೆ ಕಂಗೊಳಿಸುತ್ತಿದೆ.

ಪಕ್ಷಿ-ಲೆಕ್ಕಪತ್ರಗಳ ಕೊಠಡಿಗಳು: ಈ ನೃತ್ಯ ಮಹಲಿನ ಹಿಂದುಗಡೆಯಿಂದ ಪೂರ್ವಕ್ಕೆ ಹಲವಾರು ಕೊಠಡಿಗಳಿವೆ. ಮೂರು ಕೊಠಡಿಗಳಲ್ಲಿ ಪಕ್ಷಿಗಳು ಇರುತ್ತಿದ್ದವಂತೆ. ಅದಕ್ಕಾಗಿ ಆ ಕೋಣೆಗಳನ್ನು ಪಕ್ಷಿಗಳ ಕೋಣೆಗಳೆಂದು ಹೆಸರು. ಈ ಕೋಣೆಗಳ ಎದುರಿಗೆ ಒಂದು ಕೊಠಡಿಯಿದೆ. ಅಲ್ಲಿ ಲೆಕ್ಕಪತ್ರಗಳನ್ನು ಇಡುತ್ತಿದ್ದರಂತೆ. ಆದುದರಿಂದ ಅದನ್ನು ಲೆಕ್ಕಪತ್ರಕೊಠಡಿ ಎಂದು ಕರೆಯುವರು.

ರಾಜ ಮಹಲ್ : ಈ ಮೇಲೆ ಹೇಳಿದ ನೃತ್ಯ ಮಹಲ್ ಕಟ್ಟಡದ ಬದಿಗೆ ದಕ್ಷಿಣಕ್ಕೆ ಹಾಗೂ ಅರಮನೆ ದಕ್ಷಿಣಕ್ಕೆ ಮತ್ತೊಂದು ತುಂಬಾ ಆಕರ್ಷಣೆಯುಳ್ಳ ಮಹಲ್‌ಯಿದೆ. ಅರಮನೆಗೆ ಬರುವ ದಾರಿಯ ಎಡಗಡೆ ಈ ಮಹಲಿಗೆ ಹೋಗಲು ಪ್ರವೇಶದ್ವಾರವಿದೆ. ಅದರ ಮೊದಲ ಅಂಕಣದಲ್ಲಿ ಸುಂದರ ಪಡಸಾಲೆಯಿದೆ. ಒಳಗಡೆ ಎದುರಿಗೆ ಪೂರ್ವಕ್ಕೆ ಮುಖಮಾಡಿದ ಮೂರು ಕಮಾನುಗಳುಳ್ಳ ಸುಂದರ ಕಟ್ಟಡವಿದೆ. ಬಹು ವಿಶಾಲವಾದ ಮತ್ತು ತಂಪಾದ ಈ ಮಹಲ್‌ನ ಕಮಾನುಗಳ ಮೇಲೆ ವರ್ಣರಂಜಿತ ವಿವಿಧ ನಮೂನೆಯ ರೇಖಾಚಿತ್ರಗಳಿವೆ. ಮಹಲಿನ ಮುಂದಿರುವ ಎರಡು ಕಮಾನುಗಳ ಮೇಲೆ ವೃತ್ತಾಕಾರದ ರೇಖಾಚಿತ್ರಗಳಿವೆ. ಆ ವೃತ್ತಗಳಿಂದ ಕೆಳಗಿಳಿದ ಉದ್ದವಾದ ಮೀನುಗಳ ಚಿತ್ರಗಳಿವೆ. ಎರಡನೇ ಮತ್ತು ಮೂರನೇ ಕಮಾನಿನ ಮೇಲೆ ಮೀನುಗಳ ಚಿತ್ರಗಳು ಇರುವುದಿಲ್ಲ. ವೃತ್ತಗಳ ಮಧ್ಯ ಹೂಬಳ್ಳಿಗಳ ಅಲಂಕಾರಗಳು ಮೂರೂ ಕಮಾನುಗಳ ಮೇಲಿವೆ. ಈ ಅಲಂಕರಣವನ್ನು ತುಂಬಾ ಆಕರ್ಷಣೀಯವಾಗಿ ಗಾರೆಯಿಂದ ಮಾಡಲಾಗಿದೆ. ಆ ಕಟ್ಟಡಕ್ಕೆ ರಾಜ್ ಮಹಲ್ ಎಂದು ಕರೆಯುವರು.

ದೇವಾಲಯ : ಈ ರಾಜ್ ಮಹಲಿನ ಬಲಗಡೆ ಕಟ್ಟಡವೇ ಒಂದು ಪ್ರಾಚೀನ ದೇವಾಲಯದ ಗರ್ಭಗೃಹವಾಗಿದೆ. ಅದಕ್ಕೆ ಒಂದು ಕೊಠಡಿಯಿದೆ. ಅದುವೇ ಗರ್ಭಗೃಹ. ದೇವಾಲಯದ ಬಲಗಡೆ ಒಂದು ತೆರೆದ ಮಂಟಪವಿದೆ. ಇವುಗಳ ಮುಂದೆ ತೆರೆದ ಅಂಗಳವಿದ್ದು ಅದರ ಮಧ್ಯ ಒಂದು ತೊಟ್ಟಿಯಿದೆ. ಈ ಧೇವಾಲಯದ ಗರ್ಭಗುಡಿಯ ನಾಲ್ಕು ಮೂಲೆಗಳಲ್ಲಿ ಅರ್ಧಗಂಭಗಳಿವೆ. ಇದರ ಭುವನೇಶ್ವರಿಯ ನಾಲ್ಕು ಮೂಲೆಗಳಲ್ಲಿ ಅಲಂಕೃತ ಕೀರ್ತಿಮುಖಿಗಳ ಫಲಕಗಳಿವೆ. ಅವುಗಳ ಮಧ್ಯ ಪದ್ಮ ಫಲಕವಿದೆ. ಗರ್ಭಗೃಹದ ಹಿಂದಿನ ಗೋಡೆಯಲ್ಲಿ ಒಂದು ಜಾಲಂಧ್ರವಿದೆ. ಗರ್ಭಗೃಹದಲ್ಲಿ ದೇವರ ವಿಗ್ರಹವಾಗಲಿ ಅಥವಾ ಅದರ ಪೀಠವಾಗಲಿ ಅಲ್ಲಿ ಉಳಿದಿರುವುದಿಲ್ಲ. ಗರ್ಭಗೃಹದ ಬಾಗಿಲು ಚೌಕಟ್ಟಿನ ಮೇಲೆ ವೈವಿಧ್ಯಮಯವಾದ ಒಂಬತ್ತು ಶಾಖೆಗಳಿವೆ. ಬಾಗಿಲು ಚೌಕಟ್ಟಿನ ಲಲಾಟಬಿಂಬದ ಮೇಲೆ ಮಧ್ಯದಲ್ಲಿ ಕುಳಿತ ಚತುರ್ಭುಜ ಗಣೇಶನ ಚಿತ್ರವಿದೆ. ಬಾಗಿಲು ಫಲಕದಲ್ಲಿದ್ದ ದ್ವಾರಪಾಲಕರ ಚಿತ್ರಗಳನ್ನು ಸಂಪೂರ್ಣವಾಗಿ ಕೆತ್ತಿ ತೆಗೆಯಲಾಗಿದೆ. ಆ ಫಲಕಗಳಲ್ಲಿ ಏಳು ವಿವಿಧ ನಮೂನೆಯ ಶಾಖೆಗಳಿವೆ.


ಈ ದೇವಾಲಯವು ಶೈಲಿಯ ದೃಷ್ಟಿಯಿಂದ ಸುಮಾರು ಕ್ರಿ.ಶ. ೧೧-೧೨ನೇ ಶತಮಾನದ್ದಾಗಿದೆ. ಈ ದೇವಾಲಯವನ್ನು ಲಕ್ಷ್ಮೀಗುಡಿ, ರಾಜ್ಯಲಕ್ಷ್ಮಿ ದೇವಾಲಯ ಎಂದು



ಪ್ರವೇಶದ್ವಾರ




ಒಳಭಾಗದ ಎತ್ತರ ಕೋಟೆಗೋಡೆ



ರಂಗೀನ್ ಮಹಲ್



ಒಳಗಿನ ಕೋಟೆಗೋಡೆ



ದರ್ಬಾರ್ ಮಹಲ್ ಮುಂದಿನ ನೀರಿನ ತೊಟ್ಟಿ

ಕರೆಯುತ್ತಾರೆ. ಆದರೆ ಈ ಕೋಟೆಯಲ್ಲಿರುವ ಕಲ್ಯಾಣ ಚಾಲುಕ್ಯರ ಜಗದೇಕಮಲ್ಲನ ಒಂದು ಶಾಸನದಲ್ಲಿ 'ಅರಮನೆ ತೆಂಕಣದ ಭೀಮೇಶ್ವರ'ದ ಉಲ್ಲೇಖವಿದೆ. ಈಗಿರುವ ಮ್ಯೂಜಿಯಂ ಕಟ್ಟಡವನ್ನು ಅರಮನೆ ಎಂದು ಕರೆಯುವರೆಂದು ಈ ಮೇಲೆ ಹೇಳಿದೆ. ಈ ಅರಮನೆಯ ದಕ್ಷಿಣಕ್ಕೆ ಈ ದೇವಾಲಯದ ಕಟ್ಟಡವಿರುವುದು. ಆದುದರಿಂದ ಈ ಕಟ್ಟಡವು ಮೂಲತಃ ಭೀಮೇಶ್ವರ ದೇವಾಲಯವೆಂದು ಗುರುತಿಸಿ ಹೇಳಬಹುದು.

ನೀರಿನ ಸಂಪರ್ಕ : ಈ ದೇವಾಲಯ ಹಾಗೂ ರಾಜ್ ಮಹಲ್ ಎದುರಿಗೆ ಹಾಗೂ ಇನ್ನಿತರ ಕಡೆಗಳಲ್ಲಿ ನೀರಿನ ತೊಟ್ಟಿಗಳಿವೆ. ಈ ತೊಟ್ಟಿಗಳ ಮಧ್ಯ ಆಳವಾದ ಚಿಕ್ಕ ಕೊಳವೆಗಳಿವೆ. ಅವುಗಳ ತಳದಲ್ಲಿ ಸದಾ ನೀರು ಇರುವುದು ಮಹತ್ವದ್ದಾಗಿದೆ. ಮೊದಲನೇ ಸುತ್ತಿನ ಕೋಟೆ ಗೋಡೆ ಹೊರಗೆ ಕಂದಕದಲ್ಲಿ ಉತ್ತರ-ದಕ್ಷಿಣದಲ್ಲಿ ಎರಡು 'ಟಿ' ಆಕಾರದ ಬಾವಿಗಳಿವೆ. ಎರಡನೇ ಸುತ್ತಿನ ಕೋಟೆ ಒಳಗಡೆ ಅರಮನೆ ಹತ್ತಿರ ಚಿಕ್ಕ ಆಳವಾದ ಬಾವಿಯಿದೆ. ಈ ಮೂರೂ ಬಾವಿಗಳ ನೀರನ್ನು ಕೋಟೆ ಒಳಗಿನ ವಿವಿಧ ಕೊಠಡಿಗಳಿಗೆ ಸರಬರಾಜು ಮಾಡುವ ವ್ಯವಸ್ಥೆ ಇದ್ದಿತೆಂದು ಮನವರಿಕೆಯಾಗುವುದು.

ಕಾಲಮಾನ : ಕೋಟೆ ಗೋಡೆಗಳ ಕೆಳಭಾಗದ ತಳಪಾಯ ಗೋಡೆಗೆ ಹೊಂದಿರುವ ಹಾಳಾದ ಕಟ್ಟಡಗಳು, ದೇವಾಲಯ, ಶಿಲ್ಪಗಳು ಮುಂತಾದ ಅವಶೇಷಗಳು ಶೈಲಿಯ ದೃಷ್ಟಿಯಿಂದ ಅವು ಕಲ್ಯಾಣ ಚಾಲುಕ್ಯರ ಕಾಲದ ಅವಶೇಷಗಳೆಂದು ಹೇಳಬಹುದು. ಆ ಕಾಲದ ಅರಮನೆ, ಆಸ್ಥಾನ ಕಟ್ಟಡಗಳು ಅಲ್ಲಿ ಎಲ್ಲಿದ್ದವು ಹೇಗಿದ್ದವು ಎಂಬುದನ್ನು ಈಗ ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿಯ ಕಟ್ಟಡಗಳ ಮೂಲ ಶೈಲಿ ಲಕ್ಷಣಗಳನ್ನು ಸಂಪೂರ್ಣವಾಗಿ ಬದಲಾಯಿಸಲಾಗಿದೆ. ಅಲ್ಲಿಯ ಮಸೀದಿಯ ಮೇಲಿನ ಶಾಸನದಿಂದ ಇದರ ಮೂಲ ಕಟ್ಟಡಗಳನ್ನು ಕ್ರಿ.ಶ. ೧೩ರಿಂದ ೧೭ನೇ ಶತಮಾನಗಳಲ್ಲಿ ಪೂರ್ವದಲ್ಲಿ ಕಾಲಕಾಲಕ್ಕೆ ಜರುಗಿದ ದಾಳಿ ಆಕ್ರಮಣಕ್ಕೆ ಈ ಕೋಟೆಯು ಬಲಿಯಾಗಿದೆ. ಕಲ್ಯಾಣದ ರಾಜಕೀಯ ಚರಿತ್ರೆಯಿಂದ ಈ ವಿಷಯ ತಿಳಿದುಬರುತ್ತದೆ. ಈಗಿರುವ ಭವ್ಯ ಕೋಟೆಯನ್ನು ಸುಮಾರು ಕ್ರಿ.ಶ. ೧೭ನೇ ಶತಮಾನದಿಂದ ನಿರ್ಮಾಣವಾಗಿರುವುದು ತಿಳಿದುಬರುವುದು.

ಈ ಇತಿಹಾಸ ಪ್ರಸಿದ್ಧ ಕೋಟೆಯನ್ನು ದುರಸ್ತಿಗೊಳಿಸಿದರೆ, ಪ್ರಾಚೀನ ಸ್ಮಾರಕವೊಂದು ಇತಿಹಾಸ 'ದಾಳಿ'ಗಳಿಗೆ ತುತ್ತಾದ ಚಿತ್ರಣ ದೊರೆಯುತ್ತದೆ. ಈ ಕೋಟೆಯ ಇತಿಹಾಸವೇ ಒಂದು ವಿಶೇಷ ಅಧ್ಯಯನದ ವಿಷಯವಾಗಿದೆ. ಈಗ ಅಸ್ತಿತ್ವಕ್ಕೆ ಬಂದಿರುವ ''ಬಸವಕಲ್ಯಾಣ ಪ್ರತಿಷ್ಠಾನ'' ಈ ಕಾರ್ಯವನ್ನು ಕೈಗೆತ್ತಿಕೊಳ್ಳುವುದೆಂದು ಆಶಿಸಲಾಗಿದೆ.

■

೧೪. ಮುದ್ರಾವಣ - ಟಂಕಸಾಲೆ

ಚಾಲುಕ್ಯರು ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿದ ಬಳಿಕ ಅಲ್ಲಿ ಭವ್ಯವಾದ ಕೋಟೆ, ಅರಮನೆಯನ್ನು ಕಟ್ಟಿದರು. ಅಥರ ಅಲ್ಲಿಯ ಅನೇಕ ಶಾಸನಗಳು ಕೋಟೆ, ಅಂತಃಪುರ, ಮುದ್ರಾವಣ ಇತ್ಯಾದಿ ಹಾಗೂ ಇವುಗಳನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಗಳ ಹೆಸರುಗಳನ್ನು ತಿಳಿಸುತ್ತವೆ. ಪ್ರಸ್ತುತ ಮುದ್ರಾವಣ- ಟಂಕಸಾಲೆಯ ಬಗ್ಗೆ ಇಲ್ಲಿ ಪರಿಚಯಿಸಲಾಗಿದೆ. ಕೋಟೆಯ ಪರಿಚಯ ಪ್ರತ್ಯೇಕವಾಗಿ ಬಂದಿದೆ.

ಕ್ರಿ.ಶ. ೧೧೧೬ ರ ಶಾಸನವೊಂದರಲ್ಲಿ ಮುದ್ರಾವಣ ಘಳಿಸಾಸರು, ಮುದ್ರಾವಣ ನಕರಂಗಳು, ಮುದ್ರಾವಣ ದೂಸಿಗ ನೀಲಕಂಠ ನಾಯಕ ಮತ್ತು ಟಂಕಸಾಲೆಯ ಚಂಗದೇವ ನಾಯಕರು ಕಾಣುವರು ಅಲ್ಲದೇ ಮುದ್ರಾವಣದ ವಡ್ಡವ್ಯವಹಾರಿ ದೂಸಿಗ ಮಳಸೆಟ್ಟಿಯರ ತಮ್ಮಂ ಲಖ್ಖಣ ಸೆಟ್ಟಿಯುಂ ಮಯ್ದುನ ವಸಪ್ಪ ಸೆಟ್ಟಿಯುಂ ತಮ್ಮ ಮಾಡಿಸಿದ ಗೂರ್ಜ್ಜರ ಮಲಯಮತಿ ಮಹಾದೇವಿಯ ದೇಗುಲದ ಪಡುವಣ ನಾರಾಯಣ ದೇವರ ಎಂಬ ವಿಷಯ ಶಾಸನದಲ್ಲಿದೆ.

ಕ್ರಿ.ಶ. ೧೧೪೨ರ ಅಲ್ಲಿಯ ಮತ್ತೊಂದು ಶಾಸನದಲ್ಲಿ ಮುದ್ರಾವಣದ ಪೆರ್ಗಡೆ ದಂಡನಾಯಕ ಭೀಮರಸ ಮುದ್ರಾವಣದ ರಾಜಶ್ರೇಷ್ಠಿ ಅತಃಪುರಾಧ್ಯಕ್ಷ ಕೇಶಿಮಯ್ಯ ದಂಡನಾಯಕ ಮತ್ತು ಮುದ್ರಾವಣದ ದೂಸಿಗ ಕೇಶಿಮಯ್ಯ ನಾಯಕರ ವಿವರಗಳಿವೆ. ಅಲ್ಲಿಯ ಕ್ರಿ.ಶ. ೧೧೪೩ ರ ಶಾಸನದಲ್ಲಿ ಮುದ್ರಾವಣದ ಸಿಂಪಿಗೆಯಲ್ಲಿಯ ದೇವರ ಮುಂದಣದ ಮನೆ ನಾಲ್ಕು ಹಳೆ ಹಾದಿಯಲ್ಲಿಯ ಸಿಂಪಿಗರ ಮನೆ ಆರು ಎಂದಿದೆ. ಹಾಗೂ ಸಿಂಪಿಗರ ಮನೆಗೆ ತವನ ತಳರಿಕೆಗೆ ತೀರುವ ಪರ್ವ ದೀಪಾವಳಿ ಬಾದುಮ್ಮಯ ದ್ರಮ್ಮವನು ಸಂಕ್ರಾಂತಿಯ ಕವಡಿಕೆಯನು ಶ್ರೀಮತು ಬ್ರಹ್ಮದೇವರ್ಗ್ಗೆ ಅರ್ಪಿತ ಪುಷ್ಪ, ಧೂಪ, ದೀಪ ಸೊಡರೆಣ್ಣೆ, ಸೋಮವಾರದ ಸೋರೆ ಸುಣ್ಣ ಇತ್ಯಾದಿ ವಿವರಗಳಿವೆ.

ಈ ವಿವರಗಳನ್ನು ಅವಲೋಕಿಸಿದಾಗ ರಾಜಧಾನಿಯಾಗಿದ್ದ ಕಲ್ಯಾಣಪುರದಲ್ಲಿ ಕೋಟೆಯಲ್ಲದೆ, ಒಂದು ವಿಶಾಲವಾದ ಮುದ್ರಾವಣವಿದ್ದಿತೆಂದು ತಿಳಿಯುವುದು. ಅದರಲ್ಲಿ ಟಂಕಸಾಲೆ, ಬದಿಗೆ, ಸಿಂಪಿಗೇರಿ, ಸಿಂಪಿಗೇರಿಯ ಮನೆಗಳು, ಹಾದಿಗಳು, ಬ್ರಹ್ಮದೇವಾಲಯಗಳಿದ್ದವೆಂದು ತಿಳಿದುಬರುತ್ತದೆ.

ಮುದ್ರಾವಣವೆಂದರೆ ನಾಣ್ಯಗಳನ್ನು ಮುದ್ರೆ ಮಾಡುವ ಸ್ಥಳ ಅಥವಾ ಮುದ್ರಾ+ಆಪಣ>ಮುದ್ರಾವಣ. ಆಪಣವೆಂದರೆ ಮಳಿಗೆ/ ಅಂಗಡಿ. ಹೀಗಾಗಿ ಅದನ್ನು ಮುದ್ರಣ ಕಾರ್ಯದ ಮಳಿಗೆ ಅಥವಾ ಸ್ಥಳ ಎ ಯು ಹೇಳಬಹುದು.

ಮುದ್ರಾವಣಕ್ಕೆ ಹೊಂದಿಕೊಂಡು ಸಿಂಪಿಗೇರಿಯಿದ್ದಿತು. ಸಿಂಪಿಗೇರಿ ಎಂದರೆ ಸಿಂಪಿಗರ ಮನೆಗಳುಳ್ಳ ಓಣಿ ಅದರಲ್ಲಿ ಹಳೆಯ ರಸ್ತೆ ಒಂದಿದ್ದಿತು ಸಿಂಪಿಗರು ಎಂದರೆ ಬಟ್ಟೆ ಹೊಲಿಯುವವರು. ಹೀಗಾಗಿ ಮುದ್ರಾವಣದಲ್ಲಿ ಬಟ್ಟೆ ಹೊಲಿಯುವರು ಮತ್ತು ಬಟ್ಟೆ ಮಾರುವ ವೃತ್ತಿಯವರು ವಾಸವಾಗಿದ್ದರೆಂದು ಕಾಣುತ್ತದೆ. ಅಲ್ಲಿ ಟಂಕ ಸಾಲೆಯೊಂದಿದ್ದಿರಬೇಕು. ಟಂಕಸಾಲೆಯೆಂದರೆ ನಾಣ್ಯಗಳನ್ನು ಮುದ್ರಿಸುವ ಸ್ಥಳ. ಅದಕ್ಕೂ ಅಧಿಕಾರಿಯಿದ್ದನು. ಅಂತಃಪುರವೆಂದರೆ ಅದು ರಾಜನ ಅರಮನೆ. ಈ ಸಿಂಪಿಗೇರಿಯಲ್ಲಿ ಒಂದು ಬ್ರಹ್ಮದೇವಾಲಯವಿತ್ತು. ಹಾಗೂ ಅಲ್ಲಿ ಮುದ್ರಾವಣ ಮತ್ತು ಕೋಟೆ- ಅರಮನೆ ಎಂಬ ಎರಡು ಪ್ರತ್ಯೇಕ ಸಂಕಿರಣಗಳು ಆ ಕಾಲದಲ್ಲಿದ್ದವೆಂದು ಹೇಳಬಹುದು.

ಮುದ್ರಾವಣದಲ್ಲಿ ಘಳಿಸಾಸರು, ನಖರರು, ದೂಸಿಗರು, ರಾಜಶ್ರೇಷ್ಠಿ, ವಡ್ಡ ವ್ಯವಹಾರಿಗಳಿದ್ದರೆ, ಟಂಕಸಾಲೆಗೆ ಪ್ರತ್ಯೇಕ ಅಧಿಕಾರಿಯಿದ್ದನೆಂದು ಕಾಣುವುದು. ಇದರಿಂದ ಒಂದು ಕಡೆ ಬಹುತೇಕ ಬಟ್ಟೆ ಮಾರುವ ಮಳಿಗೆಗಳುಳ್ಳ ಮುದ್ರಾವಣ ಅಲ್ಲಿ ಬಟ್ಟೆ ಮಾಡುವ ವರ್ತಕರ ಸಮೂಹವಿರುತ್ತಿತ್ತು. ಇನ್ನೊಂದು ಕಡೆ ನಾಣ್ಯ ಮುದ್ರಿಸುವ ಟಂಕಸಾಲೆಯಿತ್ತೆಂದು ಹೇಳಬಹುದು. ಇದೊಂದು ಅಂದಿನ ಮುಖ್ಯ ವ್ಯಾಪಾರ ಕೇಂದ್ರವಾಗಿದ್ದ ಸಾಧ್ಯತೆಗಳಿವೆ.

ಕ್ರಿ.ಶ. ೧೦೮೦ ಮತ್ತು ಕ್ರಿ.ಶ. ೧೧೯೯ ರಲ್ಲಿ ಕ್ರಮವಾಗಿ ಮುದ್ರಾವಣಗಳು ಅಲಂದೆ (ಅಳಂದ) ಮತ್ತು ಪೆರೂರುಗಳಲ್ಲಿದ್ದವೆಂದು ತಿಳಿದುಬರುತ್ತದೆ. ಪೆರೂರಿನ ಶಾಸನದಲ್ಲಿ ವಡ್ಡರಾವುಳದ ದಂಡನಾಯಕ ಮುದ್ರಾವಣದ ವಿಟ್ಟಪಯ್ಯನಾಗಿದ್ದನೆಂದು ತಿಳಿಯುವುದು. ಅಲಂದೆಯ ಮುದ್ರಾವಣದ ಸುಂಕವನ್ನು ದತ್ತಿನೀಡಿದ ವಿವರಗಳಿವೆ.

ರಾಜಧಾನಿ ಕಲ್ಯಾಣದ ಈ ಟಂಕಸಾಲೆಯಲ್ಲಿ 'ಬಾದುಮ್ಮೆಯ ದ್ರಮ್ಮ'ವನ್ನು ಮುದ್ರಿಸಲಾಗುತ್ತಿತ್ತೆಂದು ಕಾಣುತ್ತದೆ. ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು 'ಕಮ್ಮಟ', ಅಚ್ಚಿನ 'ಟಂಕಸಾಲೆ' ಎಂದು ಕರೆಯಲಾಗಿದೆ. ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗಳನ್ನು ರಾಜನು ಕಮ್ಮಟಗಳಲ್ಲಿ ನೇಮಿಸುತ್ತಿದನೆಂದು ತಿಳಿದುಬರುತ್ತದೆ. ಅಲ್ಲಿ ಕಮ್ಮಟೇಶ್ವರ ಎಂಬ ದೇವಸ್ಥಾನವಿರುತ್ತಿತ್ತೆನ್ನುವರು. ಈ ಕಾಲದಲ್ಲಿ ಟಂಕಸಾಲೆಗಳು ಲೊಕ್ಕಿಗುಂಡಿ, ಸೂಡಿ ಮತ್ತು ದೋರಸಮುದ್ರಗಳಲ್ಲಿದ್ದವು. ಲೊಕ್ಕಿಗುಂಡಿ ಮುಂತಾದ ಟಂಕಸಾಲೆಗಳಲ್ಲಿ ವರ್ತಕ ಸಂಘಗಳವರೂ ತಮ್ಮ ನಾಣ್ಯಗಳನ್ನು ತಯಾರಿಸುತ್ತಿದ್ದರೆನ್ನಲಾಗಿದೆ. ಮುದ್ರಿಸಿದ ನಾಣ್ಯಗಳಿಗೆ ವರ್ತಕರ ಹೆಸರನ್ನು ಹಿಂದೆ

ಜೋಡಿಸಲಾಗುತ್ತಿತ್ತು. ಹೀಗಾಗಿ ಲಕ್ಕುಂಡಿಯಲ್ಲಿ ವರ್ತಕರು ಮುದ್ರಿಸಿದ ನಾಣ್ಯಗಳ ಮೇಲೆ ವರ್ತಕ ಲೊಕ್ಕಿ ಗದ್ಯಾಣ ಎಂಬ ಹೆಸರಿರುವುದನ್ನು ಕಾಣಬಹುದು. ಇದರಿಂದ ಚಾಲುಕ್ಯ ಅರಸುಗಳಷ್ಟೇ ಅಲ್ಲದೆ ಅವರ ಕೆಲವು ಸಾಮಂತರೂ ನಾಣ್ಯಗಳನ್ನು ಹೊರಡಿಸುತ್ತಿದ್ದರೆಂದುತಿಳಿದಿದೆ.

ಇದನ್ನು ನೋಡಿದರೆ ಮುದ್ರಾವಣದಲ್ಲಿ ಎರಡು ಪ್ರತ್ಯೇಕ ಸಂಘಟನೆಗಳಿದ್ದುದು ತಿಳಿಯುವುದು. ಅವುಗಳು ವಿವಿಧ ವರ್ತಕ ಸಂಘಗಳು ಮತ್ತು ಅಧಿಕಾರಿವರ್ಗದವರು ಅಲ್ಲಿಯ ವರ್ತಕರ ಗುಂಪಿನಲ್ಲಿ ಘಳಿಸಾಸರು, ನಖರರು, ವಡ್ಡವ್ಯವಹಾರಿಗಳು ಕಾಣುವರು. ಅಧಿಕಾರಿಗಳ ಗುಂಪಿನಲ್ಲಿ ದೂಸಿಗ, ಪೆರ್ಗ್ಗಡೆ ಮತ್ತು ರಾಜಶ್ರೇಷ್ಠಿಗಳು ಕಾಣುವರು. ವರ್ತಕರು ವಿವಿಧೆಡೆಗಳಿಂದ ತಂದ ಬಟ್ಟೆಗಳನ್ನು ಮಾರುತ್ತಿದ್ದರೆಂದು ಮತ್ತು ಅಧಿಕಾರಿಗಳು ಆ ಮಾರುಕಟ್ಟೆಯಿಂದ ವಿವಿಧ ರೀತಿಯಲ್ಲಿ ರಾಜಧಾನಿಯ ಭಂಡಾರಕ್ಕೆ ಉತ್ಪನ್ನವನ್ನು ಸಂಗ್ರಹಿಸುವ ಕೆಲಸವನ್ನು ನೋಡಿಕೊಳ್ಳುತ್ತಿದ್ದರೆನ್ನಬಹುದು. ಮುದ್ರಾವಣದ ವಿಷಯ ಬೇರೆ ಭಾಗಗಳಲ್ಲಿ ಕಾಣದಿರುವುದು ಗಮನೀಯ.

ಇಂದು ಆಗಿನ ಕೋಟೆ, ಅರಮನೆ, ಮುದ್ರಾವಣ, ಟಂಕಸಾಲೆ, ಬ್ರಹ್ಮದೇವಾಲಯ ಮೊದಲಾದವು ಬಸವಕಲ್ಯಾಣದಲ್ಲಿ ಎಲ್ಲಿದ್ದವೆಂಬುದನ್ನು ಗುರುತಿಸಬೇಕಾಗಿದೆ. ಈಗಿರುವ ಕೋಟೆಯೇ ಆಗಿನ ಕೋಟೆಯಾಗಿದ್ದು, ಅದರಲ್ಲೇ ಅರಮನೆ ಇತ್ತೆನ್ನಬಹುದು. ಆದರೆ ಮುದ್ರಾವಣದ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಈಗಿನ ಅಲ್ಲಿಯ ಕೋಟೆಯ ಹತ್ತಿರವಿರುವ ಅನೇಕ ಮನೆಗಳು ಮೂಲತಃ ಸಿಂಪಿಗರವಾಗಿವೆ. ಹೀಗಾಗಿ ಈ ಭಾಗವೇ ಆಗಿನ ಮುದ್ರಾವಣ-ಸಿಂಪಿಗೇರಿ ಎಂದು ಗುರುತಿಸಬಹುದು. ಆದರೆ ಅದರ ಹಳೆ ರಸ್ತೆ ತಿಳಿಯಬೇಕಾಗಿದೆ. ಅದೇ ರೀತಿ ಅಲ್ಲಿದ್ದ ಬ್ರಹ್ಮ ದೇವಾಲಯವನ್ನು ಪತ್ತೆಹಚ್ಚಬೇಕಾಗಿದೆ.

ಕುತೂಹಲವೆಂದರೆ ಈ ಸಿಂಪಿಗರ ಒಂದು ವಂಶದವರಲ್ಲಿ ವಿಶಿಷ್ಟ ಆಚರಣೆಯೊಂದಿದೆ. ಬಸವಕಲ್ಯಾಣ ಹತ್ತಿರದ ಒಂದು ಗ್ರಾಮದಲ್ಲಿನ ಕುಟುಂಬದವರೊಬ್ಬರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ನಾಣ್ಯಗಳನ್ನು ಅವರ ಮನೆ ಮುಂದಿನ ಕಣದಲ್ಲಿ ಹರಡುವರಂತೆ. ಅವುಗಳ ಮೇಲೆ ಎತ್ತುಗಳನ್ನು ಗಾಣದಂತೆ ತಿರುಗಿಸುವರಂತೆ. ಈ ಪರಂಪರೆಗೂ ಮತ್ತು ಆಗಿನ ಟಂಕಸಾಲೆ/ಮುದ್ರಾವಣಕ್ಕೆ ಏನಾದರೂ ಸಂಬಂಧವಿರುವುದನ್ನು ಕಲ್ಪಿಸಲು ಹೆಚ್ಚಿನ ಅಧ್ಯಯನ ಮಾಡಬೇಕಾಗಿದೆ.

■

೧೫. ಉಪಸಂಹಾರ

ಕರ್ನಾಟಕದ ಅನೇಕ ಅರಸು ಮನೆತನಗಳ ರಾಜಧಾನಿಗಳ ಸಾಂಸ್ಕೃತಿಕ ಇತಿಹಾಸದಲ್ಲಿ ಚಾಲುಕ್ಯರಿಗೆ ಒಂದು ಶತಮಾನಗಳ ಕಾಲ ರಾಜಧಾನಿಯಾಗಿ ಮೆರೆದ ಕಲ್ಯಾಣ/ಕಲ್ಯಾಣಪುರ/ಕಲ್ಯಾಣಿ ಅಥವಾ ಈಗಿನ ಬಸವಕಲ್ಯಾಣದ ವಿಭಿನ್ನ ಐತಿಹಾಸಿಕ ಮಾಹಿತಿಗಳು ಮೊದಲ ಬಾರಿಗೆ ಒಂದೆಡೆ ಇಲ್ಲಿ ಸಂಗ್ರಹಗೊಂಡಿವೆ. ಈ ಅಧ್ಯಯನವು ಇನ್ನಿತರ ರಾಜಧಾನಿ, ಪಟ್ಟಣಗಳ ಅಧ್ಯಯನಕ್ಕೆ ಒಂದು ಮಾದರಿಯಾಗಬಲ್ಲದು. ಈ ಒಂದು ಪಟ್ಟಣದ ರಾಜಕೀಯ ಮತ್ತು ಸಾಂಸ್ಕೃತಿಕ ಬೆಳವಣಿಗೆಯ ಸಂಪೂರ್ಣ ಚಿತ್ರಣವನ್ನು ನೀಡಲು ಈ ಅಧ್ಯಯನ ಸಹಕಾರಿಯಾಗುತ್ತದೆ. ರಾಜಕೀಯ ಮತ್ತು ಸಾಂಸ್ಕೃತಿಕ ಏರು-ಪೇರಿನ ಕಾರಣದಿಂದ ಅಲ್ಲಿಯ ಅನೇಕ ಸ್ಮಾರಕಗಳು ಮತ್ತು ಶಿಲ್ಪಗಳು ತಮ್ಮ ಮೂಲ ರೂಪವನ್ನು ಕಳೆದುಕೊಂಡಿರುವುದು ಗೋಚರವಾಗುತ್ತದೆ. ಚಾಲುಕ್ಯರ ಕೋಟೆಯು ಕ್ರಿ.ಶ. ೧೬ನೇ ಶತಮಾನದಲ್ಲಿ ಸಮಗ್ರವಾಗಿ ಪರಿವರ್ತಿಸಿ ಕಟ್ಟಲ್ಪಟ್ಟಿದ್ದರೂ, ಕೋಟೆಯ ಒಳಗಿನ ಕಟ್ಟಡಗಳ ಸಂಕೀರ್ಣದ ವಿನ್ಯಾಸವನ್ನು ಅವಲೋಕಿಸಿದಾಗ ಬಹುತೇಕ ಅಲ್ಲಿ ಅರಸುಮನೆತದವರ ಅಂತಃಪುರ, ದೇವಾಲಯ, ಆಸ್ಥಾನ, ಅಡುಗೆಮನೆ ಮುಂತಾದವುಗಳು. ಕೆಲವು ಅಂತಃಪುರ, ದೇವಾಲಯದ ಪ್ರಮುಖ ಅಧಿಕಾರಿಗಳ, ಪುರೋಹಿತರ ವಾಸತಾಣಗಳು ಜೊತೆಯಲ್ಲಿ ಪೂಜಾ ಮಂದಿರ, ಮನೋರಂಜನಾ ಕೇಂದ್ರಗಳು, ಧವಸಧಾನ್ಯ, ಔಷಧ ಭಂಡಾರ, ಯುದ್ಧೋಪಕರಣ, ಲೆಕ್ಕಪತ್ರ ಇತ್ಯಾದಿ ವಸ್ತುಗಳನ್ನು ಸಂಗ್ರಹಿಸಿಡುವ ಕಟ್ಟಡಗಳು ಅಲ್ಲಿ ಒಳಗೊಂಡಿರಬೇಕೆಂದು ಕಾಣುತ್ತದೆ. ನೀರಿನ ಪೂರೈಕೆಗಾಗಿ ಅಲ್ಲಿ ನಿರ್ಮಿಸಿದ ಬಾವಿಯಿಂದ ಚರಕವನ್ನು ಬಳಸಿ, ನೀರನ್ನು ಮೇಲೆತ್ತುವ ವ್ಯವಸ್ಥೆ ಇದ್ದುದು ಕಂಡುಬರುತ್ತದೆ. ಇಂತಹ ಮಹತ್ವದ ಸ್ಥಳವನ್ನು ಸಂರಕ್ಷಿಸಲು ಭದ್ರವಾದ ಕೋಟೆಯನ್ನು ಕಟ್ಟಿರುವುದು ಕಂಡುಬರುತ್ತದೆ. ಮುಸ್ಲಿಂಮರ ಆಳ್ವಿಕೆಯ ಕಾಲದಲ್ಲೂ ಕಲ್ಯಾಣದ ಕೋಟೆ ಒಂದು ಪ್ರಮುಖ ಸ್ಥಳವಾಗಿತ್ತು. ಕೆಲವೊಮ್ಮೆ ಈ ಕಾಲದಲ್ಲೂ ಈ ಕೋಟೆಯು ವೈರಿಗಳಿಂದ ಧ್ವಂಸಗೊಂಡಿತು. ಆದರೆ ಅಳಿಯ ರಾಮರಾಯನು ಮರಣಹೊಂದಿದ ಬಳಿಕ ಈ ಕೋಟೆಯು ಸಮಗ್ರವಾಗಿ ಜೀರ್ಣೋದ್ಧಾರಗೊಂಡಂತೆ ಕಾಣುವುದು.

ಚಾಲುಕ್ಯರ ಕಾಲದಲ್ಲಿ ಬಟ್ಟೆ ಮಾರಲು ಒಂದು ಪ್ರತ್ಯೇಕ ಸಂಕೀರ್ಣ ಕೋಟೆಯ ಹತ್ತಿರ ಇದ್ದಿರಬೇಕು. ಆ ಸ್ಥಳವೇ ಮುದ್ರಾವಣ. ಅಲ್ಲಿ ಸಿಂಪಿಗರ ಮನೆಗಳಿದ್ದವು, ವಿಭಿನ್ನ ರಸ್ತೆಗಳಿದ್ದವು, ಬಟ್ಟೆಯ ಅಂಗಡಿಗಳಿದ್ದವು. ಪೂಜಾರಾಧನೆಗೆ ಬ್ರಹ್ಮದೇವಾಲಯವಿದ್ದಿತು. ಇಂದಿಗೂ ಕೋಟೆಯ ಹತ್ತಿರವೇ ಸಿಂಪಿಗರಕೇರಿ ಇರುವುದು ಗಮನೀಯ. ಮುದ್ರಾವಣಗಳು ಅಳಂದೆಮತ್ತು ಇನ್ನಿತರ ಸ್ಥಳಗಳಲ್ಲಿದ್ದವೆಂದು ತಿಳಿದುಬರುವುದು.

ಅದರಬದಿಯಲ್ಲೇಪಟ್ಟಣದಲ್ಲಿ ವಾಸಿಸುವ ವಿಭಿನ್ನ ಅಧಿಕಾರಿಗಳ, ವರ್ತಕರ, ಪುರೋಹಿತರ, ಪಂಡಿತರ, ಕವಿಗಳ ಮತ್ತು ಮುಂತಾದ ಪ್ರಜೆಗಳ ಮನೆಗಳು ನಿರ್ಮಾಣಗೊಂಡಿರಬೇಕು. ಅಂದಿನ ಶೈವ, ವೈಷ್ಣವ, ಶಾಕ್ತ, ಜೈನ, ಮುಸ್ಲಿಂ, ವೀರಶೈವ ಪೂಜಾ ಮಂದಿರಗಳು ಅವರವರ ವಸತಿಯ ಓಣಿ ಅಥವಾ ಕೇರಿಗಳಲ್ಲಿ ಕಟ್ಟಿಸಿದವುಗಳಾಗಿವೆ.

ಶೈವ ದೇವಾಲಯ-ಶಿಲ್ಪಗಳಲ್ಲಿ ತ್ರಿಪುರಾಂತಕ ಶಿವನ ವಿಗ್ರಹಗಳು ವಿಶೇಷವೆನಿಸಿವೆ. ಭೀಮೇಶ್ವರ ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳು ಕಲ್ಯಾಣದಲ್ಲಿ ಮಹತ್ವದ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಚೋಳರು ಚಾಲುಕ್ಯರ ರಾಜಧಾನಿ ಕಲ್ಯಾಣದ ಅಂತಃಪುರವನ್ನು ಸುಟ್ಟನಂತರ ಅಲ್ಲಿಂದ ಅನೇಕ ಸುಂದರ ಶಿಲ್ಪಗಳನ್ನು ತಮ್ಮ ನಾಡಿಗೆ ಒಯ್ದರು. ಅಂತಹ ಒಂದು ಶಿಲ್ಪ (ಶೈವದ್ವಾರಪಾಲಕ) ತಮಿಳುನಾಡಿನ ಧಾರಾಸುರಂದಲ್ಲಿದೆ. ಈ ನಗರದ ಒಂದೊಂದು ಓಣಿಯಲ್ಲಿ ಕನಿಷ್ಟ ಒಂದೊಂದು ಶೈವ ದೇವಾಲಯಗಳು ಇದ್ದವೆಂದು ಹೇಳಬಹುದು. ಬಳಸಿದ ಶಿಲೆ, ದೊರೆತ ಪುರಾವೆ ಪ್ರಮಾಣ ಮತ್ತು ಶೈಲಿಯಿಂದ ಕಲ್ಯಾಣದಲ್ಲಿ ಸುಮಾರು ೧೨ಕ್ಕೂ ಹೆಚ್ಚು ಶೈವ ದೇವಾಲಯಗಳಿದ್ದವೆಂದು ಹೇಳಬಹುದು.

ಶಾಕ್ತ ಪರಂಪರೆಯಲ್ಲಿ ಕೊಲ್ಲಾಪುರ ಮಹಾಲಕ್ಷ್ಮೀ ಮತ್ತು ಗೂರ್ಜ್ಜರ ಮಲಯವತಿ ಮಹಾದೇವಿಯ ದೇವಾಲಯಗಳಿದ್ದುದು ಗಮನೀಯ. ಆರನೇ ವಿಕ್ರಮಾದಿತ್ಯನ ೨೫ ರಾಣಿಯರಲ್ಲಿ ಪಟ್ಟದರಾಣಿ ಮಲಯಮತಿ ಮಹಾದೇವಿಯೆಂಬುದು ಅಷ್ಟೇ ಗೊತ್ತಿತ್ತು. ಆದರೆ ಈಕೆ ಗೂರ್ಜ್ಜರ ದೇಶದವಳು ಎಂಬುದು ಕಲ್ಯಾಣದ ಕ್ರಿ.ಶ. ೧೧೧೬ರ ಶಾಸನದಿಂದ ಮೊದಲು ಗೊತ್ತಾಗಿದೆ. ನಾರಾಯಣಪುರದ ಶಿವದೇವಾಲಯದ ಗರ್ಭಗೃಹದ ಬಾಗಿಲು ಚೌಕಟ್ಟಿನಲ್ಲಿ ಸಪ್ತಮಾತೃಕೆಯರಿದ್ದಾರೆ. ಅದೇ ರೀತಿ ಹಾವೇರಿಯ ಸಿದ್ದೇಶ್ವರ ದೇವಾಲಯದಲ್ಲೂ ಅಷ್ಟಮಾತೃಕೆಯರಿದ್ದಾರೆ.

ವೈಷ್ಣವ ದೇವಾಲಯ ಶಿಲ್ಪಗಳನ್ನು ತಯಾರಿಸಲು ಡಾಲರೈಟ್, ಸಿಸ್ಟ್ ಮತ್ತು ಮರಳು ಶಿಲೆಯನ್ನು ಬಳಸಿದ್ದರಿಂದ ಅಲ್ಲಿ ಕನಿಷ್ಠ ಮೂರು ರೀತಿಯ ವೈಷ್ಣವ ದೇವಾಲಯಗಳು ಇದ್ದವೆಂದು ಹೇಳಬಹುದು. ದೊರೆತ ಪುರಾವೆಗಳಿಂದ ಕಲ್ಯಾಣದಲ್ಲಿ ವಿಷ್ಣುವಿನ ದೇವಾಲಯಗಳು ಅಂಬಾಭವಾನಿಗುಡಿ, ಬಾಲಾಜಿ ಮಂದಿರ, ಗೌಂಡಿಗಲ್ಲಿ, ಪರ್ತಾಪುರ, ತ್ರಿಪುರಾಂತಕ, ಶಿವಪುರ, ನಾರಾಯಣಪುರ ಮತ್ತು ಅಕ್ಕನಾಗಮ್ಮನ ಗುಡಿಗಳ ಪರಿಸರದಲ್ಲಿದ್ದುದು ತಿಳಿದುಬರುತ್ತದೆ.

ದೇವಾಲಯಗಳ ಗೋಡೆಗಳ ಉಬ್ಬು ಶಿಲ್ಪಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಸುಂದರವಾದ ಶಿಲ್ಪಗಳಿವೆ. ಅವುಗಳು ರಥಸವಾರಿ ಮಾಡುವ ರಾವಣ, ಶಕಟವಿಷ್ಣು, ಹನುಮ ಹೊತ್ತ ಲಕ್ಷ್ಮಣ, ರಾಮ-ಹನುಮರ ಪಯಣ, ಹನುಮ- ಅಕ್ಷಯಕುಮಾರರ ಹೋರಾಟ, ವಾಲಿ, ಕುಳಿತ ದಶಮುಖರಾವಣ, ಕೃಷ್ಣ - ಯಶೋಧೆಯರ ಶಿಲ್ಪಗಳು ಮುಖ್ಯವೆನಿಸಿವೆ. ಗರುಡನ ಭವ್ಯವಾದ ಶಿಲ್ಪವನ್ನು ವಿಷ್ಣುವಿನ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದಾಗಿದೆ.

ನಾಗಶಿಲ್ಪಗಳ ಅಧ್ಯಯನದಲ್ಲಿ ವೈವಿಧ್ಯಮಯ ಶಿಲ್ಪಗಳಿವೆ. ಜೊತೆಯಲ್ಲಿ ಆ ಭಾಗದ ದಂತಕಥೆ ಪ್ರಸಿದ್ಧಿಯನ್ನು ಪಡೆದಿದೆ. ನಾಗನ ಪ್ರತ್ಯೇಕ ದೇವಾಲಯಗಳು ಅಲ್ಲಿದ್ದವೆಂದು ಹೇಳಬಹುದು..

ಮಹತ್ವದ ಸಂಗತಿಯೆಂದರೆ ಅಲ್ಲಿಯ ಒಂದು ಜೈನ ಬಸದಿಯ ಮುಂದೆ ಗಜಗಳ ಮಧ್ಯ ಜಿನನಿರುವ ರೇಖಾಚಿತ್ರದ ತೋರಣವಿತ್ತು. ಅದು ಗಜಲಕ್ಷ್ಮೀ ತೋರಣದ ಪ್ರಭಾವವಾಗಿದೆ.

ಅಲ್ಲಿಯ ಚಂದ್ರಪ್ರಭ ಜಿನೇಂದ್ರಾಲಯವನ್ನು ಅತ್ತಿಮಬ್ಬೆಯು ಜೀರ್ಣೋದ್ಧಾರಗೊಳಿಸಿದಬಳಿಕ ಆಕೆಯ ಆಸ್ಥಾನ ಕವಿಗಳಾದ ರನ್ನ ಮುಂತಾದವರು ಕಲ್ಯಾಣಕ್ಕೆ ಬಂದು ಹೋಗಿರಲೂಬಹುದು. ಅಲ್ಲಿಯ ಕೆಲ ಜೈನ ಬಸದಿಯ ಗೋಡೆಯಲ್ಲೂ ತೀರ್ಥಂಕರರ ಉಬ್ಬುಶಿಲ್ಪಗಳಿದ್ದವೆಂದು ಅಲ್ಲಿಯ ಪುರಾವೆಗಳು ಸ್ಪಷ್ಟಪಡಿಸುವವು. ಶಿಲ್ಪಗಳಲ್ಲಿ ಒಂದು ಜಿನ ಪೀಠದಲ್ಲಿ ಎರಡು ಆನೆಗಳ ಮಧ್ಯ ಧರ್ಮ ಚಕ್ರವನ್ನು ಕಂಡರಿಸಲಾಗಿದೆ. ಬದಿಗಳಲ್ಲಿ ಆನೆ, ಸಿಂಹಗಳ ಫಲಕಗಳಿರುವುದು ಈ ಭಾಗದಲ್ಲೇ ಅಪರೂಪದ್ದೆನಿಸಿವೆ. ಈ ರೀತಿಯ ಫಲಕವು ಅಗರಖೇಡದಲ್ಲಿದೆ.

ಹೆಚ್ಚಿನ ಜೈನ ಪುರಾವೆಗಳು ಕುಂಬಾರಗಲ್ಲಿ, ಜೈಶಂಕರ ಕಾಲೋನಿ, ಸದಾನಂದ ಮಠದ ಹತ್ತಿರದ ಬಾವಿ ಮತ್ತು ಗೌಂಡಿಗಲ್ಲಿಯಲ್ಲಿರುವುದರಿಂದ ಆ ಸ್ಥಳಗಳು ಜೈನ ಕೇಂದ್ರಗಳಾಗಿದ್ದವೆನ್ನಬಹುದು. ಜೈನ ಶಿಲ್ಪಗಳಲ್ಲಿ ಪಾರ್ಶ್ವನಾಥ, ಸುಪಾರ್ಶ್ವನಾಥ, ಚೌವ್ವೀಸ್ ತೀರ್ಥಂಕರರು ಇತ್ಯಾದಿ ನಮೂನೆಗಳಿವೆ. ಕೆಲವು ಶಿಲ್ಪಗಳು ಸುಮಾರು ಕ್ರಿ.ಶ. ೧೦ನೇ ಶತಮಾನ ಅಂತ್ಯವಿದ್ದರೆ, ಉಳಿದವುಗಳು ಸುಮಾರು ಕ್ರಿ.ಶ. ೧೨ನೇ ಶತಮಾನದ್ದಾಗಿವೆ. ತದನಂತರ ಕಾಲದ ಜೈನಶಿಲ್ಪಗಳು ಈ ಭಾಗದಲ್ಲೂ ವಿರಳವಾಗಿವೆ. ಚಾಲುಕ್ಯ ಆರನೇ ವಿಕ್ರಮಾದಿತ್ಯ ಒಮ್ಮೆ ಕಲ್ಯಾಣದಲ್ಲಿ ತನ್ನ ಒಬ್ಬ ರಾಣಿ ಜಾಕಲದೇವಿಗೆ ಸುಂದರ ಜಿನವಿಗ್ರಹವನ್ನು ಖರೀದಿಸಿಕೊಟ್ಟ. ಆಕೆಯು ಅದನ್ನು ತಾನು ಆಳುವ ಇಂಗಳಿಗಿಯಲ್ಲಿ ಪ್ರತಿಷ್ಠಾಪಿಸಿದಳೆಂದು ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಬೌದ್ಧ ಚೈತ್ಯಾಲಯ ಶಿಲ್ಪಗಳು ಕಾಣದಿದ್ದರೂ ಅಲ್ಲಿ ಬೌದ್ಧಕುಲದವರಿದ್ದರೆಂದು ತಿಳಿಯಲಾಗಿದೆ.

ಸೂರ್ಯ ದೇವಾಲಯ ಶಿಲ್ಪಗಳ ಅಧ್ಯಯನ ಮಹತ್ವದ್ದಾಗಿದೆ. ಸೂರ್ಯನ ಶಿಲ್ಪಗಳಲ್ಲಿ ದ್ವಾದಶಾದಿತ್ಯರು, ನವಗ್ರಹಗಳು, ನಿಧಿಗಳು ಮುಂತಾದವರನ್ನು ತೋರಿಸಿದ್ದು ಗಮನೀಯ. ಶೈವ ಮತದ ಅನೇಕ ಶಿಲ್ಪಗಳ ಮುಖಭಾಗಗಳನ್ನು ಹೆಚ್ಚಾಗಿ ವಿಕೃತ ಗೊಳಿಸಿರುವುದು ಎದ್ದು ಕಾಣುತ್ತದೆ. ಈ ರೀತಿ ಕೆಲವು ಜೈನ ಶಿಲ್ಪಗಳಲ್ಲಿ ಕಾಣಬಹುದು.

ನಾರಾಯಣಪುರದ ಮೃತ್ಯುಂಜಯ ಶರಣರ ಸ್ಮಾರಕದ ಪೂಜಾ ವ್ಯವಸ್ಥೆಯು ಹಿಂದೂ ಮುಸ್ಲಿಂರ ಸಾಮರಸ್ಯವನ್ನು ಬೆಸೆದುಕೊಂಡಿರುವುದನ್ನು ತೋರಿಸುತ್ತದೆ. ಅಲ್ಲಿಯ ಮುಗ್ಧ ಸಂಗಯ್ಯನ ಗದ್ದುಗೆ ಬಳಿಯಲ್ಲಿ ಆ ಸ್ವಾಮಿಯ ಬೆತ್ತ ಇಂದಿಗೂ ಅಲ್ಲಿರುವುದು ಗಮನೀಯ. ಶಿವಶರಣರ ತಾಣಗಳು ಬಹುತೇಕ ಅಲ್ಲಿನ ತ್ರಿಪುರಾಂತಕ ಕೆರೆಯ ಪರಿಸರದಲ್ಲಿರುವುದು ಗಮನೀಯ. ಮುಸ್ಲಿಮರು ಕಲ್ಯಾಣದ ಮಧುಕೇಶ್ವರ ದೇವಾಲಯವನ್ನು ಭಗ್ನಗೊಳಿಸಿದ್ದರಿಂದ ಅದರ ಪೂಜಾ ವಿಧಾನಗಳು ನಿಂತುಹೋದವು. ಇಂಥ ಸನ್ನಿವೇಶದಲ್ಲಿ ಮುಸ್ಲಿಮರು ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಅದರ ಪೂಜೆಯನ್ನು ಮುಂದುವರಿಸಲು ಅವಕಾಶ ಮಾಡಿಕೊಟ್ಟ ಅಪರೂಪದ ಘಟನೆ ಮಹತ್ವಪೂರ್ಣವೆನಿಸಿದೆ. ಹೀಗಾಗಿ ತ್ರಿಪುರಾಂತಕ ದೇವಾಲಯ ಮತ್ತು ಅಲ್ಲಿಯ ಕೆರೆ ಈ ಕಾಲದಲ್ಲಿ ಒಂದು ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಲು ಕಾರಣವಾಗಿವೆ. ಕಲ್ಯಾಣದಲ್ಲಿ ನೂರಕ್ಕೂ ಹೆಚ್ಚು ವೀರಶೈವ ಮಠಗಳಿದ್ದವೆನ್ನುವರು. ಅಲ್ಲಿನ ಬಸವೇಶ್ವರ ದೇವಾಲಯವನ್ನು ಮೂಲತಃ ವೀರಶೈವ ಮಠದಲ್ಲಿ ಸ್ಥಾಪಿಸಲಾಗಿದೆ. ಅಲ್ಲಿಯ ಮಠಗಳನ್ನು ಬಸವಕಲ್ಯಾಣದ ನಗರದಲ್ಲಿರುವ ಳಿಳಿ ಗಲ್ಲಿಗಳಲ್ಲಿ ಹುಡುಕಿ ಗುರುತಿಸಬೇಕಾಗಿದೆ. ಕಲ್ಯಾಣದಲ್ಲಿ ಕಂಬಾಳಿಮಠ, ಮಹಂತಮಠ, ಸದಾನಂದ ಸರಸ್ವತಿಮಠ, ಆನಿಮಠ ಇತ್ಯಾದಿ ಪ್ರಮುಖ ಮಠಗಳಿವೆ. ವೀರಶೈವರ ಮಠ ಮಾನ್ಯಗಳು ಶಿವಶರಣರ ಗುಹೆಗಳು ಅಲ್ಲಿವೆ. ಈ ಗುಹಾ ವಾಸ್ತುಲಕ್ಷಣಗಳು ಯಾವುದೇ ನಿರ್ದಿಷ್ಟ ಸಂಪ್ರದಾಯವನ್ನು ಹೊಂದಿದ್ದು ಕಾಣುವುದಿಲ್ಲ. ವೈಷ್ಣವ ಗುಹಾಲಯವೊಂದು ಒಬ್ಬ ಶರಣೆಯ ಸ್ಥಳವಾಗಿದೆ. ಅಕ್ಕನಾಗಮ್ಮನ ಗುಹೆಯ ಪಶ್ಚಿಮ ಪ್ರವೇಶದ್ವಾರದಲ್ಲಿ ವೈಷ್ಣವ ದ್ವಾರಪಾಲಕರ ಚಿತ್ರಗಳಿವೆ. ಶಿವಶರಣರ ಕೆಲವು ಗುಹೆಗಳು ಇಂಗ್ಲೀಷ್ 'ಎಲ್' ನಮೂನೆಯಲ್ಲಿರುವುದು ಗಮನೀಯ. ಅವುಗಳು ಒಂದೇ ರಸ್ತೆಯಲ್ಲಿ ಇರುವುದಿಲ್ಲ. ಮೋಳ್ಕೇರದ ಮಾರಯ್ಯನ ನೆಲಮಟ್ಟ ಕೆಳಗಿನ ಗುಹೆಯ ಮೂಲ ಭಾಗದ ದೇವಾಲಯ ಸಂಪ್ರದಾಯವನ್ನು ಹೋಲಿಸಿದರೆ ಬದಿಗಿನ ಭಾಗವು ಸ್ನಾನಪೂಜಾನುಷ್ಠಾನದ ವ್ಯವಸ್ಥೆಯನ್ನು ತೋರಿಸುತ್ತದೆ. ಅಲ್ಲಿಯ ಗೋಡೆಗಳ ಮೇಲೆ ನಾಗಗಳ ಮತ್ತು

ಮಾರುತಿಯ ಚಿತ್ರಗಳಿರುವುದನ್ನು ಗಮನಿಸಿದರೆ ಅದು ಶಿವಶರಣ ಮಾರಯ್ಯನ ಗುಹೆ ಎಂದು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಏಕೆಂದರೆ ಈತನೊಬ್ಬ ಶಿವೋಪಾಸಕ.

ಪರುಷಕಟ್ಟೆಯ ನಂದಿಪೀಠದಲ್ಲಿ ಚಿತ್ರಿಸಿದ ಆನೆಗಳಲ್ಲದೆ ಒಂದು ಕಪ್ಪೆಯ ಚಿತ್ರವಿರುವುದು ವಿಶೇಷವೆನ್ನಬಹುದು. ಬಸವಣ್ಣನವರ ಒಂದು ವಚನದಲ್ಲಿ ಕಪ್ಪೆಯನ್ನು ಹೆಸರಿಸಿದ್ದಾರೆ. ಅದಕ್ಕೆ ಸಂಬಂಧ ಹಚ್ಚಲು ಬರುವುದೇ? ಪ್ರಭುಲಿಂಗದೇವರ ಪರಷುಕಟ್ಟೆ ಮತ್ತು ಮಡಿವಾಳ ಮಾಚಯ್ಯನ ಮಂದಿರದ ಮುಂದಿನ ಕಟ್ಟೆಗಳ ಮೇಲಿರುವ ನಂದಿ ಪೀಠಗಳು ಒಂದೇ ರೀತಿಯಲ್ಲಿರುವುದು ಗಮನೀಯ. ಗದ್ದುಗೆಯಲ್ಲಿನ ಒಂದೂ ವೀರಗಲ್ಲಿನಲ್ಲಿ ವೀರನು ಆನೆಯನ್ನು ಬಗ್ಗಿಸುವುದನ್ನು ಚಿತ್ರಿಸಲಾಗಿದೆ. ಆನೆ ಬಗ್ಗಿಸುವ ಶಿಲ್ಪವನ್ನು ಶರಣ ಅಂಬಿಗರ ಚೌಡಯ್ಯನದೆಂದು ಈಗಾಗಲೇ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ನೂಲಿಯ ಚಂದಯ್ಯನ ಗುಹೆಯ ಕೆಲವು ಶಿಲ್ಪಗಳು ನೂಲಿಯ ಚಂದಯ್ಯನದಿರಬಹುದೇ ? ಅಲ್ಲಿಯ ಚೌಕವನ್ನು ಕಟ್ಟಿಕೊಂಡ ದಂಪತಿಗಳ ಹಾಗೂ ಗುಂಡಬ್ರಹ್ಮಯ್ಯರ ಶಿಲ್ಪಗಳು ವೀರಶೈವ ಪರಂಪರೆಗಳನ್ನು ಸೂಚಿಸುತ್ತವೆ.

ನಗರದ ಮಧ್ಯದಲ್ಲಿರುವ ಹನ್ನೆರಡಕ್ಕೂ ಹೆಚ್ಚು ಲಯಣಗಳ (ಗುಹೆಗಳ) ವಾಸ್ತು ಲಕ್ಷಣಗಳು ಕರ್ನಾಟಕದ ವಾಸ್ತುಶಿಲ್ಪ ಚರಿತ್ರೆಯಲ್ಲಿಯೇ ಅಪರೂಪವೆನಿಸಿವೆ. ಅದರಲ್ಲಿ ಸ್ತಂಭಗಳುಳ್ಳ ಬೃಹದಾಕಾರದ ಒಂದು ಮಂಟಪವು ಕರ್ನಾಟಕದಲ್ಲಿಯೇ ವಿರಳವಾದದ್ದು. ಈ ಪಟ್ಟಣದ ಗೀರ್ ವಂಶದವರ ಬೃಂದಾವನಗಳು ಅವರ ಮನೆಯಲ್ಲಿರುವುದು ವಿಶೇಷವೆನ್ನಬಹುದು. ಕೋಟೆಯ ಒಂದು ಕೋಣೆಯಲ್ಲಿ ಕ್ರಿ.ಶ. ೧೧೪೨ರ ಶಾಸನದಲ್ಲಿ ಉಲ್ಲೇಖವಾದ ಅರಮನೆಯ ತೆಂಕಣದ ಭೀಮೇಶ್ವರ ದೇವಾಲಯವೆಂಬ ಉಲ್ಲೇಖ ಆ ದೇವಾಲಯವನ್ನು ಗುರುತಿಸಲು ಸಹಕಾರಿಯಾಗಿದೆ.

ಸಿನಿಮಾ ಮಂದಿರದ ಹತ್ತಿರದ ಲೇಣಗಳು (ಗುಹೆಗಳು) ವಿಶೇಷ ಗಮನವನ್ನು ಸೆಳೆಯುತ್ತವೆ. ಒಂದರಲ್ಲಿ ಸ್ತಂಭಗಳುಳ್ಳ ವಿಶಾಲ ಮಂಟದ ಮೇಲೆ ಕಂಡರಿಸಿದ ಬೃಹದಾಕಾರದ ಶಿಥಿಲಗೊಂಡ ಆನೆಯ ಚಿತ್ರದಿಂದ ಅದು ಯಾವ ಧರ್ಮದ ಸ್ಮಾರಕ ಎಂಬುದನ್ನು ಇನ್ನು ಪರಿಶೀಲಿಸಬೇಕಿದೆ. ಬದಿಗೆ ಉಪ್ಪರಿಗೆಯುಳ್ಳ ಗೃಹಕ್ಕೆ ಮೇಲಿನ ಕೋಣೆಯ ಹೊರಗೋಡೆಯ ಬದಿಗಳಲ್ಲಿ ತೆರೆದ ಕಿಡಕಿಗಳಿವೆ. ಮೇಲೆ-ಕೆಳಗಡೆ ತೆರೆದ ಬಾಗಿಲುಗಳ ಬದಿಗಿನ ಇನ್ನೊಂದು ಗೋಡೆಯ ಛತ್ತು ಭಾಗದಲ್ಲಿ ಉದ್ದವಾಗಿ, ಆಯತಾಕಾರವಾಗಿ ಶಿಲೆಯನ್ನು ಕತ್ತರಿಸಿದ ಉದ್ದೇಶ ತಿಳಿದಿಲ್ಲ. ಈ ಗುಹೆಗಳು ಸುಮಾರು ಕ್ರಿ.ಶ. ೧೧-೧೨ನೇ ಶತಮಾನ ಪೂರ್ವದ್ದಾಗಿವೆ. ಕೆಲವು ಗುಹೆಗಳಲ್ಲಿ ಛತ್ತುಗಳೇ ಇಲ್ಲ.

ಅವುಗಳಲ್ಲಿರುವ ಕಮಾನಿನಾಕಾರದ ಗೂಡುಗಳ ಲಕ್ಷಣದಿಂದ ಇವುಗಳ ಕಾಲಮಾನ ಸು. ಕ್ರಿ.ಶ. ೧೫-೧೬ನೇ ಶತಮಾನ. ಅವುಗಳು ಒಂದು ವಿಶಾಲವಾದ ರಸ್ತೆಯ ಪಕ್ಕದಲ್ಲಿರುವುದು ವಿಶೇಷವೆನ್ನಬಹುದು.

ಬಹುತೇಕ ಈ ಮೇಲಿನ ಕಾರಣದಿಂದ ಕಲ್ಯಾಣದ ಹೆಚ್ಚಿನ ದೇವಾಲಯ ಪುರಾವೆಗಳು ಮತ್ತು ಶಿಲ್ಪಗಳಲ್ಲಿ ಚಾಲುಕ್ಯರ ಕಾಲಾವಧಿಯಲ್ಲಿ ಮಧ್ಯಭಾರತದ ಕಲಾಲಕ್ಷಣಗಳ ಪ್ರಭಾವ ಬೀರಿದ್ದು ಕಾಣುತ್ತದೆ. ಸ್ಥಳೀಯ ಲಕ್ಷಣಗಳು ಹೆಚ್ಚಾಗಿ ಬಳ್ಳಾರಿ ಪ್ರದೇಶದ ಚಾಲುಕ್ಯರ ಶೈಲಿಯಲ್ಲಿವೆ. ಕೆಲವು ಕಾಕತೀಯರ ಶೈಲಿಯಲ್ಲಿವೆ!

ಶೈವ ಶಿಲ್ಪಗಳಲ್ಲಿ ಉಮಾ-ಮಹೇಶ್ವರ, ವೈಷ್ಣವ ಶಿಲ್ಪಗಳಲ್ಲಿ ವೈಕುಂಠ ವಿಷ್ಣು, ಗರುಡ ಹೊತ್ತ ಲಕ್ಷ್ಮೀನಾರಾಯಣ, ಸುಕನಾಸಿಯ ಕೇಶವ; ಶಾಕ್ತರಲ್ಲಿ ಸುಕನಾಸಿ ಫಲಕದಲ್ಲಿನ ಲಕ್ಷ್ಮೀ, ಕೊಲ್ಲಾಪುರ ಮಹಾಲಕ್ಷ್ಮಿ; ಸೂರ್ಯ ಶಿಲ್ಪಗಳಲ್ಲಿ ಎದುರು ಮುಖಮಾಡಿ ಹಿಡಿದ ಅರಳಿದ ಕಮಲ ಮುಂತಾದವುಗಳು ಮಧ್ಯ ಭಾರತ ಶೈಲಿಯಲ್ಲಿವೆ.

ಕಲ್ಯಾಣದಲ್ಲಿರುವ ಹೆಚ್ಚಿನ ದೇವಾಲಯ /ಶಿಲ್ಪಗಳು ಕಲ್ಯಾಣ ಚಾಲುಕ್ಯರ ಕಾಲದವು. ಕೆಲವುಗಳು ಕಳಚೂರಿ, ಕಾಕತೀಯ ಮತ್ತು ಸೇವುಣರ ಕಾಲದ್ದಾಗಿವೆ. ಬಳಸಿದ ಶಿಲೆ ಎರಡು ವಿಧ. ಈ ಶಿಲ್ಪಕಲಾ ಲಕ್ಷಣಗಳು ಸಾಮಾನ್ಯವಾಗಿ ಎರಡು ಪರಂಪರೆಗಳನ್ನು ಸೂಚಿಸುತ್ತವೆ. ಒಂದು ಸ್ಥಳೀಯ ಕಲಾಶೈಲಿ ಎಂದು ಇನ್ನೊಂದು ಗೂರ್ಜ್ಜರ-ಶಿಲಾಹಾರ, ಪರಮಾರ ಕಾಲಾವಧಿಯ ಶೈಲಿಯೆಂದು ಹೇಳಬಹುದು.

ಶಿಲ್ಪಗಳಲ್ಲಿ ಸ್ತಂಭ, ಮಕರತೋರಣವುಳ್ಳ ಶಿಲ್ಪಗಳು ಸ್ಥಳೀಯ ಲಕ್ಷಣ ಪಡೆದಿವೆ. ಕುಸುರು ಕೆತ್ತನೆಯುಳ್ಳ ಮಕರತೋರಣ, ಸಿಂಹದ ದುಂಡು ಶಿಲ್ಪಗಳು, ಮದನಿಕೆಯರ ಶಿಲ್ಪಗಳು ಇತ್ಯಾದಿ ಹೊಯ್ಸಳ ಲಕ್ಷಣವನ್ನು ನೆನಪಿಸುತ್ತವೆ. ನೀಳವಾದ ಕಂಬಗಳು ಸೇವುಣರ ಲಕ್ಷಣ ಹೊಂದಿವೆ. ದೇವಾಲಯದ ಗೋಡೆಯಲ್ಲಿ ಚಿತ್ರಿಸಿದ ವಿಷಕನ್ಯೆ, ಬಾಲಕಿಯರು, ಎತ್ತರ ಹೊಸ್ತಿಲು ನಮೂನೆಗಳು ಕಾಕತೀಯ/ಸೇವುಣರ ಲಕ್ಷಣವನ್ನು ನೆನಪಿಸುತ್ತವೆ. ಆದರೆ ಇವು ಕಲ್ಯಾಣ ಚಾಲುಕ್ಯರ ಲಕ್ಷಣಗಳಾಗಿವೆ. ಏಕೆಂದರೆ ಮೂಲತಃ ಕಾಕತೀಯರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಬಹುಕಾಲ ಆಳಿದರು. ಮುಸ್ಲಿಂ ಸ್ಮಾರಕಗಳ ಅಧ್ಯಯನದಲ್ಲಿ ದರ್ಗಾಗಳು, ವಿಭಿನ್ನ ಮಸೀದಿಗಳು ಮತ್ತು ನವಾಬ್ ಬಂಗಲೆ, ತೋಪುಗಳು, ಬಾವಿಗಳು ಇತ್ಯಾದಿ ವಿಶೇಷವೆನಿಸಿವೆ. ಹೀಗೆ ಮಧ್ಯಕಾಲೀನ ಇತಿಹಾಸ ಪ್ರಸಿದ್ಧ ರಾಜಧಾನಿ ನಗರವಾದ ಬಸವಕಲ್ಯಾಣದ ಕಲೆ ಅನ್ಯಾದೃಶವಾದುದು. ಅದು ಬಿಂಬಿಸುವ 'ಸಂಸ್ಕೃತಿ' ಅತ್ಯಂತ ಮಹತ್ತರವಾದುದು. ವಿಜ್ಞಾನೇಶ್ವರನಂಥ ಕವಿ-ಚಿಂತಕ ಹೇಳಿದ ಅಭಿಪ್ರಾಯ ಬರಿಯ ಉತ್ಪ್ರೇಕ್ಷೆಯಲ್ಲ, ಸತ್ಪ್ರೇಕ್ಷೆ-ಸತ್ಯಸ್ಯ ಸತ್ಯ.

ಆಕರ ಗ್ರಂಥಗಳು

೧. ಜೇಮ್ಸ್ ಬರ್ಜಸ್: ೧೯೭೮ (ಪುನರ್ ಮುದ್ರಣ) **ರಿಪೋರ್ಟ್ ಆನ್ ದಿ ಆ್ಯಂಟಿಕ್ಯುಟೀಸ್ ಇನ್ ದ ಬೀದರ ಆ್ಯಂಡ್ ಔರಂಗಾಬಾದ್ ಡಿಸ್ಟ್ರಿಕ್ಟ್,** ನವದೆಹಲಿ (ಮೊದಲ ಮುದ್ರಣ: ೧೮೭೮, ಲಂಡನ್)

೨. ಶಾಮರಾವ್.ಎನ್.ಎಂ. ೧೯೧೩ **ಮಿತಾಕ್ಷರ ಆಫ್ ವಿಜ್ಞಾನೇಶ್ವರ ಮತ್ತು ಚಂದ್ರ ವಸ್ತು,** ಅಲಹಾಬಾದ್.

೩. ನಿರ್ದೇಶಕ: ೧೯೫೩: **ಆ್ಯಂಟಿಕುಟೀ ರಿಮೇನ್ಸ್ ಇನ್ ಹೈದರಾಬಾದ್ ಸ್ಟೇಟ್, ಡಿಪಾರ್ಟ್‌ಮೆಂಟ್ ಆಫ್ ಆರ್ಕ್ಯಾಲಾಜಿ,** ಗವರನಮೆಂಟ್ ಆಫ್ ಹೈದರಾಬಾದ್, ಹೈದರಾಬಾದ್.

೪. ದೇಸಾಯಿ, ಪಿ.ಬಿ. ೧೯೫೭: **ಜೈನಿಜಮ್ ಇನ್ ಸೌಥ್ ಇಂಡಿಯಾ.**

೫. ದೇಸಾಯಿ, ಪಿ.ಬಿ. ೧೯೬೦: ಎಕ್ಸ್‌ಪ್ಲೋರೇಷನ್ ಇನ್ ಬಸವಕಲ್ಯಾಣ, **ಹ್ಯೂಮನೀಟೀಸ್ ಜರ್ನಲ್,** ಕ.ವಿ.ವಿ., ಧಾರವಾಡ.

೬. ದೇಸಾಯಿ, ಪಿ.ಬಿ. ೧೯೭೦: **ಹಿಸ್ಟರಿ ಆಫ್ ಕರ್ನಾಟಕ.** ಪು. ೧೬೯, ಕ.ವಿ.ವಿ. ಧಾರವಾಡ.

೭. ದೇಸಾಯಿ, ಪಿ.ಬಿ. ೧೯೬೮: **ಬಸವೇಶ್ವರ ಆ್ಯಂಡ್ ಹಿಸ್ ಟೈಮ್ಸ್,** ಕ.ವಿ.ವಿ. ಧಾರವಾಡ.

೮. ಶಿವಮೂರ್ತಿಶಾಸ್ತ್ರಿ: ೧೯೬೭: ಬಸವೇಶ್ವರರನ್ನು ಕುರಿತ ಕ್ಷೇತ್ರಗಳು, **ಬಸವೇಶ್ವರರು.**

೯. ಬಿಲ್ಹಣ:**ವಿಕ್ರಮಾಂಕದೇವ ಚರಿತೆ** (ಮೊದಲಿನಿಂದ ಹದಿನೆಂಟನೆಯ ಸಿಟ್ರೊವರೆಗೆ)

೧೦. **ಮಾನಸೋಲ್ಲಾಸ** I, VV, 1.

೧೧. ರಾಮಚಂದ್ರರಾವ್.ಎಸ್.ಕೆ.೧೯೭೫: **ಮೂರ್ತಿಶಿಲ್ಪ ನೆಲೆ-ಹಿನ್ನೆಲೆ,** ಬೆಂಗಳೂರು.

೧೨. ರಾಮರಾವ್.ಎಂ. ೧೯೬೬: **ಟೆಂಪಲ್ಸ್ ಆಫ್ ಕಾಕತೀಯಾಸ್,** ತಿರುಪತಿ.

೧೩. ವೆಂಕಟರಾವ್ ವಿ. ಶಾಸ್ತ್ರೀ: ೧೯೮೩: 'ಬಿಲ್ಹಣ ವಿಕ್ರಮಾಂಕದೇವ ಚರಿತಂ' **ದಿ ಚಾಲುಕ್ಯಾಸ್ ಆಫ್ ಕಲ್ಯಾಣ,** ಬೆಂಗಳೂರು.

೧೪. ಕುಲಕರ್ಣಿ ವಿ.ಎಸ್. ೧೯೭೫: ಹಿಸ್ಟಾರಿಕಲ್ ಆ್ಯಂಡ್ ಕಲ್ಚರಲ್ ಆಸ್ಪೆಕ್ಟ್ಸ್ ಇನ್ ದಿ ರೀಜನ್ ಅರೌಂಡ್ ಬಸವಕಲ್ಯಾಣ, ಪಿಎಚ್.ಡಿ., ಥೀಸೀಸ್, ಕ.ವಿ.ವಿ. ಧಾರವಾಡ.

೧೫. ಗೋಪಿನಾಥರಾವ್, ೧೯೭೧, ಎಲಿಮೆಂಟ್ಸ್ ಆಫ್ ಹಿಂದೂ ಐಕೊನೊಗ್ರಫಿ, ಸಂ.೨, ಭಾಗ-II

೧೬. ಜ್ಯೋಶಿ.ಎಸ್.ಕೆ: ಡಿಪೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ, ದೆಹಲಿ

೧೭. ಡಾ. ಶಂಕರ ಡಿ. ಮಾಗಿ: ಬಸವಕಲ್ಯಾಣ ತಾಲೂಕು ದರ್ಶನ, ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು.

೧೮. ಷಡಕ್ಷರಯ್ಯ ಆರ್.ಎಂ. ೧೯೮೫: ಆರ್ಕಿಯಾಲಜಿ ಬೀದರ ಡಿಸ್ಟ್ರಿಕ್ಟ್ ವಿತ್ ಸ್ಪೆಶಲ್ ರೆಫರನ್ಸ್ ಟು ಮಾಂಜ್ರಾ, ಆ್ಯಂಡ್ ಕಾರಾಂಜಾ ವ್ಯಾಲೀಸ್, ಪಿಎಚ್.ಡಿ., ಥೀಸಿಸ್, ಕ.ವಿ.ವಿ. ಧಾರವಾಡ.

೧೯. ಷಡಕ್ಷರಯ್ಯ ಆರ್.ಎಂ. ೧೯೯೪: ಬೀದರ ಜಿಲ್ಲೆಯ ಶಾಸನಗಳು (ಈಗ ಕ.ವಿ.ವಿ. ಮುದ್ರಣಾಲಯದಲ್ಲಿ ಅಚ್ಚಿನಲ್ಲಿದೆ).

೨೦. ಮುಖ್ಯ ಸಂಪಾದಕರು: ೧೯೭೭, ಬೀದರ ಡಿಸ್ಟ್ರಿಕ್ಟ್ ಗೆಜೆಟಿಯರ್, ಬೆಂಗಳೂರು.

೨೧. ಯ್ಯಾನಿಯನ್ ರಿಪೋರ್ಟ್ ಆಫ್ ಇಂಡಿಯನ್ ಎಪಿಗ್ರಾಫಿ, ೧೯೬೨-೬೩..

೨೨. ಎಪಿಜಿಎಎಸ್ ವಾಲ್ಯೂಮ್ಸ್ - III, IX.

೨೩. ಮೈಸೂರು ಸರ್ಕಾರದ ಶ್ರೀ ಬಸವೇಶ್ವರ ಎಂಟನೆಯ ಶತಮಾನೋತ್ಸವ ಸಮಿತಿ: ೧೯೬೩, ಶ್ರೀ ಬಸವೇಶ್ವರರು, ಬೆಂಗಳೂರು.

೨೪. ಹೆಬ್ಬಾಳಕರ ಈಶ್ವರ (ಸಂ): ೨೦೦೩, ಬಸವಕಲ್ಯಾಣ ತಾಲೂಕು ಪರಿಚಯ, ಹಾರಕೊಡ, ಬೀದರ ಜಿಲ್ಲೆ.

ಕೃತಿಕಾರರ ಪರಿಚಯ



ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೊಟ್ಟೂರು ಪಟ್ಟಣದಲ್ಲಿ ಜನಿಸಿದ ಡಾ.ಆರ್.ಎಂ.ಷಡಕ್ಷರಯ್ಯ ಅವರು ಬಿ.ಎಸ್‌ಸಿ ಪದವಿ ವರೆಗೆ ತಮ್ಮ ಹುಟ್ಟೂರಲ್ಲೇ ಅಭ್ಯಾಸ ಮಾಡಿದರು. ಎಂ.ಎ. ಡಿಪ್ಲೊಮಾ ಇನ್ ಎಪಿಗ್ರಾಫಿ, ಪಿ.ಎಚ್‌ಡಿ . ಪದವಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದಿಂದ ಪಡೆದುಕೊಂಡರು. ಪ್ರಾಚೀನ ಭಾರತ ಇತಿಹಾಸ, ಸಂಸ್ಕೃತಿ, ಪುರಾತತ್ತ್ವ ಶಾಸ್ತ್ರ, ವಾಸ್ತುಶಿಲ್ಪ, ಶಾಸನಶಾಸ್ತ್ರ ಇತ್ಯಾದಿ ಅವರ ವಿಶೇಷ ಅಧ್ಯಯನದ ವಿಷಯಗಳು. ಸುಮಾರು ಒಂದು ನೂರಕ್ಕೂ ಹೆಚ್ಚು ಲೇಖನಗಳನ್ನೂ Pre- Historic and Early Historic Cultures in Bidar District ಎಂಬ ಕೃತಿಯನ್ನೂ ಪ್ರಕಟಿಸಿರುವರು. Bidar District inscriptions under Karnataka Inscriptions Series ನ ಕೃತಿಯು ಅಚ್ಚಿನಲ್ಲಿದೆ. ನೂರಕ್ಕೂ ಹೆಚ್ಚು ಅಂತರ್‌ರಾಷ್ಟ್ರೀಯ, ರಾಷ್ಟ್ರೀಯ ಇತ್ಯಾದಿ ವಿಚಾರ ಸಂಕಿರಣ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿ ತಮ್ಮ ಪ್ರಬಂಧಗಳನ್ನು ಮಂಡಿಸಿರುವರು. ಯುನೆಸ್ಕೋದ ಶಿಷ್ಯವೇತನದಿಂದ ಇಟಲಿ ದೇಶದಲ್ಲಿ ಅಂತರ್‌ರಾಷ್ಟ್ರೀಯ ಮಟ್ಟದ ಬಂಡೆ ಚಿತ್ರಗಳ ಸಂಶೋಧನೆ ಮತ್ತು ಸಂರಕ್ಷಣೆ ಕುರಿತು ವಿಶೇಷ ತರಬೇತಿಯನ್ನು ೧೯೮೩ರಲ್ಲಿ ಪಡೆದಿದ್ದಾರೆ. ಅನೇಕ ಶೈಕ್ಷಣಿಕ ಸಂಘ ಸಂಸ್ಥೆಗಳ ಸದಸ್ಯರೂ ಆಗಿದ್ದಾರೆ.

ಭಾರತೀಯ ಪುರಾತತ್ತ್ವ ಇಲಾಖೆಯ ಶಿಷ್ಯವೇತನ ಪಡೆದು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಹಿರಿಯ ಪುರಾತತ್ತ್ವ ಶಾಸ್ತ್ರಜ್ಞ ಡಾ.ಅ. ಸುಂದರ ಅವರ ಮಾರ್ಗದರ್ಶನದಲ್ಲಿ ೧೯೮೫ರಲ್ಲಿ ಬೀದರ ಜಿಲ್ಲೆಯ ಪುರಾತತ್ತ್ವ ವಿಷಯ ಕುರಿತು ತಮ್ಮ ಪಿ.ಎಚ್‌ಡಿ. ಪದವಿಯನ್ನು ಗಳಿಸಿಕೊಂಡರು. ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಅಧ್ಯಾಪಕರಾಗಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ರೀಡರ್ ಆಗಿ, ನಂತರ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆದರು. ಈಗ ಇತಿಹಾಸ ಮತ್ತು ಪುರಾತತ್ತ್ವ ಪ್ರಾಧ್ಯಾಪಕರು ಹಾಗೂ ಪ್ರಭಾರಿ ನಿರ್ದೇಶಕರಾಗಿ ಕನ್ನಡ ಸಂಶೋಧನ ಸಂಸ್ಥೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ವಿಳಾಸ: ಡಾ.ಆರ್.ಎಂ. ಷಡಕ್ಷರಯ್ಯ
ಇತಿಹಾಸ ಮತ್ತು ಪುರಾತತ್ತ್ವ ಪ್ರಾಧ್ಯಾಪಕ
ಮತ್ತು ನಿರ್ದೇಶಕ (ಪ್ರಭಾರಿ)
ಕನ್ನಡ ಸಂಶೋಧನಾ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ - ೩.
ದೂರವಾಣಿ: ೨೨೧೫೨೩೩/೨೬೪೨೧೮೫
೯೮೮೦೩೫೯೯೪೯

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೯ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮